ಶನಿವಾರ, ಮಾರ್ಚ್ 9, 2024 | ₹ 7.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

₹17,836 ಕೋಟಿ ಹೂಡಿಕೆ

ಸಿ.ಎಂ ನೇತೃತ್ವದಲ್ಲಿ ನಡೆದ ಎಸ್‌ಎಚ್‌ಎಲ್‌ಸಿಸಿ ಸಭೆ: ಹಲವು ಯೋಜನೆಗಳಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 27,067 ಉದ್ಯೋಗಗಳನ್ನು ಸೃಷ್ಟಿಸುವ ₹17,835.9 ಕೋಟಿ ಮೊತ್ತದ ಯೋಜನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಉನ್ನತ ಮಟ್ಟದ ಅನುಮೋದನಾ ಸಮಿತಿ (ಎಸ್‌ಎಚ್‌ಎಲ್‌ಸಿಸಿ) ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಸಭೆಯ ಬಳಿಕ ವಿವರ ನೀಡಿದ ಸಿದ್ದರಾಮಯ್ಯ, ₹8,220.05 ಕೋಟಿ ಮೊತ್ತದ ಆರು ಹೊಸ ಯೋಜನೆಗಳು ಮತ್ತು ₹9,615.85 ಕೋಟಿ ಮೊತ್ತದ ಹೆಚ್ಚುವರಿ ಬಂಡವಾಳ ಹೂಡಿಕೆಯ ಎಂಟು ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದರು.

ಉತ್ತರ ಕರ್ನಾಟಕದ ವಿಜಯಪುರ, ಕಲಬುರಗಿ, ಬಳ್ಳಾರಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಹೊಸ ಹೂಡಿಕೆ ಮತ್ತು ಹೆಚ್ಚುವರಿ ಬಂಡವಾಳ ಹೂಡಿಕೆಯ ಎಂಟು ಯೋಜನೆಗಳಿಗೆ ದೊರೆತಿರುವ ಅನುಮತಿಗಳಿಂದ ಈ ಜಿಲ್ಲೆಗಳಲ್ಲಿ ಒಟ್ಟಾರೆ ₹10,433.72 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಆಗಲಿದೆ ಎಂದು ವಿವರಿಸಿದರು.

ವಿಸ್ಟ್ರಾನ್ ಇನ್ಫೋಕಾಂ ಮ್ಯಾನು-ಫ್ಯಾಕ್ಚರಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ₹2,095 ಕೋಟಿ ವೆಚ್ಚದಲ್ಲಿ ಸ್ಮಾರ್ಟ್‌ಫೋನ್ ತಯಾರಿಕಾ ಘಟಕ ಆರಂಭಿಸಲಿದೆ. ಇದರಿಂದ 21,723 ಜನರಿಗೆ ಉದ್ಯೋಗಗಳು ಲಭ್ಯವಾಗಲಿವೆ ಎಂದೂ ಅವರು ಹೇಳಿದರು.

ಸಭೆಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಸಚಿವ ಎಂ.ಬಿ.ಪಾಟೀಲ, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಲ್.ಕೆ. ಅತೀಕ್ ಉಪಸ್ಥಿತರಿದ್ದರು.

ಹೆಚ್ಚುವರಿ ಬಂಡವಾಳ ಹೂಡುವ ಕಂಪನಿಗಳು

ಕಂಪನಿ	ಹೂಡಿಕೆ ಮೊತ್ತ (₹ ಕೋಟಿ)
ಅಲ್ಟ್ರಾಟೆಕ್ ಸಿಮೆಂಟ್	490.38
ಆರ್‌ಬಿಎಸ್‌ಎಸ್‌ಎನ್ ಫೆರಸ್	1620.80
ಎಂವಿ ಎನರ್ಜಿ ಪ್ರೈವೇಟ್	676.28
ಇಂಡಿಯನ್ ಕೇನ್ ಪವರ್	492.29
ಗ್ರೀನ್ಕೊ ಐಆರ್‌ಇಪಿ	5,948.06
ಅಥಣಿ ಷುಗರ್ಸ್	205.89
ಉಕೆಮ್ ಅಗ್ರಿ ಇನ್ಫ್ರಾ	103.55
ಸ್ನೈಡರ್ ಇಲೆಕ್ಟ್ರಿಕ್	78.60

ಹೊಸ ಹೂಡಿಕೆ ಪ್ರಸ್ತಾವನೆಗಳು

ಎಸ್‌ಟಿಟಿ ಗ್ಲೋಬಲ್ ಡೇಟಾ ಸೆಂಟರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇಂಡಿಯನ್ ಕೇನ್ ಪವರ್ ಲಿಮಿಟೆಡ್, ಐಟಿಸಿ ಸರ್ವೀಸ್ ಮ್ಯಾನೇಜ್‌ಮೆಂಟ್ ಸೊಲ್ಯೂಷನ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್, ಶ್ರೀ ಬಾಲಾಜಿ ಶುಗರ್ಸ್ ಮತ್ತು ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಏರ್ ಇಂಡಿಯಾ ಲಿಮಿಟೆಡ್. ಇವುಗಳ ಒಟ್ಟು ಹೂಡಿಕೆ ಮೊತ್ತ ₹8,220.05 ಕೋಟಿ.

ಹೆಚ್ಚುವರಿ ಹೂಡಿಕೆ ಪ್ರಸ್ತಾವನೆಗಳು

ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಕಂಪನಿಗಳ ಸಾಮರ್ಥ್ಯ ವಿಸ್ತರಣೆ ಉದ್ದೇಶದ ಹೆಚ್ಚುವರಿ ಹೂಡಿಕೆಯ 8 ಪ್ರಸ್ತಾವನೆಗಳಿಗೂ ಸಭೆ ಒಪ್ಪಿಗೆ ನೀಡಿದೆ. ಅವುಗಳೆಂದರೆ, ಅಲ್ಟ್ರಾ ಟೆಕ್ ಸಿಮೆಂಟ್ ಲಿಮಿಟೆಡ್, ಆರ್‌ಬಿಎಸ್‌ಎಸ್‌ಎನ್ ಫೆರಸ್ ಇಂಡಸ್ಟ್ರೀಸ್ ಲಿಮಿಟೆಡ್, ಎಂವಿ ಎನರ್ಜಿ ಪ್ರೈವೇಟ್ ಲಿಮಿಟೆಡ್, ಇಂಡಿಯನ್ ಕೇನ್ ಪವರ್ ಲಿಮಿಟೆಡ್(ಅಳಗವಾಡಿ ಬೀರೇಶ್ವರ ಷುಗರ್ಸ್ ಘಟಕ), ಗ್ರೀನ್ಕೊ ಕೆಎ01 ಐಆರ್‌ಇಪಿ ಪ್ರೈವೇಟ್ ಲಿಮಿಟೆಡ್, ಅಥಣಿ ಷುಗರ್ಸ್ ಲಿಮಿಟೆಡ್, ಉಕೆಮ್ ಅಗ್ರಿ ಇನ್‌ಫ್ರಾ ಲಿಮಿಟೆಡ್ ಮತ್ತು ಸ್ನೈಡರ್ ಎಲೆಕ್ಟ್ರಿಕ್ ಐಟಿ ಬಿಸಿನೆಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸೇರಿವೆ. ಇವುಗಳ ಹೂಡಿಕೆ ಮೊತ್ತ ₹9,615.85 ಕೋಟಿ.


ಕಂಪನಿ ಹೆಸರು	ಹೂಡಿಕೆ (₹ ಕೋಟಿಗಳಲ್ಲಿ)	ಉದ್ಯೋಗ ಸೃಷ್ಟಿಯ ಸಂಖ್ಯೆ
ಎಸ್‌ಟಿಟಿ ಗ್ಲೋಬಲ್ ಡೇಟಾ ಸೆಂಟರ್	1,352.3	250
ವಿಸ್ಟ್ರಾನ್ ಇನ್ಫೋಕಾಂ	2,095	21,723
ಇಂಡಿಯನ್ ಕೇನ್ ಪವರ್	1,078	309
ಐಸಿಟಿ ಸರ್ವೀಸ್ ಸೊಲ್ಯೂಷನ್	1,400	2,500
ಬಾಲಾಜಿ ಷುಗರ್ಸ್ ಮತ್ತು ಕೆಮಿಕಲ್ಸ್	494.75	1085
ಏರ್ ಇಂಡಿಯಾ	1,750	1,200

ಶಂಕಿತ ಉಗ್ರರಿಗೆ 'ಕ್ರಿಪ್ಟೊ' ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದನಾ ಸಂಘಟನೆಗಳ ಪರ ಗೋಡೆ ಬರಹ ಬರೆದಿದ್ದ ಪ್ರಕರಣದಲ್ಲಿ ಮೂವರು ಶಂಕಿತ ಉಗ್ರರ ವಿರುದ್ಧ ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

'ಲಷ್ಕರ್-ಎ-ತಯಬಾ ಹಾಗೂ ತಾಲಿಬಾನ್ ಪರವಾಗಿ ಮಂಗಳೂರಿನ ಬಿಜೈ ಹಾಗೂ ನ್ಯಾಯಾಲಯ ರಸ್ತೆಯ ಗೋಡೆಗಳ ಮೇಲೆ ಬರಹ ಬರೆಯಲಾಗಿತ್ತು. ಕೃತ್ಯ ಎಸಗಿದ್ದ ಶಂಕಿತರಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಬಟ್ಟೆ ವ್ಯಾಪಾರಿ ಮೊಹಮ್ಮದ್ ಶಾರೀಕ್, ಎಂಜಿನಿಯರಿಂಗ್ ವಿದ್ಯಾರ್ಥಿ ಮಾಝ್ ಮುನೀರ್ ಅಹ್ಮದ್ ಹಾಗೂ ಅರಾಫತ್ ಅಲಿಯನ್ನು ಬಂಧಿಸಲಾಗಿತ್ತು' ಎಂದು ಎನ್‌ಐಎ ಮೂಲಗಳು ಹೇಳಿವೆ.



'ಶಾರೀಕ್ ಅರಾಫತ್ ಹಾಗೂ ಮಾಝ್ ಮುನೀರ್ ವಿರುದ್ಧ ಈಗಾಗಲೇ ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಇದೀಗ, ಇವರಿಬ್ಬರ ವಿರುದ್ಧ ಹೆಚ್ಚುವರಿ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಇನ್ನೊಬ್ಬ ಶಂಕಿತ ಅರಾಫತ್ ಅಲಿ, ಘಟನೆ ಬಳಿಕ ತಲೆಮರೆಸಿಕೊಂಡಿದ್ದ. ದೆಹಲಿ ವಿಮಾನ ನಿಲ್ದಾಣದಲ್ಲಿ ಸೆಪ್ಟೆಂಬರ್ 13ರಂದು ಈತನನ್ನು ಬಂಧಿಸಲಾಗಿತ್ತು. ಈತನ ವಿರುದ್ಧ ಇದೀಗ ಪ್ರಾಥಮಿಕ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರರ ಜೊತೆ ನಂಟು ಹೊಂದಿದ್ದ ಎಂಜಿನಿಯರಿಂಗ್ ಪದವೀಧರ ಅರಾಫತ್ ಅಲಿ, ಕ್ರಿಪ್ಟೊ ಮೂಲಕ ಹಣ ಪಡೆದುಕೊಂಡಿದ್ದ. ಅದೇ ಹಣವನ್ನು ಶಾರೀಕ್ ಹಾಗೂ ಮಾಝ್‌ಗೆ ನೀಡಿದ್ದ. ಅವರಿಬ್ಬರು ಗೋಡೆ ಬರಹ ಬರೆದಿದ್ದರು. ಈ ಮೂಲಕ ಜನರಲ್ಲಿ ಭಯವನ್ನುಂಟು ಮಾಡಲು ಯತ್ನಿಸಿದ್ದರು. ಜೊತೆಗೆ, ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದರು' ಎಂದು ಮೂಲಗಳು ಹೇಳಿವೆ.

'ಗೋಡೆ ಬರಹ ಪ್ರಕರಣದಲ್ಲಿ ಭಾಗಿಯಾಗಿದ್ದ ಶಾರೀಕ್, ಕುಕ್ಕರ್ ಬಾಂಬ್ ಸಾಗಣೆ ಸಂದರ್ಭದಲ್ಲಿ ಸ್ಫೋಟವಾಗಿ ಗಾಯಗೊಂಡಿದ್ದ. ಈತನ ವಿಚಾರಣೆಯಿಂದ ಗೋಡೆ ಬರಹದ ಬಗ್ಗೆ ಮಾಹಿತಿ ಸಿಕ್ಕಿತ್ತು' ಎಂದು ಮೂಲಗಳು ತಿಳಿಸಿವೆ.

ಎನ್‌ಐಎ ತನಿಖೆ: ಸಿ.ಸಿ.ಟಿ.ವಿ ದೃಶ್ಯ ಸಂಗ್ರಹದ್ದೆ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶಂಕಿತನ ಜಾಡು ಹಿಡಿದು ಬಳ್ಳಾರಿಗೆ ಬಂದಿರುವ ಎನ್‌ಐಎ ತಂಡ ಶುಕ್ರವಾರವೂ ಬಸ್ ನಿಲ್ದಾಣದ ಸಿ.ಸಿ.ಟಿ.ವಿ ದೃಶ್ಯಾವಳಿ ಸಂಗ್ರಹಿಸುವಲ್ಲಿ ನಿರತವಾಗಿತ್ತು.

ಆದರೆ, ಇಲ್ಲಿನ ಕ್ಯಾಮೆರಾಗಳು ಸರಿಯಾದ ಕೋನದಲ್ಲಿ ಇಲ್ಲದಿರುವುದು ಮತ್ತು ದೃಶ್ಯಾವಳಿಗಳ ಗುಣಮಟ್ಟದ ಕೊರತೆ ಕಾರಣ ಸಮಸ್ಯೆಯಾಯಿತು. ಬಳ್ಳಾರಿಯ ಕೆಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಒಟ್ಟು 14 ಸಿಸಿಟಿವಿ ಕ್ಯಾಮೆರಾಗಳಿವೆ. ಅವುಗಳಲ್ಲಿ 10 ಕ್ಯಾಮೆರಾ ಸುಸ್ಥಿತಿಯಲ್ಲಿವೆ. ಇನ್ನುಳಿದ ಕ್ಯಾಮೆರಾಗಳ ನಿರ್ವಹಣೆ ಸೂಕ್ತ ರೀತಿಯಲ್ಲಿ ಇಲ್ಲ. ಹೀಗಾಗಿ ಅವುಗಳ ಕೋನ ಸರಿಯಾಗಿಲ್ಲ. ಜತೆಗೆ, ಅವುಗಳ ದೃಶ್ಯೀಕರಣ ಗುಣಮಟ್ಟ ಉತ್ತಮವಾಗಿಲ್ಲ ಎಂದು ಗೊತ್ತಾಗಿದೆ. ಹೀಗಾಗಿ ಶಂಕಿತನ ಚಲನವಲನ ಪತ್ತೆ ಕಾರ್ಯ ಎನ್‌ಐಎಗೆ ಸವಾಲಾಗಿದೆ.

'ಶಂಕಿತ ವ್ಯಕ್ತಿ ಬಂದು ಹೋದ ದಿನದ ನಂತರದ ಮೂರು-ನಾಲ್ಕು ದಿನಗಳ ದೃಶ್ಯಾವಳಿಗಳನ್ನು ಎನ್‌ಐಎ ತಂಡ ಕೇಳಿದೆ. ನಿಲ್ದಾಣದ ಅಧಿಕಾರಿಗಳು ಅವುಗಳನ್ನು ಒದಗಿಸುತ್ತಿದ್ದಾರೆ. ಶುಕ್ರವಾರವೂ ಅದೇ ಕೆಲಸ ನಡೆದಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

873 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್‌ನ ಸಾಮೂಹಿಕ ಅತ್ಯಾಚಾರ ಪ್ರಕರಣ ನಡೆದ ಎರಡು ತಿಂಗಳ ಬಳಿಕ 19 ಆರೋಪಿಗಳ ವಿರುದ್ಧ ಹಾವೇರಿ ಜಿಲ್ಲಾ ಪೊಲೀಸರು 873 ಪುಟಗಳ ದೋಷಾರೋಪ ಪಟ್ಟಿಯನ್ನು ಹಾನಗಲ್ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಶಿರಸಿಯ ಮಹಿಳೆ ಮೇಲೆ ಅತ್ಯಾಚಾರ ಕೃತ್ಯ ಎಸಗಿದ್ದ ಅಕ್ಕಿಆಲೂರಿನ ಪ್ರಮುಖ 7 ಆರೋಪಿಗಳು ಮತ್ತು ಕೃತ್ಯಕ್ಕೆ ಸಹಕರಿಸಿದ್ದ 12 ಮಂದಿಯನ್ನು ಪೊಲೀಸರು ಬಂಧಿಸಿದ್ದರು. ಸಾಮೂಹಿಕ ಅತ್ಯಾಚಾರ, ಜೀವ ಬೆದರಿಕೆ, ಮಾನಭಂಗ, ಅಪಹರಣ, ಕೊಲೆ ಯತ್ನ, ಗಲಭೆ, ಶಾಂತಿಭಂಗ ಸೇರಿ ಐಪಿಸಿಯ ಇತರ ಕಲಂಗಳ ಉಲ್ಲೇಖ ದೋಷಾರೋಪ ಪಟ್ಟಿಯಲ್ಲಿದೆ.

ವೈದ್ಯರು, ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಘಟನೆ ಕಂಡ ಸ್ಥಳೀಯರು, ಹೋಟೆಲ್ ಸಿಬ್ಬಂದಿ ಇತರರು ಸೇರಿ 87 ಸಾಕ್ಷಿಗಳನ್ನು ನಮೂದಿಸಲಾಗಿದೆ. 19 ಆರೋಪಿಗಳ ಪೈಕಿ 6 ಮಂದಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯವು ತಿರಸ್ಕರಿಸಿದೆ. 'ತನಿಖೆಯನ್ನು 2 ತಿಂಗಳಲ್ಲಿ ಪೂರ್ಣಗೊಳಿಸಿ, 19 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದೇವೆ' ಎಂದು ಹಾವೇರಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮತ್ತು ತನಿಖಾಧಿಕಾರಿ ಸಿ.ಗೋಪಾಲ್ ತಿಳಿಸಿದರು.

ಎಸ್ಸೆಸ್ಸೆಲ್ಸಿ: ಗೋಡೆಗೆ ಮುಖ ಮಾಡಿ ಪರೀಕ್ಷೆ ಬರೆಯಿರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಗೋಡೆಗೆ ಮುಖ ಮಾಡಿಕೊಂಡು ಕುಳಿತು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಬೇಕಿದೆ.

ಮಾರ್ಚ್ 25ರಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮಾರ್ಗಸೂಚಿ ಬಿಡುಗಡೆ ಮಾಡಿರುವ ಕರ್ನಾಟಕ ಶಾಲಾ ಶಿಕ್ಷಣ ಮೌಲ್ಯಮಾಪನ ಮಂಡಳಿ ಇಂತಹ ಸೂಚನೆ ನೀಡಿದ್ದು, ನಕಲು ತಡೆಯಲು ವಿದ್ಯಾರ್ಥಿಗಳು ಗೋಡೆಯ ಕಡೆ ಮುಖ ಮಾಡಿ ಕುಳಿತುಕೊಳ್ಳಲು



ಅನುವಾಗುವಂತೆ ಡೆಸ್ಕ್‌ಗಳನ್ನು ಜೋಡಿಸಲು ಎಲ್ಲ ಜಿಲ್ಲೆಗಳ ಉಪ ನಿರ್ದೇಶಕರಿಗೂ ಸೂಚನೆ ನೀಡಿದೆ.

'ಮಂಡಳಿಯ ಇಂತಹ ಕ್ರಮಗಳು ನಕಲು ತಡೆಯುವ ಜತೆಗೆ, ವಿಚಕ್ಷಣ ದಳ ಕೊಠಡಿ ಪ್ರವೇಶಿಸಿದಾಗ ವಿದ್ಯಾರ್ಥಿಗಳು ಅತ್ತ ಗಮನಹರಿಸುವುದನ್ನು ತಡೆಯಬಹುದಾಗಿದೆ. ವಿಚಕ್ಷಣ ದಳ ಪರೀಕ್ಷಾ ಕೊಠಡಿ ಪ್ರವೇಶಿಸಿದಾಗ ಬಹಳಷ್ಟು ವಿದ್ಯಾರ್ಥಿಗಳು ವಿಚಲಿತರಾಗುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳು ಗೋಡೆಗೆ ಮುಖ ಮಾಡಿ ಕುಳಿತರೆ ಬೇರೆಯವರು ಬಂದು ಹೋಗುವುದು ಗಮನಕ್ಕೆ ಬರುವುದಿಲ್ಲ. ಹಾಗಾಗಿ, ಇಂತಹ ಸೂಚನೆ ನೀಡಲಾಗಿದೆ' ಎಂದು ಮಂಡಳಿ ನಿರ್ದೇಶಕ ಎಚ್.ಎನ್. ಗೋಪಾಲಕೃಷ್ಣ ಸಮರ್ಥನೆ ನೀಡಿದರು.

ಯಾವ ಪರೀಕ್ಷಾ ಕೇಂದ್ರದಲ್ಲೂ ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಸೂಕ್ಷ್ಮ, ಅತಿಸೂಕ್ಷ್ಮ ಕೇಂದ್ರಗಳಲ್ಲಿ ಕಟ್ಟೆಚ್ಚರ ವಹಿಸಬೇಕು. ಪರೀಕ್ಷಾ ವೇಳೆಯಲ್ಲಿ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ಇಲ್ಲ. ಯಾವುದೇ ವಿದ್ಯಾರ್ಥಿ ಪರೀಕ್ಷೆಯ ಪ್ರಾರಂಭದ 30 ನಿಮಿಷಗಳ ನಂತರ (ಬೆಳಿಗ್ಗೆ 10.45ರ ನಂತರ) ಬಂದರೆ ಪರೀಕ್ಷೆ ಬರೆಯಲು ಅವಕಾಶ ಇಲ್ಲ ಎಂದು ಮಂಡಳಿ ಹೇಳಿದೆ.

ನೆಫ್ರೊ ಯುರಾಲಜಿ ಸಂಸ್ಥೆ ವೈದ್ಯರ ಬಗ್ಗೆ ನಡೆಸಿದ ತನಿಖೆಯಲ್ಲಿ ದೃಢ

ವೇತನ ಸರ್ಕಾರದ್ದು, ಸೇವೆ ಖಾಸಗಿಗೆ!

• ವರುಣ ಹೆಗಡೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಯಾದ ನೆಫ್ರೊ-ಯುರಾಲಜಿ ಸಂಸ್ಥೆಯಲ್ಲಿನ ಐವರು ವೈದ್ಯರು ಕರ್ತವ್ಯದ ಅವಧಿಯಲ್ಲಿ ಖಾಸಗಿಯಾಗಿ ಬೇರೆಡೆಗೆ ವೈದ್ಯಕೀಯ ವೃತ್ತಿ ನಡೆಸುತ್ತಿರುವುದು ಲೋಕಾಯುಕ್ತ ಪೊಲೀಸರ ತನಿಖೆಯಿಂದ ದೃಢಪಟ್ಟಿದೆ.

ಮೂತ್ರಪಿಂಡ ಮತ್ತು ಮೂತ್ರಕೋಶ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸುವಲ್ಲಿ ಸಂಸ್ಥೆ ಮುಂಚೂಣಿಯಲ್ಲಿದೆ. ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಸಂಸ್ಥೆ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ 2007ರಿಂದ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ವೈದ್ಯರ ಅಸಮರ್ಪಕ ಕಾರ್ಯನಿರ್ವಹಣೆ, ಅಕ್ರಮ ಬಡ್ತಿ ಹಾಗೂ ಅನುದಾನದ ದುರ್ಬಳಕೆ ಬಗ್ಗೆ ಸಂಸ್ಥೆಯಲ್ಲಿನ ವೈದ್ಯರೇ ಆರೋಪಿಸಿದ್ದರು. ಕರ್ತವ್ಯದ ಅವಧಿಯಲ್ಲಿ ಕೆಲ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ ಎಂದು ಸಂಸ್ಥೆಯಲ್ಲಿನ ವೈದ್ಯರೊಬ್ಬರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಈ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಕರ್ತವ್ಯದ ಅವಧಿಯಲ್ಲಿ ಐವರು ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಪ್ರದೀಪ್, ಸಹಾಯಕ ಪ್ರಾಧ್ಯಾಪಕರಾದ ಡಾ. ಶ್ರೀಧರ್, ಡಾ. ಕಿಶನ್, ಸಹ ಪ್ರಾಧ್ಯಾಪಕ ಡಾ. ಶಿವಕುಮಾರ್ ಹಾಗೂ ಪ್ರಾಧ್ಯಾಪಕ ಡಾ. ಶ್ರೀನಿವಾಸ್ ಅವರು ವಿಚಾರಣೆಗೆ ಒಳಪಟ್ಟಿದ್ದರು. ಇವರು ಖಾಸಗಿ ಆಸ್ಪತ್ರೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುವುದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆಯೆಂದು ವರದಿಯಲ್ಲಿ ಹೇಳಲಾಗಿದೆ. ಈ ವೈದ್ಯರು ಪ್ರಾಧ್ಯಾಪಕರೂ ಆಗಿರುವುದರಿಂದ ವೈದ್ಯಕೀಯ ವಿದ್ಯಾರ್ಥಿಗಳ ತರಬೇತಿಗೂ ತೊಂದರೆಯಾಗುತ್ತಿದೆ ಎಂದು ವರದಿ ಹೇಳಿದೆ.

ರೋಗಿಗಳಿಗೆ ಸಮಸ್ಯೆ: ಸಂಸ್ಥೆಯು 160 ಹಾಸಿಗೆಗಳನ್ನು ಒಳಗೊಂಡಿದೆ. 20 ಡಯಾಲಿಸಿಸ್ ಯಂತ್ರಗಳ ಸಹಾಯದಿಂದ ದಿನದ 24 ಗಂಟೆಗಳೂ ಡಯಾಲಿಸಿಸ್ ಸೇವೆಯನ್ನು ನೀಡಲಾಗುತ್ತಿದೆ. ಇದರಿಂದಾಗಿ ಪ್ರತಿನಿತ್ಯ 80 ರಿಂದ 90 ಮಂದಿಗೆ ಡಯಾಲಿಸಿಸ್ ಮಾಡಲಾಗುತ್ತಿದೆ. ಸುಮಾರು 300 ರೋಗಿಗಳು ನಿತ್ಯ ಸಂಸ್ಥೆಗೆ ಭೇಟಿ ನೀಡುತ್ತಾರೆ. ಕರ್ತವ್ಯದ ಅವಧಿಯಲ್ಲಿ ವೈದ್ಯರು ಖಾಸಗಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ. ಈ ಬಗ್ಗೆ ವಿಧಾನ ಪರಿಷತ್ತಿನ ಮಾಜಿ ಸದಸ್ಯ ಪಿ.ಆರ್. ರಮೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು, ವೈದ್ಯರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮನವಿ ಮಾಡಿದ್ದಾರೆ.

'ಸಂಗ್ರಹಿಸಲಾದ ದಾಖಲಾತಿಗಳು, ಹೇಳಿಕೆಗಳು ಮತ್ತು ಮಾಹಿತಿಗಳಿಂದ ಐವರು ವೈದ್ಯರ ವಿರುದ್ಧ ಮಾಡಲಾಗಿದ್ದ ಆರೋಪಗಳು ಸಾಬೀತಾಗಿವೆ. ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಪ್ರಭಾರ ನಿರ್ದೇಶಕ ಡಾ. ಕೇಶವಮೂರ್ತಿ ಅವರು ಈ ಪ್ರಕರಣ ತಮ್ಮ ಗಮನಕ್ಕೆ ಬಂದಿದ್ದರೂ ಯಾವುದೇ ಕ್ರಮ ಕೈಗೊಳ್ಳದೆ, ತಮ್ಮ ಗಮನಕ್ಕೆ ಬಂದಿಲ್ಲವೆಂದು ಲಿಖಿತವಾಗಿ ಮಾಹಿತಿ ನೀಡಿರುತ್ತಾರೆ. ಅವರು ವೈದ್ಯರ ಚಟುವಟಿಕೆ ಬಗ್ಗೆ ಮೇಲ್ವಿಚಾರಣೆ ನಡೆಸಿ, ಉತ್ತರ ಅಥವಾ ಶಿಸ್ತುಕ್ರಮ ಜರುಗಿಸದೇ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ' ಎಂದು ತನಿಖಾಧಿಕಾರಿ ವರದಿಯಲ್ಲಿ ತಿಳಿಸಿದ್ದಾರೆ.

'ಹೆಚ್ಚಿನ ವೇತನ ನೀಡಿ ಚಿಕಿತ್ಸೆ'

'ಮೂತ್ರಪಿಂಡ, ಮೂತ್ರಕೋಶ ಸಮಸ್ಯೆಗಳಂತಹ ಕಾಯಿಲೆಗಳ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಶುಲ್ಕ ಭರಿಸಬೇಕಾಗುತ್ತದೆ. ನೆಫ್ರೊ-ಯುರಾಲಜಿ ಸಂಸ್ಥೆಯ ವೈದ್ಯರ ಕರ್ತವ್ಯ ನಿರ್ಲಕ್ಷ್ಯದಿಂದ ಸಂಸ್ಥೆಗೆ ಬರುವ ರೋಗಿಗಳಿಗೆ ಹೆಚ್ಚು ತೊಂದರೆಯಾಗುತ್ತಿರುವುದು ಕಂಡುಬಂದಿದೆ. ಸರ್ಕಾರಿ ವ್ಯವಸ್ಥೆಯಡಿ ವೈದ್ಯರು ಕಾರ್ಯನಿರ್ವಹಿಸುತ್ತಿರುವುದು ತಿಳಿದಿದ್ದರೂ ಕರ್ತವ್ಯದ ಅವಧಿಯಲ್ಲಿ ಅವರನ್ನು ಕರೆಯಿಸಿರುವ ಖಾಸಗಿ ಆಸ್ಪತ್ರೆಗಳು, ವೈದ್ಯರಿಗೆ ಹೆಚ್ಚಿನ ವೇತನ ನೀಡುವ ಮೂಲಕ ಲಾಭ ಮಾಡಿಕೊಳ್ಳುತ್ತಿವೆ' ಎಂದು ತನಿಖಾಧಿಕಾರಿ ತಿಳಿಸಿದ್ದಾರೆ.

ಸಂಸ್ಥೆಯಲ್ಲಿ ವೈದ್ಯರ ಕೊರತೆ

ಸಂಸ್ಥೆಯಲ್ಲಿ ಚಿಕಿತ್ಸೆ ಜತೆಗೆ ಜೀವರಸಾಯನ ವಿಜ್ಞಾನ, ನೆಫ್ರೊಲಜಿ, ಯುರಾಲಜಿ, ಅರಿವಳಿಕೆ ವಿಜ್ಞಾನ ಸೇರಿ ವಿವಿಧ ವಿಷಯಗಳನ್ನೂ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಇದರಿಂದಾಗಿ ವೈದ್ಯರು ಚಿಕಿತ್ಸೆಯ ಜತೆಗೆ ಬೋಧನೆಯನ್ನೂ ಮಾಡುತ್ತಿದ್ದಾರೆ. ಸದ್ಯ ಮಂಜೂರಾಗಿದ್ದ ವೈದ್ಯರ ಹುದ್ದೆಗಳಲ್ಲಿ 30 ಹುದ್ದೆಗಳು ಖಾಲಿ ಉಳಿದಿವೆ. 46 ವೈದ್ಯರು ಪೂರ್ಣಾವಧಿ ಹುದ್ದೆಯಡಿ ಕಾರ್ಯನಿರ್ವಹಿಸುತ್ತಿದ್ದಾರೆ. ವೈದ್ಯರ ಕೊರತೆ ನಡುವೆಯೂ ಕೆಲವರು ಕರ್ತವ್ಯದ ಅವಧಿಯಲ್ಲಿ ಬೇರೆಡೆಗೆ ತೆರಳುತ್ತಿರುವುದು ಸಂಸ್ಥೆಯಲ್ಲಿನ ವೈದ್ಯರ ಅಸಮಾಧಾನಕ್ಕೆ ಕಾರಣವಾಗಿದೆ. ಇನ್ನೊಂದೆಡೆ ವೈದ್ಯರ ಕೊರತೆ ಸಮಸ್ಯೆ ತೀವ್ರ ಸ್ವರೂಪ ಪಡೆದಿದೆ.

ಶನಿವಾರ, ಮಾರ್ಚ್ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 69 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಬೈಕ್ ಏರುವ ಮುನ್ನ, ಈ ಎಚ್ಚರಿಕೆ ಇರಲಿ

ಆಳ-ಅಗಲ
ರಾಷ್ಟ್ರೀಯ ಪೌರತ್ವ ನೋಂದಣಿಗೆ ಕೇಂದ್ರ ಸರ್ಕಾರದ ರಹಸ್ಯ ಸಿದ್ಧತೆ

ಕಾಜಿರಂಗಕ್ಕೆ 'ಮಹಿಳಾ ಕಾವಲು ಪಡೆ' 11

ಜಮೀನು ಹಂಚಿಕೆಗೆ ಕೆಐಎಡಿಬಿ ಆತುರ 5

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹67,341 (ಬೆಂಗಳೂರು)	₹75,602 (ಬೆಂಗಳೂರು)	82.70

ಕಾಂಗ್ರೆಸ್‌ನಿಂದ ಮೊದಲ ಪಟ್ಟಿ ಬಿಡುಗಡೆ ▸ ದೇಶದ 39 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ ▸ ರಾಜ್ಯದಲ್ಲಿ ಮತ್ತೆ ಬಿಜೆಪಿಗಿಂತ ಮೊದಲೇ ಕಾಂಗ್ರೆಸ್ ಪಟ್ಟಿ

ಕ್ಷೇತ್ರ ಏಳು; 'ಕೈ' ಹುರಿಯಾಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುವ ಮುನ್ನವೇ ಕಾಂಗ್ರೆಸ್ ಪಕ್ಷವು 39 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದೆ. ಕರ್ನಾಟಕದ ಏಳು ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಅಖೈರುಗೊಳಿಸಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಕೇಂದ್ರ ಚುನಾವಣಾ ಸಮಿತಿಯು ಗುರುವಾರ ರಾತ್ರಿ ಸಭೆ ಸೇರಿ ಅಭ್ಯರ್ಥಿಗಳ ಪಟ್ಟಿಗೆ ಅಂತಿಮ ರೂಪ ನೀಡಿತ್ತು. ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ಶುಕ್ರವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಅಭ್ಯರ್ಥಿಗಳ ಹೆಸರು ಪ್ರಕಟಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಎರಡು ಬಾರಿ ಪ್ರತಿನಿಧಿಸಿದ್ದ ಕಲಬುರಗಿ ಕ್ಷೇತ್ರಕ್ಕೆ ಅಭ್ಯರ್ಥಿಯ ಹೆಸರನ್ನು ಮೊದಲ ಪಟ್ಟಿಯಲ್ಲಿ ಪ್ರಕಟಿಸಿಲ್ಲ. 2019ರ ಚುನಾವಣೆಯಲ್ಲಿ ಖರ್ಗೆ ಅವರು ಬಿಜೆಪಿಯ ಡಾ.ಉಮೇಶ ಜಾಧವ ಎದುರು ಸೋತಿದ್ದರು. ಬಿಜೆಪಿಯು 195 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಳೆದ ಶನಿವಾರ ಪ್ರಕಟಿಸಿತ್ತು. ಅದರಲ್ಲಿ ರಾಜ್ಯದ ಯಾವ ಕ್ಷೇತ್ರಕ್ಕೂ ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲೂ ವೇಳಾಪಟ್ಟಿ ಪ್ರಕಟವಾಗುವ ಮುನ್ನವೇ ಕಾಂಗ್ರೆಸ್ ಮೊದಲ ಪಟ್ಟಿಯನ್ನು ಪ್ರಕಟಿಸಿತ್ತು.

7ನೇ ಪುಟ ನೋಡಿ



ಮುದ್ದಹನುಮೇಗೌಡ — ತುಮಕೂರು | ಡಿ.ಕೆ. ಸುರೇಶ್ — ಬೆಂಗಳೂರು ಗ್ರಾ | ಗೀತಾ ಶಿವರಾಜ್‌ಕುಮಾರ್ — ಶಿವಮೊಗ್ಗ | ಶ್ರೇಯಸ್ ಪಟೇಲ್ — ಹಾಸನ | ಸ್ಟಾರ್ ಚಂದ್ರು — ಮಂಡ್ಯ | ರಾಜು ಆಲಗೂರ — ವಿಜಯಪುರ | ಆನಂದಸ್ವಾಮಿ — ಹಾವೇರಿ

ವಯನಾಡ್‌ನಿಂದಲೇ ರಾಹುಲ್ ಸ್ಪರ್ಧೆ

ಕೇರಳದ ವಯನಾಡ್‌ನಿಂದಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ಪರ್ಧಿಸಲಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು ಕೇರಳದ ಆಲಪ್ಪುಳ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ವೇಣುಗೋಪಾಲ್ ಪ್ರಸ್ತುತ ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

2019ರ ಚುನಾವಣೆಯಲ್ಲಿ ಅಮೇಠಿಯಲ್ಲಿ ಸೋತಿದ್ದ ರಾಹುಲ್ ಅವರು ವಯನಾಡ್‌ನಲ್ಲಿ ಗೆದ್ದಿದ್ದರು. ಈ ಸಲ ಅಮೇಠಿಯಿಂದ ರಾಹುಲ್ ಸ್ಪರ್ಧಿಸಲಿದ್ದಾರೆಯೇ ಎಂಬ ಪ್ರಶ್ನೆಗೆ ವೇಣುಗೋಪಾಲ್ ನೇರ ಉತ್ತರ ನೀಡಲಿಲ್ಲ. ಕೇಂದ್ರ ಚುನಾವಣಾ ಸಮಿತಿ ನಿರ್ಧಾರ ತೆಗೆದುಕೊಂಡ ಬಳಿಕ ವಿವರಗಳನ್ನು ನೀಡುತ್ತೇನೆ ಎಂದು ಪ್ರತಿಕ್ರಿಯಿಸಿದರು. ವಯನಾಡ್‌ನ ಬದಲು ಕರ್ನಾಟಕ ಅಥವಾ ತೆಲಂಗಾಣದಿಂದ ರಾಹುಲ್ ಸ್ಪರ್ಧಿಸಲಿದ್ದಾರೆ ಎಂಬ ಸುದ್ದಿಗಳು ಹರಡಿದ್ದವು.

ತಿರುವನಂತಪುರದಿಂದ ಸಂಸದ ಶಶಿ ತರೂರು ಸ್ಪರ್ಧಿಸಲಿದ್ದಾರೆ. ಅಲ್ಲಿ ಅವರು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಎದುರಿಸಲಿದ್ದಾರೆ.

ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ರಾಜನಂದಗಾಂವ್‌ನಿಂದ, ಮಾಜಿ ಸಚಿವ ತಾಮ್ರಧ್ವಜ್ ಸಾಹು ಅವರನ್ನು ದುರ್ಗ್‌ನಿಂದ ಸ್ಪರ್ಧಿಸಲಿದ್ದಾರೆ. ಲೋಕಸಭೆಯಲ್ಲಿ ತನ್ನ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಪಕ್ಷವು ವೇಣುಗೋಪಾಲ್, ಬಘೇಲ್, ಸಾಹು ಅವರನ್ನು ಹುರಿಯಾಳುಗಳನ್ನಾಗಿ ಮಾಡಿದೆ. ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಹಿಂದೇಟು ಹಾಕುತ್ತಿರುವ ಅಶೋಕ ಗೆಹಲೋತ್ ಅವರಂತಹ ಹಿರಿಯ ನಾಯಕರ ಮನಸ್ಸು ಬದಲಿಸಲು ಈ ನಡೆಯು ಒತ್ತಡ ಹೇರುವ ಸಾಧ್ಯತೆಯೂ ಇದೆ. ಕೇರಳಕ್ಕೆ 16, ಕರ್ನಾಟಕಕ್ಕೆ ಏಳು, ಛತ್ತೀಸಗಢಕ್ಕೆ 6, ತೆಲಂಗಾಣದಲ್ಲಿ 4, ಮೇಘಾಲಯಕ್ಕೆ 2 ಮತ್ತು ಲಕ್ಷದ್ವೀಪ, ನಾಗಾಲ್ಯಾಂಡ್, ತ್ರಿಪುರಾ ಮತ್ತು ಸಿಕ್ಕಿಂನಲ್ಲಿ ತಲಾ ಒಬ್ಬ ಅಭ್ಯರ್ಥಿಗಳನ್ನು ಕಾಂಗ್ರೆಸ್ ಘೋಷಿಸಿದೆ.

24 ಅಭ್ಯರ್ಥಿಗಳು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಇತರೆ ಹಿಂದುಳಿದ ವರ್ಗದವರು(ಒಬಿಸಿ), ಅಲ್ಪಸಂಖ್ಯಾತರು. ಉಳಿದ 15 ಮಂದಿ ಸಾಮಾನ್ಯ ವರ್ಗದವರು ಎಂದು ವೇಣುಗೋಪಾಲ್ ಹೇಳಿದರು.

ಕಲಬುರಗಿಯಿಂದ ಖರ್ಗೆ ಸ್ಪರ್ಧೆ?

ಮಲ್ಲಿಕಾರ್ಜುನ ಖರ್ಗೆ ಅವರು ಈ ಸಲ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆಯೇ ಇಲ್ಲವೇ ಎಂಬುದು ಇನ್ನೂ ಸ್ಪಷ್ಟಗೊಂಡಿಲ್ಲ. ಈ ನಡುವೆ, 'ಕಲಬುರಗಿ ಕ್ಷೇತ್ರಕ್ಕೆ ಖರ್ಗೆ ಹೆಸರನ್ನು ಮಾತ್ರ ಶಿಫಾರಸು ಮಾಡಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಈ ಕ್ಷೇತ್ರಕ್ಕೆ ಖರ್ಗೆ ಅವರ ಹೆಸರನ್ನಷ್ಟೇ ಪ್ರಸ್ತಾಪಿಸಲಾಗಿದೆ. ಅಂತಿಮವಾಗಿ ಖರ್ಗೆ ಅವರೇ ನಿರ್ಧಾರ ತೆಗೆದುಕೊಳ್ಳಬೇಕು. ಅವರು ಕಾಂಗ್ರೆಸ್ ಅಧ್ಯಕ್ಷರಾಗಿರುವುದರಿಂದ ದೇಶದಾದ್ಯಂತ ಪ್ರಚಾರಕ್ಕೆ ಹೋಗಬೇಕಿದೆ' ಎಂದು ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.



ರಥೋತ್ಸವ ಸಂಭ್ರಮ ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಮತ್ತು ವರ್ಷಾವಧಿ ಜಾತ್ರೋತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ನಡೆದ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್.

ರಾಜ್ಯಸಭೆಗೆ ಸುಧಾಮೂರ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟವಾಗಲು ವಾರವಷ್ಟೇ ಉಳಿದಿರುವಾಗ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದೇ, ಲೇಖಕಿ ಹಾಗೂ ಇನ್ಫೊಸಿಸ್ ಪ್ರತಿಷ್ಠಾನದ ಮಾಜಿ ಅಧ್ಯಕ್ಷೆ ಸುಧಾಮೂರ್ತಿ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಶುಕ್ರವಾರ ಮಧ್ಯಾಹ್ನ ಪೋಸ್ಟ್ ಮಾಡಿ, 'ಸುಧಾಮೂರ್ತಿ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ಶಿಕ್ಷಣ, ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸುಧಾಮೂರ್ತಿ ಅವರ ಕೊಡುಗೆ ಅಪಾರ ಹಾಗೂ ಸ್ಫೂರ್ತಿದಾಯಕ. ರಾಜ್ಯಸಭೆಯಲ್ಲಿ ಅವರ ಉಪಸ್ಥಿತಿಯಿಂದ ನಾರಿಶಕ್ತಿಗೆ ಬಲಬಂದಂತಾಗಿದೆ. ಇದು ನಮ್ಮ ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಮಹಿಳೆಯರ ಶಕ್ತಿ ಮತ್ತು ಸಾಮರ್ಥ್ಯವನ್ನು ಉದಾಹರಿಸುತ್ತದೆ' ಎಂದು ಬರೆದಿದ್ದಾರೆ.



ಮಹಿಳಾ ದಿನಾಚರಣೆಯಂದೇ ನಾಮನಿರ್ದೇಶನ ಮಾಡಿರುವುದು ದುಪ್ಪಟ್ಟು ಅಚ್ಚರಿಯನ್ನುಂಟು ಮಾಡಿದೆ. ನಾನು ಎಂದಿಗೂ ರಾಜ್ಯಸಭೆಯ ಸದಸ್ಯ ಸ್ಥಾನವನ್ನು ಬಯಸಿರಲಿಲ್ಲ

ಸುಧಾಮೂರ್ತಿ, ಲೇಖಕಿ

73 ವರ್ಷದ ಸುಧಾಮೂರ್ತಿ ಮೂಲತಃ ಹಾವೇರಿ ಜಿಲ್ಲೆಯ ಶಿಗ್ಗಾವಿಯವರು. ಅವರು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರ ಪತ್ನಿ. ಸುಧಾಮೂರ್ತಿ ಅವರ ಮಗಳನ್ನು ಬ್ರಿಟಿಷ್ ಪ್ರಧಾನಿ ರಿಷಿ ಸುನಕ್ ವಿವಾಹವಾಗಿದ್ದಾರೆ. ಸುಧಾಮೂರ್ತಿ ಅವರು 40ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ. ಸಮಾಜ ಸೇವೆಗಾಗಿ ಅವರಿಗೆ ಕಳೆದ ವರ್ಷ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು. 2006ರಲ್ಲಿ ಪದ್ಮಶ್ರೀ ಗೌರವಕ್ಕೆ ಪಾತ್ರರಾಗಿದ್ದರು.

ಪ್ರಸ್ತುತ ರಾಜ್ಯಸಭೆಯಲ್ಲಿರುವ ಕರ್ನಾಟಕದ ಎರಡನೇ ನಾಮ ನಿರ್ದೇಶಿತ ಸದಸ್ಯರಾಗಲಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರನ್ನು 2022ರ ಜುಲೈ ತಿಂಗಳಲ್ಲಿ ನಾಮನಿರ್ದೇಶನ ಮಾಡಲಾಗಿತ್ತು. ವಿವಿಧ ಕ್ಷೇತ್ರಗಳ ಸಾಧಕರ ನೆಲೆಯಲ್ಲಿ ರಾಜ್ಯಸಭೆಗೆ 12 ಮಂದಿಯ ನಾಮ ನಿರ್ದೇಶನ ಮಾಡಲು ಅವಕಾಶ ಇದೆ.

7ನೇ ಪುಟ ನೋಡಿ

ಸಿಲಿಂಡರ್ ದರ ₹100 ಇಳಿಕೆ

ನವದೆಹಲಿ(ಪಿಟಿಐ): ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ₹100 ಇಳಿಕೆ ಮಾಡಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಅಂತರರಾಷ್ಟ್ರೀಯ ಮಹಿಳಾ ದಿನವಾದ ಶುಕ್ರವಾರ ಘೋಷಿಸಿದರು.

ದೇಶದಾದ್ಯಂತ ಲಕ್ಷಾಂತರ ಕುಟುಂಬಗಳ ಆರ್ಥಿಕ ಹೊರೆಯನ್ನು ಇದು ಗಮನಾರ್ಹವಾಗಿ ತಗ್ಗಿಸಲಿದೆ ಮತ್ತು ನಾರಿ ಶಕ್ತಿಗೆ ಪ್ರಯೋಜನವಾಗಲಿದೆ ಎಂದು ಅವರು 'ಎಕ್ಸ್' ಮಾಧ್ಯಮದಲ್ಲಿ ಹೇಳಿದರು.

7ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ • ಎನ್‌ಐಎ ತನಿಖೆ ಚುರುಕು

ಮತ್ತೆ ಮೂವರ ವಶ: ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿದ್ದ' ಅನುಮಾನದ ಮೇರೆಗೆ ಶಂಕಿತ ಉಗ್ರ ಮಿನಾಜ್ ಅಲಿಯಾಸ್ ಸುಲೇಮಾನ್‌ನನ್ನು (26) ಕಸ್ಟಡಿಗೆ ಪಡೆದಿದ್ದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಮತ್ತೆ ಮೂವರು ಶಂಕಿತ ಉಗ್ರರನ್ನು ವಶಕ್ಕೆ ಪಡೆದಿದ್ದಾರೆ. ಶಂಕಿತರು ಮತ್ತೊಂದು ಸ್ಫೋಟಕ್ಕೆ ಸಂಚು ರೂಪಿಸಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ತನಿಖಾ ಸಂಸ್ಥೆಗಳು, ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವಂತೆ ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ.

ತನಿಖಾ ಸಂಸ್ಥೆಗಳ ಮಾಹಿತಿಯಿಂದ ಎಚ್ಚೆತ್ತಿರುವ ರಾಜ್ಯದ ಆಯಾ ಕಮಿಷನರೇಟ್ ಹಾಗೂ ಜಿಲ್ಲಾ ಪೊಲೀಸರು, ತಮ್ಮ ವ್ಯಾಪ್ತಿಯ ದೇವಸ್ಥಾನಗಳು ಹಾಗೂ ಜನನಿಬಿಡ ಸಾರ್ವಜನಿಕ ಸ್ಥಳಗಳಲ್ಲಿ ಬಿಗಿ ಭದ್ರತೆ ಕೈಗೊಂಡಿದ್ದಾರೆ.

ಶುಕ್ರವಾರ ಮಹಾ ಶಿವರಾತ್ರಿ ಹಬ್ಬದ ಇದ್ದ ಕಾರಣ ರಾಜ್ಯದ ಹಲವು ಜಿಲ್ಲೆಗಳ ಶಿವನ ದೇವಸ್ಥಾನದಲ್ಲಿ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತಪಾಸಣೆ ನಡೆಸಿದರು. ಜೊತೆಗೆ, ದೇವಸ್ಥಾನಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿಯೂ ಶೋಧ ನಡೆಸಿದರು.

19ನೇ ವಯಸ್ಸಿಗೆ ಐಎಸ್ ಘಟಕ: ಎನ್‌ಐಎ ವಶಕ್ಕೆ ಪಡೆದಿರುವ ಮಿನಾಜ್ ಸಹಚರರಲ್ಲಿ ಒಬ್ಬನಾದ ಸೈಯದ್ ಸಮೀರ್, 'ತನ್ನ ಧರ್ಮದ ಗುರುಗಳಿಗೆ ಅವಮಾನವಾಗಿದೆ' ಎಂದು ಆರೋಪಿಸಿ ಯುವಕರ ತಂಡ ಕಟ್ಟಿಕೊಂಡು ಬಳ್ಳಾರಿಯಲ್ಲಿ ಪ್ರತಿಭಟನೆ ಮಾಡಿದ್ದ. ಈತ ಐಎಸ್ ನಂಟು ಹೊಂದಿದ್ದ. ಸಾಮಾಜಿಕ ಮಾಧ್ಯಮಗಳ ಮೂಲಕ ಐಎಸ್ ಉಗ್ರರ ಜೊತೆ ಸಂಪರ್ಕದಲ್ಲಿದ್ದ ಈತ, ಭಾರತದಲ್ಲಿ ವಿಧ್ವಂಸಕ ಕೃತ್ಯ ಎಸಗಲು ತಂಡ ಕಟ್ಟಲು ಸಜ್ಜಾಗಿದ್ದ' ಎಂದು ತಿಳಿಸಿವೆ.

'ಶಂಕಿತ ಮಿನಾಜ್, ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಕಾರ್ಯಕರ್ತ. ಈತ ಸಹ ಧರ್ಮದ ಬಗ್ಗೆ ಹೆಚ್ಚು ಒಲವು ಹೊಂದಿದ್ದ. ಈತನ ಜತೆಗೆ ಇತರರನ್ನು ಸೇರಿಸಿಕೊಂಡು ಐಎಸ್ ಬಳ್ಳಾರಿ ಘಟಕವನ್ನು ಸಮೀರ್ ಸ್ಥಾಪಿಸಿದ್ದ. ಈ ಘಟಕಕ್ಕೆ ಮಿನಾಜ್‌ನನ್ನೇ ಮುಖ್ಯಸ್ಥನನ್ನಾಗಿ ಮಾಡಿದ್ದ. ಮುಸ್ಲಿಂ ಯುವಕರನ್ನು ಪ್ರಚೋದಿಸಿ ಘಟಕಕ್ಕೆ ಸೇರಿಸಿಕೊಳ್ಳುವ ಜವಾಬ್ದಾರಿಯನ್ನು ಸಮೀರ್ ವಹಿಸಿಕೊಂಡಿದ್ದ' ಎಂದು ಮೂಲಗಳು ಹೇಳಿವೆ.

ಲ್ಯಾಪ್‌ಟಾಪ್‌ನಲ್ಲಿ ಸಾಕಷ್ಟು ಸುಳಿವು: 'ಸಮೀರ್ ತಂದೆ ತರಕಾರಿ ವ್ಯಾಪಾರಿ. ತಾಯಿ ಮನೆ ಕೆಲಸ ಮಾಡುತ್ತಿದ್ದಾರೆ. ದುಬಾರಿ ಬೆಲೆಯ ಲ್ಯಾಪ್‌ಟಾಪ್ ಹೊಂದಿದ್ದ ಸಮೀರ್, ಭಯೋತ್ಪಾದನಾ ಕೃತ್ಯ ಸಂಚಿಗೆ ಅದನ್ನು ಬಳಸುತ್ತಿದ್ದ. 2023ರ ಡಿ. 18ರಂದು ಮನೆ ಮೇಲೆ ದಾಳಿ ಮಾಡಿದ್ದ ಎನ್‌ಐಎ, ಲ್ಯಾಪ್‌ಟಾಪ್ ಜಪ್ತಿ ಮಾಡಿತ್ತು. ಇದೇ ಲ್ಯಾಪ್‌ಟಾಪ್‌ನಲ್ಲಿ ಸಾಕಷ್ಟು ಸುಳಿವುಗಳು ಲಭ್ಯವಾಗಿವೆ' ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಐಎಸ್ 'ಬಳ್ಳಾರಿ ಘಟಕ'ದ ಕೃತ್ಯ

'ಬಾಂಬ್ ಸ್ಫೋಟದ ಬಗ್ಗೆ ಕೆಲ ಸುಳಿವು ಲಭ್ಯವಾಗಿದ್ದರಿಂದ, ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಮಿನಾಜ್‌ನನ್ನು ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಇದರ ಬೆನ್ನಲ್ಲೇ ಮಿನಾಜ್‌ನ ಸಹಚರರಾದ ಬಳ್ಳಾರಿಯ ಸೈಯದ್ ಸಮೀರ್ (19), ಮುಂಬೈನ ಅನಾಸ್ ಇಕ್ಬಾಲ್ ಶೇಖ್ (23) ಹಾಗೂ ದೆಹಲಿಯ ಶಯಾನ್ ರಹಮಾನ್ ಅಲಿಯಾಸ್ ಹುಸೈನ್‌ನನ್ನು (26) ನ್ಯಾಯಾಲಯದ ಆದೇಶದಂತೆ ಕಸ್ಟಡಿಗೆ ಪಡೆದು ವಿಚಾರಣೆ ತೀವ್ರಗೊಳಿಸಿದ್ದಾರೆ. ಇವರೆಲ್ಲರೂ ಸೇರಿ ಕಟ್ಟಿದ್ದ ಇಸ್ಲಾಮಿಕ್ ಸ್ಟೇಟ್ (ಐಎಸ್) ಬಳ್ಳಾರಿ ಘಟಕದಿಂದಲೇ ಬಾಂಬ್ ಸ್ಫೋಟ ಕೃತ್ಯ ಎಸಗಿರುವ ಬಗ್ಗೆ ತನಿಖಾ ಸಂಸ್ಥೆಗಳು ಶಂಕೆ ವ್ಯಕ್ತಪಡಿಸುತ್ತಿವೆ' ಎಂದು ತನಿಖಾ ಸಂಸ್ಥೆ ಮೂಲಗಳು ತಿಳಿಸಿವೆ.



ಸಮೀರ್ ಮಿನಾಜ್

'ವಶಕ್ಕೆ ಪಡೆದಿರುವ ಶಂಕಿತರನ್ನು ಬಳ್ಳಾರಿಗೆ ಕರೆದೊಯ್ದಿರುವ ಎನ್‌ಐಎ ವಿಶೇಷ ತಂಡ, ಬಾಂಬ್ ಇಟ್ಟವನ ಪತ್ತೆಗಾಗಿ ಹಲವು ಸ್ಥಳಗಳಲ್ಲಿ ಶೋಧ ನಡೆಸುತ್ತಿದೆ. ಮಿನಾಜ್ ಹಾಗೂ ಸೈಯದ್ ಸಮೀರ್, ಓಡಾಡಿದ್ದ ಬಳ್ಳಾರಿಯ ಎಲ್ಲ ಸ್ಥಳಗಳು ಹಾಗೂ ಮಳಿಗೆಗಳಲ್ಲಿ ಮಾಹಿತಿ ಕಲೆಹಾಕುತ್ತಿದೆ. ಜೊತೆಗೆ, ಬಸ್ ನಿಲ್ದಾಣ ಹಾಗೂ ಇತರೆಡೆ ಇರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸುತ್ತಿದೆ' ಎಂದು ಮೂಲಗಳು ಹೇಳಿವೆ.


ನಾಮಪತ್ರದಲ್ಲಿ ಮಗನ ಆಸ್ತಿ ವಿವರ ಮುಚ್ಚಿಟ್ಟ ಆರೋಪ

ಮಂಜುಳಾ ವಿರುದ್ಧ ಕ್ರಿಮಿನಲ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನಾಮಪತ್ರದ ಜತೆಗಿನ ಪ್ರಮಾಣಪತ್ರದಲ್ಲಿ ಮಗನ ಆಸ್ತಿ ವಿವರ ಒದಗಿಸದೇ ಅಕ್ರಮ ಎಸಗಿರುವ ಆರೋಪದಡಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕಿ ಮಂಜುಳಾ ಲಿಂಬಾವಳಿ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿರುವ ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ, ಸಮನ್ಸ್ ಜಾರಿಗೆ ಆದೇಶಿಸಿದೆ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸೋತಿದ್ದ ಮಾಜಿ ಸಚಿವ ನಾಗೇಶ್ ಟಿ. ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ದೂರನ್ನು ವಿಚಾರಣೆಗೆ ಅಂಗೀಕರಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ. ಪ್ರೀತ್ ಅವರು, ಪೊಲೀಸರ ಮೂಲಕ ಮಂಜುಳಾ ಅವರಿಗೆ ಸಮನ್ಸ್ ಜಾರಿಗೊಳಿಸುವಂತೆ ಮಂಗಳವಾರ(ಮಾ.5) ಆದೇಶ ಹೊರಡಿಸಿದ್ದಾರೆ.




ಮಂಜುಳಾ ಲಿಂಬಾವಳಿ


'ಮಂಜುಳಾ ಅವರು 2023ರ ಏಪ್ರಿಲ್ 18ರಂದು ನಾಮಪತ್ರ ಸಲ್ಲಿಸಿದ್ದರು. ಮಗ ಮಯೂರ್ ಲಿಂಬಾವಳಿ ಅವರ ಹೆಸರನ್ನು ಅವಲಂಬಿತರ ಪಟ್ಟಿಯಲ್ಲಿ ಉಲ್ಲೇಖಿಸಿರಲಿಲ್ಲ. ಮಗನ ಹೆಸರಿನ ಆಸ್ತಿ ಮತ್ತು ಹೊಣೆಗಾರಿಕೆಯ ವಿವರವನ್ನೂ ಮುಚ್ಚಿಟ್ಟಿದ್ದರು' ಎಂದು ನಾಗೇಶ್ ಖಾಸಗಿ ದೂರಿನಲ್ಲಿ ಆರೋಪಿಸಿದ್ದರು.

'ಪ್ಲೂಟಸ್ ಎಂಟರ್‌ಪ್ರೈಸಸ್ ಎಂಬ ಸಂಸ್ಥೆಗೆ ಮಯೂರ್ ಲಿಂಬಾವಳಿ ವ್ಯವಸ್ಥಾಪಕ ಪಾಲುದಾರ. ಮಂಜುಳಾ ಮತ್ತು ಅವರ ಗಂಡ ಅರವಿಂದ ಲಿಂಬಾವಳಿ ಮಗ ಮಯೂರ್ ಹೆಸರಿನಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತ ಹಲವು ಸ್ಥಿರಾಸ್ತಿಗಳನ್ನು ಖರೀದಿಸಿದ್ದರು. ಕುಟುಂಬದ ಒಟ್ಟು ಆಸ್ತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಬಚ್ಚಿಡುವುದಕ್ಕಾಗಿ ಮಂಜುಳಾ ಅವರು, ಮಗನನ್ನು ಎರಡನೇ ಅವಲಂಬಿತ ಎಂದು ಉಲ್ಲೇಖಿಸಿರಲಿಲ್ಲ' ಎಂದು ಆರೋಪಿಸಿದ್ದ ದೂರುದಾರರು, ಆಸ್ತಿ ಖರೀದಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ದೂರುದಾರರ ಪ್ರಮಾಣೀಕೃತ ಹೇಳಿಕೆಯನ್ನು ದಾಖಲಿಸಿಕೊಂಡ ಬಳಿಕ ನ್ಯಾಯಾಲಯವು, ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದೆ. ಇಬ್ಬರು ಸಾಕ್ಷಿಗಳನ್ನೂ ನ್ಯಾಯಾಲಯ ವಿಚಾರಣೆ ನಡೆಸಿತ್ತು.

'ದೂರುದಾರರು ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದರೆ ಆರೋಪಗಳಲ್ಲಿ ಮೇಲ್ನೋಟಕ್ಕೆ ಹುರುಳಿದೆ ಎಂದು ಕಾಣಿಸುತ್ತದೆ. ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 125–ಎ ಅಡಿಯಲ್ಲಿ ವಿಚಾರಣೆ ನಡೆಸುವ ಅಗತ್ಯವಿದೆ' ಎಂದು ನ್ಯಾಯಾಲಯವು ಆದೇಶದಲ್ಲಿ ತಿಳಿಸಿದೆ.







1. ಹಳೆ ವಿಮಾನ ನಿಲ್ದಾಣ ರಸ್ತೆಯ ಕೆಂಪ್ ಫೋರ್ಟ್‌ನಲ್ಲಿರುವ ಈಶ್ವರನ ಮೂರ್ತಿಗೆ ಭಕ್ತಾದಿಗಳು ನಮಿಸಿದರು 2. ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಭಕ್ತಾದಿಗಳು ನೂಕುನುಗ್ಗಲಿನಲ್ಲಿಯೇ ದೇವರ ದರ್ಶನ ಪಡೆದರು 3. ಮತ್ತಿಕೆರೆ ಮೈದಾನದಲ್ಲಿ ನಿರ್ಮಿಸಿರುವ ರಾಮಮಂದಿರದ ಜತೆಗೆ ರಾಮ ಹಾಗೂ ಶಿವನ ಬೃಹತ್ ಪ್ರತಿಕೃತಿಯನ್ನು ಭಕ್ತಾದಿಗಳು ಕಣ್ತುಂಬಿಕೊಂಡರು – ಪ್ರಜಾವಾಣಿ ಚಿತ್ರಗಳು

ನಗರದ ವಿವಿಧೆಡೆ ಶ್ರದ್ಧಾ ಭಕ್ತಿಯಿಂದ ಮಹಾಶಿವರಾತ್ರಿ ಆಚರಣೆ • ಶಿವನ ದರ್ಶನಕ್ಕೆ ನೂಕುನುಗ್ಗಲು

ದೇಗುಲಗಳಲ್ಲಿ ಶಿವಸ್ಮರಣೆ: ಭಕ್ತರ ಜಾಗರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶ್ವರನಿಗೆ ಕ್ಷೀರಾಭಿಷೇಕ, ರುದ್ರಾಭಿಷೇಕ, ಬಿಲ್ವಾರ್ಚನೆ, ಓಂ ನಮಃ ಶಿವಾಯ ಜಪ... ಇದು ನಗರದ ಪ್ರಮುಖ ಶಿವ ದೇಗುಲಗಳಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಶುಕ್ರವಾರ ಕಂಡು ಬಂದ ದೃಶ್ಯಗಳಿವು.

ಹಬ್ಬದ ಅಂಗವಾಗಿ ದೇವಾಲಯಗಳಲ್ಲಿ ಮುಂಜಾನೆಯಿಂದ ಸಂಜೆಯವರೆಗೂ ವಿಶೇಷ ಪೂಜೆಗಳು ನಡೆದವು. ಜನರು ಶ್ರದ್ಧಾ ಭಕ್ತಿಯಿಂದ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಹಿರಿಯರು, ಕಿರಿಯರು ಭಕ್ತಿಭಾವದಿಂದ ಶಿವಲಿಂಗಕ್ಕೆ ಕ್ಷೀರಾಭಿಷೇಕ ನೆರವೇರಿಸಿದರು. ಕೆಲ ದೇಗುಲಗಳಲ್ಲಿ ಬೆಳಗಿನ ಜಾವದಿಂದಲೇ ಭಕ್ತರು ಸಾಲುಗಟ್ಟಿ ನಿಂತಿದ್ದರು. ಹೂವಿನ ಅಲಂಕಾರ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಮಹಾಲಕ್ಷ್ಮೀ ಹೋಮ, ವಿಶೇಷ ರುದ್ರ ಹೋಮ, ಸಹಸ್ರ ಬಿಲ್ವಾರ್ಚನೆ ಮಹಾ ಮಂಗಳಾರತಿ ಸೇರಿದಂತೆ ಹಲವು ಪೂಜಾ ಕೈಂಕರ್ಯಗಳು ನಡೆದವು.

ಗವಿಪುರದ ಗವಿಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಾಲಯ, ಟೆಂಪಲ್ ಸ್ಟ್ರೀಟ್‌ನ ದಕ್ಷಿಣಮುಖ ನಂದಿ ತೀರ್ಥ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಜರಗನಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ಕೋಣನಕುಂಟೆಯ ಚಂದ್ರಚೂಡೇಶ್ವರ ದೇವಸ್ಥಾನ, ಬಸವನಗುಡಿಯ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಚಾಮರಾಜಪೇಟೆಯ ಮಲೆ ಮಹದೇಶ್ವರ ದೇವಸ್ಥಾನ, ಹಳೆ ವಿಮಾನ ನಿಲ್ದಾಣ ರಸ್ತೆಯ ಮುರುಗೇಶ ಪಾಳ್ಯದ ಶಿವೋಹಂ ಶಿವ ದೇವಸ್ಥಾನ, ಕೋಟೆ ಜಲಕಂಟೇಶ್ವರ ದೇವಸ್ಥಾನ ಸೇರಿ ಸೇರಿ ಪ್ರಮುಖ ದೇಗುಲಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು.

ದರ್ಶನಕ್ಕೆ ನೂಕುನುಗ್ಗಲು: ಕೆಲವು ದೇವಸ್ಥಾನಗಳಲ್ಲಿ ಪ್ರಸಾದ ವಿನಿಯೋಗ ನಡೆಯಿತು. ಸರದಿಯಲ್ಲಿ ನಿಂತು ಭಕ್ತರು ಪ್ರಸಾದ ಸೇವಿಸಿದರು. ದೇಗುಲಗಳಲ್ಲಿ ದರ್ಶನಕ್ಕೆ ನೂಕುನುಗ್ಗಲು ಸಹ ಇತ್ತು. ಮತ್ತಿಕೆರೆ ಮೈದಾನದಲ್ಲಿ ರಾಮಮಂದಿರದ ಜತೆಗೆ ರಾಮ ಹಾಗೂ ಶಿವನ ಬೃಹತ್ ಪ್ರತಿಕೃತಿ ಇರಿಸಲಾಗಿತ್ತು. ಇದು ಆಕರ್ಷಣೆಯ ಕೇಂದ್ರಬಿಂದುವಾಗಿತ್ತು. ಕಲಾಸಿ ಪಾಳ್ಯದಲ್ಲಿರುವ ಜಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಜಲಕಂಠೇಶ್ವರನಿಗೆ ಮಂಜುಗಡ್ಡೆಯಿಂದ ವಿಶೇಷ ಅಲಂಕಾರ ಮಾಡಲಾಗಿತ್ತು.

ಪ್ರಮುಖ ದೇವಾಲಯಗಳಲ್ಲಿ ರಾತ್ರಿ ಜಾಗರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಜಾಗರಣೆ ಅಂಗವಾಗಿ ನಾಟಕೋತ್ಸವ, ಸಂಗೀತೋತ್ಸವ, ಕಾವ್ಯೋತ್ಸವ ಆಯೋಜಿಸಲಾಗಿತ್ತು. ದೀಪೋತ್ಸವ ವಿಶೇಷ ಮೆರುಗು ನೀಡಿತು. ಕತ್ತಲು ಆವರಿಸುತ್ತಿದ್ದಂತೆ ಶಿವನ ಆರಾಧನೆಯ ತಾಣಗಳು ವಿದ್ಯುತ್ ದೀಪಗಳಿಂದ ಕಂಗೊಳಿಸಿದವು. ತಳಿರು, ತೋರಣಗಳು ಮಹಾಶಿವರಾತ್ರಿ ಮೆರುಗು ಹೆಚ್ಚಿಸಿದವು.

ಸಂಗೀತ–ನೃತ್ಯದ ಮೆರಗು

ಜಾಗರಣೆ ಪ್ರಯುಕ್ತ ವಿವಿಧ ಸಂಘ ಸಂಸ್ಥೆಗಳು ಹಾಗೂ ದೇವಾಲಯಗಳು ಶುಕ್ರವಾರ ಸಂಜೆಯಿಂದ ಶನಿವಾರ ಬೆಳಿಗ್ಗೆ ತನಕ ಲಕ್ಷ ದೀಪೋತ್ಸವ, ನಾಟಕೋತ್ಸವ, ಸಂಗೀತ–ನೃತ್ಯ ಕಾರ್ಯಕ್ರಮ ಏರ್ಪಡಿಸಿದ್ದವು. ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘವು ಮಲ್ಲೇಶ್ವರದ ಶ್ರೀಕಂಠೇಶ್ವರ ಭವನದಲ್ಲಿ ಭಜನಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಯು ಹೆಸರುಘಟ್ಟ ರಸ್ತೆಯ ಚಿಮಿಣಿ ಹಿಲ್ಸ್‌ನಲ್ಲಿ ಶಿವರಾತ್ರಿ ಸ್ವರ ಸಂಭ್ರಮ ಕಾರ್ಯಕ್ರಮ ನಡೆಸಿತು. ಸೃಷ್ಟಿ ಸೆಂಟರ್ ಆಫ್ ಪರ್ಫಾಮಿಂಗ್ ಆರ್ಟ್ಸ್ ಆ್ಯಂಡ್ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್ ಥೆರಪಿಯಿಂದ ಚಾಮರಾಜಪೇಟೆಯಲ್ಲಿರುವ ಶೃಂಗೇರಿ ಶಂಕರ ಮಠದಲ್ಲಿ ಸಂಗೀತ–ನೃತ್ಯ ಕಾರ್ಯಕ್ರಮ ನಡೆಸಲಾಯಿತು.

ಸಿರೂರು ಪಾರ್ಕ್ ಆಟದ ಮೈದಾನದಲ್ಲಿ 'ಜಾಣಜಾಣೆಯರ ನಗೆಜಾಗರಣೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ರಂಗಸೇತುವೆ ಟ್ರಸ್ಟ್ ವತಿಯಿಂದ ಶ್ರೀಗಂಧ ಕಾವಲಿನ ಪೂರ್ಣಚಂದ್ರ ತೇಜಸ್ವಿ ರಂಗಮಂದಿರದಲ್ಲಿ 'ವರಭ್ರಷ್ಟ' ಪೌರಾಣಿಕ ನಾಟಕ ಪ್ರದರ್ಶಿಸಲಾಯಿತು. ಕಾಡುಮಲ್ಲೇಶ್ವರ ಗೆಳೆಯರ ಬಳಗದಿಂದ ಮಲ್ಲೇಶ್ವರದ ಕಾಡುಮಲ್ಲೇಶ್ವರ ಬಯಲು ರಂಗಮಂಟಪದಲ್ಲಿ ತಡರಾತ್ರಿವರೆಗೂ ಸಂಗೀತ–ನೃತ್ಯ ಕಾರ್ಯಕ್ರಮಗಳು ನಡೆದವು.



ಮಲ್ಲೇಶ್ವರದಲ್ಲಿರುವ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಮಲ್ಲಿಕಾರ್ಜುನ ಸ್ವಾಮಿಗೆ ಶಿವರಾತ್ರಿ ಅಂಗವಾಗಿ ವಿಶೇಷ ಅಲಂಕಾರ ಮಾಡಲಾಗಿತ್ತು –ಪ್ರಜಾವಾಣಿ ಚಿತ್ರ

ರಾತ್ರಿಯಿಡೀ 'ಕಾವ್ಯ ಶಿವರಾತ್ರಿ'

ಜನಸಂಸ್ಕೃತಿ ಪ್ರತಿಷ್ಠಾನ ಕಾವ್ಯ ಮಂಡಲ ಹಾಗೂ ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಜಂಟಿಯಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಕಾವ್ಯ ಶಿವರಾತ್ರಿ ಆಯೋಜಿಸಿತ್ತು. ಅಹೋರಾತ್ರಿ ಕಾವ್ಯ ಗಾಯನ ನಡೆಯಿತು. ಅದಾದ ಮೇಲೆ ಮಂಟೇಸ್ವಾಮಿ ಮತ್ತು ಮಲೆಮಹದೇಶ್ವರ ಮಹಾಕಾವ್ಯಗಳ ಗಾಯನ, 'ಮಿಸಸ್ ಅಂಬೇಡ್ಕರ್' ನಾಟಕ ಪ್ರದರ್ಶನ ನಡೆಯಿತು.

PUBLIC NOTICE

Notice is hereby given to the general public that the following original documents ('**Original Documents**') in connection with the immovable property bearing No. 1542, Municipal No. 135 (old Sy Nos. 191/1 & 191/7), measuring 01 Acre 08 Guntas, situated at Varthur Village, Varthur Hobli, Bengaluru East Taluk, Bengaluru Urban District ('**Property**') have been lost/misplaced by the owner ('**Owner**'):

(i) Gift Deed dated 18.11.1972 (Registered as Document No. 5025/1972-73, Book-I, stored in Volume 970, at Pages 60 to 61, at the office of the Sub Registrar, Bangalore South Taluk) executed by Mrs. Sanjeevamma in favour of Mr. Anjanappa, son of Mr. Munivenkatappa @ Daddappa; and

(ii) Agreement of Sale dated 11.06.2007 (Registered as Document No. VRT-1-01254-2007-08, Book-1, stored in C.D. No. VRTD5, at the office of the Sub Registrar, Varthur) executed by and between Mr. J. Gopal Reddy, son of Mr. Jayaram Reddy and Mrs. Asha P. Shetty, wife of Mr. K. Prakash Shetty.

Despite best efforts, the Owner is unable to trace the above-mentioned Original Documents for which Police Complaint intimating the loss of the aforesaid Original Documents has been filed with Bengaluru City Police Station, Bengaluru, vide Lost Report No. 0965296/2024 dated 07.03.2024.

Members of the public are hereby notified that in the event any person/s has/have found/ discovered/ is/are in custody of the Original Documents, such person/s is/are hereby requested to return the Original Documents to the undersigned, at the below mentioned address.

Sd/-
Ms. Brijita Prakash, Partner
DSK Legal,
Prestige Loka, No. 201, 2nd Floor, No. 7/1 & 7/7, Brunton Road, Craig Park Layout, Bengaluru – 560025.Tel: 080-69548770.

Date: 09.03.2024
Place : Bengaluru

ಕೇಂದ್ರ ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಜತೆ 'ವಿಕಸಿತ್ ಭಾರತ್' ಕುರಿತ ಸಂವಾದ

'ಯುವ ಜನರ ಚಿಂತನೆಗೆ ಒಗ್ಗದ ರಾಜಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗ ದೇಶದಲ್ಲಿ 18 ರಿಂದ 30 ವರ್ಷದೊಳಗಿನ ಯುವ ಜನರ ಸಂಖ್ಯೆ ಅಧಿಕ ಇದೆ. ಆದರೆ, ಇಂದಿನ ರಾಜಕಾರಣ ಮತ್ತು ನೀತಿಗಳು ಯುವ ಜನರ ಚಿಂತನೆಗಳಿಗೆ 'ಕನೆಕ್ಟ್' ಆಗುತ್ತಿಲ್ಲ. ನಾವೆಲ್ಲರೂ ರಾಜಕಾರಣಕ್ಕೆ ಬರಲು ಆಗುವುದಿಲ್ಲ. ಆದರೆ, ನಮ್ಮ ಕನಸಿನ ಭಾರತ ರೂಪುಗೊಳ್ಳಲು ಸಲಹೆಗಳು, ಪರಿಕಲ್ಪನೆ ಹಂಚಿಕೊಳ್ಳಲು ಒಂದು ವೇದಿಕೆಯನ್ನಾದರೂ ಕಲ್ಪಿಸಿ'.

ಇಂತಹದ್ದೊಂದು ಪ್ರಶ್ನೆ ಕೇಂದ್ರ ಮಾಹಿತಿ ಮತ್ತು ಪ್ರಸಾರ, ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರಿಗೆ ತೂರಿ ಬಂದಿದ್ದು, 'ವಿಕಸಿತ್ ಭಾರತ್' ಕುರಿತ ಸಂವಾದದಲ್ಲಿ. ನಗರದ ಚರ್ಚ್ ಸ್ಟ್ರೀಟ್‌ನ 'ಬೀಹೈವ್'ನಲ್ಲಿ ಶುಕ್ರವಾರ ಸಂವಾದ ಹಮ್ಮಿಕೊಳ್ಳಲಾಗಿತ್ತು.

'ಯಾವುದೇ ಪಕ್ಷ ಇರಲಿ ಅಲ್ಲಿ ನಮ್ಮ ವಯೋಮಾನದ ರಾಜಕಾರಣಿಗಳು ತೀರಾ ಕಡಿಮೆ. ಹೀಗಾಗಿ ನಮ್ಮ ಆಶಯಗಳು, ಆಕಾಂಕ್ಷೆಗಳು, ಕನಸುಗಳು ಯಾವುದೇ ಸರ್ಕಾರಗಳಲ್ಲಿ ಪ್ರತಿಬಿಂಬಿತವಾಗುತ್ತಿಲ್ಲ. ಯಾವುದೋ ಜಮಾನದ ಆಲೋಚನೆಗಳೇ ಪ್ರತಿಬಿಂಬಿತವಾಗುತ್ತಿವೆ' ಎಂದು ಯುವಕರೊಬ್ಬರು ಹೇಳಿದರು.



ನಗರದಲ್ಲಿ ಆಯೋಜಿಸಲಾಗಿದ್ದ 'ವಿಕಸಿತ ಭಾರತ' ಅಭಿಯಾನದಲ್ಲಿ ಪಾಲ್ಗೊಂಡ ಕೇಂದ್ರ ಸಚಿವ ಅನುರಾಗ್ ಸಿಂಗ್ ಠಾಕೂರ್ ಸಭಿಕರೊಬ್ಬರ ಜತೆ ಮಾತನಾಡಿದರು –ಪ್ರಜಾವಾಣಿ ಚಿತ್ರ

ಇದಕ್ಕೆ ಉತ್ತರಿಸಿದ ಸಚಿವ ಅನುರಾಗ್, 'ರಾಜಕಾರಣದಲ್ಲಿ ವಯಸ್ಸು ಮುಖ್ಯವಾಗುವುದಿಲ್ಲ. ಆದರೆ ಯುವ ಜನರ ಮನಸ್ಸನ್ನು ಅರ್ಥ ಮಾಡಿಕೊಂಡು ನೀತಿಗಳನ್ನು ರೂಪಿಸಿ ಅದನ್ನು ಜಾರಿ ಮಾಡುವುದು ಮುಖ್ಯ. ಆ ಕೆಲಸವನ್ನು ಮೋದಿ ಮಾಡುತ್ತಿದ್ದಾರೆ. ತಂತ್ರಜ್ಞಾನ, ನವೋದ್ಯಮ, ಡಿಜಿಟಲೀಕರಣ, ಕ್ರೀಡೆ ಹೀಗೆ ಹಲವು ಕ್ಷೇತ್ರಗಳಲ್ಲಿ ದೊಡ್ಡ ಪರಿವರ್ತನೆ ಆಗುತ್ತಿದೆ. ಮುಂದಿನ 25 ವರ್ಷಗಳಲ್ಲಿ ಭಾರತ ಜಾಗತಿಕವಾಗಿ ಎರಡು ಅಥವಾ ಮೂರನೇ ಸ್ಥಾನ ತಲುಪಲು ಯುವ ಜನತೆಯಿಂದಲೇ ಅಭಿಪ್ರಾಯ, ಸಲಹೆಗಳನ್ನು ಪಡೆಯುತ್ತಿದೆ. ಅದಕ್ಕೆ ಪೂರಕವಾಗಿ ನೀತಿ-ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ನಿಮ್ಮ ಕನಸುಗಳನ್ನು ಹಂಚಿಕೊಳ್ಳಲು 'ಮೈಇಂಡಿಯಾ' ಎಂಬ ಡಿಜಿಟಲ್ ವೇದಿಕೆಯೂ ಇದೆ ಎಂದು ವಿವರಿಸಿದರು.

'ಕ್ರೀಡಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ನಮ್ಮ ಭವಿಷ್ಯ ಸುರಕ್ಷಿತವೇ? ಮುಂದೆ ಉದ್ಯೋಗ ಸಿಗಬಲ್ಲದೆ? ಹಿಂದೆಲ್ಲ ದೇಶಕ್ಕಾಗಿ ಆಡಿದವರು ಕೆಲಸ ಇಲ್ಲದೇ ಕಷ್ಟಕ್ಕೆ ಸಿಲುಕಿದ್ದನ್ನು ನಾವು ನೋಡಿದ್ದೇವೆ. ಕೇಂದ್ರ ಸರ್ಕಾರ ಇದಕ್ಕಾಗಿ ಏನು ಮಾಡುತ್ತಿದೆ' ಎಂಬ ಆತಂಕ ಭರಿತ ಪ್ರಶ್ನೆ ಕ್ರೀಡಾಪಟುವೊಬ್ಬರದಾಗಿತ್ತು.

ಇದಕ್ಕೆ ಉತ್ತರಿಸಿ ಸಚಿವರು, 'ಹಿಂದೆ ಆ ಸಮಸ್ಯೆ ಇತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಪಡೆದರೆ ಮಾತ್ರ ಉದ್ಯೋಗ ಸಿಗುತ್ತಿತ್ತು. ಈಗ ದೇಶದಲ್ಲೇ ನಡೆಯುವ ಖೇಲೊ ಇಂಡಿಯಾ ಹಂತದ ಕ್ರೀಡೆಗಳಲ್ಲಿ ಪದಕ ಪಡೆದರೂ ಸರ್ಕಾರದಲ್ಲಿ ಉದ್ಯೋಗ ಪಡೆಯಲು ಅರ್ಹರಾಗುತ್ತಾರೆ. ಕ್ರೀಡೆ ಆಯ್ಕೆ ಮಾಡಿಕೊಳ್ಳುವುದರಿಂದ ಭವಿಷ್ಯದ ಬಗ್ಗೆ ಆತಂಕಪಡಬೇಕಾಗಿಲ್ಲ ಎಂದು ಧೈರ್ಯ ತುಂಬಿದರು.

'ದೃಷ್ಟಿ ದೋಷವುಳ್ಳವರು ಮತ್ತು ಗಾಲಿ ಕುರ್ಚಿಗಳ ಮೂಲಕ ಕ್ರಿಕೆಟ್ ಆಡುವವರಿಗೆ ಕ್ರಿಕೆಟ್ ಪಂದ್ಯಗಳನ್ನು ನಡೆಸಲು ಸ್ಟೇಡಿಯಂಗಳೇ ಸಿಗುತ್ತಿಲ್ಲ. ಇದಕ್ಕೆ ವ್ಯವಸ್ಥೆ ಮಾಡಬೇಕು' ಎಂಬ ಮನವಿಯೂ ಕೇಳಿ ಬಂತು. 'ಹಿಮಾಚಲ ಪ್ರದೇಶದ ಧರ್ಮಶಾಲಾ ಕ್ರೀಡಾಂಗಣವನ್ನು ನಿಮ್ಮ ಪಂದ್ಯಗಳಿಗೆ ಬಿಟ್ಟು ಕೊಡಲು ಸಿದ್ಧನಿದ್ದೇನೆ. ಅದನ್ನು ಬಳಸಿಕೊಳ್ಳಬಹುದು' ಎಂದು ಉತ್ತರಿಸಿದರು.

'ಭ್ರಷ್ಟಾಚಾರರಹಿತ ಆಡಳಿತ ಮೋದಿ ಹೆಗ್ಗಳಿಕೆ'

'ಭ್ರಷ್ಟಾಚಾರರಹಿತ, ಅಭಿವೃದ್ಧಿಪರ ಆಡಳಿತವೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಹೆಗ್ಗಳಿಕೆ. 10 ವರ್ಷಗಳಲ್ಲಿ ಭ್ರಷ್ಟಾಚಾರದ ಕಪ್ಪು ಚುಕ್ಕೆ ಅಂಟಿಕೊಂಡಿಲ್ಲ ಮತ್ತು ಪಾರದರ್ಶಕತೆಯಿಂದ ನಡೆದುಕೊಂಡಿದೆ' ಎಂದು ಸಚಿವ ಅನುರಾಗ್ ಸಿಂಗ್ ಠಾಕೂರ್ ಹೇಳಿದರು.

'ಕಳೆದ 10 ವರ್ಷಗಳಲ್ಲಿ ದೇಶದ ಜಿಡಿಪಿ ಶೇ 4.5 ಇದ್ದದ್ದು ಶೇ 8.4 ಕ್ಕೆ ಏರಿದೆ. ಹಣ ದುಬ್ಬರ ಪ್ರಮಾಣ ಶೇ 12 ರಿಂದ ಶೇ 6.7 ಕ್ಕೆ ಇಳಿದಿದೆ. ವಿದೇಶಿ ವಿನಿಮಯ ಮೀಸಲು 270 ದಶಲಕ್ಷ ಡಾಲರ್‌ಗಳು ಇದ್ದದ್ದು 600 ದಶಲಕ್ಷ ಡಾಲರ್‌ಗಳಿಗೇರಿದೆ. ರಫ್ತು 2013 ರಲ್ಲಿ 300 ದಶಲಕ್ಷ ಡಾಲರ್ ಇತ್ತು. ಈಗ ಅದು 770 ದಶಲಕ್ಷ ಡಾಲರ್‌ಗಳಿಗೆ ಏರಿದೆ. ವಿದೇಶಿ ಹೂಡಿಕೆ 2013 ರಲ್ಲಿ 36 ದಶಲಕ್ಷ ಡಾಲರ್ ಇದ್ದದ್ದು, ಈಗ 85 ದಶಲಕ್ಷ ಡಾಲರ್‌ಗಳಿಗೆ ಏರಿದೆ ಎಂದರು.


ಅಧ್ಯಕ್ಷರಾಗಿ ನಟರಾಜು ನೇಮಕ



ನಟರಾಜು

ಬಿಡದಿ: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಬಿಡದಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎನ್. ನಟರಾಜು ಅವರನ್ನು ನೇಮಕ ಮಾಡಲಾಗಿದೆ.

ಪ್ರಾಧಿಕಾರದ ಸದಸ್ಯರನ್ನಾಗಿ ನರಸಿಂಹಯ್ಯ ಎನ್., ಸಿ.ಎಚ್. ಪುಟ್ಟರಾಜು, ರಮೇಶ್ ಹಾಗೂ ಕಲ್ಯಾಣ್ ಕುಮಾರಿ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



5 ಕಚೇರಿಗಳಲ್ಲಿ ರಜಾ ದಿನವೂ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ವರ್ಷ ಕೊನೆಗೊಳ್ಳುತ್ತಿರುವ ಹೊತ್ತಿನಲ್ಲಿ ನೋಂದಣಿ ವಹಿವಾಟಿನಲ್ಲಿ ಏರಿಕೆ ಆಗಿರುವುದರಿಂದ ನಗರದ ಐದು ಉಪ ನೋಂದಣಿ ಕಚೇರಿಗಳು ಈ ತಿಂಗಳ ಎಲ್ಲ ಶನಿವಾರ ಮತ್ತು ಭಾನುವಾರಗಳಂದು ತೆರೆದಿರಲಿವೆ.

ಇಂದಿರಾನಗರ, ಚಾಮರಾಜಪೇಟೆ, ರಾಜಾಜಿನಗರ, ಯಲಹಂಕ ಮತ್ತು ಜೆ.ಪಿ. ನಗರ ಉಪ ನೋಂದಣಿ ಕಚೇರಿಗಳನ್ನು ಎರಡನೇ ಹಾಗೂ ನಾಲ್ಕನೇ ಶನಿವಾರ ಮತ್ತು ಭಾನುವಾರಗಳಂದು ತೆರೆಯಲು ನೋಂದಣಿ ಮತ್ತು ಮುದ್ರಾಂಕ ಆಯುಕ್ತೆ ಬಿ.ಆರ್. ಮಮತಾ ಗುರುವಾರ ಆದೇಶ ಹೊರಡಿಸಿದ್ದಾರೆ.

ಮಾರ್ಚ್ 9 (ಎರಡನೇ ಶನಿವಾರ), ಮಾರ್ಚ್ 24 (ನಾಲ್ಕನೇ ಶನಿವಾರ) ಮತ್ತು ಮಾರ್ಚ್ 10, 17, 24 ಮತ್ತು 31ರಂದು (ಎಲ್ಲವೂ ಭಾನುವಾರ) ಈ ಕಚೇರಿಗಳಲ್ಲಿ ನೋಂದಣಿ ವಹಿವಾಟು ನಡೆಸಲು ಅವಕಾಶ ಕಲ್ಪಿಸಲಾಗಿದೆ.

ಯುವಕ ಶಂಕಾಸ್ಪದ ಸಾವು: ಕೊಲೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಚೇತನ್ (21) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, 'ಇದೊಂದು ಕೊಲೆ' ಎಂಬುದಾಗಿ ಆರೋಪಿಸಿ ಪೋಷಕರು ಪೊಲೀಸರಿಗೆ ದೂರು ನೀಡಿದ್ದಾರೆ.

'ಚೇತನ್ ಅವರು ಗುರುವಾರ (ಮಾರ್ಚ್ 7) ರಾತ್ರಿ ಚಾಕು ಇರಿತದಿಂದ ಗಾಯಗೊಂಡು ಆಟೊದಲ್ಲಿ ಬಿದ್ದಿದ್ದರು. ಅದನ್ನು ನೋಡಿದ್ದ ಪೋಷಕರು, ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕಾಲೇಜು ವಿದ್ಯಾರ್ಥಿ ಚೇತನ್, ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದರು. ಅದೇ ಯುವತಿಯನ್ನು ಮದುವೆ ಮಾಡಿಕೊಳ್ಳಲು ಮುಂದಾಗಿದ್ದರು. ಯುವತಿ ಮನೆಯವರು ಮದುವೆಗೆ ಒಪ್ಪಿರಲಿಲ್ಲ' ಎಂದು ತಿಳಿಸಿದರು.

ಯುವತಿ ಮನೆಗೆ ಹೋಗಿದ್ದರು: 'ದಾವಣಗೆರೆಯ ಚೇತನ್ ಹಾಗೂ ಯುವತಿ, ಕಾಲೇಜಿನಲ್ಲಿ ಪರಿಚಯವಾಗಿದ್ದರು. ನಂತರ, ಪರಸ್ಪರ ಪ್ರೀತಿಸಲಾರಂಭಿಸಿದ್ದರು. ಮನೆಯವರು ಮದುವೆಗೆ ಒಪ್ಪದಿದ್ದರಿಂದ ತಮ್ಮನ್ನು ಮರೆತು ಬೇರೆಯವರನ್ನು ಮದುವೆಯಾಗುವಂತೆ ಯುವತಿ ಹೇಳಿದ್ದರು. ನೊಂದಿದ್ದ ಯುವಕ, ಗುರುವಾರ ರಾತ್ರಿ ಯುವತಿ ಬಳಿ ಹೋಗಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿ ಮನೆಯವರು ಹಾಗೂ ಚೇತನ್ ನಡುವೆ ಮಾತಿನ ಚಕಮಕಿ ನಡೆದು ಗಲಾಟೆ ಆಗಿತ್ತು. ಯುವತಿ ಮನೆಯವರು, ಚೇತನ್ ಪೋಷಕರಿಗೆ ಕರೆ ಮಾಡಿ ಗಲಾಟೆ ವಿಷಯ ತಿಳಿಸಿದ್ದರು. ಪೋಷಕರು ಮನೆ ಬಳಿ ಬರುವಷ್ಟರಲ್ಲಿ ಚೇತನ್ ಆಟೊದಲ್ಲಿ ಬಿದ್ದಿದ್ದರು. ಯುವತಿ ಕಡೆಯವರೇ ಚೇತನ್ ಅವರನ್ನು ಕೊಲೆ ಮಾಡಿರುವುದಾಗಿ ಪೋಷಕರು ದೂರು ನೀಡಿದ್ದಾರೆ. 'ಮದುವೆಯಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದ ಚೇತನ್, ಚಾಕುವಿನಿಂದ ಇರಿದುಕೊಂಡಿದ್ದಾರೆ' ಎಂದು ಯುವತಿ ಕಡೆಯವರು ಹೇಳಿದ್ದಾರೆ. ಮರಣೋತ್ತರ ಪರೀಕ್ಷೆ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದರು.

ದ್ವಿಚಕ್ರ ವಾಹನ ಡಿಕ್ಕಿ: ವೃದ್ಧೆ ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಅಪಘಾತ ಸಂಭವಿಸಿದ್ದು, ವೃದ್ಧೆ ಶಾಂತಮ್ಮ (65) ಎಂಬುವವರು ಮೃತಪಟ್ಟಿದ್ದಾರೆ.

'ತಿಗಳರಪಾಳ್ಯದ ಶಾಂತಮ್ಮ ಅವರು ಮನೆ ಬಳಿ ನಡೆದುಕೊಂಡು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣವಾದ ಆರೋಪದಡಿ ದ್ವಿಚಕ್ರ ವಾಹನ ಸವಾರ ನಾರಾಯಣ್‌ನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಸವಾರ ನಾರಾಯಣ್, ತನ್ನ ದ್ವಿಚಕ್ರ ವಾಹನವನ್ನು ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿದ್ದ. ಮಾರ್ಗಮಧ್ಯೆಯೇ ಪಾದಚಾರಿ ಶಾಂತಮ್ಮ ಅವರಿಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ಬಿದ್ದು ತೀವ್ರ ಗಾಯಗೊಂಡಿದ್ದ ಶಾಂತಮ್ಮ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

'ಶಾಂತಮ್ಮ ಅವರ ಕುಟುಂಬದವರು ನೀಡಿರುವ ದೂರು ಆಧರಿಸಿ ನಾರಾಯಣ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಕಟ್ಟಡದಿಂದ ಬಿದ್ದು ಕಾರ್ಮಿಕ ದುರ್ಮರಣ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದ ಎರಡನೇ ಮಹಡಿಯಿಂದ ಬಿದ್ದು ಕಾರ್ಮಿಕ ಅಂಥೋನಿರಾಜ್ (52) ಅವರು ಮೃತಪಟ್ಟಿದ್ದು, ಈ ಸಂಬಂಧ ತಲಘಟ್ಟಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


'ತಮಿಳುನಾಡಿನ ಅಂಥೋನಿರಾಜ್, ಕಟ್ಟಡ ನಿರ್ಮಾಣ ಕಾರ್ಮಿಕ. ಜೆ.ಪಿ.ನಗರ 7ನೇ ಹಂತದ ರಾಘವ ನಗರದಲ್ಲಿ ನಿರ್ಮಿಸಲಾಗುತ್ತಿರುವ ಕಟ್ಟಡದಲ್ಲಿ ಕೆಲ ತಿಂಗಳಿನಿಂದ ಕೆಲಸ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಗುರುವಾರವೂ ಅಂಥೋನಿರಾಜ್ ಅವರು ಎರಡನೇ ಮಹಡಿಯಲ್ಲಿ ನಿಂತು ಕೆಲಸ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಆಯತಪ್ಪಿ ನೆಲಮಹಡಿಗೆ ಬಿದ್ದಿದ್ದರು. ತಲೆಗೆ ಪೆಟ್ಟು ಬಿದ್ದಿದ್ದರಿಂದ ಅವರು ಮೃತಪಟ್ಟಿದ್ದಾರೆ.'

'ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ನಿವೇಶನ ಮಾಲೀಕ ಹಾಗೂ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಬ್ಬರಿಗೂ ನೋಟಿಸ್ ನೀಡಲಾಗಿದ್ದು, ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ತಿಳಿಸಿದರು.







ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ಬೈಕ್ ಏರುವ ಮುನ್ನ

ಟ್ರಾವೆಲ್ ವ್ಲಾಗರ್ ಆಗಿದ್ದ ವಿದೇಶಿ ಮಹಿಳೆಯೊಬ್ಬರ ಮೇಲೆ ಜಾರ್ಖಂಡ್‌ನ ದುಮ್ಕಾ ಜಿಲ್ಲೆಯಲ್ಲಿ ನಡೆದ ಅತ್ಯಾಚಾರ ಪ್ರಕರಣ ಮಹಿಳಾ ಬೈಕರ್‌ಗಳ ಭದ್ರತೆಯ ಬಗ್ಗೆ ಪ್ರಶ್ನೆಗಳು ಏಳುವಂತೆ ಮಾಡಿದೆ. ಈ ನಿಟ್ಟಿನಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಬೈಕರ್‌ಗಳು ದನಿಯಾಗಿದ್ದಾರೆ .





ಜಾಗೃತಿ ಮೂಡಲಿ

ಹೆಣ್ಣುಮಕ್ಕಳಿರಲಿ, ಗಂಡು ಮಕ್ಕಳೇ ಆಗಲಿ ಬೈಕ್ ಏರುವ ಮುನ್ನ, ಒಬ್ಬೊಬ್ಬರೇ ಪ್ರವಾಸ ಹೊರಡುವ ಮುನ್ನ , ನಂಗೇನೂ ಆಗಲ್ಲ ಎನ್ನುವ ಭಂಡ ಧೈರ್ಯವನ್ನು ಬಿಡಬೇಕು. ಹತ್ತು ಕಡೆಗಳಲ್ಲಿ ಸುರಕ್ಷಿತವಾಗಿ ಕ್ಯಾಂಪಿಂಗ್ ಮಾಡಿದ್ದಿರಬಹುದು. ಆದರೆ, ಹನ್ನೊಂದನೇ ಬಾರಿಯೂ ಅದೇ ಅನುಭವ ಆಗಬೇಕಿಂದಿಲ್ಲ. ನಾವು ನೋಡಬೇಕು ಅಂದುಕೊಂಡಿರುವ ಪ್ರದೇಶಗಳೆಲ್ಲವೂ ಅಪರಿಚಿತವಾಗಿರುವುದರಿಂದ ಸಮಯಕ್ಕೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ಮುಖ್ಯ. ಕ್ಯಾಂಪಿಂಗ್ ಮಾಡಲೇಬೇಕು ಎಂಬ ಇಚ್ಛೆಯಿದ್ದರೆ 10ರಿಂದ 12 ಮಂದಿ ಒಟ್ಟಾಗಿ ಗುಂಪಿನಲ್ಲಿ ಕ್ಯಾಂಪಿಂಗ್ ಮಾಡುವುದು ಒಳಿತು. ಸತತ ಎರಡು ವರ್ಷಗಳಿಂದ ಬೈಕ್ ಓಡಿಸುತ್ತಿದ್ದೀನಿ. ಒಬ್ಬಳೇ ಲಡಾಕ್‌ಗೂ ಹೋಗಿ ಬಂದಿದ್ದೀನಿ. ಕತ್ತಲಿನಲ್ಲಿ, ನಿರ್ಜನ ಪ್ರದೇಶಗಳಲ್ಲಿ, ಕಾಡಿನ ದಾರಿಯಲ್ಲಿ ಒಬ್ಬಳೇ ಹೋಗುವುದನ್ನು ತಪ್ಪಿಸುತ್ತೀನಿ. ಮಧ್ಯರಾತ್ರಿ 2 ಗಂಟೆಗೆ ರಸ್ತೆಯ ಮಧ್ಯೆ ಅಪರಿಚಿತರೊಬ್ಬರು ಅಡ್ಡ ಹಾಕಿದ ಪ್ರಸಂಗ ಇದೆ. ನಾನಂತೂ ಗಾಡಿ ನಿಲ್ಲಿಸದೆ 80ರ ವೇಗದಲ್ಲಿ ಗಾಡಿ ಓಡಿಸಿದ್ದೀನಿ. ಇನ್ನೇನೂ ಗಾಡಿ ಅವರಿಗೆ ತಾಗಬೇಕು ಎನ್ನುವಷ್ಟರಲ್ಲಿ, ಅವರು ರಸ್ತೆಯ ಬದಿಗೆ ಹಾರಿಕೊಂಡಿದ್ದು ಇದೆ. ಅಪಘಾತವಾದಂತೆ ನಾಟಕವಾಡುವ ಟ್ರ್ಯಾಪ್ ಪ್ರಕರಣಗಳು ಈಗೀಗ ಹೆಚ್ಚುತ್ತಿವೆ. ಬೈಕ್ ಓಡಿಸುವವರು ಇವುಗಳ ಬಗ್ಗೆ ತಿಳಿದುಕೊಳ್ಳುವುದು ಒಳಿತು. ಗುಂಪಿನಲ್ಲಿ ಬೈಕ್ ಓಡಿಸಲು ಇಷ್ಟಪಡುತ್ತೀನಿ. ಪ್ರವಾಸೋದ್ಯಮ ಇಲಾಖೆಯು ಅಲ್ಲಲ್ಲಿ ರಸ್ತೆಯ ನಕ್ಷೆ ಇರುವ ಫಲಕಗಳನ್ನು ಹಾಕುವುದು ಒಳಿತು. ಬೈಕರ್‌ಗಳ ನಡುವೆ ಜಾಗೃತಿ ಮೂಡಬೇಕು. ಬೈಕ್‌ನಲ್ಲಿಯೇ ಜಿಪಿಎಸ್ ಟ್ರ್ಯಾಕರ್ ಇರುವಂತೆ ನೋಡಿಕೊಂಡರೆ ದಾರಿ ತಪ್ಪಿದಾಗಲೂ ಸಹ – ಬೈಕರ್‌ಗಳಿಗೆ ಇದರ ಬಗ್ಗೆ ಅರಿವಿರುತ್ತದೆ.

ಪ್ರಿಯಾಂಕ ಎಂ.ಪಿ.

ನಿರೂಪಣೆ: ರೂಪಾ ಕೆ.ಎಂ.

ಬ್ಯಾಕ್‌ಪ್ಯಾಕ್ ಸಜ್ಜುಗೊಳಿಸುವ ಮೊದಲು...

- ಊರು ಸುತ್ತಬೇಕು ಎಂದು ಉತ್ಸಾಹದಲ್ಲಿರುವವರೆಲ್ಲ ಮೊದಲಿಗೆ ಪಯಣಿಸುವ ದಾರಿ, ಬಳಸುವ ಬೈಕ್ / ಕಾರಿನ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳುವುದು ಮುಖ್ಯ. ದಾರಿ ತಪ್ಪಿದಾಗ, ಬೈಕ್ ಕೆಟ್ಟಾಗ ಏನು ಮಾಡಬೇಕು ಎಂಬುದು ಗೊತ್ತಿರಲಿ. ಸ್ವಯಂ ರಿಪೇರಿ ಮಾಡಿಕೊಳ್ಳುವಷ್ಟು ಕೌಶಲ ಬೆಳೆಸಿಕೊಳ್ಳಿ.
- ಎಲ್ಲರೊಂದಿಗೆ ಬೆರೆತು ಪ್ರವಾಸ ಮಾಡುವುದು ಖುಷಿಯೇ ಆದರೂ ಎಷ್ಟು ಬೆರೆಯಬೇಕು? ಅಪರಿಚಿತರೊಟ್ಟಿಗೆ, ಸಹ –ಬೈಕರ್‌ಗಳೊಟ್ಟಿಗೆ ಎಷ್ಟರ ಮಟ್ಟಿಗೆ ಸಲುಗೆ ಇಟ್ಟುಕೊಳ್ಳಬೇಕು ಎಂಬುದಕ್ಕೆ ಮಿತಿ ಹಾಕಿಕೊಳ್ಳಿ.
- ಎಷ್ಟೇ ಆಡಿಯೊ, ವಿಡಿಯೊ ನೋಡಿದರೂ ಸ್ಥಳೀಯರಿಂದ ಸಿಗುವ ಮಾಹಿತಿ ಎಂದಿಗೂ ಮೌಲ್ಯಯುತವಾಗಿರುತ್ತದೆ. ಸ್ಥಳೀಯರಿಂದ ಆ ಪ್ರದೇಶ, ಭದ್ರತೆಯ ಬಗ್ಗೆ ನಿಖರ ಮಾಹಿತಿ ಪಡೆಯಿರಿ. ಕತ್ತಲು, ನಿರ್ಜನ ಪ್ರದೇಶಗಳಿಂದ ದೂರವಿರಿ. ಅಪರಿಚಿತರೊಟ್ಟಿಗೆ ಸಂಭಾಷಣೆ ನಡೆಸುವುದನ್ನು ತಪ್ಪಿಸಿ.
- ಎಲ್ಲಿ ಕ್ಯಾಂಪಿಂಗ್ ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟ ಅರಿವಿರಲಿ. ಗುಂಪಾಗಿ ಕ್ಯಾಂಪಿಂಗ್ ಮಾಡಿ.
- ಬೈಕ್ ಓಡಿಸುವುದು ಒಂದು ಕೌಶಲ. ಅದರೆಡೆಗೆ ಪರಿಣತಿ ಸಾಧಿಸಿ. ಎಂಥ ಕಷ್ಟದ ಸಮಯದಲ್ಲಿಯೂ ಅಪಾಯದಿಂದ ಪಾರಾಗುವಷ್ಟರ ಮಟ್ಟಿಗೆ ಚಾಕಚಕ್ಯತೆಯನ್ನು ಬೆಳೆಸಿಕೊಳ್ಳಿ.



ಭದ್ರತೆಗೆ ಸಿಗಲಿ ಆದ್ಯತೆ

ಹೆಚ್ಚೇನೂ ಅಭಿವೃದ್ಧಿಗೊಳ್ಳದ ಪ್ರದೇಶಗಳಲ್ಲಿ ಬೈಕ್ ಓಡಿಸುವುದನ್ನು ಆದಷ್ಟು ತಪ್ಪಿಸುತ್ತೇನೆ. ಭದ್ರತೆಯ ದೃಷ್ಟಿಕೋನದಿಂದ ಸಾಧ್ಯವಾದಷ್ಟು ಪೆಟ್ರೋಲ್ ಬಂಕ್ ಹಾಗೂ ಧಾರ್ಮಿಕ ಕೇಂದ್ರಗಳ ಸಮೀಪ ಸಿಸಿಟಿವಿ ಕ್ಯಾಮೆರಾ ಹಾಗೂ ಶೌಚಾಲಯ ವ್ಯವಸ್ಥೆ ಇರುವ ಕಡೆಗಳಲ್ಲಿ ಟೆಂಟ್ ಹಾಕುತ್ತೇನೆ. ಈ ವಿಚಾರದಲ್ಲಿ ನಾನು ಅದೃಷ್ಟವಂತೆ. ಭಯ ಎನಿಸುವ ಅನುಭವಗಳೇನೂ ಆಗಿಲ್ಲ. ಆದರೆ 2022ರಲ್ಲಿ ಲಡಾಕ್‌ನಲ್ಲಿ ಬೈಕ್ ಓಡಿಸುವಾಗ ಸಹ- ಬೈಕರ್‌ಗಳಿಗಿಂತ ಹಿಂದೆ ಉಳಿದುಬಿಟ್ಟೆ. ಯಾವುದೋ ನಿರ್ಜನ ಪ್ರದೇಶದಲ್ಲಿ ಕಳೆದುಹೋಗಿದ್ದೆ. ಕತ್ತಲಾಗುತ್ತಿತ್ತು. ನೆಟ್‌ವರ್ಕ್ ಬೇರೆ ಇರಲಿಲ್ಲ. ಆಗ ತುಂಬಾ ಭಯ ಆಗಿತ್ತು. ಆದರೆ, ಭಾರತೀಯ ಸೈನಿಕರು ನೆರವಾದರು. ಸರಿ ದಿಕ್ಕು ತೋರಿಸಿ, ಮತ್ತೆ ನಾನು ನನ್ನ ಸಹ –ಬೈಕರ್‌ಗಳೊಟ್ಟಿಗೆ ತಲುಪುವಂತೆ ನೋಡಿಕೊಂಡರು. ಇದನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ವಿದೇಶಿ ದಂಪತಿ ಜನನಿಬಿಡ ಪ್ರದೇಶದಲ್ಲಿ ಕ್ಯಾಂಪಿಂಗ್ ಮಾಡಬೇಕಿತ್ತು. ಅಪರಿಚಿತ ಜನರೊಟ್ಟಿಗೆ ಅತಿಯಾದ ಮಾತು, ಸ್ನೇಹ ಬೆಳೆಸುವುದು ಇವೆಲ್ಲ ಮಾಡಲೇಬಾರದು. ಸಾಧ್ಯವಾದಷ್ಟು ಪೆಪ್ಪರ್‌ಸ್ಪ್ರೇ ಬಾಟಲಿಗಳನ್ನು ನಮ್ಮೊಟ್ಟಿಗೆ ಇಟ್ಟುಕೊಳ್ಳುವುದು ಒಳಿತು.

ವಿಲ್ಮಾ ಕರ್ವಾಲೊ

ಕಾಯುವ 'ಆರನೆಯ ಇಂದ್ರಿಯ'

ಹೆಣ್ಣಮಕ್ಕಳು ಬೈಕ್ ಓಡಿಸ್ತಾರೆ. ಆತ್ಮವಿಶ್ವಾಸದಿಂದ ಬೈಕ್ ಓಡಿಸ್ತಾರೆ ಅನ್ನುವ ವಿಷಯವನ್ನೇ ಹಲವು ಗಂಡಸರಿಗೆ ಇನ್ನು ಒಪ್ಪಿಕೊಳ್ಳಲು ಆಗಿಲ್ಲ .ಅಂಥದ್ದರಲ್ಲಿ ಹೆಣ್ಣಮಕ್ಕಳು ಒಬ್ಬೊಬ್ಬರೇ ಬೈಕ್ ಏರಿ, ಇಷ್ಟದ ಜಾಗವನ್ನು ತಲುಪಿ, ಬದುಕನ್ನು ಆಸ್ವಾದಿಸುವಾಗ ಅಡ್ಡಿ, ಆತಂಕಗಳೆಲ್ಲ ಇರುವುದು ಸಹಜ. ಅದಕ್ಕೆ ತಲೆಕೆಡಿಸಿಕೊಳ್ಳಬೇಕಿಲ್ಲ. ಹಾಗೆಂದು ಅಪಾಯವನ್ನು ಮೈಮೇಲೆ ಎಳೆದುಕೊಂಡು ಬೈಕ್ ಬಿಡಬೇಕಿಲ್ಲ. ಹೆಣ್ಣುಮಕ್ಕಳಿಗೆ ಪ್ರಕೃತಿದತ್ತವಾಗಿ ಆರನೆಯ ಇಂದ್ರಿಯ ಸದಾ ಜಾಗೃತ ಸ್ಥಿತಿಯಲ್ಲಿ ಇರುತ್ತದೆ. ನಾನು ನನ್ನ ಬಹುತೇಕ ಪ್ರವಾಸಗಳಲ್ಲಿ ಇದರ ಮಾತನ್ನೇ ಕೇಳುತ್ತೇನೆ.

ಪಾಂಡಿಚೇರಿ ತಿರುವಣ್ಣಾಮಲೈ ದಾರಿ ಅಷ್ಟೂ ಸುರಕ್ಷಿತವಲ್ಲ. ಹಗಲಿನ ಹೊತ್ತೇ ದರೋಡೆಗಳು ನಡೆಯುತ್ತವೆ ಎಂದು ಕೇಳಿದ್ದೀನಿ. ಹೀಗಿದ್ದರೂ ಹಗಲು ಮತ್ತು ರಾತ್ರಿ ವೇಳೆಗಳಲ್ಲಿ ಒಬ್ಬಳೇ ಬೈಕ್ ರೈಡ್ ಮಾಡಿದ್ದೀನಿ. ಲಡಾಕ್‌ಗೆ ಹೋದಾಗ ದಾರಿ ತಪ್ಪಿದ್ದೆ. ಆದರೆ ಜನ ಸಹಾಯ ಮಾಡಿದ್ದಾರೆ. ಆದಷ್ಟು ಬೆಳಕಿರುವ ಕಡೆಗಳಲ್ಲಿ ಬೈಕ್ ಓಡಿಸುತ್ತೇನೆ. ಕತ್ತಲು ಹಾಗೂ ನಿರ್ಜನ ಪ್ರದೇಶಗಳಲ್ಲಿ ಎಂದಿಗೂ ಬೈಕ್ ನಿಲ್ಲಿಸುವುದಿಲ್ಲ. ಜನ ಸಮೂಹವಿರುವ, ಮನೆಗಳು ಯಥೇಚ್ಛವಾಗಿರುವ ಕಡೆಗಳಲ್ಲಿ ಬೈಕ್ ನಿಲ್ಲಿಸುತ್ತೇನೆ. ಈವರೆಗಿನ ಬೈಕ್ ಟ್ರಿಪ್‌ಗಳಲ್ಲಿ ಪೆಪ್ಪರ್ ಸ್ಪ್ರೇ ಬಳಸಿಲ್ಲ. ನನಗೆ ದೂರದೂರುಗಳಿಗೆ ಹೋಗುವಾಗ ಯಾವ ತೊಂದರೆಯೂ ಆಗಿಲ್ಲ. ಜನರು ಬಹಳ ಇಷ್ಟಪಟ್ಟು ಸಹಾಯ ಮಾಡುತ್ತಾರೆ. ಆದರೆ, ಬೆಂಗಳೂರಿನಂಥ ಮಹಾನಗರದಲ್ಲಿ ಬೈಕ್ ಓಡಿಸುವಾಗ ಹಲವು ಗಂಡಸರು ಪ್ರದರ್ಶಿಸುವ ಅಹಂನ ಧೋರಣೆಯನ್ನು ಸಹಿಸುವುದು ಕಷ್ಟ. ಸುಖಾಸುಮ್ಮನೆ ಬೈಕಿನ ಹ್ಯಾಂಡಲ್ ತಾಗುವಂತೆ ಮಾಡಿ, ಬೀಳುತ್ತಾಳಾ ಅಥವಾ ಬೈಯುತ್ತಾಳಾ? ಎಂದು ತಾಳ್ಮೆ ಪರೀಕ್ಷೆ ಮಾಡುವ ಗಂಡಸರನ್ನು ನೋಡಿದ್ದೇನೆ. ಗೆಳತಿಯೊಬ್ಬಳು ಮಲೆ ಮಹದೇಶ್ವರ ಬೆಟ್ಟದಲ್ಲಿ ಬೈಕ್‌ಓಡಿಸುವಾಗ ಖಾಸಗಿ ಬಸ್ಸಿನ ಡ್ರೈವರ್ ಬೇಕಂತಲೆ ಅವಳ ಗಾಡಿಗೆ ತಾಗಿಸಿ, ಅವಳು ಬಿದ್ದು, ಸೊಂಟದ ಭಾಗ ಸ್ವಾಧೀನ ಕಳೆದುಕೊಂಡ ಉದಾಹರಣೆ ಕಣ್ಮುಂದಿದೆ. ಹೆಣ್ಣುಮಕ್ಕಳ ಮೇಲೆ ದೌರ್ಜನ್ಯವಾದಾಗ ಸಮಾಜ ಮೊದಲು ಕೇಳುವುದು ಪುರಾವೆ. ಬೈಕ್ ಓಡಿಸುವಾಗ ಆಕಸ್ಮಿಕ ದಾಳಿಗಳು ನಡೆಯುತ್ತವೆ. ಪುರಾವೆ ಒದಗಿಸಲು ಸಾಧ್ಯವಾಗದೇ ಹೋಗಬಹುದು. ಹಾಗಾಗಿ ಎಂದಿಗೂ ಹೆಣ್ಣುಮಕ್ಕಳ ತಂಟೆಗೆ ಹೋಗಲೇಬಾರದು ಎನ್ನುವ ಭಯ ಸಮಾಜದಲ್ಲಿ ಹುಟ್ಟಬೇಕು.

ನೀಲು. ಆರ್.



ಯಕ್ಷಗಾನದಲ್ಲಿ ಸುಮಾ ಕಂಪು

ಸಾಧಕಿ

ಪವಿತ್ರಾ ಭಟ್



ಸುಮಾ ಗಡಿಗೆಹೊಳೆ

ಅಂದು ಕಡಲತೀರದ ಭಾರ್ಗವ ಶಿವರಾಮ ಕಾರಂತರು ಯಾರದೋ ಮನೆಯ ಅಂಗಳದಲ್ಲಿ, ಶಾಲೆಯ ಹಜಾರದಲ್ಲಿ ಹೇಳಿಕೊಡುತ್ತಿದ್ದ ಯಕ್ಷಗಾನ ಈಗ ಆನ್‌ಲೈನ್ ಮೂಲಕ ಯಕ್ಷಗಾನಾಸಕ್ತರ ಮನೆ ಪ್ರವೇಶಿಸಿದೆ. ಹೀಗಾಗಿ ಯಕ್ಷಗಾನ ಕಲಿಯಲು, ಕಲಿಸಲು ಜಾಗ ಹುಡುಕಬೇಕಿಲ್ಲ. ಮೈಲುಗಟ್ಟಲೆ ನಡೆಯಬೇಕಿಲ್ಲ. ಮನೆಯಂಗಳದಲ್ಲೇ ಯಕ್ಷಗಾನದ ಹೆಜ್ಜೆ ಹಾಕಬಹುದು. ಧೀಂ ತಕಿಟ ಧೀಂ ಎನ್ನಬಹುದು.

ಕಾಲಕ್ಕನುಗುಣವಾಗಿ ಬದಲಾಗುತ್ತಲೇ ಸಾಗಿರುವ ಯಕ್ಷಗಾನದ ವೇಷ, ಕುಣಿತ ಕೇವಲ ನಮ್ಮವರಿಗಷ್ಟೇ ತಿಳಿದರೆ ಸಾಲದು, ಇನ್ನಷ್ಟು ಜನರನ್ನು ತಲುಪಬೇಕು ಎನ್ನುವ ನಿಟ್ಟಿನಲ್ಲಿ ವಿದೇಶಿ ಮಕ್ಕಳಿಗೆ ಆನ್ಲೈನ್ ತರಗತಿ ಮೂಲಕ ಯಕ್ಷಗಾನ ಹೇಳಿಕೊಟ್ಟ ಕೀರ್ತಿ ಉತ್ತರ ಕನ್ನಡ ಜಿಲ್ಲೆಯ ಸುಮಾ ಗಡಿಗೆಹೊಳೆ ಅವರದ್ದು.

ಯಲ್ಲಾಪುರ ಬಳಿಯ ಗಡಿಗೆಹೊಳೆ ಎನ್ನುವ ಪುಟ್ಟ ಹಳ್ಳಿಯಲ್ಲಿ ಗೃಹಿಣಿಯಾಗಿರುವ ಸುಮಾ ಇಂದು ಮಹಿಳಾ ಯಕ್ಷಗಾನ ಪಾತ್ರಧಾರಿಯಾಗಿ, ಯಕ್ಷಗಾನ ಶಿಕ್ಷಕಿಯಾಗಿದ್ದಾರೆ. ಯಕ್ಷಗಾನದಲ್ಲಿನ ಗಾಢ ಆಸಕ್ತಿ, ಆನ್ಲೈನ್ ಕ್ಲಾಸ್‌ನ ಯೋಚನೆ ಇವೆಲ್ಲವುಗಳ ಬಗ್ಗೆ ಸುಮಾ ಗಡಿಗೆಹೊಳೆಯವರು ನಮ್ಮೊಂದಿಗೆ ಮುಖಾಮುಖಿಯಾದಾಗ ಹೊರಬಂದ ಮಾತು ಇಲ್ಲಿದೆ.

ಕೊರೊನಾ ಕಾಲದಲ್ಲಿ ಆನ್‌ಲೈನ್ ಎಲ್ಲ ಕ್ಷೇತ್ರಗಳಿಗೂ ಕಾಲಿಟ್ಟಿತ್ತು. ಯಕ್ಷಗಾನಕ್ಕೂ ಅದನ್ನು ಅಳವಡಿಸುವ ಯೋಜನೆಯಿಂದಾಗಿ ಆನ್‌ಲೈನ್ ತರಗತಿ ಆರಂಭವಾಯಿತು. ಸಾಮಾಜಿಕ ಮಾಧ್ಯಮಗಳ ಮೂಲಕ ತಿಂಗಳ ಅಂತರದಲ್ಲೇ ಅದು ಅಮೆರಿಕದಲ್ಲಿನ ಕನ್ನಡಿಗರನ್ನೂ ತಲುಪಿತ್ತು. ಅವರು ನನ್ನನ್ನು ಸಂಪರ್ಕಿಸಿ ನಮಗೂ ಯಕ್ಷಗಾನ ಕಲಿಸಬೇಕೆಂಬ ಹಂಬಲ ವ್ಯಕ್ತಪಡಿಸಿದ್ದರು.

ಆರಂಭದಲ್ಲಿ ಹೇಗೆ, ಏನು ಎನ್ನುವ ಚಿತ್ರಣವಿಲ್ಲದಿದ್ದರೂ, ಮಹಿಳೆಯರಿಗೆ, ಮಕ್ಕಳಿಗೆಂದೇ ತರಗತಿ ಆರಂಭಿಸಿದ್ದೆ. ಕ್ರಮೇಣ ಅದರಲ್ಲಿ ಪುರುಷರೂ ಪಾಲ್ಗೊಳ್ಳುತ್ತಿದ್ದರು. ಕಥೆಗೆ ತಕ್ಕಹಾಗೆ ಪಾತ್ರದ ಆಯ್ಕೆ ನಡೆಸಿ ಪ್ರತಿದಿನ ರಾತ್ರಿ (ಅಮೆರಿಕದ ಹಗಲು) ಒಂದು ತಾಸು ಗೂಗಲ್ ಮೀಟ್, ಝೂಮ್‌ನಂಥ ವೇದಿಕೆಗಳ ಮೂಲಕ ತಾಳ, ಹಾಡು, ಸಣ್ಣಪುಟ್ಟ ಹೆಜ್ಜೆಗಳನ್ನು ಕಲಿಸುತ್ತಿದ್ದೆ. ಕೆಲವು ಸಮಯದಲ್ಲಿ ವಿಡಿಯೊ ಮಾಡಿ ಕಳಿಸಿ ತರಬೇತಿ ನೀಡುತ್ತಿದ್ದೆ.
ಅವರೂ ಆಸಕ್ತಿಯಿಂದಲೂ ಕಲಿಯುತ್ತಿದ್ದರು. ಆಗಾಗ ಪರೀಕ್ಷೆಗಳನ್ನೂ ಮಾಡುತ್ತಿದ್ದೆ. ಆನ್‌ಲೈನ್ ತರಗತಿ ಒಂದು ಹಂತದ ಯಶಸ್ಸು ಕಂಡಿತ್ತು. '

ಆದರೆ ಯಕ್ಷಗಾನ ಪರಿಪೂರ್ಣವಾಗಿ ನೋಡಿ ಕಲಿಯಲು ಸಾಧ್ಯವಿಲ್ಲ. ಕಲಿಸಿ, ಪರೀಕ್ಷೆ ಮಾಡಿ ಬಿಟ್ಟುಬಿಡಲು ಯಕ್ಷಗಾನ ಎನ್ನುವುದು ವಾರ್ಷಿಕ ಪಠ್ಯವಲ್ಲ. ಕಳೆದ ವರ್ಷ ಅಮೆರಿಕಕ್ಕೆ ತೆರಳಿ ಅವರನ್ನೆಲ್ಲ ಭೇಟಿಯಾಗಿ ಹೆಜ್ಜೆ, ತಾಳ, ಕುಣಿತ, ಪದ್ಯ, ಮಾತು ಎಲ್ಲವನ್ನೂ ತಿದ್ದಿದ್ದೆ. ಶ್ರದ್ಧೆಯಿಂದ ಕಲಿತು ಯಕ್ಷಗಾನ ಪ್ರದರ್ಶನವನ್ನೂ ನೀಡಿದ್ದರು. ಅದೊಂದು ಮರೆಯಲಾರದ ಅನುಭವ.

ನನಗೆ ಚಿಕ್ಕವಯಸ್ಸಿನಿಂದ ಯಕ್ಷಗಾನದ ಬಗ್ಗೆ ಆಸಕ್ತಿಯಿದ್ದರೂ ಅವಕಾಶಗಳಿರಲಿಲ್ಲ. ಹೆಣ್ಣು ಮಕ್ಕಳು ವೇಷ ಕಟ್ಟಿ ಕುಣಿಯುವುದಕ್ಕೆ ಹಳ್ಳಿಗಳಲ್ಲಿ ಪ್ರೋತ್ಸಾಹ ಇರಲಿಲ್ಲ. ಆದರೆ ಮದುವೆಯಾಗಿ, ಮಕ್ಕಳಾದ ಬಳಿಕ ಗಡಿಗೆಹೊಳೆ ಸುಬ್ರಾಯ ಭಟ್ ಎನ್ನುವವರ ಸಹಾಯದಿಂದ ಹಳೆಯ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಮೊದಲು ಮಾಡಿದ್ದು ತಾಳಮದ್ದಲೆ ಕಾರ್ಯಕ್ರಮ. ಅಲ್ಲಿಂದ ಯಕ್ಷ ಪಯಣ ಆರಂಭವಾಗಿತ್ತು.

2007ರಲ್ಲಿ ಭಸ್ಮಾಸುರ ಪಾತ್ರದ ಮೂಲಕ ವೇಷ ಕಟ್ಟಿ ಕುಣಿತ ಆರಂಭಿಸಿದ್ದೆ. ಹೊಸ ಕಲೆ ಕರಗತಕ್ಕೆ ಹೆಚ್ಚು ಸಮಯ ಅಗತ್ಯವಿತ್ತು. ಮನೆ, ಮಕ್ಕಳು ಸಂಸಾರದ ನಡುವೆಯೂ ಸಿಕ್ಕ ಸಮಯದಲ್ಲಿ ಯಕ್ಷಕಲೆಯಲ್ಲಿ ತೊಡಗಿಸಿಕೊಂಡಿದ್ದಕ್ಕೆ ಸಾರ್ಥಕತೆಯಿದೆ. ವೇಷ ತೊಟ್ಟ ಮೇಲೆ ಪಾತ್ರದೊಳಗೆ ಪ್ರವೇಶ ಮಾಡಿದಂತೆಯೇ. ಹೊರಗಿನ ಪ್ರಪಂಚದ ಮಾತುಗಳಾಗಲೀ, ಭಯವಾಗಲಿ ಕಾಡುವುದಿಲ್ಲ. ಆವೇಷ, ರೋಷ ಪ್ರತಿಯೊಂದೂ ಯಕ್ಷವೇಷದಿಂದಲೇ ಬರುವುದು.

ಮನೆಯಲ್ಲಿ ಸಿಕ್ಕ ಪ್ರೋತ್ಸಾಹ, ಗುರುಗಳು ನೀಡಿದ ಧೈರ್ಯ ಕೀಳರಿಮೆಯಿಂದ ಹೊರಬರುವಂತೆ ಮಾಡಿತು. ನನ್ನಂತಹ ಅನೇಕ ಮಹಿಳೆಯರು, ಹೆಣ್ಣುಮಕ್ಕಳು ಕಲೆಯಲ್ಲಿ ತೊಡಗಿಸುವಂತೆ ಮಾಡಲು ಸಾಧ್ಯವಾಯಿತು.

ನನ್ನ ವಯಸ್ಸು 50 ದಾಟಿದೆ. ಇಂದಿಗೂ ಯಕ್ಷಗಾನದ ತರಗತಿಯನ್ನು ನಡೆಸುತ್ತೇನೆ. 30ಕ್ಕೂ ಹೆಚ್ಚು ಜನ ತರಬೇತಿಗೆ ಬರುತ್ತಾರೆ. ಯಕ್ಷಕಲಾಸಂಗಮ ಸಂಸ್ಥೆಯ ಮೂಲಕ ಯಕ್ಷಗಾನವನ್ನು ಇನ್ನಷ್ಟು ಮಹಿಳೆಯರನ್ನು, ಮುಂದಿನ ಪೀಳಿಗೆಯನ್ನು ತಲುಪುವ ಕೆಲಸ ನಡೆಯುತ್ತಿದೆ. ❖



ಒಳಗೊಳ್ಳುವಿಕೆಯ ಒಳನೋಟಗಳು

ಕಾವ್ಯಶ್ರೀ ಬೆಂಗಳೂರು

ಮತ್ತೊಂದು ಮಹಿಳಾ ದಿನ...
ನಮ್ಮ ಮೊಬೈಲ್ ನ ಇನ್ಬಾಕ್ಸ್ ಮತ್ತದೇ ಟೆಂಪ್ಲೇಟ್ ಮೆಸೇಜ್ ಗಳಿಂದ ತುಂಬಿದ್ದವು...
'ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ, ಮಗಳಾಗಿ ಜಗತ್ತನ್ನು ಸುಂದರಗೊಳಿಸುತ್ತಿರುವ ಎಲ್ಲಾ ಮಹಿಳೆಯರಿಗೆ ಮಹಿಳಾ ದಿನದ ಶುಭಾಶಯಗಳು' ಎನ್ನುವ ಮತ್ತದೇ ಸಂದೇಶಗಳು ಇವೆಲ್ಲ ಪಾತ್ರಗಳ ಆಚೆಗೆ ಆಕೆಗೊಂದು ಬದುಕು, ಕೆರಿಯರ್ ಇದೆ ಎನ್ನುವುದನ್ನೇ ಮರೆಸಿಬಿಡುತ್ತವೆ.

ಈ ವರ್ಷದ ಮಹಿಳಾ ದಿನ ಒಳಗೊಳ್ಳುವಿಕೆಯ ಕುರಿತಾದದ್ದು. ಡೈವರ್ಸಿಟಿ(ವಿವಿಧತೆ) ಮತ್ತು ಇನ್ಕ್ಲೂಷನ್ (ಒಳಗೊಳ್ಳುವಿಕೆ) ಇವೆರಡೂ ನಾವು ಐಟಿ ಮಂದಿ ಪ್ರತಿನಿತ್ಯ ಕೇಳುವ ಮಾತುಗಳು. ಹಾಗೆ ನೋಡಿದರೆ ಕಾರ್ಪೊರೇಟ್ ಕ್ಷೇತ್ರಗಳಲ್ಲಿ ಒಳಗೊಳ್ಳುವಿಕೆ ಎನ್ನುವುದು ಕೇವಲ ಮಹಿಳೆಯರಿಗಷ್ಟೆ ಸೀಮಿತವಾಗಿಲ್ಲ. ಬದಲಿಗೆ LGBTQ + ಸಮುದಾಯದ ಕುರಿತದ್ದೂ ಆಗಿದೆ.

ಮೇಲ್ಮಟ್ಟದ ಆಡಳಿತವರ್ಗದಲ್ಲಿ ಹೆಣ್ಣು ಮಕ್ಕಳ ಭಾಗವಹಿಸುವಿಕೆ ಕಡಿಮೆಯಾಗಲು ಹಲವು ಕಾರಣಗಳಿವೆ. ಮುಖ್ಯವಾಗಿ ಸಮಾಜ ಕಟ್ಟಿಕೊಂಡಿರುವ ಸಿದ್ಧ ಮಾದರಿಗಳು. ಅವೆಲ್ಲ ಮೀರಿಯೂ ಇಂದು ಹೆಣ್ಣು ಜಗತ್ತಿನ 'ಫಾರ್ಚೂನ್- 500' ಕಂಪನಿಗಳನ್ನ ಮುನ್ನಡೆಸುವ ಜವಾಬ್ದಾರಿ ಹೊತ್ತಿದ್ದಾಳೆ.

ಒಳಗೊಳ್ಳುವಿಕೆಯನ್ನು ಪ್ರೇರೇಪಿಸುವುದು ಅಷ್ಟು ಸುಲಭದ ಕೆಲಸವಲ್ಲ. ಈ ಒಳಗೊಳ್ಳುವಿಕೆಯಲ್ಲಿ ಮಹಿಳೆಯರದಷ್ಟೆ ಅಲ್ಲದೆ ಮನೆಯೊಳಗಿನ ಮತ್ತು ಮನೆಯಾಚೆಯ ಪುರುಷ ಸದಸ್ಯರ ಒಳಗೊಳ್ಳುವಿಕೆಯನ್ನೂ ಸಾಧ್ಯವಾಗಿಸಬೇಕು.

ಇನ್ನೊಂದು, ಮುಖ್ಯವಾಗಿ ಕೆಲಸ ಮಾಡುವ ಪರಿಸರ ನಮ್ಮದು ಎನ್ನುವ ಭಾವನೆ ಮೂಡಿಸುವಂತಿರಬೇಕು. ತಾವು ಕೆಲಸ ಮಾಡುವಲ್ಲಿ ತಮಗೆ ಸುರಕ್ಷತೆ, ಗೌರವ ಸಿಗುವುದರಲ್ಲಿ ಬೇಧ ಭಾವ ಇದೆ ಅನ್ನಿಸಬಾರದು.

ಅಂತಿಮವಾಗಿ ಎಲ್ಲ ಹಿನ್ನಲೆಯ ಜನರಿಗೂ ಸಮಾನ ಅವಕಾಶಗಳನ್ನು ಸೃಷ್ಟಿಸುವುದು, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ತತ್ವಗಳನ್ನು ಎತ್ತಿಹಿಡಿಯುವುದು ಒಳಗೊಳ್ಳುವಿಕೆಗೆ ಪ್ರೇರೇಪಿಸುತ್ತದೆ.

ಇದೆಲ್ಲ ಹೆಣ್ಣು ಕಾರ್ಯಕ್ಷೇತ್ರ ಗಳಲ್ಲಿ ಒಳಗೊಳ್ಳುವಿಕೆಯನ್ನ ಪ್ರೇರೇಪಿಸಲು ಕೈಗೊಳ್ಳಲೇ ಬೇಕಾದ ಕಾರ್ಯಗಳು. ಆದ್ರೆ ಈ ರೀತಿಯ ಪಾಲಿಸಿ, ಕಾರ್ಯಕ್ರಮಗಳ ಹೊರತಾಗಿಯೂ ಅಲ್ಲಲ್ಲಿ ಬ್ಲೈಂಡ್ ಸ್ಪಾಟ್‌ಗಳು ಇವೆ. ಅವನ್ನ ಸಂಪೂರ್ಣವಾಗಿ ನಿರ್ಲಕ್ಷಿಸುವಂತಿಲ್ಲ.

ಇಂಪೋಸ್ಟರ್ ಸಿಂಡ್ರೋಮ್ ಅಂದರೆ ತಮ್ಮ ಸಾಮರ್ಥ್ಯದ ಕುರಿತಾಗಿ ಇರುವ ಅಪನಂಬಿಕೆ ಮತ್ತು ಆಂತರಿಕ ಭಯ ಇದು ಎಲ್ಲಾ ವರ್ಗದ ಹೆಣ್ಣು ಮಕ್ಕಳು ಎದುರಿಸುವ ಸವಾಲು.

ಮಹಿಳೆಯರ ಬಗೆಗಿನ ಪೂರ್ವಾಗ್ರಹಗಳು ಹಲವಾರು ರೀತಿಯಲ್ಲಿ ಮತ್ತೆ ಮತ್ತೆ ಹೊರಬರುತ್ತಲೆ ಇರುತ್ತವೆ. ಮಹಿಳಾ ಸಹೋದ್ಯೋಗಿಗಳ ಬಗೆಗಿನ ಅಸಹನೆ, ಟೀ ಬ್ರೇಕುಗಳಲ್ಲಿ ಮಾಡುವ ಸೆಕ್ಸಿಸ್ಟ್ ಜೋಕುಗಳ ಮೂಲಕ ಕಿವಿಗೆ ಬೀಳುತ್ತವೆ. ಇದ್ಯಾವುದೂ ಸಹ ನಮ್ಮ ಆತ್ಮಸ್ಥೈರ್ಯವನ್ನು ಕುಗ್ಗಿಸದಂತೆ ನೋಡಿಕೊಳ್ಳುವುದು ಮತ್ತು ಈ ತರದ ಘಟನೆಗಳು ನಡೆದಾಗ ಅವು ನಡೆದ ಜಾಗಗಳಲ್ಲೆ ಅವುಗಳನ್ನ ಹೈಲೈಟ್ ಮಾಡಿ ನಮಗೆ ಆಗುವ ಕಸಿವಿಸಿಯನ್ನು ಹೇಳುವುದು ಸಹ ಒಂದು ಜವಾಬ್ದಾರಿ. ನಮಗೆ ಸಹಜವಾಗಿ ಸಿಗಬೇಕಾದ ಗೌರವವನ್ನು ಎಷ್ಟೋ ಸಲ ನಾವು ಕೇಳಿ ಪಡೆಯಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ!

ಅಪ್ರಜ್ಞಾಪೂರ್ವಕವಾದ ಪೂರ್ವಾಗ್ರಹ (unconsious bias) ಇದು ಹೆಣ್ಣು ತನ್ನ ಜೀವನದ ಪ್ರತಿ ಹಂತದಲ್ಲೂ ಎದುರಿಸುವ ಸವಾಲು. ಅದರಲ್ಲೂ ಅಧಿಕಾರಯುತವಾದ ಹುದ್ದೆಗಳಲ್ಲಿರುವವರು ನಿರ್ಧಾರಗಳನ್ನು ಕೈಗೊಳ್ಳುವಾಗ ಎದುರಿಸಬೇಕಾದ ಸವಾಲು ಸಹ. ಆಕೆ ಹೆಣ್ಣು ಆಕೆಯ ಕೈಲಿ ಇದನ್ನ ನಿಭಾಯಿಸಲು ಸಾಧ್ಯ ಇಲ್ಲ ಅನ್ನೋ ಮನೋಭಾವ.



ಹೆಣ್ಣಾಗಿರುವ ಕಾರಣಕ್ಕಾಗಿಯೆ ಎದುರಿಸಬೇಕಾದ ಸವಾಲುಗಳಿಗೆ ಸೂಕ್ತ ಮಾರ್ಗದರ್ಶನ ಸಿಗದೇ ಇದ್ದಾಗ ಅವರ ವೃತ್ತಿಬದುಕಿನ ಏಳಿಗೆಗೆ ಅಡ್ಡಿಯಾಗುತ್ತದೆ.

ಈ ಎಲ್ಲಾ ಪೂರ್ವಗ್ರಹಕ್ಕಿಂತ ಹೆಚ್ಚಾಗಿ ಹೆಣ್ಣು ಎದುರಿಸುವುದು ಕೌಟುಂಬಿಕ ಬೆಂಬಲದ ಕೊರತೆ...

ನನ್ನ ಪಕ್ಕದ ಮನೆಯಾಕೆ ಐಟಿ ಕಂಪನಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್. 250ಕ್ಕೂ ಹೆಚ್ಚು ಜನ ಆಕೆಗೆ ರಿಪೋರ್ಟ್ ಮಾಡ್ತಾರೆ. ಅಷ್ಟೆಲ್ಲ ಇದ್ದೂ ಸಹ ಆಕೆ ಮನೆಯಲ್ಲಿ ಎರಡನೇ ದರ್ಜೆಯ ಪ್ರಜೆಯಂತೆ ಬದುಕುತ್ತಾಳೆ. ಇದು ಬಹಳಷ್ಟು ಜನ ಹೆಣ್ಣು ಮಕ್ಕಳ ಕತೆ.

ಎಷ್ಟೋ ಹೆಣ್ಣು ಮಕ್ಕಳು ಮದುವೆ, ಮಕ್ಕಳಾದ ತಕ್ಷಣ ತಮ್ಮ ಔದ್ಯೋಗಿಕ ಬದುಕು ಮುಗಿಯಿತು ಅಂದುಕೊಳ್ಳುತ್ತಾರೆ. ಇದಕ್ಕೆ ಕಾರಣ ಹೆಣ್ಣು ಮನೆಯ ಒಳಗೂ ಹೊರಗೂ ದುಡಿಯಬೇಕಾದ ಅನಿವಾರ್ಯ. ಮಹಿಳೆಯರು ಕೆಲಸ ಮಾಡಲು ಆಗದೆ ಅಥವ ವೃತ್ತಿಜೀವನದಲ್ಲಿ ಬದ್ಧತೆ ಇಲ್ಲದ ಕಾರಣಗಳಿಗೆ ಉದ್ಯೋಗ ತೊರೆಯುವುದಿಲ್ಲ. ತಾಯ್ತನ/ಆದರ್ಶ ಗೃಹಿಣಿಯ ಬೇಡಿಕೆಗಳ ಎದುರು ವೃತ್ತಿ ಬೇಡಿಕೆಗಳಿಗೆ ತಾಳೆ ಆಗದಿದ್ದಾಗ ಮಹಿಳೆಯರು ಕೆಲಸ ಬಿಡುತ್ತಾರೆ.

ಪ್ರತಿ ಮಹಿಳೆಯೂ ಮಾನಸಿಕವಾಗಿ ಗಟ್ಟಿಗಿತ್ತಿಯಾಗುವುದನ್ನು ನಾವು ಖಾತರಿಪಡಿಸಿಕೊಳ್ಳಬೇಕು. ಸಂಸ್ಥೆಯ ಮಟ್ಟದಲ್ಲಿ ಎಷ್ಟೆಲ್ಲ ಪಾಲಿಸಿಗಳಿದ್ದರೂ ಸಹ ವೈಯುಕ್ತಿಕವಾಗಿ ಮಾರ್ಗದರ್ಶನದ ಅವಶ್ಯಕತೆ ತುಂಬಾ ಇದೆ. ಕಾರ್ಯಕ್ಷೇತ್ರಗಳಲ್ಲಿ ಸಹೋದ್ಯೋಗಿಗಳು ಎದುರಿಸುವ ಸವಾಲುಗಳಿಗೆ ಕಿವಿಯಾಗಿ ಅವರಿಗೆ ಒಂದು ಮಟ್ಟಿಗಿನ ಚೇತರಿಕೆ ಸಿಗುವ ಹಾಗೆ ಮಾಡುವುದು ಈಗಿರುವ ತುರ್ತು.

ಮಹಿಳೆಯರನ್ನು ಔದ್ಯೋಗಿಕ ಸ್ಥಳಗಳಲ್ಲಿ ಹೆಚ್ಚಾಗಿ ಒಳಗೊಳ್ಳುವಂತೆ ಮಾಡುವಲ್ಲಿ ಹಾಗೂ ಬೆಂಬಲಿಸುವಲ್ಲಿ ಪುರುಷರ ಪಾತ್ರ ಮಹತ್ವದ್ದಾಗಿದೆ. ಕೌಟುಂಬಿಕ ಪರಿಸರ ಒಳಗೊಂಡಂತೆ ಎಲ್ಲ ಕಡೆಗಳಲ್ಲೂ ಪುರುಷರು ಮಹಿಳೆಯರಿಗೆ ಬೆಂಬಲವಾಗಿ ನಿಲ್ಲಬೇಕು. ಮಹಿಳೆಯರಿಗೆ ಸಮಾನ ಅವಾಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ, ಪಕ್ಷಪಾತಗಳಂತಹ ಸವಾಲುಗಳನ್ನು ಎದುರಿಸುವಲ್ಲಿ, ಮಹಿಳಾ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪುರುಷರು ತಮ್ಮನ್ನು ತಾವು ಹೆಚ್ಚಾಗಿ ತೊಡಗಿಸಿಕೊಳ್ಳಬೇಕು.

ಹಾಗಂತ ಪುರುಷರು ಪ್ರಖರ ಮಹಿಳಾವಾದಿಗಳಾಗಿರಬೇಕು ಅಥವಾ ಲಿಂಗ ಸಮಾನತೆಯ ಹೋರಾಟಗಾರರಾಗಿರಬೇಕು ಎಂದೇನಿಲ್ಲ. ಅನುಭೂತಿ ತೋರುವ ಗುಣಗಳನ್ನು ಹೊಂದಿದ್ದರೆ ಸಾಕು. ಮಹಿಳೆಯರಿಗೆ ಕಸಿವಿಸಿ ಉಂಟುಮಾಡುವಂತಹ ಕೆಟ್ಟ ಜೋಕ್‌ಗಳ ಅಥವಾ ಕಾಮೆಂಟ್‌ಗಳನ್ನು ಪ್ರಶ್ನಿಸುವಷ್ಟು ಸಂವೇದನೆ ಬೆಳೆಸಿಕೊಳ್ಳಬೇಕು.

ಮನೆ ಮತ್ತು ಮನೆಯ ಹೊರಗೆ ಎರಡೂ ಕಡೆಗಳಲ್ಲಿ ಮಹಿಳೆಯರನ್ನು ಒಳಗೊಳ್ಳುವ ಪರಿಸರವನ್ನು ನಿರ್ಮಿಸುವ ನಿಟ್ಟಿನಲ್ಲಿ ಪುರುಷರು ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಂಡರೆ ಅದರ ಪರಿಣಾಮ ಸಾಮಾಜಿಕವಾಗಿ ಬದಲಾವಣೆಯನ್ನು ತರುತ್ತದೆ. ಮಹಿಳೆಯರ ಇಚ್ಛಾಶಕ್ತಿಯನ್ನು ಹೆಚ್ಚು ಮಾಡುತ್ತದೆ. ಸಮಸಮಾಜವನ್ನು ನಿರ್ಮಿಸುತ್ತದೆ. ಮುಂದಿನ ಪೀಳಿಗೆಗಳಿಗೆ ಪ್ರಬಲ ಅನುಕರಣೀಯ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತದೆ.

ಮುಂದಿನ ಮಹಿಳಾ ದಿನಕ್ಕೆ ನಾವು ಈ ರೀತಿಯ ಮೆಸೇಜ್ ಗಾಗಿ ಕಾಯೋಣವೇ??
'ಎಂಜಿನಿಯರ್ ಆಗಿ, ವೈದ್ಯೆಯಾಗಿ, ಶಿಕ್ಷಕಿಯಾಗಿ, ಚಾಲಕಿಯಾಗಿ, ಗೃಹಿಣಿಯಾಗಿ ಹೀಗೆ ಎಲ್ಲಾ ವಲಯಗಳಲ್ಲೂ ಸಮಾನತೆಗಾಗಿ ಮತ್ತು ತಮ್ಮ ಆತ್ಮ ಗೌರವಕ್ಕಾಗಿ ಅವಿರತವಾಗಿ ಹೋರಾಡುತ್ತಿರುವ ಎಲ್ಲ ಮಹಿಳೆಯರಿಗೆ ನಿಮ್ಮ ದಿನದ ಶುಭಾಶಯಗಳು'

❖



ಶಿರಸಿಯ ಸಹಸ್ರಲಿಂಗದಲ್ಲಿ ಶಿವರಾತ್ರಿ ಪ್ರಯುಕ್ತ ಭಕ್ತರು ಶುಕ್ರವಾರ ಇಷ್ಟಲಿಂಗ ಪೂಜೆ ನೆರವೇರಿಸಿದರು

ಅಭಿಷೇಕ, ಪುಣ್ಯಸ್ನಾನಕ್ಕೆ ಅಣೆಕಟ್ಟೆಯಿಂದ ನೀರು

ಪ್ರಜಾವಾಣಿ ವಾರ್ತೆ

ಶಿರಸಿ: ಬರದಿಂದ ಬತ್ತಿರುವ ಶಾಲ್ಮಲಾ ನದಿ ತಟದಲ್ಲಿರುವ, ಶಿವಕ್ಷೇತ್ರ ಸಹಸ್ರಲಿಂಗದಲ್ಲಿ ಶಿವಲಿಂಗಗಳಿಗೆ ಜಲಾಭಿಷೇಕ, ಭಕ್ತರ ಪುಣ್ಯಸ್ನಾನಕ್ಕೆ ನೀರು ಇರಲಿಲ್ಲ. ಹೀಗಾಗಿ ಸಮೀಪದ ಕಿಂಡಿ ಅಣೆಕಟ್ಟಿನಿಂದ ನೀರು ಬಿಡಲಾಯಿತು.

ಪ್ರಸಕ್ತ ವರ್ಷ ಬರ ಸ್ಥಿತಿಯಿಂದಾಗಿ ಶಾಲ್ಮಲಾ ನದಿ ಬತ್ತಿದೆ. ನೀರಿನ ಹರಿವು ಸ್ಥಗಿತವಾಗಿತ್ತು. ಶಿವರಾತ್ರಿ ಸಂದರ್ಭದಲ್ಲಿ ಸಮಸ್ಯೆ ಎದುರಾಗುವ ಸಾಧ್ಯತೆಯಿದ್ದ ಕಾರಣ ಭೈರುಂಬೆ ಗ್ರಾಮ ಪಂಚಾಯಿತಿಯವರು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದರು. ಎರಡು ದಿನಗಳ ಹಿಂದೆ ದೇವರಹೊಳೆ ಕಿಂಡಿ ಅಣೆಕಟ್ಟಿನಿಂದ ನೀರು ಹರಿಸಲಾಯಿತು.

ಇದರಿಂದ ಶಾಲ್ಮಲೆಯ ಒಡಲಲ್ಲಿನ ಗುಂಡಿಗಳು ಭರ್ತಿಯಾದವು. ಸಹಸ್ರಲಿಂಗದಲ್ಲಿ ಸ್ವಲ್ಪ ಪ್ರಮಾಣದಲ್ಲಿ ನೀರ ಹರಿವು ಕಂಡಿತು. ಶಿವರಾತ್ರಿ ಹಿನ್ನೆಲೆಯಲ್ಲಿ ಭಕ್ತರು ಶಿವಲಿಂಗಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಪುಣ್ಯಸ್ನಾನವನ್ನು ಮಾಡಿದರು.

‘ಅಧಿಕಾರಿಗಳ ಜೊತೆ ಸಮಾಲೋಚಿಸಿದ್ದರಿಂದ ನೀರಿನ ಸಮಸ್ಯೆ ನಿವಾರಣೆಯಾಯಿತು. ಭಕ್ತರಿಗೆ ತೊಂದರೆ ಆಗಲಿಲ್ಲ. ಸದ್ಯಕ್ಕೆ ಕಿಂಡಿ ಅಣೆಕಟ್ಟಿನ ಬಾಗಿಲು ಮುಚ್ಚಲಾಗಿದೆ‘ ಎಂದು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ರಾಘವೇಂದ್ರ ನಾಯ್ಕ ಬೆಳಲೆ ‘ಪ್ರಜಾವಾಣಿ’ಗೆ ತಿಳಿಸಿದರು.



ಹಂಪಿಯ ವಿರೂಪಾಕ್ಷ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಶುಕ್ರವಾರ ವಜ್ರ, ಮುತ್ತು, ರತ್ನಗಳನ್ನು ಒಳಗೊಂಡ ಆರು ಕೆ.ಜಿ.ತೂಕದ ಚಿನ್ನದ ಕಿರೀಟವನ್ನು ವಿರೂಪಾಕ್ಷನಿಗೆ ತೊಡಿಸಿ ಪೂಜಿಸಲಾಯಿತು

ಏರೋಸ್ಪೇಸ್ ಪಾರ್ಕ್‌ನ ಬಹುಕೋಟಿ ರೂಪಾಯಿ ಬೆಲೆಯ ಆಸ್ತಿ • ಹೂಡಿಕೆದಾರರ ಆಕ್ಷೇಪ

ಜಮೀನು ಹಂಚಿಕೆಗೆ ಕೆಐಎಡಿಬಿ ಆತುರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿನ ಎಕರೆಗಟ್ಟಲೇ ಜಮೀನುಗಳನ್ನು ಗುತ್ತಿಗೆ ಅಥವಾ ಮಾರಾಟದ ಆಧಾರದಲ್ಲಿ ಹಂಚಿಕೆ ಮಾಡಲು ತರಾತುರಿಯಲ್ಲಿ ಪ್ರಕ್ರಿಯೆ ನಡೆಸಿದೆ.

ಉದ್ಯಮಿಗಳು ಹೂಡಿಕೆಗೆ ಆಸಕ್ತಿ ತೋರದ ಹಿಂದುಳಿದ ಜಿಲ್ಲೆ ಅಥವಾ ಎರಡು ಮತ್ತು ಮೂರನೇ ಹಂತದ ನಗರಗಳಿಗೆ ಬಂಡವಾಳ ಆಕರ್ಷಿಸಲು ತ್ವರಿತ ಪ್ರಕ್ರಿಯೆ ನಡೆಸಿ, ಜಮೀನು ಹಂಚಿಕೆ ಮಾಡುವ ಗೋಜಿಗೆ ಕೆಐಎಡಿಬಿ ಹೋಗಿಲ್ಲ. ಆದರೆ, ಜಮೀನಿಗೆ ಅತಿ ಹೆಚ್ಚಿನ ಬೇಡಿಕೆ ಇರುವ ಕೈಗಾರಿಕಾ ವಸಾಹತುಗಳಲ್ಲಿನ ಆಸ್ತಿಗಳನ್ನು ಹಂಚಿಕೆ ಮಾಡುವಲ್ಲಿ ತರಾತುರಿ ತೋರಿರುವುದಕ್ಕೆ ಬಂಡವಾಳ ಹೂಡಿಕೆದಾರರು ಆಕ್ಷೇಪ ತೆಗೆದಿದ್ದಾರೆ.

ಅದರಲ್ಲೂ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಮಗ್ಗುಲಲ್ಲೇ ಇರುವ ಹೂವಿನಾಯಕನ ಹಳ್ಳಿಯ ಹೈಟೆಕ್ ಡಿಫೆನ್ಸ್ ಅಂಡ್ ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್ ಅಂಡ್ ಹಾರ್ಡ್‌ವೇರ್ ಸೆಕ್ಟರ್), ಗ್ರಾಮಾಂತರ ಜಿಲ್ಲೆಯ ಡಿಫೆನ್ಸ್ ಅಂಡ್ ಏರೋಸ್ಪೇಸ್ ಪಾರ್ಕ್ (ಏರೋಸ್ಪೇಸ್ ಸೆಕ್ಟರ್-ಏರೋಸ್ಪೇಸ್ ಎಸ್‌ಇಝೆಡ್) ಗ್ರಾಮಾಂತರ ಜಿಲ್ಲೆಯ ಸೋಂಪುರ 1 ಮತ್ತು ಎರಡನೇ ಹಂತ, ರಾಮನಗರ ಜಿಲ್ಲೆಯ ಬಿಡದಿ ಎರಡನೇ ಹಂತದ ಸೆಕ್ಟರ್ 1, ಕೋಲಾರ ಜಿಲ್ಲೆಯ ನರಸಾಪುರ, ತುಮಕೂರಿನ ವಸಂತನರಸಾಪುರದ 1, 2, 3ನೇ ಹಂತ, ಧಾರವಾಡ ಜಿಲ್ಲೆಯ ಗಾಮನಗಟ್ಟಿ ಹಾಗೂ ಮುಮ್ಮಿಗಟ್ಟಿ ಕೈಗಾರಿಕೆ ವಸಾಹತುಗಳಲ್ಲಿ ಲಭ್ಯವಿರುವ ಜಮೀನುಗಳ ಹಂಚಿಕೆ ಪ್ರಕ್ರಿಯೆಯನ್ನು ದಿಢೀರ್ ಪೂರ್ಣಗೊಳಿಸಲು ಕೆಐಎಡಿಬಿ ಮುಂದಾಗಿದೆ.

> **ಡಿಪಿಆರ್‌ನಂಥ ದಾಖಲೆಗಳನ್ನು ಸಲ್ಲಿಸಿದ್ದರೆ ತಿರಸ್ಕರಿಸುವ ಪ್ರಶ್ನೆ ಬರುವುದಿಲ್ಲ. ಸಣ್ಣ-ಪುಟ್ಟ ದಾಖಲೆಗಳನ್ನು ನೀಡಲು ಸಮಯಾವಕಾಶ ನೀಡಲಾಗುವುದು**
> **ಡಾ. ಮಹೇಶ್,** ಮುಖ್ಯಕಾರ್ಯನಿರ್ವಹಣಾಧಿಕಾರಿ, ಕೆಐಎಡಿಬಿ

ಅರ್ಜಿ ಸಲ್ಲಿಕೆಗೆ ಸಮಯ ಕಡಿಮೆ: ಕೈಗಾರಿಕೆ ಉದ್ದೇಶಕ್ಕಾಗಿ ನಿವೇಶನ ಅಥವಾ ಎಕರೆವಾರು ಆಸ್ತಿ ಹಂಚಿಕೆ ಮಾಡಲು ಅರ್ಜಿ ಆಹ್ವಾನಿಸುವಾಗ ಕನಿಷ್ಠ 30 ದಿನ ಸಮಯ ಕೊಡಬೇಕು ಎಂಬ ನಿಯಮ ಇದೆ. ಈ ವಸಾಹತುಗಳಲ್ಲಿನ ನಾಗರಿಕ ಸೌಲಭ್ಯ(ಸಿ.ಎ) ಹಾಗೂ ಇತರ ಸೌಲಭ್ಯಗಳಿಗೆ (ಅಮೆನಿಟಿ) ಮೀಸಲಿಟ್ಟ ಜಾಗಗಳ ಹಂಚಿಕೆಗೆ ಫೆಬ್ರುವರಿ 5ರಂದು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆಗೆ ಫೆ.23ರಂದೇ ಕೊನೆ ದಿನ. ಹಂಚಿಕೆಗೆ ಪ್ರಸ್ತಾಪಿಸಲಾದ ಸಿಎ/ಅಮೆನಿಟಿ ನಿವೇಶನಗಳ ಪಟ್ಟಿಯನ್ನು ಫೆ.8ರಂದು ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಕೆಗೆ ರಜೆ ದಿನ ಸೇರಿ 18 ದಿನಗಳ ಕಾಲಾವಕಾಶವನ್ನು ಕೊಡಲಾಗಿತ್ತು. ರಜೆ ದಿನಗಳಲ್ಲಿ ಕಳೆದರೆ 15 ದಿನ ಮಾತ್ರ ಅರ್ಜಿದಾರರಿಗೆ ಅವಕಾಶ ಸಿಗಲಿತ್ತು.

1991ರಲ್ಲಿ ಕೆಐಎಡಿಬಿ ಹೊರಡಿಸಿದ್ದ ಅಧಿಸೂಚನೆಯಲ್ಲಿ ಕೆಲವು ಚಟುವಟಿಕೆಗಳನ್ನು ಅಮೆನಿಟಿ ಎಂದು ನಿಗದಿಪಡಿಸಲಾಗಿತ್ತು. 2023 ನವೆಂಬರ್ 11ರಂದು ಹೊರಡಿಸಲಾದ ಅಧಿಸೂಚನೆ (ಸಿಐ78 ಎಸ್‌ಪಿಕ್ಯೂ 2021)ಯಲ್ಲಿ ನಿಗದಿಪಡಿಸಲಾದ ಅಮೆನಿಟಿ ಚಟುವಟಿಕೆಗಳನ್ನು ಪಟ್ಟಿಯಿಂದ ಹಿಂಪಡೆಯಲಾಗಿತ್ತು. ಆ ಮೂಲಕ ನಿರ್ದಿಷ್ಟ ಸೌಲಭ್ಯ ಕಲ್ಪಿಸಲು ಮೀಸಲಾಗಿದ್ದ ನಿವೇಶನ/ಆಸ್ತಿಗಳನ್ನು ಬೇರೆ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದೆ ಎಂಬ ಆರೋಪವೂ ಇದೆ.

ಅರ್ಜಿಯ ಜತೆಗೆ ಉದ್ದೇಶಿತ ಸೌಲಭ್ಯ ಕಲ್ಪಿಸಲು ಸಂಸ್ಥೆ/ ಕಂಪನಿಗಿರುವ ಸಾಮರ್ಥ್ಯ, ಸಂಸ್ಥೆಯ ಆರ್ಥಿಕ ಸ್ಥಿತಿಗತಿಯ ವರದಿ, ಸೌಲಭ್ಯ ಕಲ್ಪಿಸುವುದರಿಂದ ಉದ್ಯಮಗಳಿಗೆ ಆಗುವ ಲಾಭ, ಸಂಸ್ಥೆಯ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ, ಯೋಜನೆಗೆ ಬೇಕಾದ ಜಮೀನಿನ ವಿಸ್ತೀರ್ಣ, ಸಂಸ್ಥೆಯ ಸಮಗ್ರ ಮಾಹಿತಿಯನ್ನೂ ಒದಗಿಸಲು ಸೂಚಿಸಲಾಗಿದೆ. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ.

‘ರಜೆ ದಿನ ಹೊರತುಪಡಿಸಿ ಸಿಗುವ 15 ದಿನಗಳಲ್ಲಿ ಈ ಎಲ್ಲವನ್ನೂ ಒದಗಿಸಿ ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ. ಈಗಾಗಲೇ ದಾಖಲೆಗಳನ್ನು ಸಿದ್ಧಪಡಿಸಿಕೊಂಡಿರುವ ‘ಅರ್ಹ’ರಿಗೆ ಹಂಚಿಕೆ ಮಾಡುವ ಉದ್ದೇಶದಿಂದಷ್ಟೇ ಈ ರೀತಿಯ ಮಾರ್ಗ ಹಿಡಿಯಲಾಗಿದೆ’ ಎಂದು ಪರಿಶಿಷ್ಟ ಸಮುದಾಯದ ಉದ್ಯಮಿಯೊಬ್ಬರು ತಮ್ಮ ಅಳಲು ತೋಡಿಕೊಂಡರು.

‘ಕೈಗಾರಿಕೆಗಳು ನೆಲೆ ಊರಿದ ಮೇಲೆ ಏರೋಸ್ಪೇಸ್ ಪಾರ್ಕ್‌ನಲ್ಲಿ ತಲಾ ಎಕರೆಗೆ ₹12 ಕೋಟಿ ಮಾರುಕಟ್ಟೆ ದರ ಇದ್ದರೆ, ಮಾರ್ಗಸೂಚಿ ದರ ₹6 ಕೋಟಿಯಷ್ಟಿದೆ. ಆದರೆ, ಜೋಧಾನಿ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ₹2.9 ಕೋಟಿ ದರದಲ್ಲಿ ಹಂಚಿಕೆ ಮಾಡಲಾಗಿದೆ. ಹೊಸದಾಗಿ ಅರ್ಜಿ ಕರೆದಿರುವ ಯೋಜನೆಯಡಿಯೂ ಮಾರ್ಗಸೂಚಿ ದರದ ಅರ್ಧದಷ್ಟು ಮೊತ್ತದಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ ದೊಡ್ಡಮಟ್ಟದ ನಷ್ಟವಾಗಲಿದೆ’ ಎಂದೂ ಅವರು ಹೇಳಿದರು.

ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ವಸತಿ ಯೋಜನೆ!


ಸಿ.ಎ ಮತ್ತು ಅಮೆನಿಟಿಗಳಿಗೆ ಮೀಸಲಾದ ನಿವೇಶನಗಳನ್ನು ಹಂಚಿಕೆ ಮಾಡುವ ಮುನ್ನ ಅರ್ಜಿ ಸಲ್ಲಿಸಿದ ಸಂಸ್ಥೆಗಳಿಗೆ ನಿರ್ದಿಷ್ಟ ಕ್ಷೇತ್ರದಲ್ಲಿ ಎಷ್ಟು ವರ್ಷ ಅನುಭವ ಇದೆ, ಯೋಜನೆ ಜಾರಿ ಮಾಡುವ ಸಾಮರ್ಥ್ಯ ಇದೆಯೇ ಎಂದು ಪರಿಶೀಲನೆ ಮಾಡಿ ಹಂಚಿಕೆ ಮಾಡಲಾಗುತ್ತದೆ.

2023ರ ಮಾರ್ಚ್ 7ರಂದು ಅಂದರೆ ವಿಧಾನಸಭೆ ಚುನಾವಣೆಗೆ ಮೊದಲು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯ ಸಭೆಯಲ್ಲಿ ಡಿಫೆನ್ಸ್ ಅಂಡ್ ಏರೋಸ್ಪೇಸ್ ಪಾರ್ಕ್(ಹಾರ್ಡ್‌ವೇರ್ ಸೆಕ್ಟರ್) ಕೈಗಾರಿಕಾ ವಸಾಹತುವಿನಲ್ಲಿ ಜೋಧಾನಿ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ಗೆ 6.90 ಎಕರೆ ಜಾಗವನ್ನು ಹಂಚಿಕೆ ಮಾಡುವ ನಿರ್ಣಯ ಕೈಗೊಳ್ಳಲಾಗಿತ್ತು. ₹250 ಕೋಟಿ ಹೂಡಿಕೆಯನ್ನು ಕಂಪನಿ ಮಾಡಲಿದ್ದು, 10 ವರ್ಷ ಗುತ್ತಿಗ ಅಥವಾ ಕ್ರಯದ ಆಧಾರದ ಮೇಲೆ ಹಂಚಿಕೆ ಮಾಡಿ, 2023 ರ ಮೇನಲ್ಲಿ ಆದೇಶ ಹೊರಡಿಸಲಾಗಿದೆ.

ಭೂ ಬಳಕೆಯ ಉದ್ದೇಶ ಬದಲು

ಕೆಐಎಡಿಬಿಯ ಏರೋಸ್ಪೇಸ್ ಪಾರ್ಕ್ ನಿರ್ಮಾಣ ಮಾಡುವಾಗ(2018ರಲ್ಲಿ) ಕೈಗಾರಿಕೆ, ವಸತಿ, ನಾಗರಿಕ ಸೌಲಭ್ಯ ಹಾಗೂ ಇತರೆ ಸೌಲಭ್ಯ, ತಾಜ್ಯ ನಿರ್ವಹಣಾ ಘಟಕ ಹೀಗೆ ನಿರ್ದಿಷ್ಟ ಉದ್ದೇಶಕ್ಕಾಗಿ ಜಾಗವನ್ನು ಗೊತ್ತುಪಡಿಸಲಾಗಿತ್ತು.

ವಸತಿ ಸೌಕರ್ಯ ಕಲ್ಪಿಸಲು ಬಾಗಲೂರು-ವಿಮಾನ ನಿಲ್ದಾಣ ರಸ್ತೆಗೆ ಹೊಂದಿಕೊಂಡಂತೆ ಒಂದು ಸಾವಿರ ಎಕರೆಯಷ್ಟು ಜಮೀನನ್ನು ದೊಡ್ಡ ದೊಡ್ಡ ಬಿಲ್ಡರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ವಸಾಹತು ಪ್ರದೇಶದ ಒಳಗೆ ಎಂಟು- ಹತ್ತು ಎಕರೆಗಳಷ್ಟು ವಿಸ್ತೀರ್ಣದ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಉಳಿಸಲಾಗಿತ್ತು. ಅವುಗಳನ್ನು ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ, ‘ವಸತಿ ಉದ್ದೇಶಕ್ಕಾಗಿನ ಜಾಗ’ ಎಂದು ಬದಲಾವಣೆ ಮಾಡಲಾಗಿದೆ ಎಂಬ ದೂರುಗಳೂ ಇವೆ.



ಶಿವಲಿಂಗ ದರ್ಶನ

ಕಲಬುರಗಿಯ ಗೀತಾ ನಗರದಲ್ಲಿರುವ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಶಿವರಾತ್ರಿ ಅಂಗವಾಗಿ ಭಕ್ತರು ಶಿವಲಿಂಗ ದರ್ಶನ ಪಡೆದರು
–ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

‘10 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ



ಮಧು ಬಂಗಾರಪ್ಪ

ಕಲಬುರಗಿ: ‘ರಾಜ್ಯದಲ್ಲಿ ಮತ್ತೆ 10 ಸಾವಿರ ಶಿಕ್ಷಕರ ನೇಮಕಾತಿಗೆ ಅನುಮೋದನೆ ಕೋರಿ ಶೀಘ್ರದಲ್ಲೇ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಿದ್ದು, ಅನುಮೋದನೆ ದೊರೆತ ತಕ್ಷಣ ನೇಮಿಸಲು ಕ್ರಮಕೈಗೊಳ್ಳಲಾಗುವುದು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಕಳೆದ ವರ್ಷ 14 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸದ್ಯ, ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಬೋಧನೆಗೆ ಯಾವುದೇ ಸಮಸ್ಯೆ ಇಲ್ಲ. ಉಳಿದ ಹುದ್ದೆಗಳನ್ನು ಹಂತ-ಹಂತವಾಗಿ ಭರ್ತಿ ಮಾಡಲಾಗುವುದು’ ಎಂದರು.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸರಾಸರಿ ನಾಲ್ಕು ಪಬ್ಲಿಕ್ ಶಾಲೆಗಳನ್ನು ಆರಂಭಿಸುವ ಗುರಿ ಇದೆ. ಶಿಕ್ಷಣ ಇಲಾಖೆಗೆ ಈ ಬಾರಿ ಬಜೆಟ್‌ನಲ್ಲಿ ₹ 44,400 ಕೋಟಿ ಒದಗಿಸಲಾಗಿದೆ. ಹೆಚ್ಚುವರಿ ಹಣ ದೊರೆತಿದ್ದು, ಶಾಲೆಗಳ ಶಿಥಿಲ ಕಟ್ಟಡಗಳನ್ನು ಉತ್ತಮಪಡಿಸಲಾಗುವುದು’ ಎಂದರು.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದಲ್ಲಿ ಮೂರು ಬಾರಿ ಪರೀಕ್ಷೆ ಬರೆಯುವುದನ್ನು ಸಮರ್ಥಿಸಿಕೊಂಡ ಸಚಿವರು, ‘ಉತ್ತಮ ಅಂಕ ಹೊಂದಲು ಮತ್ತು ಉತ್ತೀರ್ಣರಾಗಿ ಮುಂದಿನ ತರಗತಿಗೆ ಪ್ರವೇಶ ಪಡೆಯಲು ಅನುಕೂಲವಾಗಲಿ ಎಂದು ಈ ಪದ್ಧತಿ ಜಾರಿಗೆ ತರಲಾಗಿದೆ. ಮಕ್ಕಳಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ’ ಎಂದು ಅವರು ತಿಳಿಸಿದರು.

ಮತ್ತೆ ಮೂವರ ವಶ: ಕಟ್ಟೆಚ್ಚರ

ಒಂದನೇ ಪುಟದಿಂದ...

‘ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿರುವ ಸಮೀರ್, ರಾಜ್ಯ ಹಾಗೂ ಹೊರ ರಾಜ್ಯಗಳ ಮುಸ್ಲಿಂ ಯುವಕರನ್ನು ಮೊಬೈಲ್ ಆ್ಯಪ್ ಮತ್ತು ಇತರೆ ಆನ್‌ಲೈನ್ ವ್ಯವಸ್ಥೆ ಮೂಲಕ ಪರಿಚಯ ಮಾಡಿಕೊಳ್ಳುತ್ತಿದ್ದ. ‘ಮುಸ್ಲಿಂ ಧರ್ಮದ ಮೇಲೆ ದೌರ್ಜನ್ಯವಾಗುತ್ತಿದೆ. ಅದನ್ನು ತಡೆಯಲು ಪ್ರಾಣ ನೀಡಬೇಕು’ ಎಂಬುದಾಗಿ ಹೇಳಿ ಯುವಕರನ್ನು ಪ್ರಚೋದಿಸುತ್ತಿದ್ದ. ಪ್ರಚೋದನಕಾರಿ ಅಂಶಗಳಿರುವ ಪುಸ್ತಕಗಳು, ವಿಡಿಯೊಗಳು ಹಾಗೂ ಕರಪತ್ರಗಳನ್ನು ಕಳುಹಿಸುತ್ತಿದ್ದ. ಇದರಿಂದ ಪ್ರಚೋದನೆಗೊಂಡ ಯುವಕರು, ಬಳ್ಳಾರಿ ಘಟಕ ಸೇರುತ್ತಿದ್ದರು. ಅಂಥ ಯುವಕರಿಗೆ, ಸಮೀರ್ ಹಾಗೂ ಇತರರು ಕಚ್ಚಾ ಬಾಂಬ್ (ಐಇಡಿ) ತಯಾರಿ ಬಗ್ಗೆ ತರಬೇತಿ ಸಹ ಕೊಡಿಸುತ್ತಿದ್ದರು’ ಎಂದು ತನಿಖಾ ಸಂಸ್ಥೆ ಮೂಲಗಳು ವಿವರಿಸಿವೆ.

‘ಶಂಕಿತರಾದ ಅನಾಸ್ ಇಕ್ಬಾಲ್ ಶೇಖ್ ಹಾಗೂ ದೆಹಲಿಯ ಶಯಾನ್ ರಹಮಾನ್ ಸಹ ಬಳ್ಳಾರಿ ಘಟಕದ ಸದಸ್ಯರು. ಇವರೂ ಬಾಂಬ್ ತಯಾರಿ ತರಬೇತಿ ಪಡೆದಿರುವ ಮಾಹಿತಿ ಇದೆ. ತಮ್ಮೂರಿನ ಯುವಕರನ್ನು ಪ್ರಚೋದಿಸಿ ಘಟಕಕ್ಕೆ ಸೇರಿಸುತ್ತಿದ್ದರು. ಬಾಂಬ್ ಸ್ಫೋಟಿಸುವುದು ಇವರೆಲ್ಲರ ಉದ್ದೇಶವಾಗಿತ್ತೆಂಬ ಸಂಗತಿ ಗೊತ್ತಾಗಿದೆ’ ಎಂದು ಹೇಳಿವೆ.

> **ಬೆಂಗಳೂರಿನ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತನಿಖೆ ಮುಂದುವರೆಸಿದೆ. ಆದರೆ, ಅದು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿಲ್ಲ ಎಂದು ಸಂಶಯ ಮೂಡುತ್ತಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ದೇಶದ ಹಲವೆಡೆ ಶಂಕಿತರ ವಾಸ: ‘ಬಳ್ಳಾರಿ ಘಟಕದಿಂದ ಬಾಂಬ್ ತಯಾರಿ ಬಗ್ಗೆ ತರಬೇತಿ ಪಡೆದಿರುವ ಹಾಗೂ ಶಂಕಿತ ಉಗ್ರರಿಂದ ಪ್ರಚೋದನೆಗೊಂಡಿರುವ ಹಲವು ಯುವಕರು, ದೇಶದ ಹಲವೆಡೆ ವಾಸವಿರುವ ಮಾಹಿತಿ ಇದೆ. ಅವರೆಲ್ಲರನ್ನೂ ಪತ್ತೆ ಮಾಡಲು ಎನ್‌ಐಎ ತನಿಖೆ ಮುಂದುವರಿಸಿದೆ’ ಎಂದು ಹೇಳಿವೆ.

ಬಳ್ಳಾರಿಯಲ್ಲಿ ಕಚ್ಚಾ ಸಾಮಗ್ರಿ ಖರೀದಿ: ‘ಶಂಕಿತರು ಬಾಂಬ್ ತಯಾರಿಕೆಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು 2023ರಲ್ಲಿಯೇ ಖರೀದಿಸಿ ಸಂಗ್ರಹಿಸಿಟ್ಟುಕೊಂಡಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಸಾಮಗ್ರಿ ಖರೀದಿಸಿದ್ದ ಮಳಿಗೆಗಳಿಂದಲೂ ಅಧಿಕಾರಿಗಳು ಮಾಹಿತಿ ಪಡೆದು ಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.





ನಗರದ ಬನಶಂಕರಿಯ ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್‌ನಲ್ಲಿರುವ ಫಿಡಿಲಿಟಸ್ ಕಾರ್ಪ್ ಸಂಸ್ಥೆಯ ಉದ್ಯೋಗಿಗಳು ಮಹಿಳಾ ದಿನ ಆಚರಿಸಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಚ್ಯುತ್ ಗೌಡ ಮತ್ತು ಉದ್ಯೋಗಿಗಳು ಪಾಲ್ಗೊಂಡಿದ್ದರು (ಎಡಚಿತ್ರ) 'ಕಾಂಗರೂ ಕೇರ್' ವತಿಯಿಂದ 'ಬೈಕ್‌ಥಾನ್' ಹಮ್ಮಿಕೊಳ್ಳಲಾಯಿತು. 'ತಾಯಿ ಅಥವಾ ಮಗು ಆರೈಕೆಯಿಂದ ವಂಚಿತರಾಗಬಾರದು' ಎಂಬ ಘೋಷವಾಕ್ಯದೊಂದಿಗೆ ನಡೆದ ಸಮಾರಂಭದಲ್ಲಿ 100ಕ್ಕೂ ಅಧಿಕ ಮಹಿಳೆಯರು ಭಾಗವಹಿಸಿದ್ದರು

ಶೇ 25ರಷ್ಟು ಮಹಿಳಾ ಸಿಬ್ಬಂದಿಗೆ ಅವಕಾಶ: ಪೊಲೀಸ್ ಕಮಿಷನರ್

ಬೆಂಗಳೂರು: 'ಪೊಲೀಸ್ ಇಲಾಖೆಯಲ್ಲಿ ಶೇ 25ರಷ್ಟು ಮಹಿಳಾ ಸಿಬ್ಬಂದಿ ಇರಬೇಕು ಎಂಬುದು ಸರ್ಕಾರದ ಆಶಯವಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಸಿಬ್ಬಂದಿ ನೇಮಕ ಹಾಗೂ ಬಡ್ತಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಮೈಸೂರು ರಸ್ತೆಯಲ್ಲಿರುವ ಸಿಎಆರ್ (ನಗರ ಸಶಸ್ತ್ರ ಮೀಸಲು ಪಡೆ) ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಮಹಿಳಾ ಸಿಬ್ಬಂದಿಯ ವಿಶೇಷ ಕವಾಯತ್‌ನಲ್ಲಿ ಪಾಲ್ಗೊಂಡು ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಪೊಲೀಸ್ ಇಲಾಖೆಯದಲ್ಲಿ ಸದ್ಯ ಶೇ 8ರಷ್ಟು ಮಾತ್ರ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದಾರೆ. ಈ ಪ್ರಮಾಣವನ್ನು ಶೇ 25ರಷ್ಟು ಹೆಚ್ಚಿಸಬೇಕಿದೆ. ಈ ಬಗ್ಗೆ ಗೃಹ ಸಚಿವರು ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ದೊರೆಯಲಿದೆ' ಎಂದು ಹೇಳಿದರು.

ಕವಾಯತ್‌ನಲ್ಲಿ ಪಾಲ್ಗೊಂಡಿದ್ದ ಮಹಿಳಾ ಅಧಿಕಾರಿಗಳು ಹಾಗೂ ಮಹಿಳಾ ಸಿಬ್ಬಂದಿ, ಶಸ್ತ್ರಸಜ್ಜಿತವಾಗಿ ವಿಶೇಷ ಪಥಸಂಚಲನ ನಡೆಸಿದರು. ಪಥಸಂಚಲನದಲ್ಲಿ ಪಾಲ್ಗೊಂಡಿದ್ದ 10 ಮಹಿಳಾ ತಂಡಗಳ ಪ್ರತಿ ಸದಸ್ಯೆಯರಿಗೆ ₹ 1,000 ನಗದು ಬಹುಮಾನ ಹಾಗೂ ಪ್ರಶಂಸನಾ ಪತ್ರ ನೀಡಲಾಯಿತು. ರಾಣಿ ಚನ್ನಮ್ಮ ಪಡೆಗೆ ₹ 30 ಸಾವಿರ ವಿಶೇಷ ಬಹುಮಾನ ಲಭಿಸಿತು.

ಪೋಸ್ಟ್‌ಕಾರ್ಡ್‌ ಬಿಡುಗಡೆ



ಸಂವಿಧಾನ ಸಭೆಯ 15 ಮಹಿಳಾ ಸದಸ್ಯರ ಸಚಿತ್ರ ಪೋಸ್ಟ್‌ಕಾರ್ಡ್‌ಗಳನ್ನು ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಬಿಡುಗಡೆ ಮಾಡಿದರು. ಅಂಚೆ ಸೇವೆ ನಿರ್ದೇಶಕಿ ಕೈಯಾ ಆರೋರಾ, ಏರೋ ಸ್ಪೇಸ್ ಎಂಜಿನಿಯರ್ ವಿನಯ್ ಕುಮಾರ್ ಉಪಸ್ಥಿತರಿದ್ದರು

ಬೆಂಗಳೂರು: ಸಂವಿಧಾನ ಸಭೆಯ 15 ಮಹಿಳಾ ಸದಸ್ಯರ ಸಚಿತ್ರ ಪೋಸ್ಟ್‌ಕಾರ್ಡ್‌ಗಳನ್ನು 'ನಮ್ಮ ಸಂವಿಧಾನದ ಸಂಸ್ಥಾಪಕ ತಾಯಂದಿರು' ಎಂಬ ಹೆಸರಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಭಾರತೀಯ ಅಂಚೆ ಇಲಾಖೆ ಕರ್ನಾಟಕ ವೃತ್ತದಿಂದ ಶುಕ್ರವಾರ ಬಿಡುಗಡೆ ಮಾಡಲಾಯಿತು.

389 ಸದಸ್ಯರಿದ್ದ ಸಂವಿಧಾನ ಸಭೆಯಲ್ಲಿ ಮಹಿಳೆಯರ ಪ್ರಮಾಣ ಶೇ 3.15 ಮಾತ್ರ ಇತ್ತು. ಗುಣಾತ್ಮಕವಾಗಿ ಅವರ ಕೊಡುಗೆ ಶ್ಲಾಘನೀಯವಾದುದು. ಉತ್ತರ ಪ್ರದೇಶದ ನಾಲ್ವರು, ಕೇರಳದ ಮೂವರು, ಆಂಧ್ರಪ್ರದೇಶ, ತೆಲಂಗಾಣ, ಪೂರ್ವ ಬಂಗಾಳ (ಬಾಂಗ್ಲಾದೇಶ), ಪಶ್ಚಿಮ ಬಂಗಾಳ, ಅಸ್ಸಾಂ, ಗುಜರಾತ್, ಹರಿಯಾಣ ಮತ್ತು ಪಂಜಾಬ್‌ನಿಂದ ತಲಾ ಒಬ್ಬರು ಭಾಗಿಯಾಗಿದ್ದರು ಎಂದು ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ತಿಳಿಸಿದರು.

₹300 ಮತ್ತು ₹400 ಮುಖಬೆಲೆಯ ಈ ಅಂಚೆ ಕಾರ್ಡ್‌ಗಳು ಮೈಸೂರು, ಮಂಗಳೂರು, ಬೆಳಗಾವಿ ಮತ್ತು ಬೆಂಗಳೂರು ಅಂಚೆ ಕಚೇರಿಗಳಲ್ಲಿ ಲಭ್ಯವಿವೆ.

ಅಂಚೆ ಸೇವೆ ನಿರ್ದೇಶಕಿ ಕೈಯಾ ಅರೋರಾ, ಏರೋ ಸ್ಪೇಸ್ ಎಂಜಿನಿಯರ್ ವಿನಯ್ ಕುಮಾರ್ ಉಪಸ್ಥಿತರಿದ್ದರು.

ಮಹಿಳಾ ಸಬಲೀಕರಣದ ಸಂದೇಶದೊಂದಿಗೆ ಬೈಕ್‌ಥಾನ್ ● ಆರೋಗ್ಯ ತಪಾಸಣೆ ● ಕಲಾಕೃತಿ ಪ್ರದರ್ಶನ

ಮಹಿಳಾ ದಿನ: ಅರ್ಥಪೂರ್ಣ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಶಿವರಾತ್ರಿ ಪ್ರಯುಕ್ತ ರಜೆ ಇದ್ದಿದ್ದರಿಂದ ಪ್ರತಿವರ್ಷದ ಸಡಗರ ಈ ಬಾರಿ ಕಂಡು ಬಂದಿಲ್ಲ.

ನಾಗರಬಾವಿಯ ಫೋರ್ಟಿಸ್ ಆಸ್ಪತ್ರೆಯ ವತಿಯಿಂದ 'ವುಮೆನ್ ಆನ್ ವೀಲ್ಸ್' ಎಂಬ ಮಹಿಳಾ ಸಬಲೀಕರಣದ ಸಂದೇಶದೊಂದಿಗೆ ಬೈಕ್‌ಥಾನ್ ನಡೆಸುವ ಮೂಲಕ ಮಹಿಳಾ ದಿನ ಆಚರಿಸಲಾಯಿತು. ವಿಶೇಷ ರಿಯಾಯಿತಿ ದರದಲ್ಲಿ ಮಹಿಳಾ ಆರೋಗ್ಯ ತಪಾಸಣೆ ಪ್ಯಾಕೇಜ್ ನೀಡಲಾಯಿತು.

ಭಾರತ್ ಆನ್ ವೀಲ್ಸ್ ಮತ್ತು ಬೈಕರ್ ಸೇವಿಯರ್ಸ್ ಸಹಯೋಗದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಡೌನ್‌ಟೌನ್ ರೈಡರ್ಸ್, ಆರ್‌ವಿಸಿ, ಆರ್‌ಒಬಿ, ಡಾ. ಪಿಆರ್‌ಕೆ ಕ್ಲಬ್, ಟಿ.ಎಸ್. ಬೈಕಿಂಗ್ ಕಮ್ಯುನಿಟಿ, ಬೆಂಗಳೂರು ಯಮಹಾಸ್ ಕ್ರ್ಯೂ, ಟ್ರೆಕ್ ಕರ್ನಾಟಕ, ಕರ್ನಾಟಕ ಡೇರ್ ಬೈಕರ್ಸ್‌ನ ರೈಡರ್‌ಗಳು ಭಾಗವಹಿಸಿದ್ದರು. ಸುಮಾರು 100 ಮಹಿಳಾ ಸವಾರರು 12 ಕಿ.ಮೀ. ಕ್ರಮಿಸಿದರು.

ಲೇಖಕಿ ವಸುಂಧರಾ ಭೂಪತಿ, ಹಿರಿಯ ಆಡಳಿತ ಮತ್ತು ಚಿಕಿತ್ಸಕರಾದ ಡಾ. ತೇಜಸ್ವಿನಿ ಪಾರ್ಥಸಾರಥಿ, ಫೆಸಿಲಿಟಿ ಡೈರೆಕ್ಟರ್ ಡಾ.ಭೋಜಮ್ಮ, ಇಂಟರ್ನಲ್ ಮೆಡಿಸಿನ್ ಕನ್ಸಲ್ಟೆಂಟ್ ಡಾ. ಚಂದ್ರಿಕಾ ಆನಂದ್, ಕನ್ಸಲ್ಟೆಂಟ್ ಪ್ರಸೂತಿ ಕುಮಾರ್, ವೈದ್ಯಕೀಯ ಮುಖ್ಯಸ್ಥರು ಮತ್ತು ನರ್ಸಿಂಗ್ ಮುಖ್ಯಸ್ಥರು ಭಾಗವಹಿಸಿದ್ದರು.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಾಗರಬಾವಿಯ ಫೋರ್ಟಿಸ್ ಆಸ್ಪತ್ರೆ ವತಿಯಿಂದ ಬೈಕ್‌ಥಾನ್ ನಡೆಸಲಾಯಿತು

'ಅವ್ಯಾನ್ನ' ಕಲಾಕೃತಿಗಳ ಪ್ರದರ್ಶನ: ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಮಹಿಳಾ ದಿನಾಚರಣೆಯ ಪ್ರಯುಕ್ತ ಎಂಟು ಮಹಿಳಾ ಕಲಾವಿದರಿಂದ 'ಅವ್ಯಾನ್ನ' ಕಲಾಕೃತಿಗಳ ಪ್ರದರ್ಶನ ಹಮ್ಮಿಕೊಳ್ಳಲಾಯಿತು.

ಕಲಾವಿದರಾದ ಬಿನಾ ಮಿರ್‌ಚಾಂದಿನಿ, ಇಶಾ ಜಾನ್, ಇವಾಂಕ ತಿಮ್ಮಯ್ಯ, ಕಾಂತಿ ವಿ., ನೀಲಂ ಮಲ್ಹೋತ್ರ, ಪುಷ್ಪಾ, ರಿತು ಚಾವ್ಲಾ ಮಥೂರ್, ವನಜಾ ಬಾಯಿ ಅವರ 60 ಕಲಾಕೃತಿಗಳ ಈ ಪ್ರದರ್ಶನವನ್ನು ವಿನಿತಾ ಬಾಲಿ ಮತ್ತು ಲತಾ ರೆಡ್ಡಿ ಉದ್ಘಾಟಿಸಿದರು. ಎಂ.ಜಿ. ದೊಡ್ಡಮನಿ ನಿರೂಪಿಸಿದರು. ಮಾರ್ಚ್ 12ರವರೆಗೆ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ.

ಸಾಹಿತ್ಯ ಅಕಾಡೆಮಿ: 'ಸಮಾಜವನ್ನು ಪ್ರಭಾವಿಸುವವರಾಗಿ ಲೇಖಕಿಯರು' ಕುರಿತು ಸಾಹಿತ್ಯ ಅಕಾಡೆಮಿ ವತಿಯಿಂದ ಸಂವಾದ ನಡೆಸಲಾಯಿತು. ಅನುವಾದಕಿ ಅಂಬಿಕಾ ಅನಂತ್, ಲೇಖಕಿಯರಾದ ಎಂ.ಎಸ್. ಆಶಾದೇವಿ, ನೀತಿ ರಾಯ್, ಶೈನೀ ಆಂಥೋನಿ ಉಷಾರಾಣಿ ರಾವ್ ಸಂವಾದದಲ್ಲಿ ಪಾಲ್ಗೊಂಡರು.

ಕಲಾ ಪ್ರೇಮಿ ಫೌಂಡೇಷನ್: ಮಲ್ಲೇಶ್ವರದಲ್ಲಿ ಕಲಾ ಪ್ರೇಮಿ ಫೌಂಡೇಷನ್ ವತಿಯಿಂದ 'ಮಾ... ಸ್ತ್ರೀ ಶಕ್ತಿ' ಸಂಗೀತ ಕಾರ್ಯಕ್ರಮ ನಡೆಯಿತು. 'ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ರೂಪಗಳಲ್ಲಿ ರಾಗಗಳು, ಲಯ ಮತ್ತು ಸಂಗೀತದ ಯೋಜನೆಗಳು' ಬಗ್ಗೆ ಪ್ರಸ್ತುತಪಡಿಸಲಾಯಿತು. ಮೀರಾ ಸೆಂಟರ್ ಫಾರ್ ಮ್ಯೂಸಿಕ್ ಥೆರಪಿ ಸಂಸ್ಥಾಪಕಿ ಮೀನಾಕ್ಷಿ ರವಿ ಅತಿಥಿಯಾಗಿದ್ದರು. ಮೈಥಿಲಿ ಅನಂತರಾಮನ್, ಜಾತವೇದಬ್ಯಾನರ್ಜಿ ಅವರು ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ ನಡೆಸಿಕೊಟ್ಟರು. ತಬಲಾದಲ್ಲಿ ಪೂರ್ಣಿಮಾ, ಮೃದಂಗದಲ್ಲಿ ರಂಜನಿ ವೆಂಕಟೇಶ್, ಪಿಟೀಲಿನಲ್ಲಿ ಅದಿತಿ ಸಹಕರಿಸಿದರು.

ಮಹಿಳೆಯರೇ ನಿರ್ವಹಿಸುವ 'ರಾಣಿ ಎಕ್ಸ್‌ಪ್ರೆಸ್' ರೈಲಿಗೆ ಚಾಲನೆ

ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಿಂದ ಮಹಿಳಾ ಸಿಬ್ಬಂದಿಯೇ ಪೂರ್ಣವಾಗಿ ನಿರ್ವಹಿಸುವ 'ರಾಣಿ ಎಕ್ಸ್‌ಪ್ರೆಸ್' ರೈಲು ಬುಧವಾರ ಕಾರ್ಯಾಚರಣೆ ನಡೆಸಿತು.

ಲೋಕೊ ಪೈಲಟ್, ಸಹಾಯಕ ಲೋಕೊ ಪೈಲಟ್, ರೈಲು ನಿರ್ವಾಹಕ, ಟಿಕೆಟ್ ತಪಾಸಣೆ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿ ಎಲ್ಲರೂ ಮಹಿಳೆಯರೇ ಇರುವ ಬೆಂಗಳೂರು–ಮೈಸೂರು ರಾಜ್ಯ ರಾಣಿ ಎಕ್ಸ್‌ಪ್ರೆಸ್‌ಗೆ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಅರವಿಂದ್ ಶ್ರೀವಾಸ್ತವ ಚಾಲನೆ ನೀಡಿದರು.



ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಿಂದ ಒಂದು ದಿನದ ಮಟ್ಟಿಗೆ ಮಹಿಳಾ ಸಿಬ್ಬಂದಿಯೇ ಪೂರ್ಣವಾಗಿ ನಿರ್ವಹಿಸುವ 'ರಾಣಿ ಎಕ್ಸ್‌ಪ್ರೆಸ್' ರೈಲಿಗೆ ರೈಲ್ವೆ ಅಧಿಕಾರಿಗಳು ಚಾಲನೆ ನೀಡಿದರು

ಸಿರೀಶ ಗಜನಿ ಲೋಕೊ ಪೈಲಟ್, ಸೋನಾ ಜಿ. ಸಹಾಯಕ ಪೈಲಟ್, ಪ್ರಿಯದರ್ಶಿನಿ ರೈಲು ನಿರ್ವಾಹಕಿಯಾಗಿದ್ದರು. ಕ್ಯಾರೇಜ್–ವ್ಯಾಗನ್ ಹಿರಿಯ ಸೆಕ್ಷನ್ ಎಂಜಿನಿಯರ್ ಇಂದ್ರಾಣಿ, ಮುಖ್ಯ ಟಿಕೆಟ್ ಪರಿವೀಕ್ಷಕರಾದ ಸಿ.ಎಸ್. ಭಾರತಿ, ಸಗಾಯ ಮೇರಿ, ಶಮೀಮ್ ಉನ್ನಿಸಾ ಬೇಗಂ ಎಂ., ಟಿಕೆಟ್ ಉಪ ಪರಿವೀಕ್ಷಕರಾದ ಅನಿಲಾ ಜಕಾರಿಯಾಸ್, ಸೋನಾ ವಿ.ಜೆ., ಉಮಾ ಪಿ.ಎಸ್., ವಾಣಿಜ್ಯ/ಟಿಕೆಟ್ ಚೆಕ್ಕಿಂಗ್ ಅಧಿಕಾರಿ ಕಾಶಿಶ್ ಸಿಂಗ್, ರೈಲ್ವೆ ಪ್ರೊಟೆಕ್ಷನ್ ಫೋರ್ಸ್ (ಆರ್‌ಪಿಎಫ್) ಕಾನ್‌ಸ್ಟೆಬಲ್‌ಗಳಾದ ರಂಜಿನಿ, ಶ್ರೀಜಾ ಪಿ.ಟಿ. ಭಾಗವಹಿಸಿದ್ದರು. ಈ ವಿಶೇಷ ರೈಲು ಒಂದು ದಿನಕ್ಕೆ ಸೀಮಿತವಾಗಿದೆ.

ಚಾಲನಾ ಕಾರ್ಯಕ್ರಮದಲ್ಲಿ ರೈಲ್ವೆ ಅಧಿಕಾರಿ ದಂಪತಿಗಳನ್ನು, ಮಹಿಳಾ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ರಾಮೇಶ್ವರಂ ಕೆಫೆ ಪುನರಾರಂಭ

ಗ್ರಾಹಕರ ತಪಾಸಣೆಗೆ ಎರಡು ಲೋಹ ಶೋಧಕ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಬ್ ಸ್ಫೋಟ ನಡೆದಿದ್ದ ದಿ ರಾಮೇಶ್ವರಂ ಕೆಫೆ ಶುಕ್ರವಾರ ಪುನಃ ಆರಂಭವಾಗಿದ್ದು, ಕೆಫೆ ಪ್ರವೇಶಿಸುವ ಗ್ರಾಹಕರನ್ನು ತಪಾಸಣೆ ಮಾಡಲು ಎರಡು ಪ್ರತ್ಯೇಕ ಲೋಹ ಶೋಧಕ ಯಂತ್ರ ಅಳವಡಿಸಲಾಗಿದೆ.

ಬ್ರೂಕ್‌ಫೀಲ್ಡ್‌ನಲ್ಲಿರುವ ಕೆಫೆಯಲ್ಲಿ ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟದಿಂದಾಗಿ 10 ಮಂದಿ ಗಾಯಗೊಂಡಿದ್ದರು. ಕೆಫೆಯ ಚಾವಣಿ ಹಾಗೂ ಇತರೆ ವಸ್ತುಗಳು ಜಖಂಗೊಂಡಿದ್ದವು. ಕೆಫೆಯನ್ನು ದುರಸ್ತಿ ಮಾಡಿ ಯಥಾಸ್ಥಿತಿಗೆ ತರಲಾಗಿದ್ದು, ಶುಕ್ರವಾರದಿಂದ ವ್ಯಾಪಾರ ಶುರುವಾಯಿತು.

'ಶಿವರಾತ್ರಿ ದಿನದಂದು ಕೆಫೆ ಪುನಃ ಶುರುವಾಗಲಿದೆ' ಎಂದು ಕೆಫೆ ಸಹ ಸಂಸ್ಥಾಪಕ ರಾಘವೇಂದ್ರರಾವ್ ಹೇಳಿದ್ದರು. ಅದರಂತೆ ವಿಶೇಷ ಪೂಜೆ ಹಾಗೂ ಹೋಮ ಮಾಡುವ ಮೂಲಕ ವ್ಯಾಪಾರ ಆರಂಭಿಸಲಾಗಿದೆ. ಶುಕ್ರವಾರ ಯಥಾಪ್ರಕಾರ ಗ್ರಾಹಕರು ಕೆಫೆಗೆ ಭೇಟಿ ನೀಡಿ, ಆಹಾರ ಸವಿದರು.



ದಿ ರಾಮೇಶ್ವರಂ ಕೆಫೆ ಪ್ರವೇಶ ದ್ವಾರದಲ್ಲಿ ಲೋಹ ಶೋಧಕ ಯಂತ್ರ ಅಳವಡಿಸಿರುವುದು – ಪ್ರಜಾವಾಣಿ ಚಿತ್ರ

ಪ್ರವೇಶ ದ್ವಾರದಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಎಲ್ಲ ಗ್ರಾಹಕರನ್ನು ತಪಾಸಣೆ ಮಾಡಿ ಒಳಗೆ ಕಳುಹಿಸಲಾಗುತ್ತಿದೆ. ಜೆ.ಪಿ. ನಗರ, ಇಂದಿರಾನಗರ ಹಾಗೂ ರಾಜಾಜಿ ನಗರದಲ್ಲಿರುವ ಕೆಫೆಯಲ್ಲೂ ಲೋಹ ಶೋಧಕ ಯಂತ್ರ ಅಳವಡಿಸುವುದಾಗಿ ರಾಘವೇಂದ್ರರಾವ್ ಅವರು ತಿಳಿಸಿದ್ದಾರೆ.


ವಿಜೃಂಭಣೆಯ ಸೂರ್ಯ ಲಕ್ಷ ದೀಪೋತ್ಸವ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ತೋಟಗೆರೆಯ ಬಸವಣ್ಣ ದೇವಸ್ಥಾನ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಹಿತಚಿಂತನಾ ಚಾರಿಟಬಲ್ ಟ್ರಸ್ಟ್, ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಸಹಭಾಗಿತ್ವದಲ್ಲಿ 11ನೇ ವರ್ಷದ ಸೂರ್ಯ ಲಕ್ಷದೀಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಹಬ್ಬದ ಅಂಗವಾಗಿ ಬೆಳಿಗ್ಗೆ ವಿಶೇಷ ಪೂಜೆ ಕೈಂಕರ್ಯಗಳು, ದೇವಾಲಯಕ್ಕೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಹೋಮ, ಹವನ ಅಭಿಷೇಕ, ಮಹಾಮಂಗಳಾರತಿ ಹಾಗೂ ಸಂಜೆ 7ಕ್ಕೆ ಲಕ್ಷದೀಪೋತ್ಸವ ಜರುಗಿತು.

ಮೆರುಗು ತಂದ ದನಗಳ ಜಾತ್ರೆ: ಬಸವಣ್ಣ ದೇವಸ್ಥಾನದ ಕ್ಷೇತ್ರದಲ್ಲಿ ಐದು ವರ್ಷಗಳಿಂದ ದನಗಳ ಜಾತ್ರೆ ನಡೆಯುತ್ತಿದ್ದು ಜಾತ್ರೆಯಲ್ಲಿ ಹಳ್ಳಿಕಾರ್ ತಳಿಗಳ ಹೋರಿಗಳು ಗಮನ ಸೆಳೆದವು. ರೈತರು ಉತ್ತಮ ತಳಿಯ ಜೋಡಿ ಎತ್ತುಗಳಿಗೆ ಹಾರ, ಶಾಲು ಹೊದಿಸಿ, ಡೊಳ್ಳು ತಮಟೆ ವಾದ್ಯಗಳೊಂದಿಗೆ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಿ ಸಂತಸಪಟ್ಟರು.



ಬಸವಣ್ಣ ದೇವರ ಸನ್ನಿಧಾನದಲ್ಲಿ ಭಕ್ತಾದಿಗಳು ದೀಪಗಳನ್ನು ಬೆಳಗಿಸಿದರು

ಉತ್ತಮ ರಾಸುಗಳಿಗೆ ಹಿತ ಚಿಂತನಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಾಲು ಹಲ್ಲು, ಎರಡು ಹಲ್ಲು, ನಾಲ್ಕು ಹಲ್ಲು, ಹಾರು ಹಲ್ಲು, ಕಡೆ ಹಲ್ಲು ಹಾಗೂ ಬೀಜದ ಹೋರಿ ವಿಭಾಗಗಳಲ್ಲಿ ಮೊದಲನೇ ಬಹುಮಾನವಾಗಿ ಆರು ರೈತರಿಗೆ ತಲಾ 100 ಗ್ರಾಂ ಬೆಳ್ಳಿ, ಎರಡನೇ ಬಹುಮಾನವಾಗಿ ಆರು ರೈತರಿಗೆ 50 ಗ್ರಾಂ ಬೆಳ್ಳಿ ಹಾಗೂ ಮೂರನೇ ಬಹುಮಾನವಾಗಿ ಆರು ಜನ ರೈತರಿಗೆ 25 ಗ್ರಾಂ ಬೆಳ್ಳಿ ನೀಡಲಾಯಿತು. ಜಾತ್ರೆಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ರಾಸುಗಳ ರೈತರಿಗೆ ಬಾರುಕೋಲು, ದಂಡೆ, ಶಲ್ಯ, ಹಗ್ಗ, ಶಂಖನೀಡಲಾಯಿತು.

ನಂದಿಧ್ವಜ ಕುಣಿತ: ತೋಟಗೆರೆಯ ಆಂಜನೇಯ ಸ್ವಾಮಿ ಸನ್ನಿಧಿಯಿಂದ ಹೆಸರಘಟ್ಟದ ಮುಖ್ಯ ರಸ್ತೆಯ ಬೀದಿಯಲ್ಲಿ ಬಸವಣ್ಣನ ನೆಲೆ ದೇವರನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಇಟ್ಟು ಮೆರವಣಿಗೆ ಮಾಡಲಾಯಿತು.

ಊಟದ ವ್ಯವಸ್ಥೆ: ಟ್ರಸ್ಟ್ ವತಿಯಿಂದ ದೇವಾಲಯದ ಆವರಣದಲ್ಲಿ ಸೂರ್ಯ ಲಕ್ಷದೀಪೋತ್ಸವಕ್ಕೆ ಆಗಮಿಸಿದ 12,000 ಭಕ್ತರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಹಿತ ಚಿಂತನಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಪುಟ್ಟಮ್ಮ ವೆಂಕಟರಾಮಯ್ಯ ಟ್ರಸ್ಟಿಗಳಾದ ಚಂದ್ರಶೇಖರ್ ನರಸಿಂಹಮೂರ್ತಿ ವಿ. ರಾಮಸ್ವಾಮಿ ಪಾಲ್ಗೊಂಡಿದ್ದರು.

ಸೋಂಪುರದಲ್ಲಿ ವಿಶೇಷ ಪೂಜೆ

ದಾಬಸ್‌ಪೇಟೆ: ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಸೋಂಪುರ ಹೋಬಳಿಯ ಶಿವ ದೇವಾಲಯಗಳಲ್ಲಿ ಓಂ ನಮಃ ಶಿವಾಯ, ಹರಹರ ಮಹದೇವ, ಶಂಭೋಶಂಕರ ಎಂಬ ಜಯಘೋಷಗಳು ಮೊಳಗಿದವು. ರುದ್ರಪಠಣ, ಅಭಿಷೇಕದಂತಹ ವಿಶೇಷ ಪೂಜೆ ಭಜನಾ ಕಾರ್ಯಕ್ರಮಗಳು ನಡೆದವು.

ದೇವಾಲಯಗಳನ್ನು ತಳಿರು ತೋರಣ ಹೂಗಳಿಂದ ಅಲಂಕರಿಸಲಾಗಿತ್ತು. ದೇವರುಗಳನ್ನು ಬಣ್ಣ ಬಣ್ಣದ ಹೂವುಗಳಿಂದ ಸಿಂಗರಿಸಲಾಗಿತ್ತು.

ಸೋಂಪುರ ಹೋಬಳಿ ಶಿವಗಂಗೆಯ ಗಂಗಾಧರೇಶ್ವರ, ದೇವರ ಹೊಸಳ್ಳಿಯ ವೀರಭದ್ರ ಸ್ವಾಮಿ, ಹಳೇನಿಜಗಲ್ಲು ಉದ್ಭಾನ ವೀರಭದ್ರ ಸ್ವಾಮಿ, ದಾಬಸ್‌ಪೇಟೆ ಪಟ್ಟಣದ ಸೋಮೇಶ್ವರ, ಕರಿಮಣ್ಣೆ ಈಶ್ವರ, ಹೆಗ್ಗುಂದ ವೀರಭದ್ರ, ನಿಡವಂದ ಬಸವೇಶ್ವರ, ಶಿರಗನಹಳ್ಳಿ ಬಸವಣ್ಣ ದೇವಾಲಯದಲ್ಲಿ ಪೂಜೆ ನೆರವೇರಿಸಲಾಯಿತು.

ಶಿವಗಂಗೆ ಗಂಗಾಧರೇಶ್ವರ ದೇವಾಲಯಕ್ಕೆ 25 ಸಾವಿರಕ್ಕೂ ಹೆಚ್ಚು ಸಂಖ್ಯೆಯ ಭಕ್ತರು ಆಗಮಿಸಿ ದರುಶನ ಪಡೆದರು.

ಶಿವನಿಗೆ ಬಿಲ್ವಪತ್ರೆ, ತುಂಬೆ ಮತ್ತು ಜಾಜಿ ಪುಷ್ಪದಿಂದ ಪೂಜೆ ಮತ್ತು ನಾಲ್ಕು ಗಂಟೆಗೆ ಒಮ್ಮೆ ರುದ್ರಾಭಿಷೇಕ, ತುಪ್ಪದ ಸೇವೆ, ಬೆಣ್ಣೆ ಅಲಂಕಾರ, ಪಂಚಾಮೃತ ಅಭಿಷೇಕ ಮತ್ತು ದೇವಾಲಯದಲ್ಲಿ ದೀಪಾಲಂಕಾರದ ಪೂಜೆ ನಡೆಯಿತು.

ಭಕ್ತರಿಗೆ ಹೊನ್ನಾದೇವಿ ಗಂಗಾಧರೇಶ್ವರ ಟ್ರಸ್ಟ್‌ನಿಂದ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ನಗರದಲ್ಲಿ ಇಂದು

ಗೆಜ್ಜೆ ಪೂಜೆ ನೃತ್ಯ ಪ್ರದರ್ಶನ: ಅಹಲ್ಯಾ ಸಂಜಯ್ ಕೃಷ್ಣ, ಆಯೋಜನೆ ಮತ್ತು ಸ್ಥಳ: ಕಲಾಕ್ಷಿತಿ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಬಸವನಗುಡಿ, ಬೆಳಿಗ್ಗೆ 9

ಎಕೊ ಇಂಡಿಯಾ ರಾಷ್ಟ್ರೀಯ ದುಂಡು ಮೇಜಿನ ಶೃಂಗಸಭೆ, ಗರ್ಭಕಂಠದ ಕ್ಯಾನ್ಸರ್ ಜಾಗೃತಿ ಅಭಿಯಾನ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಡಾ. ನೀರ್ಜಾ ಭಾತ್ಲಾ, ಡಾ. ಹೇಮಾ ದಿವಾಕರ್, ಅನಿಲ್ ಗೋಸ್ವಾಮಿ, ಕುಮುದ್ ರೈ, ಸಂದೀಪ್ ಭಲ್ಲಾ, ಮುಖ್ಯಭಾಷಣಕಾರರು: ಡಾ.ಬಿ.ಎಲ್. ಸುಜಾತಾ ರಾಥೋಡ್, ಆಯೋಜನೆ: ಆರ್ಟಿಸ್ಟ್ ಫಾರ್ ಹರ್, ಸ್ಥಳ: ಏಟ್ರಿಯಾ ರಾಡಿಸನ್ ಬ್ಲೂ ಹೋಟೆಲ್, ಬೆಳಿಗ್ಗೆ 9.30

ಇಂದಿರಾ ಜಾನಕಿ ಎಸ್. ಶರ್ಮ ಅವರ 'ರಾಮಸಾಂಗತ್ಯ' ಪುಸ್ತಕ ಬಿಡುಗಡೆ: ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಅಧ್ಯಕ್ಷತೆ: ವಿಷ್ಣು ಭಟ್ ಡೋಂಗ್ರೆ, ಆಯೋಜನೆ: ದೇರಾಜೆ ಸೀತಾರಾಮಯ್ಯ ಸಂಸ್ಮರಣ ಸಮಿತಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ ಬಸವನಗುಡಿ, ಬೆಳಿಗ್ಗೆ 10.30

ನವೀನ್ ಸೂರಿಂಜೆ ಅವರ 'ಮಹೇಂದ್ರ ಕುಮಾರ್ ನಡು ಬಗ್ಗಿಸದ ಎದೆಯ ದನಿ ಹಿಂದುತ್ವವಾದಿಯ ಅನುಭವ ಕಥನ' ಪುಸ್ತಕ ಬಿಡುಗಡೆ: ಸಂತೋಷ್ ಲಾಡ್, ಅಧ್ಯಕ್ಷತೆ: ಪ್ರಕಾಶ್ ರೈ, ಅತಿಥಿಗಳು: ನಯನ ಮೋಟಮ್ಮ, ಎಸ್. ಬಾಲನ್, ಸುಧೀರ್ ಮುರೊಳ್ಳಿ, ಪುಸ್ತಕದ ಕುರಿತು: ನಿಕೇತ್ ರಾಜ್ ಮೌರ್ಯ, ಪ್ರಸ್ತಾವಿಕ ಮಾತು: ಮುನೀರ್ ಕಾಟಿಪಳ್ಳ, ಉಪಸ್ಥಿತಿ: ಬಸವರಾಜ ಸೂಳಿಭಾವಿ, ಆಯೋಜನೆ: ಲಡಾಯಿ ಪ್ರಕಾಶನ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ರೈತ ಸೌರಶಕ್ತಿ ಮೇಳ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ನಿರ್ಮಲಾ ಸೀತಾರಾಮನ್, ಪ್ರಲ್ಹಾದ್ ಜೋಶಿ, ಎಚ್.ಡಿ. ದೇವೇಗೌಡ, ಮಲ್ಲಿಕಾರ್ಜುನ್ ಖರ್ಗೆ, ರಾಜೀವ್ ಚಂದ್ರಶೇಖರ್, ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಎ. ನಾರಾಯಣಸ್ವಾಮಿ, ಭಗವಂತ ಖೂಬಾ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಕೆ.ಜೆ. ಜಾರ್ಜ್, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಇಂಧನ ಇಲಾಖೆ, ಸ್ಥಳ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ ಆವರಣ, ಸಂಜೆ 4

'ಕರ್ನಾಟಕದ ಸ್ತ್ರೀವಾದಿ ಚಳವಳಿ' ನಡೆದು ಬಂದ ಹಾದಿ, ಸಮಕಾಲೀನ ಬಿಕ್ಕಟ್ಟುಗಳು: ಮಾತನಾಡುವವರು: ಗೌರಮ್ಮ, ಮಮತಾ ಯಜಮಾನ್, ಸ್ಥಳ: ಪರ್ಯಾಯ ಕಾನೂನು ವೇದಿಕೆ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 11

'ಅಪಾರ್ಟ್‌ಮೆಂಟ್ ಕಾನೂನಿನ ಬಗ್ಗೆ ನಮಗೆ ತಿಳಿದಿರಬೇಕು' ಕುರಿತು ಸಂವಾದ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ವಿವೇಕ ಸುಬ್ಬಾರೆಡ್ಡಿ, ಭಾಷಣಕಾರರು: ಕೆ. ರಾಮಚಂದ್ರನ್, ಬೀನಾ ಪಿಳ್ಳೈ, ಎಎಲ್ ರಫೀಕ್ ಮೋಯಿದ್ದೀನ್, ಸ್ಥಳ: ಸೇಂಟ್ ಜೋಸೆಫ್ ಕಾನೂನು ಕಾಲೇಜಿನ ಸಭಾಂಗಣ, ಸಂಜೆ 4

ಮಡಿವಾಳ ಮಾಚಿದೇವರ ಜಯಂತಿ: ಸಾನ್ನಿಧ್ಯ: ಮುಕ್ತಾನಂದ ಸ್ವಾಮೀಜಿ, ವಿನಯ್ ಗುರೂಜಿ, ಉದ್ಘಾಟನೆ: ವಿ. ಸೋಮಣ್ಣ, ಅತಿಥಿಗಳು: ಎಚ್. ರವಿಕುಮಾರ್, ನಂಜಪ್ಪ, ಅರುಣ್ ಸೋಮಣ್ಣ, ಎಚ್. ರವೀಂದ್ರ, ಉಮೇಶ್ ಶೆಟ್ಟಿ, ಸವಿತಾ ಕೃಷ್ಣ, ರಾಜು ಎಂ. ತಲ್ಲೂರು, ಎಚ್. ಜಗದೀಶ್, ಬಿ.ಆರ್. ಪ್ರಕಾಶ್, ಕೆ.ಜಿ. ಮನೋಹರ್, ಲಕ್ಷ್ಮೀನಾರಾಯಣ, ಆಯೋಜನೆ: ಮಡಿವಾಳರ ಜಾಗೃತಿ ವೇದಿಕೆ ಟ್ರಸ್ಟ್, ಸ್ಥಳ: ಕಾಸಿಯಾ ಭವನ, ವಿಜಯನಗರ, ಸಂಜೆ 5

ರಾಜೀವ್ ಎನ್. ಮಾಗಲ್ ಅವರ 'ಸೋಲಿಗೆ ಸೋಲದವನಿಗೆ ಸೋಲೇ ಇಲ್ಲ!', ಬಿ.ಎಸ್. ಜಯಪ್ರಕಾಶ ನಾರಾಯಣ ಅವರ 'ಸಾಫ್ಟ್‌ವೇರ್‌ನಿಂದ ಸಾಕ್ಷಾತ್ಕಾರದೆಡೆಗೆ', ಅಕ್ಷತಾ ರಾಧಾಕೃಷ್ಣ ಅವರ 'ಜಗದಗಲ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಡಿ.ವಿ. ಗುರುಪ್ರಸಾದ್, ಪ್ರಕಾಶ್ ಬೆಳವಾಡಿ, ವಿ. ಮನೋಹರ್, ಆಯೋಜನೆ: ಸಮನ್ವಿತ ಪಬ್ಲಿಕೇಶನ್ಸ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

'ಜೀವಧರ್ಮಯೋಗ' ಕಾರ್ಯಕ್ರಮ: ಅತಿಥಿಗಳು: ಆರ್.ಪಿ. ಮೋಹನ್, ರಂಗನಾಥ ರಾವ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ ಸಂಜೆ 6

'ಕೇಳು ಮನಸೇ' ಕನ್ನಡದಲ್ಲಿ ಕತೆ ಮತ್ತು ಕವನ ಜೋಗಿ ವಿಶೇಷ: ಭಾಗವಹಿಸುವವರು: ಅರುಣ್ ಸಾಗರ್, ವತ್ಸಲಾ ಮೋಹನ್, ಪ್ರಸಾದ್ ಚೇರ್ಕಾಡಿ, ಚೈತ್ರಾ ಆಚಾರ್, ಚಂಪಾ ಶೆಟ್ಟಿ, ಸ್ಫೂರ್ತಿ ಮುರಳೀಧರ್, ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಸ್ನೇಹಿತನ ಜೊತೆ ಸಲುಗೆ, ಮಕ್ಕಳ ಮೇಲೆ ಹಲ್ಲೆ'

ಬೆಂಗಳೂರು: 'ಸ್ನೇಹಿತನ ಜೊತೆ ಸಲುಗೆ ಇಟ್ಟುಕೊಂಡಿರುವ ನನ್ನ ಪತ್ನಿ, ಸುಖಾಸುಮ್ಮನೇ ಜಗಳ ತೆಗೆದು ಮಕ್ಕಳ ಮೇಲೆ ಹಲ್ಲೆ ಮಾಡುತ್ತಿದ್ದಾಳೆ' ಎಂದು ಆರೋಪಿಸಿ ವ್ಯಕ್ತಿಯೊಬ್ಬರು ಜಗಜೀವನ್‌ರಾಮ್ ನಗರ ಠಾಣೆಗೆ ದೂರು ನೀಡಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ವ್ಯಕ್ತಿ ದೂರು ನೀಡಿದ್ದಾರೆ. ಪತ್ನಿ ಹಾಗೂ ಅವರ ಸ್ನೇಹಿತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಹಾಗೂ ಮಹಿಳೆ, 2013ರಲ್ಲಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೌಟುಂಬಿಕ ಜಗಳದಿಂದಾಗಿ ದಂಪತಿ ವಿಚ್ಛೇದನ ಪಡೆಯಲು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಇದರ ಬೆನ್ನಲ್ಲೇ, ಮಹಿಳೆ ಸ್ನೇಹಿತನ ಜತೆ ಸೇರಿಕೊಂಡು ಮಕ್ಕಳ ಮೇಲೆ ಹಲ್ಲೆ ಮಾಡುತ್ತಿರುವುದಾಗಿ ದೂರುದಾರ ಆರೋಪಿಸುತ್ತಿದ್ದಾರೆ' ಎಂದು ತಿಳಿಸಿವೆ.

'ಮಹಿಳೆಯ ಸ್ನೇಹಿತ, ಸಿಗರೇಟ್‌ನಿಂದ ಮಕ್ಕಳ ದೇಹಕ್ಕೆ ಸುಟ್ಟಿರುವ ಆರೋಪವಿದೆ. ಇದೊಂದು ಕೌಟುಂಬಿಕ ಗಲಾಟೆ. ಹೀಗಾಗಿ, ಸೂಕ್ತ ಪುರಾವೆಗಳನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಮೂಲಗಳು ಹೇಳಿವೆ.

ಬೆಂಗಳೂರು ಗ್ರಾಮಾಂತರ: ಬಿಜೆಪಿ–ಜೆಡಿಎಸ್ ಮೈತ್ರಿಕೂಟದಲ್ಲಿ ಮುಗಿಯದ ಅಭ್ಯರ್ಥಿ ಗೊಂದಲ

ನಿರೀಕ್ಷೆಯಂತೆ ಸುರೇಶ್‌ಗೆ 'ಕೈ' ಟಿಕೆಟ್

● ಓದೇಶ ಸಕಲೇಶಪುರ

ರಾಮನಗರ: ಮುಂಬರುವ ಲೋಕಸಭೆ ಚುನಾವಣೆಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ನಿರೀಕ್ಷೆಯಂತೆ ಹಾಲಿ ಸಂಸದ ಡಿ.ಕೆ.ಸುರೇಶ್ ಅವರಿಗೆ ಕಾಂಗ್ರೆಸ್ ಟಿಕೆಟ್ ಘೋಷಿಸಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರ ಸುರೇಶ್, 2019ರ ಚುನಾವಣೆಯಲ್ಲಿ ರಾಜ್ಯದಿಂದ ಆಯ್ಕೆಯಾಗಿದ್ದ ಏಕೈಕ ಕಾಂಗ್ರೆಸ್ ಸಂಸದ.

ಟಿಕೆಟ್ ಘೋಷಣೆಗೂ ಮುಂಚೆಯೇ ಸುರೇಶ್ ಈಗಾಗಲೇ ಕ್ಷೇತ್ರದಾದ್ಯಂತ ಭರ್ಜರಿ ಪ್ರಚಾರ ಆರಂಭಿಸಿದ್ದಾರೆ. ಟಿಕೆಟ್ ಘೋಷಣೆಯು ಪ್ರಚಾರ ಕಾರ್ಯಕ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಮತ್ತಷ್ಟು ಹುರುಪು ತುಂಬಿದೆ.

ಕ್ಷೇತ್ರ ಹಿಂದಿನಿಂದಲೂ ಕಾಂಗ್ರೆಸ್‌ನ ಭದ್ರಕೋಟೆಯಾಗಿದೆ. ಕ್ಷೇತ್ರದ ವ್ಯಾಪ್ತಿಗೆ ಬರುವ 8 ವಿಧಾನಸಭಾ ಕ್ಷೇತ್ರಗಳ ಪೈಕಿ (ರಾಮನಗರ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ, ಬೆಂಗಳೂರಿನ ದಕ್ಷಿಣ, ರಾಜರಾಜೇಶ್ವರಿನಗರ, ಆನೇಕಲ್ ಹಾಗೂ ತುಮಕೂರು ಜಿಲ್ಲೆಯ ಕುಣಿಗಲ್) 5 ಕಡೆ ಕಾಂಗ್ರೆಸ್ ಶಾಸಕರಿದ್ದರೆ, 2 ಕಡೆ ಬಿಜೆಪಿ ಹಾಗೂ 1 ಕಡೆ ಜೆಡಿಎಸ್‌ನವರಿದ್ದಾರೆ. ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ, ಕ್ಷೇತ್ರ ವ್ಯಾಪ್ತಿಯಲ್ಲಿ ಕೈ ಬಲ ಹೆಚ್ಚಾಗಿದೆ.

ಉಪ ಚುನಾವಣೆ ಮೂಲಕ ಪ್ರವೇಶ: ಕನಕಪುರ ತಾಲ್ಲೂಕಿನ ದೊಡ್ಡಆಲಹಳ್ಳಿಯವರಾದ ಸುರೇಶ್, ಅಣ್ಣ ಡಿ.ಕೆ.ಶಿವಕುಮಾರ್ ಅವರಿಗೆ ಬೆಂಬಲವಾಗಿ ತೆರೆಮರೆಯಲ್ಲಿ ಕೆಲಸ ಮಾಡಿಕೊಂಡಿದ್ದವರು. 2008ರಲ್ಲಿ ಕ್ಷೇತ್ರದ ಸಂಸದರಾಗಿ ಆಯ್ಕೆಯಾಗಿದ್ದ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ, 2013ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಆಗ ನಡೆದ ಉಪ ಚುನಾವಣೆಗೆ ಶಿವಕುಮಾರ್, ತಮ್ಮ ಸಹೋದರ ಸುರೇಶ್ ಅವರನ್ನು ನಿಲ್ಲಿಸಿದರು. ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಕುಮಾರಸ್ವಾಮಿ ಅವರ ಪತ್ನಿ ಅನಿತಾ ವಿರುದ್ಧ ಸುರೇಶ್ 1.37ಲಕ್ಷ ಮತಗಳ ಅಂತರದಲ್ಲಿ ಗೆದ್ದು, ಮೊದಲ ಸಲ ಸಂಸತ್ ಪ್ರವೇಶಿಸಿದರು.

ಮರು ವರ್ಷ 2014ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲೂ 2.31 ಲಕ್ಷ ಮತಗಳ ಅಂತರದಲ್ಲಿ ಮರು ಆಯ್ಕೆಯಾದರು. 2019ರಲ್ಲಿ 8.78 ಲಕ್ಷ ಮತಗಳನ್ನು ಪಡೆದು ಮೂರನೇ ಸಲ ಸಂಸತ್ ಸದಸ್ಯರಾದರು. ಆ ಚುನಾವಣೆಯಲ್ಲಿ ಸುರೇಶ್ ಅವರು ರಾಜ್ಯದಲ್ಲಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಏಕೈಕ ಸಂಸದರಾಗಿದ್ದರು.

ಅಂಕಿ ಅಂಶಗಳು

8 ಬೆಂ.ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳು

5 ಕಾಂಗ್ರೆಸ್ ಪ್ರತಿನಿಧಿಸುವ ಕ್ಷೇತ್ರ

2 ಬಿಜೆಪಿ ಗೆದ್ದಿರುವುದು

1 ಜೆಡಿಎಸ್ ಪ್ರತಿನಿಧಿಸುತ್ತಿರುವುದು

ಯಾರಾಗ್ತಾರೆ ಮೈತ್ರಿ ಅಭ್ಯರ್ಥಿ?

ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಏರ್ಪಟ್ಟಿರುವುದರಿಂದ, ಗ್ರಾಮಾಂತರ ಕ್ಷೇತ್ರದ ಚುನಾವಣಾ ಅಖಾಡ ರಂಗೇರಿದೆ. ಸುರೇಶ್ ಎದುರಾಳಿಯಾಗಿ ಮೈತ್ರಿ ಪಕ್ಷದಿಂದ ಯಾರ ಹೆಸರು ಹೊರ ಬೀಳಲಿದೆ ಎಂಬ ಕುತೂಹಲವೂ ಹೆಚ್ಚಾಗಿದೆ. ಸದ್ಯ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರ ಅಳಿಯ ಹಾಗೂ ಜಯದೇವ ಹೃದ್ರೋಗ ಆಸ್ಪತ್ರೆಯ ನಿವೃತ್ತ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಮತ್ತು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹೆಸರು ಮುಂಚೂಣಿಯಲ್ಲಿವೆ. ಇಬ್ಬರಲ್ಲಿ ಒಬ್ಬರ ಹೆಸರು ಅಂತಿಮಗೊಳ್ಳುವುದೇ ಅಥವಾ ಅಚ್ಚರಿಯ ಹೆಸರೊಂದು ಹೊರಬೀಳುವುದೇ ಎಂದು ಕಾದು ನೋಡಬೇಕಿದೆ.

ಕೆ.ಆರ್.ಪುರ: ಹಲವು ಬಡಾವಣೆಗಳಲ್ಲಿ ಅಂತರ್ಜಲ ಕುಸಿತ • ಟ್ಯಾಂಕರ್ ನೀರಿಗೆ ಮೊರೆ

ಬತ್ತಿದ ಕೊಳವೆಬಾವಿಗಳು, ನೀರಿಗೆ ಹಾಹಾಕಾರ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ವಿಧಾನಸಭಾ ಕ್ಷೇತ್ರದಲ್ಲಿ ಏಳು ವಾರ್ಡ್‌ಗಳಿವೆ. ಪ್ರತಿ ವಾರ್ಡ್‌ನಲ್ಲಿ ಇನ್ನೂರರಿಂದ ಮುನ್ನೂರು ಕೊಳವೆಬಾವಿಗಳಿವೆ. ಕೆಲವು ಬೋರ್‌ವೆಲ್‌ಗಳು ಬತ್ತಿವೆ, ಹೊಸ ಕೊಳವೆಬಾವಿ ಕೊರೆಸಿದರೂ ನೀರು ಸಿಗುತ್ತಿಲ್ಲ..!

ಕೆ.ಆರ್.ಪುರದ ಬಹುತೇಕ ಭಾಗಗಳಲ್ಲಿ ನೀರಿನ ಪರಿಸ್ಥಿತಿ ಹೀಗೇ ಇದೆ. ಕೆಲವು ಕಡೆ ಕುಡಿಯುವ ನೀರಿನ ಸಮಸ್ಯೆ ತಾರಕಕ್ಕೇರಿದೆ. ನೆತ್ತಿ ಸುಡುವ ಬಿಸಿಲಿನಲ್ಲಿ ನಿತ್ಯದ ಬಳಕೆಯ ನೀರಿಗಾಗಿ ಜನ ಪರದಾಡುತ್ತಿದ್ದಾರೆ. ಹಣವಿದ್ದವರು ಟ್ಯಾಂಕರ್ ನೀರಿಗೆ ಮೊರೆ ಹೋಗಿದ್ದಾರೆ. ಪರಿಸ್ಥಿತಿ ಲಾಭ ಪಡೆಯುತ್ತಿರುವ ಕೆಲವು ಟ್ಯಾಂಕರ್ ಮಾಲೀಕರು ಅಧಿಕ ಹಣ ವಸೂಲಿ ಮಾಡುತ್ತಿದ್ದಾರೆ.

'ಹಣ ಕೊಟ್ಟರೂ ಟ್ಯಾಂಕರ್ ನೀರು ಸಿಗುವುದು ಕಷ್ಟವಾಗಿದೆ. ನಿತ್ಯವೂ ನೀರಿಗಾಗಿ ಕಾಯುವುದೇ ಕೆಲಸವಾಗಿದೆ. ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಮತ್ತಷ್ಟು ತೀವ್ರವಾಗುವಂತೆ ಕಾಣುತ್ತಿದೆ' ಎಂದು ಕನಕನಗರ ನಿವಾಸಿ ಗೀತಾ ಆತಂಕ ವ್ಯಕ್ತಪಡಿಸಿದರು.

ಇತ್ತೀಚಿನ ವರ್ಷಗಳಲ್ಲಿ ಈ ಭಾಗದಲ್ಲಿ ಇಂಥ ನೀರಿನ ಅಭಾವವನ್ನು ಕಂಡಿರಲಿಲ್ಲ. ನೀರಿನ ಸಮಸ್ಯೆಯನ್ನು ಪರಿಹರಿಸಲು ಜಲಮಂಡಳಿ ನಿರಂತರವಾಗಿ ಪ್ರಯತ್ನಿಸುತ್ತಿದೆ. ಆದರೂ ಜನರಿಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ನೀರು ಪೂರೈಸಲಾಗುತ್ತಿಲ್ಲ. ಇನ್ನೊಂದು ಕಡೆ ಕೊಳವೆ ಬಾವಿ ಕೊರೆಯಲು ಜಾಗ ಸಿಗುತ್ತಿಲ್ಲ. ಜಾಗ ದೊರೆತ ಕಡೆಗಳಲ್ಲಿ ನೀರು ಸಿಗುತ್ತಿಲ್ಲ. ಅಂತರ್ಜಲ ಅಷ್ಟು ಪಾತಾಳಕ್ಕಿಳಿದಿದೆ.



ಅಪಾರ್ಟ್‌ಮೆಂಟ್‌ಗೆ ನೀರು ತುಂಬಿಸುತ್ತಿರುವ ಟ್ಯಾಂಕರ್ ಮಾಲೀಕರು

ಮುಖ್ಯಾಂಶಗಳು

- ಬಡವರು, ಕೂಲಿಕಾರ್ಮಿಕರಿಗೆ ಹೊಡೆತ
- ಉಚಿತವಾಗಿ ನೀರು ನೀಡಲು ಪ್ರಯತ್ನಿಸುತ್ತಿರುವ ಸಂಘ ಸಂಸ್ಥೆಗಳು
- ನೀರು ಒದಗಿಸುವ ಕಾರ್ಯದಲ್ಲಿ ತೊಡಗಿರುವ ಜಲಮಂಡಳಿ

ನೀರು ಖರೀದಿ ಕಷ್ಟ: ರಾಮಮೂರ್ತಿನಗರ ವಾರ್ಡ್‌ನ ಕಲ್ಕೆರೆ, ಕನಕನಗರ, ಪೂಜಾ ಗಾರ್ಡನ್, ಬಂಜಾರ ಬಡಾವಣೆಯಲ್ಲಿ ಬಡವರು, ಕೂಲಿ ಕಾರ್ಮಿಕರು ಹೆಚ್ಚಿದ್ದಾರೆ. ಈ ಭಾಗದಲ್ಲಿ ನೀರಿನ ಅಭಾವ ಹೆಚ್ಚಾಗಿದೆ. ಇಲ್ಲಿರುವವರು ಹಣ ತೆತ್ತು ಟ್ಯಾಂಕರ್ ನೀರು ಖರೀದಿಸುವ ಪರಿಸ್ಥಿತಿಯಲ್ಲಿಲ್ಲ.

'ಶಾಂತಾ ಕೃಷ್ಣಮೂರ್ತಿ ಫೌಂಡೇಶನ್‌ನವರು, ಕಲ್ಕೆರೆ, ಕನಕನಗರ, ಬಂಜಾರ ಬಡಾವಣೆ, ಪೂಜಾ ಗಾರ್ಡನ್‌ನಲ್ಲಿ ಕೆಲವು ಪ್ರದೇಶಗಳಿಗೆ ಟ್ಯಾಂಕರ್ ನೀರು ಸರಬರಾಜು ಮಾಡಿ ಬಡವರಿಗೆ ಸಹಾಯ ಹಸ್ತ ಚಾಚಿದೆ' ಎಂದು ಕಲ್ಕೆರೆ ನಿವಾಸಿ ನಾಗರತ್ನ ಹೇಳಿದರು.

'ಕಲ್ಕೆರೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರಿನ ಟ್ಯಾಂಕರ್‌ಗಳು ಬರಲು ಜಾಗವೇ ಇಲ್ಲ. ಪೈಪ್ ಮೂಲಕ ನೀರು ಸರಬರಾಜು ಮಾಡಿಸಿಕೊಳ್ಳಲು ಟ್ಯಾಂಕರ್ ಮಾಲೀಕರಿಗೆ ಅಧಿಕ ಹಣ ನೀಡಬೇಕಾಗುತ್ತದೆ' ಎಂದು ಕಲ್ಕೆರೆ ನಿವಾಸಿ ರೇಣುಕಾ ದೂರಿದರು.



ಕನಕನಗರದಲ್ಲಿ ಟ್ಯಾಂಕರ್ ನೀರಿಗೆ ಮೊರೆ ಹೋಗಿರುವುದು

ನೀರು ಸಿಗದಿದ್ದರೆ ಮನೆ ತೊರೆಯುವುದೊಂದೇ ದಾರಿ

ಕಲ್ಕೆರೆ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರವಿದೆ. ಕುಡಿಯುವ ನೀರಿನ ಸಮಸ್ಯೆ ಹೇಳತೀರದಾಗಿದೆ. ವಾರಕ್ಕೂ ಮೊದಲೇ ಟ್ಯಾಂಕರ್ ನೀರು ಬುಕ್ ಮಾಡಬೇಕು. ಆದರೂ, ನೀರು ಸಿಗುವ ಭರವಸೆ ಇಲ್ಲ. ನೀರಿನ ವಿಪರೀತ ಅಭಾವ ಹೀಗೇ ಮುಂದುವರಿದರೆ ಮನೆ ತೊರೆಯುವುದೊಂದೇ ಉಳಿದಿರುವ ದಾರಿ ಎಂದು ಕನಕನಗರ ಗೀತಾ ಆತಂಕ ವ್ಯಕ್ತಪಡಿಸಿದರು.

ಜಲ ಜಂಜಾಟ 2

ನೀರು ಮಿತ ಬಳಕೆಗೆ ಫಲಕ ಅಳವಡಿಕೆ

ನೀರಿನ ಮಿತ ಬಳಕೆ ಮಾಡಲು ಅಪಾರ್ಟ್‌ಮೆಂಟ್ ನಿವಾಸಿಗಳಲ್ಲಿ ಜಾಗೃತಿ ಮೂಡಿಸಲು ಫಲಕಗಳನ್ನು ಅಪಾರ್ಟ್‌ಮೆಂಟ್‌ನ ಜಾಗೃತ ಜನರು ಅಳವಡಿಸಿದ್ದಾರೆ.

'ದುಡ್ಡು ಕೊಟ್ಟರೆ ನೀರು ಸಿಗುತ್ತದೆ ಎನ್ನುವ ಭ್ರಮೆ ಕೆಲವರಿಗಿದೆ. ಆದರೆ, ಬೆಂಗಳೂರಿನಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. ಟ್ಯಾಂಕರ್ ಮಾಲೀಕರು ಎಲ್ಲ ಮೂಲಗಳಿಂದಲೂ ನೀರು ತುಂಬಿಸಿಕೊಂಡು ಬಂದು ಅಪಾರ್ಟ್‌ಮೆಂಟ್ ಇನ್ನಿತರ ಮನೆಗಳಿಗೆ ಸರಬರಾಜು ಮಾಡುತ್ತಿದ್ದಾರೆ. ನೀರಿನ ಮೂಲವೇ ಬತ್ತಿ ಹೋದರೆ ಸರಬರಾಜು ಮಾಡುವುದು ಕಷ್ಟ. ಈ ದೃಷ್ಟಿಯಿಂದ ನಿವಾಸಿಗಳಲ್ಲಿ ಜಾಗೃತಿಗೆ ಮುಂದಾಗಿ ಮಿತ ಬಳಕೆ ಮಾಡಲು ಆರಂಭಿಸಿದ್ದೇವೆ. ನಿತ್ಯ ಬಳಕೆ ಮಾಡುವ ನೀರಿನ ಪ್ರಮಾಣ ಕಡಿಮೆ ಮಾಡಿದ್ದೇವೆ. ನೀರು ಮಿತ ಬಳಕೆ ಕುರಿತು ನಾಮಫಲಕ ಅಳವಡಿಸಿದ್ದೇವೆ' ಎಂದು ರೋಹನ್ ಅಪಾರ್ಟ್‌ಮೆಂಟ್ ನಿವಾಸಿ ದಾಮೋದರನ್ ತಿಳಿಸಿದರು.


ನೀರಿನ ಸಂಗ್ರಹಣ ಘಟಕಗಳ ಮುಂದೆ ಜನಜಂಗುಳಿ

ನೀರಿನ ಬವಣೆ
ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ. ನಿಮ್ಮ ಪ್ರದೇಶದಲ್ಲಿಯೂ ನೀರಿನ ಬವಣೆ ಇದ್ದರೆ ಬರೆದು ಕಳುಹಿಸಿ
ವಾಟ್ಸ್‌ಆ್ಯಪ್ ನಂಬರ್: 9606038256

ಟ್ಯಾಂಕರ್ ನೀರೂ ಅನುಮಾನ


ದುಬಾರಿ ಹಣ ತೆತ್ತಾದರೂ ಸದ್ಯ ನೀರು ತರಿಸುತ್ತಿದ್ದೇವೆ. ಇದು ಹೀಗೇ ಮುಂದುವರಿದರೆ ಅವರಾದರೂ ಎಲ್ಲಿಂದ ತಂದು ಕೊಡುತ್ತಾರೆ? ಬಿಸಿಲು ಹೀಗೇ ಮುಂದುವರಿದರೆ ಟ್ಯಾಂಕರ್ ನೀರು ಸಿಗುವುದೂ ಅನುಮಾನ. ಇನ್ನೆರಡು ತಿಂಗಳಲ್ಲಿ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಲಿದೆ ಎಂದು ಯೋಚಿಸಿದರೆ ಭಯವಾಗುತ್ತದೆ.


ಸಂತೋಷ್, ಕನಕಗಿರಿ

ನೀರು ಖರೀದಿಸುವ ಶಕ್ತಿ ಇಲ್ಲ


ಬಡವರೇ ಹೆಚ್ಚಿರುವ ರಾಮಮೂರ್ತಿನಗರ ವಾರ್ಡ್‌ನಲ್ಲಿ ಹಣ ತೆತ್ತು ನೀರು ಖರೀದಿಸುವಷ್ಟು ಶಕ್ತಿ ಜನರಿಗಿಲ್ಲ. ಕೆಲವೊಂದಿಷ್ಟು ಸಮಾಜ ಸೇವಕರು ಟ್ರ್ಯಾಕ್ಟರ್, ಲಾರಿ ಟ್ಯಾಂಕರ್ ಮೂಲಕ ಉಚಿತವಾಗಿ ನೀರು ಸರಬರಾಜು ಮಾಡುತ್ತಿರುವುದರಿಂದ ಬದುಕು ಸಾಗಿದೆ.

ನಾಗರತ್ನ, ಕಲ್ಕೆರೆ ನಿವಾಸಿ

ಅಧಿಕಾರಿಗಳಿಂದ ಸರಿಯಾದ ಸ್ಪಂದನೆಯಿಲ್ಲ


ಕೊಳವೆಬಾವಿಗಳಲ್ಲಿ ನೀರು ಬತ್ತಿದೆ. ಬಿಬಿಎಂಪಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆಯಾಗುತ್ತಿದೆ. ಆದರೆ, ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ಟ್ಯಾಂಕರ್ ನೀರಿಗಾಗಿ ವಾರದ ಮೊದಲೇ ಬುಕ್ ಮಾಡಬೇಕು. ಅಧಿಕಾರಿಗಳಿಗೆ ಈ ಬಗ್ಗೆ ತಿಳಿಸಿದರೂ, ಸ್ಪಂದಿಸುತ್ತಿಲ್ಲ.


ರೇಣುಕಾ, ಕಲ್ಕೆರೆ ನಿವಾಸಿ

ನೀರು ಸರಬರಾಜು ಮಂಡಳಿ ಅಧಿಕಾರಿಗಳಿಂದ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ವಿಧಾನಸಭಾ ಕ್ಷೇತ್ರದ ಹೇರೋಹಳ್ಳಿ ವಾರ್ಡ್ ವ್ಯಾಪ್ತಿಯ ಕೆಂಪೇಗೌಡ ನಗರದಲ್ಲಿ ಉಂಟಾಗಿದ್ದ ನೀರಿನ ಸಮಸ್ಯೆಯನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸರಿಪಡಿಸಿದೆ.

ಕೆಂಪೇಗೌಡ ನಗರದಲ್ಲಿ ನೀರಿನ ಸಮಸ್ಯೆ ಉಂಟಾಗಿರುವ ಮಾಹಿತಿ ತಿಳಿಯುತ್ತಿದ್ದಂತೆ ಮಂಡಳಿ ಅಧಿಕಾರಿಗಳು ಸ್ಥಳಕ್ಕೆ ಬಂದು ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಕ್ರಮ ಕೈಗೊಂಡರು. ಬಳಿಕ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಸಮಸ್ಯೆ ಪರಿಶೀಲಿಸಿ, ಕ್ರಮ ಕೈಗೊಂಡರು.


ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಬಳಿ ಕುಡಿಯುವ ನೀರು ಸರಬರಾಜು ಮಾಡುವ ಪೈಪ್‌ಲೈನ್‌ಗೆ ಹಾನಿಯಾಗಿದ್ದು, ಬಿಡಬ್ಲ್ಯುಎಸ್‌ಎಸ್‌ಬಿ ಸಿಬ್ಬಂದಿ ದುರಸ್ತಿಗೊಳಿಸಿದರು.

ಅಂಬೇಡ್ಕರ್ ನಗರಕ್ಕೆ ನೀರು: ನಾಯಂಡಹಳ್ಳಿಯ ಪಂತರ್‌ಪಾಳ್ಯದ ಅಂಬೇಡ್ಕರ್ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಉದ್ಭವವಾಗಿರುವುದನ್ನು ಅರಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನಾಗರಿಕರೊಂದಿಗೆ ಚರ್ಚಿಸಿದರು. ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿದರು.

ವರದಿ ಪರಿಣಾಮ

ನೀರಿನ ಸಮಸ್ಯೆ ನಿವಾರಣೆಯಾಗುವವರೆಗೆ ಬಡಾವಣೆಗೆ ನಿತ್ಯ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುವುದು ಎಂದು ಭರವಸೆ ನೀಡಿದರು.

ಹೇರೋಹಳ್ಳಿ, ಅಂಬೇಡ್ಕರ್ ನಗರ ಸಹಿತ ವಿವಿಧೆಡೆ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ 'ಪ್ರಜಾವಾಣಿ' 'ಜಲ ಜಂಜಾಟ' ವಿಶೇಷ ವರದಿ ಮೂಲಕ ಗಮನ ಸೆಳೆದಿತ್ತು.

ಪೈಪ್‌ಗೆ ಹಾನಿ-ದುರಸ್ತಿ: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಬಳಿ ಕುಡಿಯುವ ನೀರು ಸರಬರಾಜು ಮಾಡುವ ಒಂದು ಸಾವಿರ ಎಂಎಂ ವ್ಯಾಸದ ಪೈಪ್‌ಲೈನ್‌ಗೆ ಗುರುವಾರ ಹಾನಿಯಾಗಿತ್ತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳು ಕಾರ್ಮಿಕರೊಡಗೂಡಿ ನಿರಂತರ ನಾಲ್ಕು ತಾಸು ಕೆಲಸ ಮಾಡಿ ದುರಸ್ತಿಗೊಳಿಸಿದರು. ರಾಜರಾಜೇಶ್ವರಿ ನಗರಕ್ಕೆ ಮಹಾಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ನೀರು ಸರಬರಾಜಿನಲ್ಲಿ ಸಮಸ್ಯೆಯಾಗದಂತೆ ಕಾರ್ಯನಿರ್ವಹಿಸಿದರು.

ಸುಲಿಗೆಗೆ ಅಂಕುಶ; ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶ

ಖಾಸಗಿ ಟ್ಯಾಂಕರ್ ನೀರಿಗೆ ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಯ ಖಾಸಗಿ ಟ್ಯಾಂಕರ್‌ಗಳಿಗೆ ದರ ನಿಗದಿ ಮಾಡಿ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಅವರು ಆದೇಶ ಹೊರಡಿಸಿದ್ದಾರೆ.

ಬೇಸಿಗೆ ಶುರುವಾಗುತ್ತಿದ್ದಂತೆ ನೀರಿನ ಅಭಾವ ಉಂಟಾಗಿದ್ದು, ಬಹುತೇಕರು ಟ್ಯಾಂಕರ್ ಮೊರೆ ಹೋಗುತ್ತಿದ್ದಾರೆ. ಬೇಡಿಕೆ ಹೆಚ್ಚಾಗುತ್ತಿದ್ದಂತೆ ಟ್ಯಾಂಕರ್ ಮಾಲೀಕರು, ದುಪ್ಪಟ್ಟು ದರ ವಸೂಲಿ ಮಾಡುತ್ತಿರುವುದಾಗಿ ಸಾರ್ವಜನಿಕರು ಆರೋಪಿಸಿದ್ದರು.

ಸಾರ್ವಜನಿಕರ ಒತ್ತಾಯಗಳನ್ನು ಉಲ್ಲೇಖಿಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದ ಜಲಮಂಡಳಿ ಅಧಿಕಾರಿಗಳು, ನೀರಿನ ಟ್ಯಾಂಕರ್ ದರ ನಿಗದಿಪಡಿಸುವಂತೆ ಕೋರಿದ್ದರು. ಅದೇ ಮನವಿ ಆಧರಿಸಿ ಜಿಲ್ಲಾಧಿಕಾರಿಯವರು ಇದೀಗ ಆದೇಶ ಹೊರಡಿಸಿದ್ದಾರೆ.

ನೀರಿನ ಟ್ಯಾಂಕರ್‌ಗಳಿಗೆ ನಿಗದಿಪಡಿಸಿರುವ ದರ

ಟ್ಯಾಂಕರ್	5 ಕಿ.ಮೀ ವ್ಯಾಪ್ತಿವರೆಗೆ	5 ಕಿ.ಮೀ.ನಿಂದ 10 ಕಿ.ಮೀ.ವರೆಗೆ
6,000 ಲೀಟರ್	₹600	₹750
8,000 ಲೀಟರ್	₹700	₹850
12,000 ಲೀಟರ್	₹1,000	₹1,200



ಸಾಂದರ್ಭಿಕ ಚಿತ್ರ

ಎಲ್ಲ ತಾಲ್ಲೂಕು ಬರಪೀಡಿತ: '2023–24ನೇ ಸಾಲಿನ ಮುಂಗಾರಿನಲ್ಲಿ ಬೆಂಗಳೂರು ನಗರ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ಜಿಲ್ಲೆಯಲ್ಲಿ ಕುಡಿಯುವ ನೀರು ಪೂರೈಸಲು 200 ನೀರಿನ ಟ್ಯಾಂಕರ್ ನೀಡುವಂತೆ ಹಾಗೂ ದರ ನಿಗದಿ ಮಾಡುವಂತೆ ಜಲಮಂಡಳಿಯವರು ಕೋರಿದ್ದರು. ಇದರನ್ವಯ ತಾಂತ್ರಿಕ ಸಮಿತಿಯನ್ನು ರಚಿಸಿ ದರ ನಿಗದಿ ಮಾಡಲಾಗಿದೆ. ದರಕ್ಕೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನ್ವಯವಾಗಲಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಆದೇಶ ಉಲ್ಲಂಘಿಸಿದರೆ ಕ್ರಮ ಏನು?'

'ತಾಂತ್ರಿಕ ಸಮಿತಿ ವರದಿಯಂತೆ, ಕುಡಿಯುವ ನೀರು ಸರಬರಾಜಿಗೆ ಖಾಸಗಿ ಟ್ಯಾಂಕರ್‌ಗಳ ದರಗಳನ್ನು ನಿಗದಿಪಡಿಸಲಾಗಿದೆ' ಎಂದಷ್ಟೇ ಜಿಲ್ಲಾಧಿಕಾರಿಯವರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ಆದರೆ, ಆದೇಶ ಪಾಲಿಸದಿದ್ದರೆ ಮಾಲೀಕರ ವಿರುದ್ಧ ಯಾವ ಕ್ರಮ? ಎಂಬುದನ್ನು ಉಲ್ಲೇಖಿಸಿಲ್ಲ.

'ದುಪ್ಪಟ್ಟು ದರ ವಸೂಲಿ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳು, ಜನರ ಬಳಿ ಬಂದು ಕಷ್ಟ ಕೇಳಬೇಕು. ರಸ್ತೆಗೆ ಇಳಿದು ಟ್ಯಾಂಕರ್‌ಗಳ ಪರಿಶೀಲನೆ ನಡೆಸಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದರು.

ಶಾಲೆಗಳಿಗೂ ತಟ್ಟಿದ ನೀರಿನ ಬವಣೆ

ಬೆಂಗಳೂರು: ನೀರಿನ ಸಮಸ್ಯೆ ನಗರದ ಶಾಲೆಗಳಿಗೂ ತಟ್ಟಿದ್ದು, ಶೌಚಾಲಯಗಳ ಸ್ವಚ್ಛತೆಗೂ ಸಮಸ್ಯೆಯಾಗಿದೆ.

ಕೊಳವೆಬಾವಿಗಳು ಬತ್ತಿದ್ದು, ಬೇಡಿಕೆ ಹೆಚ್ಚಿರುವ ಕಾರಣ ಖಾಸಗಿ ನೀರಿನ ಟ್ಯಾಂಕರ್‌ಗಳು ಸಿಗುತ್ತಿಲ್ಲ. 800ರಿಂದ 1000 ವಿದ್ಯಾರ್ಥಿಗಳ ಸಾಮರ್ಥ್ಯವಿರುವ ಶಾಲೆಗೆ ದಿನಕ್ಕೆ ಸುಮಾರು 5 ಸಾವಿರ ಲೀಟರ್ ನೀರು ಬೇಕಾಗುತ್ತದೆ. ಅಗತ್ಯ ನೀರು ಪೂರೈಸುವಂತೆ ಖಾಸಗಿ ಶಾಲೆಗಳ ಸಂಘಟನೆಗಳು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಮನವಿ ಮಾಡಿವೆ. ಬಹುತೇಕ ಮಕ್ಕಳು ಮನೆಯಿಂದಲೇ ಕುಡಿಯುವ ನೀರು ತರುವುದರಿಂದ ಸಮಸ್ಯೆ ಇಲ್ಲ. ನೈರ್ಮಲ್ಯ ಕಾಪಾಡಿಕೊಳ್ಳಲು ಹೆಚ್ಚು ವರಿ ನೀರಿನ ಅಗತ್ಯವಿದೆ ಎಂದು ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಹೇಳಿದ್ದಾರೆ.

ಕುಡಿಯುವ ನೀರು: ಅನ್ಯ ಉದ್ದೇಶಕ್ಕೆ ಬಳಕೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕುಡಿಯುವ ನೀರನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡುವುದನ್ನು ನಿಷೇಧಿಸಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಆದೇಶ ಹೊರಡಿಸಿದೆ. ಆದೇಶ ಉಲ್ಲಂಘಿಸಿದರೆ ದಂಡ ವಿಧಿಸಲಾಗುವುದು ಎಂದು ತಿಳಿಸಿದೆ.


ವಿ. ರಾಮ್ ಪ್ರಸಾತ್ ಮನೋಹರ್

ಕುಡಿಯುವ ನೀರನ್ನು ವಾಹನಗಳ ಸ್ವಚ್ಛತೆಗೆ, ಕೈತೋಟಕ್ಕೆ, ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ, ಮನೋರಂಜನ ಕಾರಂಜಿಗಳಿಗೆ ಬಳಸುವಂತಿಲ್ಲ. ಸಿನಿಮಾ ಮಂದಿರ ಮತ್ತು ಮಾಲ್‌ಗಳಲ್ಲಿ ಕುಡಿಯುವ ನೀರಿನ ಹೊರತು ಇನ್ನಿತರೆ ಬಳಕೆಗೆ, ರಸ್ತೆ ನಿರ್ಮಾಣ ಮತ್ತು ಸ್ವಚ್ಛತೆಗೆ ಬಳಸುವಂತಿಲ್ಲ ಎಂದು ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಆದೇಶದಲ್ಲಿ ತಿಳಿಸಿದ್ದಾರೆ.

ಕುಡಿಯುವ ನೀರನ್ನು ಅನ್ಯ ಉದ್ದೇಶಕ್ಕೆ ಬಳಸಿದರೆ ಅಂಥವರ ವಿರುದ್ಧ ಜಲಮಂಡಳಿಯ ಕಾಯ್ದೆ 1964ರ ಕಲಂ 109ರಂತೆ ₹ 5 ಸಾವಿರ ದಂಡ ವಿಧಿಸಲಾಗುವುದು. ಈ ಉಲ್ಲಂಘನೆಯು ಮರುಕಳಿಸಿದಲ್ಲಿ ದಂಡ ಮೊತ್ತದ ಜೊತೆಗೆ ಹೆಚ್ಚುವರಿಯಾಗಿ ನಿತ್ಯ ₹500 ದಂಡ ಹಾಕಲಾಗುವುದು. ನಿಯಮ ಉಲ್ಲಂಘಿಸುತ್ತಿರುವುದು ಕಂಡು ಬಂದಲ್ಲಿ ಸಾರ್ವಜನಿಕರು ಮಂಡಳಿಯ ಕಾಲ್ ಸೆಂಟರ್ ಸಂಖ್ಯೆ: 1916ಕ್ಕೆ ಕರೆ ಮಾಡಿ ತಿಳಿಸಬಹುದು ಎಂದು ಮನವಿ ಮಾಡಿದ್ದಾರೆ.

ಬೆಂಗಳೂರು ನಗರದಲ್ಲಿರುವ ಕಾಯಂ ವಾಸಿಗಳು ಹಾಗೂ ಬಂದು ಹೋಗುವವರು ಸೇರಿ ಸುಮಾರು 1.40 ಕೋಟಿ ಜನಸಂಖ್ಯೆ ಇದೆ. ಎಲ್ಲರಿಗೂ ಕುಡಿಯುವ ನೀರನ್ನು ಪೂರೈಕೆ ಮಾಡುವುದು ಅವಶ್ಯವಾಗಿರುತ್ತದೆ. ಪ್ರಸ್ತುತ ನಗರದಲ್ಲಿ ನಿತ್ಯ ಉಷ್ಣಾಂಶ ಏರುತ್ತಿದೆ. ಮಳೆಯ ಕೊರತೆಯಿಂದಾಗಿ ಅಂತರ್ಜಲ ಕುಸಿದಿದೆ. ಹಾಗಾಗಿ, ನೀರು ವ್ಯರ್ಥ ಮಾಡುವುದನ್ನು ತಡೆಗಟ್ಟುವುದು ಅವಶ್ಯಕವಾಗಿದೆ. ಆದ್ದರಿಂದ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ನೀರಿನ ಸಮಸ್ಯೆ: ವಾರ್ಡ್‌ವಾರು ನೋಡಲ್ ಅಧಿಕಾರಿಗಳ ನಿಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ರಾಜರಾಜೇಶ್ವರಿ ವಲಯದಲ್ಲಿ ನೀರಿನ ಅಭಾವ ಹೆಚ್ಚಾಗಿದೆ. ಈ ಸಮಸ್ಯೆಯನ್ನು ನಿರ್ವಹಿಸಲು ಈ ವಲಯದ 14 ವಾರ್ಡ್‌ಗಳಿಗೆ 14 ನೋಡಲ್ ಅಧಿಕಾರಿಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನಿಯೋಜಿಸಿದ್ದಾರೆ.

ಬೆಂಗಳೂರು ಜಲಮಂಡಳಿ ಮತ್ತು ಬಿಬಿಎಂಪಿಯ ಅಧಿಕಾರಿಗಳು ತುರ್ತು ಕ್ರಮಗಳನ್ನು ಕೈಗೊಳ್ಳಲು, ಸಮಸ್ಯೆ ಬಗೆಹರಿಸಲು ಈ ನಿಯೋಜನೆ ಮಾಡಲಾಗಿದೆ. ನೋಡಲ್ ಅಧಿಕಾರಿಗಳೊಂದಿಗೆ ಜಲಮಂಡಳಿಯ ಅಧಿಕಾರಿಗಳು ಕೆಲಸ ಮಾಡಲಿದ್ದಾರೆ ಎಂದು ಆಯುಕ್ತರು ತಿಳಿಸಿದ್ದಾರೆ.

ಅಧಿಕಾರಿಗಳ ವಿವರ

ವಾರ್ಡ್	ನೋಡಲ್ ಅಧಿಕಾರಿ	ಮೊಬೈಲ್ ಸಂಖ್ಯೆ	ಜಲಮಂಡಳಿ ಅಧಿಕಾರಿ	ಮೊಬೈಲ್ ಸಂಖ್ಯೆ
ಜಾಲಹಳ್ಳಿ	ಹನುಮಂತರಾಯ	8105005285	ನಾಗರಾಜ್	9686448013
ಜೆ.ಪಿ.ಪಾರ್ಕ್	ವಿಘ್ನೇಶ್ವರ್	8277032015	ಲಕ್ಷ್ಮೀನರಸಿಂಹಯ್ಯ	9845444495
ಯಶವಂತಪುರ	ಅರುಣ್‌ಕುಮಾರ್	9448882642	ಕಿಶೋರ್ ಕೆ.ಎಸ್.	8217296837
ಎಚ್‌ಎಂಟಿ	ರಮೇಶ್	9480735211	ಕಾರ್ತಿಕ್	7026328863
ಲಕ್ಷ್ಮೀದೇವಿನಗರ	ವರನಾರಾಯಣ	9066745942	ತೇಜಸ್	9740984166
ಲಗ್ಗೆರೆ	ಬಿ.ಕೆ. ದಿನೇಶ್‌ಕುಮಾರ್	9448719897	ನಂದೀಶ್ ಕುಮಾರ್ ಎಸ್.	9632435522
ಕೊಟ್ಟಿಗೆಪಾಳ್ಯ	ಆರೀಫ್	9900260607	ಹರ್ಷ ವಿ.	9986555502
ಜ್ಞಾನಭಾರತಿ	ಮಧು ಎಲ್.ಎಸ್.	6363445710	ವಿಶ್ವನಾಥ್ ಎಂ.ಎಸ್.	9900629915
ಆರ್.ಆರ್.ನಗರ	ದೀಪಕ್ ಕೆ.	8147351991	ಕಾವ್ಯ	8861938538
ದೊಡ್ಡಬಿದರಕಲ್ಲು	ಚಿಕ್ಕಗೂಳಿಗೌಡ	9845157276		
ಹೇರೋಹಳ್ಳಿ	ಬಿ.ರಮೇಶ್	9480688224	ಸುಧಾ ಎಚ್.	9535182299
ಉಲ್ಲಾಳು	ಸಿದ್ದರಾಜೇಗೌಡ	9980806986	ಚಂದನ ಎಂ.ಎನ್.	9535252015
ಕೆಂಗೇರಿ	ಗುರುಪ್ರಸಾದ್	9986238606	ರಾಹುಲ್ ರಾಥೋಡ್	7026266677
ಹೆಮ್ಮಿಗೆಪುರ	ಸಾಮಂದಯ್ಯ ವಿ.	9986693857	ಹನುಮಂತರಾಜು	866034057

ವಿದ್ಯುದಾಘಾತ: 14 ಮಕ್ಕಳಿಗೆ ಗಾಯ

ಕೋಟಾ (ರಾಜಸ್ಥಾನ, ಪಿಟಿಐ): ಶಿವರಾತ್ರಿ ಸಂದರ್ಭದಲ್ಲಿ ಶುಕ್ರವಾರ 'ಶಿವ ಭಾರತ' ಮೆರವಣಿಗೆಯಲ್ಲಿ ಸಾಗುತ್ತಿದ್ದಾಗ ವಿದ್ಯುದಾಘಾತದಿಂದ 14 ಮಕ್ಕಳು ಗಾಯಗೊಂಡಿದ್ದಾರೆ. ಇವರಲ್ಲಿ ಇಬ್ಬರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಹತ್ತರಿಂದ ಹದಿನಾರು ವರ್ಷ ವಯಸ್ಸಿನ ಮಕ್ಕಳು ಕುನ್ಹಾರಿ ಪೊಲೀಸ್ ಠಾಣೆಯ ವ್ಯಾಪ್ತಿಯ ಪ್ರದೇಶದಲ್ಲಿ ಶುಕ್ರವಾರ ಮಧ್ಯಾಹ್ನ ಮೆರವಣಿಗೆಯಲ್ಲಿ ಸಾಗುತ್ತಿದ್ದರು. 22 ಅಡಿ ಉದ್ದದ ಕಬ್ಬಿಣದ ಧ್ವಜಕಂಬವನ್ನು ಬಾಲಕನೊಬ್ಬ ಹಿಡಿದಿದ್ದ. ಆ ಧ್ವಜದ ಮೇಲ್ಭಾಗವು ಹೈ ಟೆನ್ಷನ್ ತಂತಿಗೆ ತಗುಲಿದ್ದೇ ವಿದ್ಯುದಾಘಾತ ವಾಯಿತು. ಆ ಬಾಲಕನಿಗೆ ಶೇ 100ರಷ್ಟು ಸುಟ್ಟಗಾಯಗಳಾಗಿವೆ. ಅವನನ್ನು ಪಾರು ಮಾಡಲು ಯತ್ನಿಸಿದ ಇನ್ನೊಬ್ಬ ಬಾಲಕನಿಗೆ ಶೇ 50ರಷ್ಟು ಸುಟ್ಟಗಾಯಗಳು ಉಂಟಾಗಿವೆ. ಉಳಿದ 12 ಮಕ್ಕಳಿಗೆ ಶೇ 50ಕ್ಕಿಂತ ಕಡಿಮೆ ಗಾಯಗಳಾಗಿವೆ ಎಂದು ಕೋಟದ ಪೊಲೀಸ್ ವರಿಷ್ಠಾಧಿಕಾರಿ ಅಮೃತಾ ದುಹಾನ್ ತಿಳಿಸಿದರು.

ಗಾಯಗೊಂಡವರನ್ನೆಲ್ಲ ಎಂಬಿಎಸ್ ಆಸ್ಪತ್ರೆಗೆ ಸೇರಿಸಲಾಗಿದೆ.

ಬೆಂಗಳೂರು ರೇಸ್

ವಿಕ್ಟೋರಿಯಾ ದೊರೆಸಾನಿ ಗೆಲ್ಲುವ ನಿರೀಕ್ಷೆ

ಸರ್ ಚಾರ್ಲ್ಸ್ ಟೊಧುಂಟರ್ ಮೆಮೋರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿಕ್ಟೋರಿಯಾ ದೊರೆಸಾನಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:


1ನೇ ರೇಸ್: ಸಿಯೇನಾ ಪ್ರಿನ್ಸೆಸ್ 7, ಹಬಿಬ್ಟಿ 3, ಜೂನ್ 4
2ನೇ ರೇಸ್: ಅಕ್ವಮೆಟಿಕ್ 2, ಸ್ಟಾರ್ಮಿ ಓಷನ್ 3, ಸ್ಪೆಕ್ಟಾಕ್ಯುಲ್ 1
3ನೇ ರೇಸ್: ಲಾ ಮೆಕ್ವಿನ್ 3, ಮೆಹ್ರಾ 7, ರಾಕಿಂಗ್ ಗರ್ಲ್ 8
4ನೇ ರೇಸ್: ಸೆಕ್‌ಮೆಟ್ 1, ಇಕೊ ಫ್ರೆಂಡ್ಲಿ 7, ಆಂಟಿಲೋಪ್ 6
5ನೇ ರೇಸ್: ವಿಕ್ಟೋರಿಯಾ ದೊರೆಸಾನಿ 3, ನಾಟಿ ಚಾಲೆಂಜರ್ 7, ವೆಸ್ಟ್ ಬ್ರೂಕ್ 1
6ನೇ ರೇಸ್: ಸಿನ್ಸಿಯಾರಿಟಿ 9, ನಾರ್ವಿಜಿಯನ್ ವುಡ್ 4, ನೆವೆಡ ಗೋಲ್ಡ್ 7
7ನೇ ರೇಸ್: ಒಂಬುಡ್ಸ್‌ಮ್ಯಾನ್ 7, ಲಾಟರ್‌ಬ್ರುನೆನ್ 1, ವಾರ್ ಟ್ರಯಲ್ 9

ಉತ್ತಮ ಬೆಟ್: ಲಾ ಮೆಕ್ವಿನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಿಧನ ವಾರ್ತೆ

ಡಾ.ರೆಘುರಾಜ್ ನಮಶಿವಾಯಂ


ಬೆಂಗಳೂರು:
ಬೆಂಗಳೂರು: ಎನ್‌ಟಿಟಿಎಫ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷ ಡಾ.ರೆಘುರಾಜ್ ನಮಶಿವಾಯಂ(82) ಅವರು ಮಾರ್ಚ್ 7 ಗುರುವಾರದಂದು ನಿಧನರಾಗಿದ್ದಾರೆ. ಎನ್‌ಟಿಟಿಎಫ್‌ಗೆ ಹೊಸ ರೂಪು ನೀಡಿ, ಸಂಸ್ಥೆಯ ಏಳ್ಗೆಗೆ ರೆಘುರಾಜ್ ಅವರು ಅಪಾರ ಶ್ರಮಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ. ರೆಘುರಾಜ್ ಅವರ ನಿಧನಕ್ಕೆ ಎನ್‌ಟಿಟಿಎಫ್ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.


ಶಿವರಾತ್ರಿ ಅಂಗವಾಗಿ ಚಿಕ್ಕಬಳ್ಳಾಪುರದ ಈಶಾ ಯೋಗ ಕೇಂದ್ರಕ್ಕೆ ಭೇಟಿ ನೀಡಿದ್ದ ಭಕ್ತರು

ಶಿವರಾತ್ರಿ: ಈಶಾ ಯೋಗ ಕೇಂದ್ರಕ್ಕೆ ಭಕ್ತರ ದಂಡು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಅಗಲಗುರ್ಕಿಯ ಈಶ ಯೋಗ ಕೇಂದ್ರಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದರು. ಕೊಯಮತ್ತೂರಿನ ಈಶ ಯೋಗ-ಕೇಂದ್ರದಲ್ಲಿ ನಡೆದ ಮಹಾಶಿವರಾತ್ರಿ ಆಚರಣೆಯು ನೇರ ಪ್ರಸಾರವನ್ನು ರಾತ್ರಿ ಸೇರಿದ್ದ ಭಕ್ತರು ಕಣ್ತುಂಬಿಕೊಂಡರು. ರಾಸುಗಳ ಪ್ರದರ್ಶನವೂ ಇತ್ತು. ಅಪಾರ ಸಂಖ್ಯೆಯಲ್ಲಿ ಬಂದ ಜನರು ವಿವಿಧ ತಳಿಗಳ ರಾಸುಗಳನ್ನು ಕಣ್ತುಂಬಿಕೊಂಡರು.

ಬಿಎಂಟಿಸಿಯು ಬೆಂಗಳೂರಿನಿಂದ ನಂದಿ, ರಂಗಸ್ಥಳ ಮತ್ತು ಈಶಾ ಯೋಗ ಕೇಂದ್ರಕ್ಕೆ ವಿಶೇಷ ಪ್ರವಾಸದ ಪ್ಯಾಕೇಜ್ ನೀಡಿತ್ತು. 100 ಬಿಎಂಟಿಸಿ ಬಸ್‌ಗಳು ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದ ನಡುವೆ ಸಂಚರಿಸಿವು. ರಾತ್ರಿಯ ನಡೆದ ಕಾರ್ಯಕ್ರಮಗಳನ್ನು ನೋಡಲು ಬೆಂಗಳೂರು ಸೇರಿ ದಂತೆ ರಾಜ್ಯದ ನಾನಾ ಕಡೆಯ ಭಕ್ತರು ಯೋಗ ಕೇಂದ್ರಕ್ಕೆ ಬಂದರು.

ಪ್ರತಾಪ ಸಿಂಹ ವಿರುದ್ಧ ಮಾಧ್ಯಮ ಗೋಷ್ಠಿ ಎಂ. ಲಕ್ಷ್ಮಣ್‌ಗೆ ಹೈಕೋರ್ಟ್ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ವಿರುದ್ಧ ಮಾಧ್ಯಮ ಗೋಷ್ಠಿ ನಡೆಸದಂತೆ ಹಾಗೂ ಯಾವುದೇ ಮಾಧ್ಯಮಗಳ ಮೂಲಕ ಮಾನಹಾನಿ ಹೇಳಿಕೆ ಪ್ರಕಟಿಸದಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷಣ್ ಅವರಿಗೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ಈ ಸಂಬಂಧ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಇದೇ 6ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಪ್ರತಾಪ್ ಸಿಂಹ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಪ್ರತಾಪ ಸಿಂಹ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, "ಕಾಂಗ್ರೆಸ್ ಮುಖಂಡರಾದ ಲಕ್ಷ್ಮಣ್ ಅವರು ಮೇಲಿಂದ ಮೇಲೆ ಪ್ರತಾಪ್ ಸಿಂಹ ವಿರುದ್ಧ ದೋಷಪೂರಿತ ಮತ್ತು ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ. ಮಾಧ್ಯಮ ಗೋಷ್ಠಿ ನಡೆಸುವ ಮೂಲಕ ಪುಕಾರು ಎಬ್ಬಿಸುವ ಆರೋಪಗಳನ್ನು ಮಾಡುತ್ತಿದ್ದಾರೆ. ಇವು ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗುತ್ತಿವೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಈ ಆರೋಪಗಳು ಪ್ರತಾಪ್ ಸಿಂಹ ಅವರ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುವುದಲ್ಲದೇ ಅವರ ರಾಜಕೀಯ ಬದುಕಿಗೂ ಹಾನಿ ಉಂಟು ಮಾಡುತ್ತವೆ" ಎಂದರು.

"ಲಕ್ಷ್ಮಣ್ ಅವರು ಇದುವರೆಗೂ ಯಾವುದೇ ಸಕ್ಷಮ ಪ್ರಾಧಿಕಾರ ಅಥವಾ ನ್ಯಾಯಾಲಯದಲ್ಲಿ ಪ್ರತಾಪ್ ಸಿಂಹ ವಿರುದ್ಧ ದೂರು ದಾಖಲು ಮಾಡಿಲ್ಲ. ವಾಕ್ ಸ್ವಾತಂತ್ರ್ಯ ಬಳಸಿ ಪ್ರತಾಪ್ ಸಿಂಹ ಅವರ ವರ್ಚಸ್ಸಿಗೆ ಹಾನಿಯುಂಟು ಮಾಡುತ್ತಿದ್ದಾರೆ. ಮಾನಹಾನಿಯ ಮಾಧ್ಯಮ ಗೋಷ್ಠಿ ನಡೆಸಿದ್ದಕ್ಕಾಗಿ ಲಕ್ಷ್ಮಣ್ ವಿರುದ್ಧ ಪ್ರತಾಪ್ ಸಿಂಹ ಅವರು ಈಗಾಗಲೇ ಎರಡು ಖಾಸಗಿ ದೂರುಗಳನ್ನು ದಾಖಲಿಸಿದ್ದು, ಅವುಗಳು ವಿಚಾರಣೆಗೆ ಬಾಕಿ ಇವೆ" ಎಂದು ವಿವರಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, "ಈ ಮೇಲ್ಮನವಿ ಇತ್ಯರ್ಥವಾಗುವತನಕ ಪ್ರತಿವಾದಿ ಲಕ್ಷ್ಮಣ್ ಅವರು ಅರ್ಜಿದಾರ ಪ್ರತಾಪ್ ಸಿಂಹ ಅವರ ವಿರುದ್ಧ ಯಾವುದೇ ರೀತಿಯ ಮಾಧ್ಯಮ ಗೋಷ್ಠಿ, ಪ್ರಸಾರ, ಹಂಚಿಕೆಯನ್ನು ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮಗಳ ಅಥವಾ ಮತ್ತಾವುದೇ ಮಾಧ್ಯಮದ ಮೂಲಕ ಪ್ರಸಾರ ಇಲ್ಲವೇ ಪ್ರಕಟ ಮಾಡಬಾರದು" ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಲಕ್ಷ್ಮಣ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ನಿಯಮ ರೂಪಿಸಿ ದಶಕವಾದರೂ ಅಧಿಸೂಚನೆ ಹೊರಬಿದ್ದಿಲ್ಲ; ನೇರ ನೇಮಕಾತಿಗೆ ಪಿಯು ಇಲಾಖೆ ನಿರಾಸಕ್ತಿ

ಪ್ರಾಂಶುಪಾಲರ ಹುದ್ದೆ; ನಡೆಯದ ಪರೀಕ್ಷೆ!

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪದವಿಪೂರ್ವ ಕಾಲೇಜು ಪ್ರಾಂಶುಪಾಲರ ಹುದ್ದೆಗಳಿಗೆ ಶೇ 25ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಯಮ ರೂಪಿಸಿ, ದಶಕ ಕಳೆದರೂ ನೇಮಕಾತಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿಲ್ಲ.

ರಾಜ್ಯದಲ್ಲಿ 1,232 ಸರ್ಕಾರಿ ಪದವಿಪೂರ್ವ ಕಾಲೇಜುಗಳಿವೆ. ಪ್ರಸ್ತುತ 619 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಪಿಯು ಉಪನ್ಯಾಸಕರಿಗೆ ಬಡ್ತಿ ಮೂಲಕ ನೀಡಲು ಮೀಸಲಿರುವ ಶೇ 75ರಷ್ಟು ಹುದ್ದೆಗಳನ್ನು ಈಗಾಗಲೇ ಹಲವು ಬಾರಿ ಭರ್ತಿ ಮಾಡಲಾಗಿದೆ. ಪ್ರಸ್ತುತ ಖಾಲಿ ಇರುವ 311 ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲು ಈಗಾಗಲೇ ಸೇವಾ ಜ್ಯೇಷ್ಠತಾ ಪಟ್ಟಿಯನ್ನೂ ಪ್ರಕಟಿಸಲಾಗಿದೆ. ಆದರೆ, ನೇರ ನೇಮಕಾತಿಗೆ ಮೀಸಲಿರುವ ಶೇ 25ರಷ್ಟು ಹುದ್ದೆಗಳನ್ನು 2014ರಿಂದ ಭರ್ತಿ ಮಾಡದ ಕಾರಣ 308 ಹುದ್ದೆಗಳು ಖಾಲಿ ಉಳಿದಿವೆ.

2014ಕ್ಕೂ ಮೊದಲು ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಯಾಗುತ್ತಿದ್ದ ಪ್ರಾಂಶುಪಾಲರ ಶೇ 100 ಹುದ್ದೆಗಳನ್ನೂ ಉಪನ್ಯಾಸಕರ ಸೇವಾ ಜ್ಯೇಷ್ಠತೆಯ ಆಧಾರದಲ್ಲಿ ಭರ್ತಿ ಮಾಡಲಾಗುತ್ತಿತ್ತು. ವೃಂದ ಮತ್ತು ನೇಮಕಾತಿ ನಿಯಮಗಳಿಗೆ 2014ರಲ್ಲಿ ತಿದ್ದುಪಡಿ ಮಾಡಿ ಶೇ 25ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಯಮ ರೂಪಿಸಲಾಗಿತ್ತು. ಪಿಯು ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕನಿಷ್ಠ 10 ವರ್ಷ ಪೂರ್ಣಗೊಳಿಸಿದವರು ಸ್ಪರ್ಧಾತ್ಮಕ ಪರೀಕ್ಷೆ ಬರೆದು ಪ್ರಾಂಶುಪಾಲರಾಗಿ ನೇಮಕವಾಗಲು ಅವಕಾಶ ಕಲ್ಪಿಸಲಾಗಿತ್ತು.

ವಿಳಂಬಕ್ಕೆ ನಾನಾ ಕಾರಣ: ಆದೇಶ ಹೊರಡಿಸಿದ ವರ್ಷ ನೇರ ನೇಮಕಾತಿಗೆ ಖಾಲಿ ಇದ್ದ ಹುದ್ದೆಗಳು ಕೇವಲ 28. ಹಾಗಾಗಿ, ಸರ್ಕಾರ ಅಧಿಸೂಚನೆ ಹೊರಡಿಸಿರಲಿಲ್ಲ. 2017–18ರಲ್ಲಿ 200 ಹುದ್ದೆಗಳು ಖಾಲಿ ಇದ್ದು, ಅಧಿಸೂಚನೆ ಪ್ರಕ್ರಿಯೆಗಳು ಆರಂಭವಾಗಿದ್ದವು. ಆದರೆ, ಪರೀಕ್ಷೆಯನ್ನು ವಿಷಯವಾರು ನಡೆಸಬೇಕೆ? ಅಥವಾ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ರೀತಿ ಏಕರೂಪದಲ್ಲಿ ನಡೆಸಬೇಕೆ ಎಂಬ ಕುರಿತು ಇಲಾಖೆಯ ಅಧಿಕಾರಿಗಳು ಸ್ಪಷ್ಟ ನಿರ್ಧಾರಕ್ಕೆ ಬರಲು ಸಾಧ್ಯವಾಗದೇ ನೇಮಕಾತಿ ಪ್ರಕ್ರಿಯೆಗಳು ನನೆಗುದಿಗೆ ಬಿದ್ದಿದ್ದವು.

'ಪಿಯು ಕಾಲೇಜುಗಳಲ್ಲಿ 34 ವಿಷಯಗಳ ಉಪನ್ಯಾಸಕರಿದ್ದಾರೆ. ವಿಷಯವಾರು ಪರೀಕ್ಷೆ ನಡೆಸಿದರೆ ವಿಷಯವಾರು ಉಪನ್ಯಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಬಹುದು. ಹಾಗಾಗಿ, ಏಕ ರೂಪದ ಸ್ಪರ್ಧಾ ಪರೀಕ್ಷೆ ನಡೆಸಲು ಈಚೆಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ನೇಮಕಾತಿ ಪ್ರಕ್ರಿಯೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವ ಕಳುಹಿಸಲು ಚರ್ಚೆಗಳು ನಡೆದಿವೆ. ಶೀಘ್ರ ನಿರ್ಧಾರ ಹೊರಬೀಳಲಿದೆ' ಎಂದು ಹೆಸರು ಹೇಳಲು ಇಚ್ಛಿಸದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಅಂಕಿ ಅಂಶಗಳು

1,232	ಪಿಯು ಪ್ರಾಂಶುಪಾಲರ ಒಟ್ಟು ಹುದ್ದೆಗಳು
619	ಖಾಲಿ ಹುದ್ದೆಗಳು
308	ನೇರ ನೇಮಕಾತಿಗೆ ಮೀಸಲು
311	ಬಡ್ತಿ ಮೂಲಕ ಭರ್ತಿ ಮಾಡಬೇಕಿರುವ ಹುದ್ದೆಗಳು

ಸೇವಾ ಜ್ಯೇಷ್ಠತಾ ಪಟ್ಟಿಗೂ ಆಕ್ಷೇಪ

ಪ್ರಸ್ತುತ ಖಾಲಿ ಇರುವ 311 ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲು ಪದವಿಪೂರ್ವ ಶಿಕ್ಷಣ ಇಲಾಖೆ ಸೇವಾ ಜ್ಯೇಷ್ಠತಾ ಪಟ್ಟಿ ಬಿಡುಗಡೆ ಮಾಡಿದೆ. 2019ರಲ್ಲಿ ಬಿಡುಗಡೆ ಮಾಡಿದ್ದ ತಾತ್ಕಾಲಿಕ ಪಟ್ಟಿಗೂ, ಈಗ ಬಿಡುಗಡೆ ಮಾಡಿರುವ ಪಟ್ಟಿಗೂ ಸಾಕಷ್ಟು ವ್ಯತ್ಯಾಸವಾಗಿದೆ ಎಂದು ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೆಲವರ ಜ್ಯೇಷ್ಠತಾ ಸಂಖ್ಯೆ ಒಂದು ಸಾವಿರದಷ್ಟು ಕೆಳಗೆ ಕುಸಿದಿದ್ದರೆ, ಕೆಲವರು ಸಾಕಷ್ಟು ಮೇಲಿನ ಸ್ಥಾನ ಪಡೆದಿದ್ದಾರೆ. ಪ್ರೌಢಶಾಲೆಗಳಿಂದ ಬಡ್ತಿ ಪಡೆದು ಬಂದವರ ಜ್ಯೇಷ್ಠತಾ ಪಟ್ಟಿಯನ್ನು ಕ್ರಮಬದ್ಧವಾಗಿ ಮಾಡಿಲ್ಲ. ಇದರಿಂದ ಪಿಯು ಉಪನ್ಯಾಸಕರಾಗಿ ನೇರ ನೇಮಕಾತಿ ಹೊಂದಿದವರ ಬಡ್ತಿಗೆ ಅಡಚಣೆಯಾಗಿದೆ ಎಂದು ದೂರಿದ್ದಾರೆ.


ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತ್ವರಿತ ಭರ್ತಿ ಮಾಡಲು ಸಂಘ ಮನವಿ ಮಾಡಿದೆ. ಶೀಘ್ರ ಅಧಿಸೂಚನೆ ಹೊರಡಿಸುವ ಭರವಸೆ ದೊರೆತಿದೆ.
-ಎ.ಎಚ್.ನಿಂಗೇಗೌಡ ಅಧ್ಯಕ್ಷ, ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ

ಸುದ್ದಿ 2 ನಿಮಿಷ

ಅಧಿಕಾರ ಸ್ವೀಕರಿಸದ ಗಣೇಶ್ ಪ್ರಮುಖ ಹುದ್ದೆಗೆ ಬೇಡಿಕೆ

ಕಂಪ್ಲಿ (ಬಳ್ಳಾರಿ ಜಿಲ್ಲೆ): ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಕಗೊಂಡು ಒಂದು ತಿಂಗಳಾದರೂ ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಅವರು ಇನ್ನೂ ಅಧಿಕಾರ ಸ್ವೀಕರಿಸಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶಾಸಕ ಗಣೇಶ್, 'ಪ್ರಮುಖ ನಿಗಮ ಮಂಡಳಿಗೆ ನೇಮಿಸಲು ಮುಖ್ಯಮಂತ್ರಿ ಮತ್ತೆ ಮನವಿ ಮಾಡಲಾಗುವುದು' ಎಂದು ತಿಳಿಸಿದ್ದಾರೆ.



ಸಂಭಾವ್ಯ ಪಟ್ಟಿಯಲ್ಲಿ ಶಾಸಕ ಗಣೇಶ್ ಅವರಿಗೆ ಖಾದಿ ಗ್ರಾಮೋದ್ಯೋಗ ಮಂಡಳಿ ಸಿಗಬಹುದಾಗಿ ಕೇಳಿ ಬಂದಿತ್ತು. 'ಇದರಿಂದ ಅಸಮಾಧಾನಗೊಂಡಿದ್ದ ಅವರು, ಜನವರಿ 24ರಂದು ಪತ್ರ ಹೇಳಿಕೆ ಬಿಡುಗಡೆ ಮಾಡಿ, 'ಹೀಗೆ ಆಗಬಾರದಿತ್ತು' ಎಂದಿದ್ದರು.

ಜನವರಿ 26ರಂದು ಬಿಡುಗಡೆಯಾದ ನಿಗಮ ಮಂಡಳಿ ನೇಮಕಾತಿ ಅಂತಿಮ ಪಟ್ಟಿಯಲ್ಲಿ ಗಣೇಶ್ ಅವರಿಗೆ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ಸಿಕ್ಕಿತ್ತು. ಆದರೆ, ಅದಕ್ಕೂ ಅವರ ಸಮ್ಮತಿ ಇಲ್ಲ.

ರಂಜಾನ್ ಉಪವಾಸ: ಉರ್ದು ಶಾಲಾ ಸಮಯ ಬದಲಾವಣೆ

ಬೆಂಗಳೂರು: ರಂಜಾನ್ ಉಪವಾಸ ಮಾರ್ಚ್ 11ರಿಂದ ಆರಂಭವಾಗುತ್ತಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ಉರ್ದು ಶಾಲೆಗಳ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ.

ಉರ್ದು ಶಾಲೆಗಳು ರಂಜಾನ್‌ನ ಒಂದು ತಿಂಗಳು ಪ್ರತಿ ದಿನ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12.45ವರೆಗೆ ನಡೆಯಲಿವೆ. ಒಂದು ತಿಂಗಳು ಕಡಿತವಾಗುವ ಶಾಲಾ ಸಮಯವನ್ನು ಮುಂದಿನ ರಜಾ ದಿನಗಳಲ್ಲಿ ವಿಶೇಷ ತರಗತಿ ನಡೆಸುವ ಮೂಲಕ ಸರಿದೂಗಿಸಲು, ಇತರೆ ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳು ಮುಸ್ಲಿಂ ವಿದ್ಯಾರ್ಥಿಗಳಿಗೆ ಶಾಲಾ ಸಮಯಕ್ಕೂ ಅರ್ಧ ಗಂಟೆ ಮುಂಚಿತವಾಗಿ ಮನೆಗಳಿಗೆ ತೆರಳಲು ಅವಕಾಶ ಮಾಡಿಕೊಡಬೇಕು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಅರಬ್ಬಿ ಸಮುದ್ರಕ್ಕೆ ಇಳಿಯಲಿವೆ 'ಕೃತಕ ಬಂಡೆ'

ಮೀನು ಸಂತತಿ ಹೆಚ್ಚಿಸುವ ಉದ್ದೇಶ: ಸಾಂಪ್ರದಾಯಿಕ ಮೀನುಗಾರಿಕೆ ನಡೆಸುವವರಿಗೆ ಆಶಾಭಾವ

• ಮೋಹನ ನಾಯ್ಕ

ಭಟ್ಕಳ (ಉತ್ತರ ಕನ್ನಡ): ಮೀನುಗಳ ಉತ್ಪತ್ತಿಗೆ ಪೂರಕವಾಗಿ ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆ ವ್ಯಾಪ್ತಿಯ ಅರಬ್ಬಿ ಸಮುದ್ರದಲ್ಲಿ 'ಕೃತಕ ಬಂಡೆ'ಗಳನ್ನು ಸ್ಥಾಪಿಸುವ ಯೋಜನೆಗೆ ಶನಿವಾರ ಇಲ್ಲಿನ ಬೆಳಕೆಯಲ್ಲಿ ಚಾಲನೆ ಸಿಗಲಿದೆ.

ಕೆಲ ವರ್ಷಗಳಿಂದ ಸಮುದ್ರದಲ್ಲಿ ಮತ್ಸ್ಯಕ್ಷಾಮ ಎದುರಾಗಿದೆ. ಬೆಳಕಿನ ಮೀನುಗಾರಿಕೆ, ಬುಲ್ ಟ್ರಾಲ್ ಸೇರಿ ಅವೈಜ್ಞಾನಿಕ ಪದ್ಧತಿಯ ಮೀನುಗಾರಿಕೆಯಿಂದ ಸಾಂಪ್ರದಾಯಿಕ ರೀತಿ ಮೀನುಗಾರಿಕೆ ನಡೆಸುವವರಿಗೆ ಮೀನು ಸಿಗುತ್ತಿಲ್ಲ. ಅಂತಹವರ ಅನುಕೂಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಮೀನುಗಾರಿಕೆ ಇಲಾಖೆಯು ಉತ್ತರ ಕನ್ನಡ ಜಿಲ್ಲೆಯ 25 ಕಡೆ ಮತ್ತು ಉಡುಪಿಯ 31 ಕಡೆ ಸೇರಿ ಸೇರಿ ಒಟ್ಟು 56 ಸ್ಥಳಗಳಲ್ಲಿ 'ಕೃತಕ ಬಂಡೆ'ಗಳನ್ನು ಇಟ್ಟು ಮೀನು ಸಂತತಿ ಹೆಚ್ಚಿಸುವ ಉದ್ದೇಶ ಹೊಂದಿದೆ.

'₹17 ಕೋಟಿ ವೆಚ್ಚದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ನಡೆಯುವ ಸ್ಥಳದಲ್ಲಿ, ಸಮುದ್ರದ ದಡದಿಂದ 4 ರಿಂದ 5 ನಾಟಿಕಲ್ ಮೈಲು ದೂರದಲ್ಲಿ ಬಂಡೆಗಳನ್ನು ಇರಿಸಲಾಗುತ್ತದೆ. ಭಟ್ಕಳದ ಮುರ್ಡೇಶ್ವರದಲ್ಲಿ ಬಂಡೆಗಳನ್ನು ನಿರ್ಮಿಸಲಾಗಿದೆ. ಪ್ರತಿ ಬಂಡೆ ಸರಾಸರಿ 400 ರಿಂದ 500 ಕೆಜಿ ತೂಕವಿದ್ದು, ಕ್ರೇನ್ ನೆರವಿನೊಂದಿಗೆ ಮರಳಿನ ತಳಪಾಯವಿರುವ ಕಡೆ ಬಿಡಲಾಗುತ್ತದೆ' ಎಂದು ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಬಿಪಿನ್ ಬೋಪಣ್ಣ ತಿಳಿಸಿದರು.

'ಕೃತಕ ಬಂಡೆಗಳ ಸ್ಥಾಪನೆಯಿಂದ ಅಪರೂಪದ ಮೀನಿನ ಸಂತತಿಗಳ ಉಳಿವಿಗೆ ಸಹಕಾರಿ ಆಗಲಿದೆ. ಮೀನಿನ ಸಂತಾನೋತ್ಪತ್ತಿ ಪೂರಕ ವಾತಾವರಣ ಸಿಕ್ಕರೆ, ಆಳ ಸಮುದ್ರದ ಮೀನುಗಳು ತೀರಕ್ಕೆ ಸಮೀಪದ ಪ್ರದೇಶಕ್ಕೆ ಬಂದು ಸಂತಾನೋತ್ಪತ್ತಿ ನಡೆಸುತ್ತವೆ. ಇದರಿಂದ ಮೀನುಗಾರರಿಗೂ ಅನುಕೂಲವಾಗುತ್ತದೆ' ಎಂದು ಮೀನುಗಾರ ಮುಖಂಡ ದಿವಾಕರ ಮೊಗೇರ 'ಪ್ರಜಾವಾಣಿ'ಗೆ ತಿಳಿಸಿದರು.

ನಾಡದೋಣಿ ಮೀನುಗಾರರ ಆರ್ಥಿಕ ಸಂಕಷ್ಟ ಅರಿತು ರಾಜ್ಯ ಸರ್ಕಾರ ಈ ಯೋಜನೆ ಜಾರಿಗೆ ತಂದಿದೆ. ಈಗಾಗಲೇ ತಮಿಳುನಾಡಿನಲ್ಲಿ ಈ ಯೋಜನೆ ಯಶಸ್ವಿಯಾಗಿದೆ.
ಮಂಕಾಳ ವೈದ್ಯ, ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ



ಕೃತಕ ಬಂಡೆಗಳನ್ನು ಸಮುದ್ರಕ್ಕೆ ಹಾಕಲು ದೋಣಿಯಲ್ಲಿ ಇರಿಸಿರುವುದು

ಇ.ಡಿಯಿಂದ ₹50 ಕೋಟಿಯ ಸ್ವತ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕ್ ಲಿಮಿಟೆಡ್ (ಎಂಎಸ್‌ಸಿಬಿ) ನಂಟಿನ ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಕನ್ನಡ್ ಸಹಕಾರಿ ಸಾಖರ್ ಕಾರ್ಖಾನಾ ಲಿಮಿಟೆಡ್‌ಗೆ (ಕೆಎಸ್‌ಎಸ್‌ಕೆ) ಸೇರಿದ ₹ 50 ಕೋಟಿ ಮೌಲ್ಯದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ತಾತ್ಕಾಲಿಕವಾಗಿ ಜಪ್ತಿ ಮಾಡಿದೆ.

ಜಪ್ತಿ ಮಾಡಲಾಗಿರುವ ಸ್ವತ್ತುಗಳಲ್ಲಿ ಕೆಎಸ್‌ಎಸ್‌ಕೆಗೆ ಸೇರಿದ 101.30 ಎಕರೆ ಜಮೀನು, ಕಾರ್ಖಾನೆಯ ಯಂತ್ರೋಪಕರಣಗಳು ಹಾಗೂ ಕಟ್ಟಡಗಳು ಸೇರಿವೆ.

ಜಾರಿ ನಿರ್ದೇಶನಾಲಯದ ಈ ಕ್ರಮವು ಎಸ್‌ಸಿಪಿ (ಶರದ್‌ಚಂದ್ರ ಬಣ) ವರಿಷ್ಠ ಶರದ್ ಪವಾರ್ ಅವರ ಮೊಮ್ಮಗ, ರೋಹಿತ್ ಪವಾರ್ ಅವರಿಗೆ ಹಿನ್ನಡೆ ಎಂದೇ ವಿಶ್ಲೇಷಿಸಲಾಗುತ್ತಿದೆ. ರೋಹಿತ್ ಅವರು ಅಹ್ಮದ್‌ನಗರ ಜಿಲ್ಲೆಯ ಕರ್ಜತ್ ಜಾಮ್‌ಖೇಡ್ ಕ್ಷೇತ್ರದ ಶಾಸಕ.

ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕ್ ಲಿಮಿಟೆಡ್, ಕಾನೂನುಬಾಹಿರವಾಗಿ ಸಕ್ಕರೆ ಕಾರ್ಖಾನೆಗಳನ್ನು ಮಾರಾಟ ಮಾಡಿದೆ. ಈ ಮಾರಾಟದಲ್ಲಿ ಹಣದ ಅಕ್ರಮ ವರ್ಗಾವಣೆ ಮಾಡಲಾಗಿದೆ ಎಂಬ ಆರೋಪವಿದೆ.

'ಬಿಜೆಪಿ ತೊಲಗಿಸಿ, ಬೇಟಿ ರಕ್ಷಿಸಿ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಮಣಿಪುರಕ್ಕೆ ಏಕೆ ಭೇಟಿ ನೀಡಿಲ್ಲ? ಬಿಜೆಪಿ ಸಂಸದನ ವಿರುದ್ಧ ಮಹಿಳಾ ಕುಸ್ತಿಪಟುಗಳು ಲೈಂಗಿಕ ಕಿರುಕುಳದ ಆರೋಪ ಮಾಡಿದರೂ, 'ಮೌನ'ವಾಗಿರುವುದು ಏಕೆ... ಈ ಪ್ರಶ್ನೆಗಳಿಗೆ ಉತ್ತರ ನೀಡುವಂತೆ ದೇಶದಾದ್ಯಂತ ಮಹಿಳೆಯರು ಕೋರುತ್ತಿದ್ದಾರೆ' ಎಂದು ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಶುಕ್ರವಾರ ವಾಗ್ದಾಳಿ ನಡೆಸಿದೆ.

'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಪ್ರಧಾನಿಯು ಮಹಿಳೆಯರಿಗೆ ನಮಸ್ಕಾರ ಮಾಡುವುದನ್ನು ಬಿಟ್ಟು, ಬೇರೆ ಇನ್ನೇನನ್ನೋ ಮಾಡುತ್ತಾರೆ ಎಂದು ನಾವು ನಿರೀಕ್ಷಿಸುವುದಿಲ್ಲ. ಬಿಜೆಪಿ ತೊಲಗಿಸಿ, ಬೇಟಿ ರಕ್ಷಿಸಿ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಕುಟುಕಿದ್ದಾರೆ.

'ಅದೇನೇ ಇದ್ದರೂ ದೇಶದಾದ್ಯಂತ ಮಹಿಳೆಯರು ಕೇಳುತ್ತಿರುವ ಕೆಲವು ಪ್ರಮುಖ ಪ್ರಶ್ನೆಗಳು ಇಲ್ಲಿವೆ. ಕಳೆದೊಂದು ವರ್ಷದಿಂದಲೂ ಸಂಘರ್ಷಪೀಡಿತವಾಗಿರುವ ಮಣಿಪುರದಲ್ಲಿ ಮಹಿಳೆಯರೇ ಹೆಚ್ಚು ಬಲಿಪಶುಗಳಾಗಿದ್ದಾರೆ. ಮಹಿಳೆಯರ ಮೇಲೆ ಹಲ್ಲೆ ನಡೆಸಿ, ಬೆತ್ತಲೆ ಮೆರವಣಿಗೆ ನಡೆಸಿದ ವಿಡಿಯೊ ಸಹ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿತ್ತು. ಕೇಂದ್ರ-ರಾಜ್ಯದಲ್ಲಿ ಬಿಜೆಪಿಯೇ ಅಧಿಕಾರದಲ್ಲಿದ್ದರೂ, ಅಲ್ಲಿಗೆ ಭೇಟಿ ನೀಡಲು ಪ್ರಧಾನಿಗೆ ಏನು ತೊಂದರೆಯಾಗಿತ್ತು' ಎಂದು ಸಾಮಾಜಿಕ ಜಾಲತಾಣ 'ಎಕ್ಸ್' ವೇದಿಕೆಯಲ್ಲಿ ಕೇಳಿದ್ದಾರೆ.



ಜೈರಾಂ ರಮೇಶ್

'ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಮಹಿಳಾ ಕುಸ್ತಿಪಟುಗಳು ಮಾಡಿದ ಲೈಂಗಿಕ ಕಿರುಕುಳ ಆರೋಪದ ಬಗ್ಗೆ ಪ್ರಧಾನಿಯ ಮೌನ ಎದ್ದು ಕಾಣುತ್ತಿದೆ. ಸಿಂಗ್ ಅವರನ್ನು 'ಮೋದಿ ಪರಿವಾರದ ಸದಸ್ಯ' ಎಂದು ಪರಿಗಣಿಸಿದ್ದಾರೆಯೇ' ಎಂದೂ ಪ್ರಶ್ನಿಸಿದ್ದಾರೆ.

ದೆಹಲಿ: ನಮಾಜ್ ಮಾಡುತ್ತಿದ್ದವರನ್ನು ಒದ್ದ ಸಬ್ ಇನ್‌ಸ್ಪೆಕ್ಟರ್ ಅಮಾನತು

ನವದೆಹಲಿ(ಪಿಟಿಐ): ದೆಹಲಿಯ ಉತ್ತರ ಭಾಗದಲ್ಲಿರುವ ಇಂದ್ರಲೋಕ ಪ್ರದೇಶದಲ್ಲಿ ರಸ್ತೆಯಲ್ಲಿ ನಮಾಜ್ ಮಾಡುತ್ತಿದ್ದ ಕೆಲವರನ್ನು ಸಬ್ ಇನ್‌ಸ್ಪೆಕ್ಟರ್‌ವೊಬ್ಬರು ಬಲವಾಗಿ ತಳ್ಳಿ, ಒದ್ದ ಹಿನ್ನೆಲೆಯಲ್ಲಿ ನೂರಾರು ಜನರು ಶುಕ್ರವಾರ ಪ್ರತಿಭಟಿಸಿದರು. ಇದರ ಬೆನ್ನಲ್ಲೇ ಸಬ್ ಇನ್‌ಸ್ಪೆಕ್ಟರ್ ಅನ್ನು ಅಮಾನತು ಮಾಡಲಾಗಿದೆ.

ಮನೋಜ್ ಕುಮಾರ್ ತೋಮರ್ ಅಮಾನತುಗೊಂಡಿರುವ ಇನ್‌ಸ್ಪೆಕ್ಟರ್.

ಈ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ರಾಜಕೀಯ ಮುಖಂಡರು ಸೇರಿದಂತೆ ವಿವಿಧ ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳು ಈ ಕೃತ್ಯವನ್ನು ಖಂಡಿಸಿದ್ದಾರೆ.

ಇಂದ್ರಲೋಕ ಮೆಟ್ರೊ ನಿಲ್ದಾಣ ಬಳಿ ಮಧ್ಯಾಹ್ನ 2ರ ಹೊತ್ತಿಗೆ ಈ ಘಟನೆ ನಡೆದಿದೆ. ಮೆಟ್ರೊ ನಿಲ್ದಾಣ ಸಮೀಪದ ಮಸೀದಿ ಬಳಿಯ ರಸ್ತೆಯಲ್ಲಿ ಕೆಲವರು ನಮಾಜ್ ಮಾಡಲು ಮುಂದಾಗಿದ್ದಾಗ, ಅವರನ್ನು ಚದುರಿಸಲು ಮನೋಜ್ ಕುಮಾರ್‌ಯತ್ನಿಸಿದರು.ದಿಢೀರನೆಕೋಪಗೊಂಡಂತೆ ಕಂಡುಬಂದ ಅವರು ಕೆಲವರನ್ನು ಬಲವಾಗಿ ನೂಕಿ, ಒದೆಯುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ.

ನಂತರ ಭಾರಿ ಸಂಖ್ಯೆಯಲ್ಲಿ ಜನರು ಸೇರಿ, ಪ್ರತಿಭಟನೆ ನಡೆಸಿದರಲ್ಲದೇ, ರಸ್ತೆ ಬಂದ್ ಮಾಡಿದರು. ತೋಮರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಜಂಟಿ ಪೊಲೀಸ್ ಕಮಿಷನರ್ (ಕೇಂದ್ರ ವಲಯ) ಪರ್ಮಾದಿತ್ಯ ಹಾಗೂ ಹೆಚ್ಚುವರಿ ಪೊಲೀಸ್ ಕಮಿಷನರ್ (ಪೂರ್ವ ವಲಯ) ಸಾಗರ್ ಸಿಂಗ್ ಕಾಲ್ಸಿ ಅವರು, ಪ್ರತಿಭಟನಕಾರರೊಂದಿಗೆ ಮಾತುಕತೆ ನಡೆಸಿ, ಪರಿಸ್ಥಿತಿ ತಿಳಿಗೊಳಿಸಿದರು.

ಬಿಹಾರ ಪರಿಷತ್ತು: ರಾಬ್ಡಿದೇವಿ ಆರ್‌ಜೆಡಿ ಅಭ್ಯರ್ಥಿ

ಪಟ್ನಾ (ಪಿಟಿಐ): ಬಿಹಾರ ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಅವರ ಪತ್ನಿಯಾದ ಮಾಜಿ ಮುಖ್ಯಮಂತ್ರಿ ರಾಬ್ಡಿದೇವಿ ಅವರನ್ನು ಕಣಕ್ಕಿಳಿಸಲು ಪಕ್ಷ ನಿರ್ಧರಿಸಿದೆ.

ಹಿರಿಯ ಮುಖಂಡ ಅಬ್ದುಲ್ ಬಾರಿ ಸಿದ್ದಿಕಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೈಯದ್ ಫೈಸಲ್ ಅಲಿ ಹಾಗೂ ಪಕ್ಷದ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ಊರ್ಮಿಳಾ ಠಾಕೂರ್ ಅವರು ಆರ್‌ಜೆಡಿ ಪಕ್ಷದ ಇತರೆ ಅಭ್ಯರ್ಥಿಗಳಾಗಿದ್ದಾರೆ. ಅಲ್ಲದೆ, ಸಿಪಿಐ(ಎಂಎಲ್) ಅಭ್ಯರ್ಥಿ ಶಶಿ ಯಾದವ್ ಅವರನ್ನು ಬೆಂಬಲಿಸಲು ಪಕ್ಷ ನಿರ್ಧರಿಸಿದೆ ಎಂದು ಆರ್‌ಜೆಡಿ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜಲಕ್ಷ್ಮಿ ಬರಗೂರು ಪ್ರಶಸ್ತಿ ನೀಲಾ, ರಾಮಕ್ಕ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ'ಗೆ ಕಲಬುರಗಿಯ ಸಾಮಾಜಿಕ ಹೋರಾಟಗಾರ್ತಿ ಕೆ. ನೀಲಾ ಹಾಗೂ ತುಮಕೂರಿನ ಅಲೆಮಾರಿ ಜನಾಂಗದ ಹೋರಾಟಗಾರ್ತಿ ರಾಮಕ್ಕ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಪ್ರತಿಷ್ಠಾನವು ಪ್ರತಿ ವರ್ಷ ಬರಗೂರು ರಾಮಚಂದ್ರಪ್ಪ ಅವರ ದಿವಂಗತ ಪತ್ನಿ ರಾಜಲಕ್ಷ್ಮಿ ಬರಗೂರು ಅವರ ಹೆಸರಿನಲ್ಲಿ ಇಬ್ಬರು ಮಹಿಳಾ ಸಾಧಕರಿಗೆ ಪ್ರಶಸ್ತಿಯನ್ನು ನೀಡುತ್ತಿದೆ.

ಇದೇ 12ರಂದು ಸಂಜೆ 5 ಗಂಟೆಗೆ ಇಲ್ಲಿನ ಸರ್ಕಾರಿ ಕಲಾ ಕಾಲೇಜಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ನಟಿ ಹಾಗೂ ವಿಧಾನ ಪರಿಷತ್ತಿನ ಸದಸ್ಯೆ ಉಮಾಶ್ರೀ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಕೀಲ ಸಿ.ಎಚ್. ಹನುಮಂತರಾಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಎ.ವಿ. ತಿಳಿಸಿದ್ದಾರೆ.



ಕೆ.ನೀಲಾ



ರಾಮಕ್ಕ

ಅತ್ಯಾಚಾರ: ಸಂಧಾನಕ್ಕೆ ಕೋರ್ಟ್ ಕಳವಳ

ನವದೆಹಲಿ (ಪಿಟಿಐ): ಅತ್ಯಾಚಾರವೆಸಗಿದ ದುಷ್ಕರ್ಮಿ ಹಾಗೂ ಸಂತ್ರಸ್ತೆ ರಾಜೀ ಸಂಧಾನದ ಮೂಲಕ ಅತ್ಯಾಚಾರ ಪ್ರಕರಣವನ್ನು ಇತ್ಯರ್ಥಗೊಳಿಸಿಕೊಳ್ಳಬೇಕು ಎಂದು ವಿಚಾರಣಾಧೀನ ನ್ಯಾಯಾಧೀಶರೊಬ್ಬರು ಸಲಹೆ ನೀಡಿದ್ದಾರೆ ಎಂಬ ಆರೋಪದ ಸಂಬಂಧ ದೆಹಲಿ ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ. ಅಲ್ಲದೆ, ಅತ್ಯಾಚಾರ ಪ್ರಕರಣಗಳನ್ನು ನ್ಯಾಯಾಲಯದ ಹೊರಗೆ ಇತ್ಯರ್ಥ ಮಾಡಲಾಗದು ಎಂದು ಒತ್ತಿಹೇಳಿದೆ.

ಈ ಮೂಲಕ ಈ ಸಂಬಂಧ ಸಲ್ಲಿಕೆಯಾದ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕು ಎಂಬ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ಈ ಕುರಿತು ವಿಚಾರಣೆ ನಡೆದ ನ್ಯಾಯಾಧೀಶ ಸ್ವರಣ ಕಾಂತಾ ಶರ್ಮಾ ಅವರು, 'ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯರ ಹಕ್ಕುಗಳು ಮತ್ತು ಗೌರವಗಳನ್ನು ಎತ್ತಿಹಿಡಿಯುವುದು ನ್ಯಾಯಾಂಗದ ಹೊಣೆಗಾರಿಕೆಯಾಗಿದೆ. ಇಂಥ ಪ್ರಕರಣದಲ್ಲಿ ರಾಜೀ ಸಂಧಾನದ ಸಲಹೆಗಳು ನ್ಯಾಯಾಧೀಶರಿಂದಲೇ ಬರುವುದು ಅಪರಾಧ ನ್ಯಾಯಾಂಗ ವ್ಯವಸ್ಥೆ ಮತ್ತು ನಿಷ್ಪಕ್ಷಪಾತ ವಿಚಾರಣೆಯ ತತ್ವಗಳಿಗೆ ವಿರುದ್ಧವಾದದ್ದಾಗಿದೆ' ಎಂದು ಹೇಳಿದರು.

ಹೋರಿ ಹಬ್ಬ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಹಂಸಬಾವಿ (ಹಾವೇರಿ ಜಿಲ್ಲೆ): ಗ್ರಾಮದ ಕೊಳ್ಳೇರ ಕಟ್ಟೆಕೆರೆಯಲ್ಲಿ ಮಾರ್ಚ್ 4ರಂದು ನಡೆದಿದ್ದ ರಾಜ್ಯಮಟ್ಟದ ಹೋರಿ ಬೆದರಿಸುವ ಸ್ಪರ್ಧೆ ಆಯೋಜಕರಾದ ಹಂಸಬಾವಿಯ ಹನುಮಂತ ರಾಮಪ್ಪ ಈಳಗೇರ, ಸೋಮಶೇಖರ ಶಿವಾನಂದಪ್ಪ ಹುಚಗೊಂಡರ, ಶಫಿವುಲ್ಲಾ ಸೈಯದಾಹ್ಮದ್ ಮುಲ್ಲಾ ಮತ್ತು ದೀವಿಗಿಹಳ್ಳಿಯ ಶ್ರೀಕಾಂತ ಹನುಮಗೌಡ ನಾಗಪ್ಪನವರ ಎಂಬುವರನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದಾರೆ.

'ಸ್ಪರ್ಧೆ ಆಯೋಜನೆಗೆ ಅನುಮತಿ ಪಡೆದಿರಲಿಲ್ಲ. ಸ್ಪರ್ಧೆ ವೇಳೆ ಇಬ್ಬರು ಗಾಯಗೊಂಡು ಮೃತಪಟ್ಟಿದ್ದು, ಇನ್ನೂ ಹಲವರು ಗಾಯಗೊಂಡಿದ್ದರು. ಮೃತರ ಸಂಬಂಧಿಕರ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹೋರಿ ಹಬ್ಬ ಆಯೋಜಕರು ಮುಂಜಾಗ್ರತೆಕೈಗೊಳ್ಳಲ್ಲಮತ್ತುಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆಯಲ್ಲ. ನಿಯಮಬಾಹಿರವಾಗಿ ನಡೆಸುವ ಹೋರಿ ಹಬ್ಬ ಅಪಾಯಕಾರಿಯಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ ತಿಳಿಸಿದ್ದಾರೆ.



ಇಸ್ರೊದ ಯು.ಆರ್. ರಾವ್ ಉಪಗ್ರಹ ಕೇಂದ್ರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹಾಗೂ ವಿಜ್ಞಾನಿಗಳು ಭಾಗಿಯಾಗಿದ್ದರು

ಬಾಹ್ಯಾಕಾಶದಾಚೆಗೂ ಮಹಿಳಾ ವಿಜ್ಞಾನಿಗಳ ಛಾಪು: ಧನಕರ್ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಮಹಿಳೆಯರಿಗೆ ಸಾಕಷ್ಟು ಅವಕಾಶ ನೀಡುತ್ತಿರುವ ಫಲವಾಗಿ ಮಹಿಳಾ ವಿಜ್ಞಾನಿಗಳು ಬಾಹ್ಯಾಕಾಶ ಹಾಗೂ ಅದರಾಚೆಗೂ ತಮ್ಮ ಛಾಪು ಮೂಡಿಸಿದ್ದಾರೆ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದರು.

ಇಸ್ರೊದ ಯು.ಆರ್. ರಾವ್ ಉಪಗ್ರಹ ಕೇಂದ್ರದಲ್ಲಿ ಶುಕ್ರವಾರ ಮಹಿಳಾ ದಿನಾಚರಣೆ ಪ್ರಯುಕ್ತ ವಿಜ್ಞಾನಿಗಳೊಂದಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹುಟ್ಟಿನಿಂದಲೇ ಮಹಿಳೆಯರಲ್ಲಿ ನಾಯಕತ್ವದ ಗುಣ ಇರುತ್ತದೆ. ಅವರಿಗೆ ಸೂಕ್ತ ಅವಕಾಶ ದೊರೆತರೆ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಾರೆ. ಇಸ್ರೊ ಲಿಂಗ ತಾರತಮ್ಯ ಮಾಡದೇ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡಿದೆ. ಅಂತರಿಕ್ಷ ಯಾನಕ್ಕೂ ಕಳುಹಿಸಿಕೊಟ್ಟಿದೆ. ಮಹಿಳಾ ಒಳಗೊಳ್ಳುವಿಕೆಯನ್ನು ಉತ್ತೇಜಿಸಿದೆ. ಹಾಗಾಗಿಯೇ ದೇಶದ ಇತರೆ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಸ್ರೊದ ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಪ್ರಸ್ತುತ ಶೇ 20ರಷ್ಟು ಮಹಿಳೆಯರು ಇದ್ದಾರೆ. ಕೇಂದ್ರವನ್ನು ಮುನ್ನಡೆಸುವುದು ಸೇರಿದಂತೆ ಆಡಳಿತ ಮತ್ತು ವ್ಯವಸ್ಥಾಪನಾ ಕ್ಷೇತ್ರಗಳಲ್ಲಿ 500ಕ್ಕೂ ಹೆಚ್ಚು ಮಹಿಳಾ ಉದ್ಯೋಗಿಗಳು ವಿವಿಧ ಹಂತದ ನಾಯಕತ್ವ ವಹಿಸಿದ್ದಾರೆ. ಇದು ಭಾರತವು ಮಹಿಳೆಯರಿಗೆ ನೀಡುತ್ತಿರುವ ಆದ್ಯತೆಯ ದ್ಯೋತಕವೂ ಆಗಿದೆ ಎಂದು ಬಣ್ಣಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ಹೆಚ್ಚುವರಿ ಕಾರ್ಯದರ್ಶಿ ಸಂಧ್ಯಾ ವೇಣುಗೋಪಾಲ್, ಯು.ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ಎಂ.ಸಂಕರನ್ ಉಪಸ್ಥಿತರಿದ್ದರು.

ಗೆಲ್ಲುವ ಅಭ್ಯರ್ಥಿಗೆ ಕಾಂಗ್ರೆಸ್ ಹುಡುಕಾಟ

ಚಾಮರಾಜನಗರ ಕ್ಷೇತ್ರ: ಸಚಿವ ಎಚ್‌.ಸಿ. ಮಹದೇವಪ್ಪ ನಿರಾಸಕ್ತಿ ● ಶಾಸಕ ದರ್ಶನ್ ಮೇಲೆ ನಾಯಕರ ಒಲವು?

● ಸೂರ್ಯನಾರಾಯಣ ವಿ.

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಅವರ ನಿರಾಸಕ್ತಿ ಹಿನ್ನೆಲೆಯಲ್ಲಿ ಗೆಲ್ಲುವ ಸಾಮರ್ಥ್ಯ ಇರುವ ಬೇರೆ ಅಭ್ಯರ್ಥಿಗಾಗಿ ಕಾಂಗ್ರೆಸ್ ಪಕ್ಷ ಹುಡುಕಾಟ ನಡೆಸಿದೆ.

'ಮಾಜಿ ಸಂಸದ ಆರ್. ಧ್ರುವನಾರಾಯಣ ಅವರ ಮಗ, ಸದ್ಯ ನಂಜನಗೂಡು ಶಾಸಕರಾಗಿರುವ ದರ್ಶನ್ ಅವರನ್ನು ಕಣಕ್ಕಿಳಿಸುವ ಬಗ್ಗೆ ರಾಜ್ಯ ನಾಯಕರು ಒಲವು ತೋರಿದ್ದಾರೆ. ಆದರೆ, ಅವರೂ ಸ್ಪರ್ಧೆಗೆ ಆಸಕ್ತಿ ಹೊಂದಿಲ್ಲ' ಎಂದು ಮೂಲಗಳು ತಿಳಿಸಿವೆ. ಧ್ರುವನಾರಾಯಣ ಅಭಿಮಾನಿಗಳು ಕೂಡ ಈ ಪ್ರಸ್ತಾವವನ್ನು ವಿರೋಧಿಸುತ್ತಿದ್ದಾರೆ.


ಡಾ.ಎಚ್‌.ಸಿ.ಮಹದೇವಪ್ಪ


ದರ್ಶನ್

ಕ್ಷೇತ್ರದಿಂದ ಕಾಂಗ್ರೆಸ್‌ನಲ್ಲಿ ಎಂಟು ಆಕಾಂಕ್ಷಿಗಳಿದ್ದಾರೆ. ಸಚಿವ ಡಾ.ಎಚ್‌.ಸಿ.ಮಹದೇವಪ್ಪ, ಅವರ ಪುತ್ರ ಸುನೀಲ್ ಬೋಸ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಸಚಿವ ಸೋಮಶೇಖರ್, ಮುಖಂಡರಾದ ಜೆ.ಸಿ.ಕಿರಣ್, ಡಿ.ಎನ್.ನಟರಾಜು ಹೆಸರುಗಳು ಪ್ರಮುಖವಾಗಿ ಕೇಳಿ ಬರುತ್ತಿದೆ.

'ಈ ಪೈಕಿ ಮೂವರ ಹೆಸರನ್ನು ಮುಖಂಡರು ಅಂತಿಮಗೊಳಿಸಿದ್ದಾರೆ' ಎನ್ನಲಾಗುತ್ತಿದೆ. ಅವರಲ್ಲಿ ಸಚಿವ ಮಹದೇವಪ್ಪ ಹೆಸರು ಇರುವುದನ್ನು ಮುಖಂಡರು ಖಚಿತಪಡಿಸಿದ್ದಾರೆ. ಕ್ಷೇತ್ರ ವ್ಯಾಪ್ತಿಯ ಏಳು ಶಾಸಕರು ಸಚಿವರನ್ನು ಬೆಂಬಲಿಸುತ್ತಿದ್ದಾರೆ. ಆದರೆ, ಅವರು ಲೋಕಸಭೆಗೆ ಸ್ಪರ್ಧಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಪಕ್ಷದ ನಾಯಕರಿಗೂ ತಿಳಿಸಿದ್ದಾರೆ. 'ಮಗ ಸುನೀಲ್ ಬೋಸ್‌ಗೆ ಟಿಕೆಟ್ ಕೊಡಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಮಹದೇವಪ್ಪ ಅವರಿಗೆ ಕೊಡದಿದ್ದರೆ, ಅವರ ಮಗನಿಗೆ ಸಿಗಲಿದೆ' ಎಂಬ ಮಾತು ಪಕ್ಷದ ವಲಯದಲ್ಲಿ ಕೇಳಿ ಬರುತ್ತಿತ್ತು. ಆದರೆ, ಕೆಲವು ದಿನಗಳಿಂದ ಮುಖಂಡರು, ಕಾರ್ಯಕರ್ತರು ದರ್ಶನ್ ಹೆಸರು ಹೇಳುತ್ತಿದ್ದಾರೆ.

ಆರಂಭದಲ್ಲಿ ತಮ್ಮ ಹೆಸರು ಪ್ರಸ್ತಾಪವಾದಾಗಲೇ, ಶಾಸಕರಾಗಿ ಮುಂದುವರಿಯುವುದಾಗಿ ದರ್ಶನ್ ಸ್ಪಷ್ಟಪಡಿಸಿದ್ದರು. ಅವರ ಅಭಿಮಾನಿಗಳೂ, 'ಧ್ರುವನಾರಾಯಣ ರಾಷ್ಟ್ರ ರಾಜಕಾರಣಕ್ಕೆ ಹೋಗಿದ್ದರಿಂದ ರಾಜ್ಯದಲ್ಲಿ ಸಚಿವರಾಗುವ ಅವಕಾಶ ತಪ್ಪಿಹೋಯಿತು. ನೀವು ಶಾಸಕರಾಗಿಯೇ ಮುಂದುವರಿಯಿರಿ' ಎಂದು ಒತ್ತಾಯಿಸುತ್ತಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಆಪ್ತ ವಲಯದಲ್ಲಿ ಇರುವ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಅವರು ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಪಕ್ಷದ ಮುಖಂಡರು, ಕಾರ್ಯಕರ್ತರ ದೃಷ್ಟಿ ವರಿಷ್ಠರ ತೀರ್ಮಾನದತ್ತ ನೆಟ್ಟಿದೆ.

ಮುಖಂಡರ ಲೆಕ್ಕಾಚಾರವೇನು?

'ಧ್ರುವನಾರಾಯಣ ಅವರು ಕಳೆದ ಬಾರಿ 1,817 ಮತಗಳ ಅಂತರದಿಂದ ಸೋತಿದ್ದರು. ವಿಧಾನಸಭೆಗೆ ನಂಜನಗೂಡಿನಿಂದ ಸ್ಪರ್ಧಿಸಲು ಆಶಿಸಿದ್ದರು. ಅಕಾಲಿಕವಾಗಿ ನಿಧನರಾದರು. ಅದೇ ಅನುಕಂಪದ ಆಧಾರದಲ್ಲಿ ಅವರ ಮಗ ದರ್ಶನ್ ಭಾರಿ ಅಂತರದಿಂದ ಗೆದ್ದರು. ಕ್ಷೇತ್ರದಾದ್ಯಂತ ಧ್ರುವನಾರಾಯಣ ಅವರನ್ನು ಬೆಂಬಲಿಸುವವರಿದ್ದಾರೆ. ಈಗ ಎಲ್ಲರಿಗೂ ಪರಿಚಯವಾಗಿರುವ ದರ್ಶನ್, ಜನರನ್ನು ತಲುಪುವುದು ಸುಲಭ' ಎಂಬುದು ಕಾಂಗ್ರೆಸ್ ನಾಯಕರ ಲೆಕ್ಕಾಚಾರ. 'ಗೃಹ ಸಚಿವ ಡಾ.ಜಿ.ಪರಮೇಶ್ವರ ಸೇರಿದಂತೆ ಕೆಲವು ನಾಯಕರು ಚುನಾವಣೆ ಸ್ಪರ್ಧೆ ಬಗ್ಗೆ ದರ್ಶನ್ ಬಳಿ ನೇರವಾಗಿ ಕೇಳಿದ್ದಾರೆ' ಎಂದು ಅವರ ಆಪ್ತರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ರಾಷ್ಟ್ರೀಯ ನಾಯಕರು ಸೂಚಿಸಿದರೆ ಸ್ಪರ್ಧಿಸುವುದು ಅನಿವಾರ್ಯ ಆಗುತ್ತದೆ' ಎನ್ನುತ್ತಾರೆ ಮುಖಂಡರು.

> **ಈ ಕ್ಷೇತ್ರವು ಕಾಂಗ್ರೆಸ್ ಪಕ್ಷದ ಭದ್ರಕೋಟೆ. ಏಳು ಮಂದಿ ಶಾಸಕರಿದ್ದಾರೆ. ಎದುರಾಳಿ ಯಾರೇ ಆಗಿದ್ದರೂ ನಾವೇ ಗೆಲ್ಲುತ್ತೇವೆ.**
> **ಪಿ.ಮರಿಸ್ವಾಮಿ,** ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ

ಎಎಪಿ ಪ್ರಚಾರಕ್ಕೆ ಚಾಲನೆ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆ ಅಂಗವಾಗಿ ಎಎಪಿ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ಪಕ್ಷದ ಪ್ರಚಾರ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿದರು.

ಪಕ್ಷದ ಕೇಂದ್ರ ಕಚೇರಿಯಲ್ಲಿ ಪಕ್ಷದ ನಾಯಕರು, ಕಾರ್ಯಕರ್ತರ ಸಮ್ಮುಖದಲ್ಲಿ, 'ಸಂಸದ್ ಮೇ ಭಿ ಕೇಜ್ರಿವಾಲ್ ತೊ ದಿಲ್ಲಿ ಹೋಗಿ ಔರ್ ಖುಷ್ ಹಾಲ್' (ಸಂಸತ್ತಿನಲ್ಲಿಯೂ ಕೇಜ್ರಿವಾಲ್ ಇದ್ದರೆ, ದಿಲ್ಲಿಗೆ ಮತ್ತಷ್ಟು ಸಮೃದ್ಧಿ ಬರುವುದು) ಎಂಬ ಘೋಷವಾಕ್ಯದೊಂದಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಕೇಜ್ರಿವಾಲ್, 'ನನ್ನ ಕುಟುಂಬದಂತಿರುವ ದೆಹಲಿಯ ಜನರಿಗೆ ಸೇವೆ ಸಲ್ಲಿಸಲು ಎಲ್ಲಾ ಪ್ರಯತ್ನ ಮಾಡಿದ್ದೇನೆ' ಎಂದು ಹೇಳಿದರು.

ದೆಹಲಿ ಮತ್ತು ಪಂಜಾಬ್ ಎರಡು ಕಡೆಗಳಲ್ಲಿ ಎಎಪಿ ಆಡಳಿತವಿದೆ. ಇಲ್ಲಿ ಮಾತ್ರ ಉಚಿತ ವಿದ್ಯುತ್ ಪೂರೈಕೆ ಇದೆ ಎಂದು ತಿಳಿಸಿದರು.

'ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರವು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಮೂಲಕ ಎಎಪಿ ಸರ್ಕಾರದ ಪ್ರತಿ ಅಭಿವೃದ್ಧಿ ಕಾರ್ಯಕ್ಕೂ ಅಡ್ಡಿಯಾಗಿದೆ. ಎಎಪಿಯ ಎಲ್ಲ ಸಂಸದರನ್ನು ಗೆಲ್ಲಿಸಿ ನಮಗೆ ಶಕ್ತಿ ನೀಡಿ' ಎಂದು ಮನವಿ ಮಾಡಿದರು.

'ದೆಹಲಿಯಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಗೆ ಅಧಿಕಾರ ನೀಡಿದ್ದಕ್ಕಾಗಿ ಅವರು ನಿಮ್ಮನ್ನು ದ್ವೇಷಿಸುತ್ತಾರೆ. ಅದಕ್ಕಾಗಿ ಮೊಹಲ್ಲಾ ಕ್ಲಿನಿಕ್‌ಗಳನ್ನು ಬುಲ್ಡೋಜರ್ ಮೂಲಕ ಧ್ವಂಸ ಮಾಡಿದರು. ಮನೆಮನೆಗೆ ಪಡಿತರ ಅಕ್ಕಿ ತಲುಪಿಸುವ ಯೋಜನೆಯನ್ನು ನಿಲ್ಲಿಸಿದರು' ಎಂದು ಆರೋಪಿಸಿದರು.

ದೆಹಲಿಯ ಏಳು ಸಂಸತ್ ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಎಎಪಿ ಮತ್ತು ಉಳಿದ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿದೆ. ಪಂಜಾಬ್‌ನಲ್ಲಿ ಎರಡೂ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಲಿವೆ.

ಕಾಂಗ್ರೆಸ್‌ನ ಭಾರತ್ ಜೋಡೊ ನ್ಯಾಯ ಯಾತ್ರೆ
17ರಂದು ಸಮಾರೋಪ

ಮುಂಬೈ (ಪಿಟಿಐ): 'ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ನ್ಯಾಯ ಯಾತ್ರೆಯು ಮಾರ್ಚ್ 17ರಂದು ಮುಂಬೈನಲ್ಲಿನ ಶಿವಾಜಿ ಪಾರ್ಕ್‌ನಲ್ಲಿ ರ‍್ಯಾಲಿಯೊಂದಿಗೆ ಸಮಾರೋಪಗೊಳ್ಳಲಿದ್ದು, ಇದೇ ಸಂದರ್ಭ ಲೋಕಸಭಾ ಚುನಾವಣೆಗೆ ರಣಕಹಳೆ ಮೊಳಗಲಿದೆ' ಎಂದು ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ತಿಳಿಸಿದರು.

'ಇದೇ 12ರಂದು ನಂದುರ್‌ಬಾರ್‌ನಿಂದ ಯಾತ್ರೆಯು ಮಹಾರಾಷ್ಟ್ರ ಪ್ರವೇಶಿಸಲಿದೆ. ಇದಕ್ಕೆ ಸಂಬಂಧಿಸಿದ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಅನುಮತಿಯೂ ಸಿಕ್ಕಿದೆ' ಎಂದು ಹೇಳಿದರು.

'ಶರದ್ ಪವಾರ್ ನೇತೃತ್ವದ ಎನ್‌ಸಿಪಿ, ಉದ್ಧವ್ ಸಾರಥ್ಯದ ಶಿವಸೇನೆ ಹಾಗೂ ಮಹಾ ವಿಕಾಸ್ ಅಘಾಡಿಯ ಮುಖಂಡರು ಈ ರ‍್ಯಾಲಿಯಲ್ಲಿ ಭಾಗಿಯಾಗಲಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

'ಸಮರ್ಥ ಅಭ್ಯರ್ಥಿಗಳು ಇಲ್ಲದಿರುವುದರಿಂದ ಬಿಜೆಪಿಯು ವಿರೋಧ ಪಕ್ಷದಲ್ಲಿನ ನಾಯಕರನ್ನು ಕದಿಯುತ್ತಿದೆ' ಎಂದು ದೂರಿದ ಪಟೋಲೆ, 'ಬಿಜೆಪಿಯು ತನ್ನ ಮೊದಲ ಪಟ್ಟಿಯಲ್ಲಿ ನಾಗ್ಪುರದಿಂದ ರಾಷ್ಟ್ರೀಯ ನಾಯಕ ನಿತಿನ್ ಗಡ್ಕರಿ ಹೆಸರು ಪ್ರಕಟಿಸಿಲ್ಲ. ಕಾಂಗ್ರೆಸ್ ಇಲ್ಲಿ ಸಮರ್ಥ ಅಭ್ಯರ್ಥಿ ಹೊಂದಿದ್ದು, ಈ ಬಾರಿ ಗೆಲುವು ಸಾಧಿಸಲಿದೆ' ಎಂದರು.

ಗೋವಿಂದ್ ಗುರುಗೆ ಗೌರವ ನಮನ

ದಾಹೋದ್ (ಪಿಟಿಐ): ಭಾರತ್ ಜೋಡೊ ನ್ಯಾಯ ಯಾತ್ರೆಯು ಗುಜರಾತ್‌ನಲ್ಲಿ ಎರಡನೇ ದಿನ ಸಂಚರಿಸಿತು.

ಝಲೋದ್ ಬಳಿಯ ಕಾಂಬೋಯಿ ಧಾಮ್‌ಗೆ ಶುಕ್ರವಾರ ಭೇಟಿ ನೀಡಿದ ರಾಹುಲ್ ಗಾಂಧಿ, ಬುಡಕಟ್ಟು ಜನರ ನಾಯಕ ಗೋವಿಂದ್ ಗುರುಗೆ ಗೌರವ ನಮನ ಸಲ್ಲಿಸಿದರು. ದಾಹೋದ್ ಪಟ್ಟಣದಿಂದ ಯಾತ್ರೆಯು ಪುನರಾರಂಭಗೊಂಡಿತು. ಹಾದಿಯುದ್ದಕ್ಕೂ ಕಾಂಗ್ರೆಸ್ ಕಾರ್ಯಕರ್ತರು, ಸ್ಥಳೀಯರು ರಾಹುಲ್ ಅವರನ್ನು ಸ್ವಾಗತಿಸಿದರು. ಬುಡಕಟ್ಟು ಜನಾಂಗದವರು ತಮ್ಮ ಸಾಂಪ್ರದಾಯಿಕ ನೃತ್ಯವನ್ನು ಪ್ರದರ್ಶಿಸಿದರು.

ಠಾಕ್ರೆ ಹೇಳಿಕೆಗೆ ಡಿಸಿಎಂ ತಿರುಗೇಟು

ಮುಂಬೈ: ಬಿಜೆಪಿಯ ಹಿರಿಯ ನಾಯಕ ನಿತಿನ್ ಗಡ್ಕರಿ ಅವರು ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಒಕ್ಕೂಟ ಮಹಾ ವಿಕಾಸ್ ಅಘಾಡಿ(ಎಂವಿಎ)ಯಿಂದ ಸ್ಪರ್ಧಿಸಲು ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಆಹ್ವಾನ ನೀಡಿದ್ದಾರೆ. ಇದಕ್ಕೆ ಮಹಾರಾಷ್ಟ್ರ ಡಿಸಿಎಂ ದೇವೇಂದ್ರ ಫಡಣವೀಸ್ ತಿರುಗೇಟು ನೀಡಿದ್ದಾರೆ.

ಬಿಜೆಪಿ ಪ್ರಕಟಿಸಿದ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ, ನಾಗ್ಪುರದಿಂದ ಎರಡು ಬಾರಿ ಸಂಸತ್ತಿಗೆ ಆಯ್ಕೆಯಾಗಿರುವ, ಕೇಂದ್ರ ರಸ್ತೆ ಸಾರಿಗೆ ಸಚಿವ ಗಡ್ಕರಿ ಅವರ ಹೆಸರು ಇಲ್ಲ.

ಗುರುವಾರ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಠಾಕ್ರೆ, 'ದೆಹಲಿ ಎದುರು ತಲೆತಗ್ಗಿಸಬೇಡಿ. ಅವರ ಅಹಂಕಾರಕ್ಕೆ ಪೆಟ್ಟು ಕೊಡಿ. ಮಹಾ ವಿಕಾಸ ಅಘಾಡಿಗೆ ಬನ್ನಿ. ನಿಮ್ಮನ್ನು ಚುನಾಯಿಸುವುದು ನಮ್ಮ ಜವಾಬ್ದಾರಿ' ಎಂದಿದ್ದರು.

'ಅವರ ಪಕ್ಷ ಗೊಂದಲದಲ್ಲಿದೆ ಎಂದು ಠಾಕ್ರೆಗೆ ಫಡಣವೀಸ್ ತಿರುಗೇಟು ನೀಡಿದ್ದಾರೆ.


ಬೆಂಬಲ
ಗುಜರಾತ್‌ನ ದಾಹೋದ್‌ನಲ್ಲಿ ಶುಕ್ರವಾರ ನಡೆದ ಭಾರತ್ ಜೋಡೊ ನ್ಯಾಯ ಯಾತ್ರೆ ವೇಳೆ ರಾಹುಲ್ ಗಾಂಧಿ ಅವರನ್ನು ಅವರ ಬೆಂಬಲಿಗರು ಸುತ್ತುವರಿದಿದ್ದಾರೆ –ಪಿಟಿಐ ಚಿತ್ರ

'11ರ ಬಳಿಕ ಎರಡನೇ ಪಟ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗೆ ನೇಮಿಸಿರುವ 'ಸ್ಕ್ರೀನಿಂಗ್ ಸಮಿತಿ' ಸೋಮವಾರ (ಮಾರ್ಚ್ 11) ಸಭೆ ನಡೆಸಲಿದೆ. ಆ ಬಳಿಕ ನಮ್ಮ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಆಗಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.


ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಇನ್ನೂ ಹಲವರ ಹೆಸರುಗಳು ಸ್ಕ್ರೀನಿಂಗ್ ಸಮಿತಿಯ ಪರಿಶೀಲನೆಯಲ್ಲಿವೆ. ಸೋಮವಾರದ ಸಭೆಯಲ್ಲಿ ಮತ್ತಷ್ಟು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳ್ಳಲಿದೆ' ಎಂದರು.

'ಸ್ಥಳೀಯ ಶಾಸಕರು, ವಿಧಾನಸಭಾ ಚುನಾವಣೆಯಲ್ಲಿ ಸೋತಿರುವವರು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಅಭಿಪ್ರಾಯ ಕೇಳಿದ್ದೇವೆ. ಅವರೆಲ್ಲರೂ ಯಾರ ಹೆಸರು ಹೇಳಿದ್ದಾರೋ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅಡುಗೆ ಅನಿಲ ಸಿಲಿಂಡರ್ ದರ ₹100 ಇಳಿಕೆ

ಒಂದನೇ ಪುಟದಿಂದ

'ಅಡುಗೆ ಅನಿಲ ಸಿಲಿಂಡರ್ ಇನ್ನಷ್ಟು ಕೈಗೆಟಕುವಂತೆ ಮಾಡುವ ಮೂಲಕ, ದೇಶದ ಕುಟುಂಬಗಳ ಯೋಗಕ್ಷೇಮಕ್ಕೆ ನೆರವು ನೀಡುವುದು, ಆರೋಗ್ಯಪೂರ್ಣ ಪರಿಸರ ನಿರ್ಮಾಣ ಮಾಡುವುದು ನಮ್ಮ ಗುರಿಯಾಗಿದೆ. ಮಹಿಳೆಯರ ಜೀವನವನ್ನು ಸರಳಗೊಳಿಸುವ ನಮ್ಮ ಬದ್ಧತೆಗೆ ಇದು ಸಾಕ್ಷಿ' ಎಂದು ಬಣ್ಣಿಸಿದರು.

ಉಜ್ವಲ ಯೋಜನೆಯ ಫಲಾನುಭವಿ ಮಹಿಳೆಯರಿಗೆ ಅಡುಗೆ ಅನಿಲ ಸಿಲಿಂಡರ್‌ಗಳಿಗೆ ನೀಡುತ್ತಿರುವ ₹300 ಸಬ್ಸಿಡಿಯನ್ನು ಮತ್ತೊಂದು ವರ್ಷಕ್ಕೆ ವಿಸ್ತರಣೆ ಮಾಡಿರುವುದಾಗಿ ಸರ್ಕಾರ ಗುರುವಾರ ಘೋಷಿಸಿತ್ತು.


ಟಿಎಂಸಿ ಟೀಕೆ: ಅಡುಗೆ ಅನಿಲ ಸಿಲಿಂಡರ್ ದರ ಇಳಿಕೆ ಮಾಡಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿರುವುದಕ್ಕೆ ತೃಣಮೂಲ ಕಾಂಗ್ರೆಸ್ ಟೀಕಿಸಿದೆ.

ಎದುರಾಳಿಗಳು ಸ್ನೇಹಿತರಾಗುವ ಸಮಯ

ಕೊಪ್ಪಳ ಲೋಕಸಭಾ ಕ್ಷೇತ್ರ: ಬಿಜೆಪಿ ಟಿಕೆಟ್‌ಗಾಗಿ ಹಲವರ ಪಟ್ಟು

● ಪ್ರಮೋದ

ಕೊಪ್ಪಳ: ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಭಿನ್ನ ಪಕ್ಷಗಳಲ್ಲಿದ್ದುಕೊಂಡು ಸವಾಲು ಎದುರಿಸಿದ್ದ 'ಹಳೆಯ ಸ್ನೇಹಿತರು' ಈಗ ಒಂದಾಗುವ ಸಮಯ ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದು ಇದಕ್ಕೆ ಕಾರಣ.


ಸಂಗಣ್ಣ ಕರಡಿ

ಸತತ ಎರಡು ಬಾರಿ ಸಂಸದರಾಗಿರುವ ಬಿಜೆಪಿಯ ಸಂಗಣ್ಣ ಕರಡಿ ಮೂರನೇ ಬಾರಿಯೂ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಮೊದಲು ಬಿಜೆಪಿಯಲ್ಲಿದ್ದ ಸಿ.ವಿ.ಚಂದ್ರಶೇಖರ್ ಅವರಿಗೆ ಹಿಂದಿನ ಎರಡೂ ವಿಧಾನಸಭಾ ಚುನಾವಣೆಗಳಲ್ಲಿ ಟಿಕೆಟ್ ಸಿಗದ ಕಾರಣಕ್ಕೆ ಅವರು ಪಕ್ಷ ತೊರೆದು ಕಳೆದ ವರ್ಷ ಜೆಡಿಎಸ್ ಸೇರಿ ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

2018ರಲ್ಲಿ ಚಂದ್ರಶೇಖರ್ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಆಗಿದ್ದರೂ ಪಕ್ಷ ಸಂಸದರ ಪುತ್ರ ಅಮರೇಶ ಕರಡಿ ಅವರಿಗೆ, 2023ರಲ್ಲಿ ಸಂಸದರ ಸೊಸೆ ಮಂಜುಳಾ ಕರಡಿ ಅವರಿಗೆ ಟಿಕೆಟ್ ನೀಡಿತ್ತು. ಸಂಸದರ ಕುಟುಂಬ ರಾಜಕಾರಣದ ಲಾಬಿಯಿಂದಲೇ ಎರಡೂ ಬಾರಿ ಟಿಕೆಟ್ ಕೈ ತಪ್ಪಿದೆ ಎನ್ನುವ ಕಾರಣಕ್ಕೆ ಚಂದ್ರಶೇಖರ್ ಬಿಜೆಪಿ ತೊರೆದಿದ್ದರು.

ಅನೇಕ ವರ್ಷ ಒಂದೇ ಪಕ್ಷದಲ್ಲಿದ್ದ ಸಂಗಣ್ಣ ಕರಡಿ ಮತ್ತು ಚಂದ್ರಶೇಖರ್ ಕಳೆದ ವರ್ಷದಿಂದ ರಾಜಕೀಯ ಎದುರಾಳಿಗಳಾಗಿದ್ದಾರೆ. ಇವರ ಒಡಕು ಕೊಪ್ಪಳ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ ಅವರ ಗೆಲುವಿಗೆ ಅನುಕೂಲವಾಗಿತ್ತು.

ಪೈಪೋಟಿ: ಈಗ ಸಂಗಣ್ಣ ಕರಡಿ, ಚಂದ್ರಶೇಖರ್ ಇಬ್ಬರೂ 'ನನಗೇ ಟಿಕೆಟ್ ನೀಡಬೇಕು' ಎಂದು ವರಿಷ್ಠರಿಗೆ ದುಂಬಾಲು ಬಿದಿದ್ದಾರೆ. ಟಿಕೆಟ್‌ಗಾಗಿ ಇವರ ಪೈಪೋಟಿ ಒಂದೆಡೆಯಾದರೆ, ವೃತ್ತಿಯಲ್ಲಿ ವೈದ್ಯರಾಗಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕೆ. ಬಸವರಾಜ ಕೂಡ ಟಿಕೆಟ್‌ಗಾಗಿ ತಮ್ಮ ಆಪ್ತ ಬಳಗದವರನ್ನು ಕರೆದುಕೊಂಡು ಪಕ್ಷದ ನಾಯಕರನ್ನು ಭೇಟಿಯಾಗುತ್ತಿದ್ದಾರೆ. ಹೀಗಾಗಿ ಟಿಕೆಟ್‌ಗಾಗಿ ತುರುಸಿನ ಪೈಪೋಟಿ ನಡೆದಿದೆ.

ಕಾಂಗ್ರೆಸ್‌ನಲ್ಲಿಯೂ ಹೋರಾಟ: ಎಂಟು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿಯೂ ಪ್ರಮುಖವಾಗಿ ಮೂವರ ನಡುವೆ ಪೈಪೋಟಿ ಏರ್ಪಟ್ಟಿದೆ.

ಹಿಂದಿನ ಎರಡು ಲೋಕಸಭಾ ಚುನಾವಣೆಯಲ್ಲಿ ಸೋತಿರುವ ಶಾಸಕ ರಾಘವೇಂದ್ರ ಹಿಟ್ನಾಳ ಅವರ ಸಹೋದರ ರಾಜಶೇಖರ ಹಿಟ್ನಾಳ ಈ ಬಾರಿಯೂ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಕುಷ್ಟಗಿ ಕ್ಷೇತ್ರದ ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ ಮತ್ತು ಸಿಂಧನೂರಿನ ಬಸನಗೌಡ ಬಾದರ್ಲಿ ಕೂಡ ಟಿಕೆಟ್ ಗಿಟ್ಟಿಸಲು ತೆರೆಮರೆಯ ಕಸರತ್ತು ನಡೆಸುತ್ತಿದ್ದಾರೆ.


ಮುಖ್ಯಾಂಶಗಳು

- ಸತತ ಎರಡು ಬಾರಿ ಸಂಸದರಾಗಿರುವ ಸಂಗಣ್ಣ ಕರಡಿ
- ಕಳೆದ ವರ್ಷ ಜೆಡಿಎಸ್ ಸೇರಿರುವ ಸಿ.ವಿ. ಚಂದ್ರಶೇಖರ್
- ಕಾಂಗ್ರೆಸ್‌ನಲ್ಲಿ ಮೂವರ ನಡುವೆ ಟಿಕೆಟ್‌ಗಾಗಿ ಪೈಪೋಟಿ

ಬಿಜೆಪಿ ಸೇರುವರೇ ಚಂದ್ರಶೇಖರ್?

ಮುನಿಸು ಮರೆತು ಪಕ್ಷಕ್ಕೆ ಮರಳುವಂತೆ ಬಿಜೆಪಿಯ ಹಲವು ನಾಯಕರು ಸಿ.ವಿ.ಚಂದ್ರಶೇಖರ್ ಅವರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದು, ಮಾತೃಪಕ್ಷಕ್ಕೆ ಮರಳಿ ಬರುತ್ತಾರೆ ಎನ್ನುವ ಚರ್ಚೆ ಜಿಲ್ಲೆಯ ರಾಜಕೀಯ ವಲಯದಲ್ಲಿದೆ.

ಪಕ್ಷಗಳ ವರಿಷ್ಠರು ಮೈತ್ರಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಚಂದ್ರಶೇಖರ್ ಅವರು ಪಕ್ಷ ತಿಳಿಸುವ ಅಭ್ಯರ್ಥಿಗೆ ಬೆಂಬಲ ನೀಡುತ್ತಾರೆಯೊ? ಅಥವಾ ಮಾತೃ ಪಕ್ಷಕ್ಕೆ ಮರಳಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತಾರೋ ಎನ್ನುವ ಕುತೂಹಲವಿದೆ. ಈ ಬಗ್ಗೆ ಅವರನ್ನು ಕೇಳಿದಾಗ 'ಬಿಜೆಪಿಯಿಂದ ಟಿಕೆಟ್ ನೀಡಿದರೆ ಮಾತ್ರ ಆ ಪಕ್ಷ ಸೇರುವೆ' ಎಂದರು.


ಸಿ.ವಿ. ಚಂದ್ರಶೇಖರ್

ರಾಜ್ಯಸಭೆಗೆ ಸುಧಾಮೂರ್ತಿ

ಒಂದನೇ ಪುಟದಿಂದ

ಸುಧಾಮೂರ್ತಿ ಅವರ ನೇಮಕದಿಂದಾಗಿ ಎಲ್ಲ ಸ್ಥಾನಗಳನ್ನು ಭರ್ತಿ ಮಾಡಿದಂತಾಗಿದೆ. ನಾಮನಿರ್ದೇಶಿತ ಸದಸ್ಯರಾದ ರಾಕೇಶ್ ಸಿನ್ಹಾ, ಮಹೇಶ್ ಜೇಠ್ಮಲಾನಿ, ಗುಲಾಮ್ ರಾಮ್ ಶಕಲ್ ಹಾಗೂ ಸೋನಾಲ್ ಮಾನ್‌ಸಿಂಗ್ ಅವರು ಜುಲೈ 13ರಂದು ನಿವೃತ್ತರಾಗಲಿದ್ದಾರೆ.

ನಿವೃತ್ತ ನ್ಯಾಯಮೂರ್ತಿ ರಂಜನ್ ಗೊಗೊಯ್, ಇಳಯರಾಜ, ವಿ.ವಿಜಯೇಂದ್ರ ಪ್ರಸಾದ್, ಸತ್ನಮ್ ಸಿಂಗ್ ಹಾಗೂ ಪಿ.ಟಿ. ಉಷಾ ಅವರು ಇತರ ನಾಮನಿರ್ದೇಶಿತ ಸದಸ್ಯರು.

'ಸುಪ್ರೀಂ'ನಲ್ಲಿ 11ರಂದು ಎಸ್‌ಬಿಐ ಅರ್ಜಿ ವಿಚಾರಣೆ

ನವದೆಹಲಿ(ಪಿಟಿಐ): ರಾಜಕೀಯ ಪಕ್ಷಗಳು ನಗದೀಕರಿಸಿಕೊಂಡ ಪ್ರತಿ ಚುನಾವಣಾ ಬಾಂಡ್ ಕುರಿತ ವಿವರಗಳನ್ನು ಸಲ್ಲಿಸಲು ನೀಡಿದ್ದ ಗಡುವನ್ನು ಜೂನ್ 30ರ ವರೆಗೆ ವಿಸ್ತರಿಸುವಂತೆ ಕೋರಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 11ರಂದು ನಡೆಸಲಿದೆ.

ಅಲ್ಲದೇ, ಗಡುವನ್ನು ವಿಸ್ತರಿಸುವಂತೆ ಕೋರಿರುವ ಎಸ್‌ಬಿಐ ವಿರುದ್ಧ ಸಲ್ಲಿಸಲಾಗಿರುವ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆಯನ್ನು ಕೂಡ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ನಡೆಸಲಿದೆ.

ಕ್ಷೇತ್ರ ಏಳು; 'ಕೈ' ಹುರಿಯಾಳು

ಒಂದನೇ ಪುಟದಿಂದ...

ಬೆಂಗಳೂರು ಗ್ರಾಮಾಂತರದಿಂದ ಹಾಲಿ ಸಂಸದ ಡಿ.ಕೆ. ಸುರೇಶ್ ಕಣಕ್ಕಿಳಿಯಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಹೋದರರಾಗಿರುವ ಅವರು ಎರಡು ಬಾರಿ ಗೆದ್ದಿದ್ದಾರೆ. 2019ರಲ್ಲಿ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಷ್ಟೇ ಕಾಂಗ್ರೆಸ್ ಗೆದ್ದಿತ್ತು.

ಶಿವಮೊಗ್ಗ ಕ್ಷೇತ್ರದ ಅಭ್ಯರ್ಥಿಯಾಗಿರುವ ಗೀತಾ ಶಿವರಾಜಕುಮಾರ್ ಅವರು ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಪುತ್ರಿ. ಗೀತಾ ಈ ಹಿಂದೆ 2014ರ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರು. ಆಗ ಬಿಜೆಪಿ ಅಭ್ಯರ್ಥಿ ಆಗಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಸ್ಪರ್ಧಿಸಿ ಸೋಲು ಕಂಡಿದ್ದರು. ಆಗಿನ ಚುನಾವಣೆ ಇಡೀ ದೇಶದ ಗಮನ ಸೆಳೆದಿತ್ತು. 2023ರ ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. ಸಹೋದರ, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಬಲ ಹಾಗೂ ಪತಿ, ನಟ ಶಿವರಾಜಕುಮಾರ್ ಅವರ ವರ್ಚಸ್ಸು ಗೀತಾ ಬೆನ್ನಿಗಿದೆ.

ನಿವೃತ್ತ ನ್ಯಾಯಾಧೀಶರಾಗಿರುವ ಎಸ್.ಪಿ.ಮುದ್ದಹನುಮೇಗೌಡ ಅವರು 1994ರಿಂದ 2004ರವರೆಗೆ ಕುಣಿಗಲ್ ಕ್ಷೇತ್ರದ ಶಾಸಕರಾಗಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ತುಮಕೂರಿನಿಂದ ಗೆದ್ದಿದ್ದರು. 2019ರ ಚುನಾವಣೆಯಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರನ್ನು ಕಾಂಗ್ರೆಸ್–ಜೆಡಿಎಸ್ ಮೈತ್ರಿ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲಾಗಿತ್ತು. ಹಾಗಾಗಿ, ಮುದ್ದಹನುಮೇಗೌಡರಿಗೆ ಟಿಕೆಟ್ ಸಿಕ್ಕಿರಲಿಲ್ಲ. ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವುದಾಗಿ 'ಕೈ' ನಾಯಕರು ಭರವಸೆ ನೀಡಿದ್ದರು. ಕಾಂಗ್ರೆಸ್ ನಾಯಕರು ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ ಎಂದು ಆರೋಪಿಸಿ ಅವರು ವಿಧಾನಸಭಾ ಚುನಾವಣೆಗೆ ಮುನ್ನ ಬಿಜೆಪಿಗೆ ಸೇರಿದ್ದರು. ಕುಣಿಗಲ್ ಕ್ಷೇತ್ರದಿಂದ ಸ್ಪರ್ಧಿಸಲು ಅಭಿಲಾಷೆ ವ್ಯಕ್ತಪಡಿಸಿದ್ದರು. ಬಿಜೆಪಿಯೂ ಟಿಕೆಟ್ ನೀಡಿರಲಿಲ್ಲ. ಕೆಲವು ದಿನಗಳ ಹಿಂದೆಯಷ್ಟೇ ಪುನಃ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ವಿಜಯಪುರ ಮೀಸಲು ಕ್ಷೇತ್ರದಲ್ಲಿ ಮಾಜಿ ಶಾಸಕ ರಾಜು ಆಲಗೂರ ಅವರಿಗೆ ಮಣೆ ಹಾಕಲಾಗಿದೆ. ವಿಜಯಪುರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷರೂ ಆಗಿರುವ ಅವರು ಬಲಗೈ (ಚಲವಾದಿ) ಸಮುದಾಯಕ್ಕೆ ಸೇರಿದವರು. 1999–2004ರಲ್ಲಿ ಬಳ್ಳೊಳ್ಳಿ ಮೀಸಲು ವಿಧಾನಸಭಾ ಕ್ಷೇತ್ರ ಹಾಗೂ 2013–18ರಲ್ಲಿ ನಾಗಠಾಣ ಮೀಸಲು ಕ್ಷೇತ್ರದಿಂದ ಶಾಸಕರಾಗಿದ್ದರು.

ಹಾಸನ ಕ್ಷೇತ್ರದ ಹುರಿಯಾಳು ಆಗಿರುವ ಎಂ.ಶ್ರೇಯಸ್ ಪಟೇಲ್ ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ಹೊಳೆನರಸೀಪುರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜೆಡಿಎಸ್‌ನ ಎಚ್‌.ಡಿ.ರೇವಣ್ಣ ಅವರಿಗೆ ಪ್ರಬಲ ಸ್ಪರ್ಧೆ ನೀಡಿದ್ದರು. ಅವರು ಮಾಜಿ ಸಂಸದ ಜಿ.ಪುಟ್ಟಸ್ವಾಮಿ ಗೌಡ ಅವರ ಮೊಮ್ಮಗ. ಶ್ರೇಯಸ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಹತ್ತಿರದ ಸಂಬಂಧಿ. 1999ರ ಲೋಕಸಭಾ ಚುನಾವಣೆಯಲ್ಲಿ ಪುಟ್ಟಸ್ವಾಮಿ ಗೌಡ ಅವರು ಎಚ್‌.ಡಿ.ದೇವೇಗೌಡ ಅವರನ್ನು ಸೋಲಿಸಿದ್ದರು. ಹಾಸನದಿಂದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಅವರೇ ಕಣಕ್ಕಿಳಿಯುವ ಸಾಧ್ಯತೆ ದಟ್ಟವಾಗಿದೆ.

ಮಂಡ್ಯ ಕ್ಷೇತ್ರದಿಂದ ನಾಗಮಂಗಲ ತಾಲ್ಲೂಕಿನ ಕನ್ನಾಘಟ್ಟ ಗ್ರಾಮದ ಉದ್ಯಮಿ ವೆಂಕಟರಾಮೇಗೌಡ (ಸ್ಟಾರ್ ಚಂದ್ರು) ಅವರನ್ನು ಕಣಕ್ಕಿಳಿಸಲಾಗಿದೆ. ಅವರು ಗೌರಿಬಿದನೂರಿನ ಪಕ್ಷೇತರ ಶಾಸಕ ಕೆ.ಎಚ್‌.ಪುಟ್ಟಸ್ವಾಮಿ ಗೌಡ ಅವರ ಸಹೋದರ. ಗೌಡರ ಅಳಿಯ ಶರತ್ ಬಚ್ಚೇಗೌಡ ಹೊಸಕೋಟೆಯ ಶಾಸಕ.

ಹಾವೇರಿ ಕ್ಷೇತ್ರದಲ್ಲಿ ಉದ್ಯಮಿ ಆನಂದಸ್ವಾಮಿ ಗಡ್ಡದೇವರಮಠ ಅವರಿಗೆ ಮಣೆ ಹಾಕಲಾಗಿದೆ. ಮೊದಲ ಪಟ್ಟಿಯಲ್ಲಿ ಹಾವೇರಿ ಕ್ಷೇತ್ರದ ಅಭ್ಯರ್ಥಿಯ ಘೋಷಣೆಯಾಗುವ ನಿರೀಕ್ಷೆ ಬಹುತೇಕ ಕಾಂಗ್ರೆಸ್ ನಾಯಕರಿಗೆ ಇರಲಿಲ್ಲ. ಅಚ್ಚರಿಯ ಅಭ್ಯರ್ಥಿಯ ರೂಪದಲ್ಲಿ ಆನಂದಸ್ವಾಮಿ ಅವರನ್ನು ಪಕ್ಷ ಕಣಕ್ಕಿಳಿಸಿದೆ. ಈ ಕ್ಷೇತ್ರದಿಂದ ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಣಕ್ಕಿಳಿಯುವ ಸಾಧ್ಯತೆ ಇದೆ.

ಆನಂದಸ್ವಾಮಿ ಅವರು ಶಿರಹಟ್ಟಿಯ ಮಾಜಿ ಶಾಸಕ ಜಿ.ಎಸ್.ಗಡ್ಡದೇವರಮಠ ಅವರ ಪುತ್ರ. 1998ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು. 2011ರಲ್ಲಿ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಬೆಳಗಾವಿ ಗ್ರಾಮೀಣ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ಸ್ಪರ್ಧಿಸಿ ಸೋತಿದ್ದರು.



ಸುಭಾಷಿತ

ತಮ್ಮ ಬದುಕಿನ ಹೊಣೆಗಾರಿಕೆಯನ್ನು ತಾವೇ ಹೊರುವ ಅವಕಾಶವನ್ನು ಮಹಿಳೆಯರಿಗೆ ನೀಡದ ವಿನಾ ನಿಜವಾದ ಪ್ರಜಾಪ್ರಭುತ್ವ ಸಾಕಾರಗೊಳ್ಳದು.

–ಹಿಲರಿ ಕ್ಲಿಂಟನ್

ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ತ್ವರಿತ ಸ್ಪಂದನ ಅಗತ್ಯ

ಬರದ ಬವಣೆಯಿಂದ ತತ್ತರಿಸಿರುವ ರಾಜ್ಯವನ್ನು ಕುಡಿಯುವ ನೀರಿನ ಸಮಸ್ಯೆ ಬಾಧಿಸತೊಡಗಿದೆ. ಬೇಸಿಗೆಯ ಧಗೆಯಿಂದಾಗಿ ತಾಪಮಾನದಲ್ಲಿ ಭಾರಿ ಏರಿಕೆಯಾಗಿದೆ. ಕರಾವಳಿ, ಮಲೆನಾಡು, ಬಯಲುಸೀಮೆ ಸೇರಿದಂತೆ ರಾಜ್ಯದ ಎಲ್ಲ ಭಾಗಗಳಲ್ಲೂ ಬಿಸಿಲಿನ ಝಳಕ್ಕೆ ನಾಗರಿಕರು ತತ್ತರಿಸಿ ಹೋಗಿದ್ದಾರೆ. ಹಗಲಿನ ಬಹುತೇಕ ಅವಧಿಯಲ್ಲಿ ಜನ ಮನೆಗಳಿಂದ ಹೊರ ಬರಲಾಗದಂತಹ ಸ್ಥಿತಿ ಇದೆ. ರಾಜ್ಯದ ಬಹುತೇಕ ಜಲಮೂಲಗಳು ಬತ್ತಿಹೋಗಿವೆ. ಜಲಾಶಯಗಳಲ್ಲಿ ನೀರಿನ ಸಂಗ್ರಹ ತಳಮಟ್ಟಕ್ಕೆ ಇಳಿದಿದೆ. ಹಲವು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟದಲ್ಲೂ ದಿಢೀರ್ ಕುಸಿತವಾಗಿದ್ದು, ಕೊಳವೆಬಾವಿಗಳಿಂದಲೂ ನೀರೆತ್ತಲು ಸಾಧ್ಯವಾಗುತ್ತಿಲ್ಲ. ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರಿದ್ದ 110 ಹಳ್ಳಿಗಳೂ ಸೇರಿದಂತೆ ಬೆಂಗಳೂರು ನಗರದ ಬಹುಭಾಗಗಳಲ್ಲಿ ನೀರಿನ ಕೊರತೆ ಉಲ್ಬಣಿಸಿದೆ. ಕೆಲವು ಪ್ರದೇಶಗಳಲ್ಲಿ ವಾರಕ್ಕೊಮ್ಮೆಯೂ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಕುಡಿಯುವ ನೀರಿಗಾಗಿ ಜನ ಪಡಿಪಾಟಲು ಅನುಭವಿಸುತ್ತಿದ್ದಾರೆ. ಜನರಷ್ಟೇ ಅಲ್ಲ, ಜಾನುವಾರುಗಳೂ ನೀರಿನ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿವೆ. ವನ್ಯಜೀವಿಗಳೂ ದಾಹ ತೀರಿಸಿಕೊಳ್ಳಲು ಪರಿತಪಿಸುವಂತಹ ಪರಿಸ್ಥಿತಿ ಹಲವೆಡೆ ಸೃಷ್ಟಿಯಾಗಿದೆ. ವಾಡಿಕೆಯಂತೆ ಮಳೆಗಾಲ ಆರಂಭವಾಗಲು ಇನ್ನೂ ಸುಮಾರು ಮೂರು ತಿಂಗಳು ಬಾಕಿ ಇದ್ದು, ಇದೇ ಸ್ಥಿತಿ ಮುಂದುವರಿದರೆ ರಾಜ್ಯದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಬಹುದು. ಹಲವು ವರ್ಷಗಳಿಂದಲೂ ರಾಜ್ಯವು ಬೇಸಿಗೆಯ ಅವಧಿಯಲ್ಲಿ ನೀರಿನ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿದೆ. ಆದರೆ, ನೀರಿನ ಸಮಸ್ಯೆಯು ಮಾರ್ಚ್ ತಿಂಗಳಲ್ಲೇ ರಾಜ್ಯದ ಬಹುಭಾಗವನ್ನು ಈ ಮಟ್ಟಿಗೆ ಆವರಿಸಿರುವುದು ಜನಸಮುದಾಯಗಳನ್ನು ಚಿಂತೆಗೆ ದೂಡಿದೆ.



ಟ್ಯಾಂಕರ್ ಮಾಫಿಯಾ ಜನರನ್ನು ಸುಲಿಗೆ ಮಾಡದಂತೆ ನಿಗಾ ವಹಿಸಬೇಕು. ನೀರಿನ ಮಿತಬಳಕೆ ಕುರಿತು ಜನಜಾಗೃತಿ ಮೂಡಿಸಬೇಕು

ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. 194 ತಾಲ್ಲೂಕುಗಳಲ್ಲಿ ಬರದ ತೀವ್ರತೆ ಹೆಚ್ಚಿಗಿದೆ. ಕಂದಾಯ ಇಲಾಖೆಯ ಅಂಕಿಅಂಶಗಳ ಪ್ರಕಾರ, ರಾಜ್ಯದ 98 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ ತೀವ್ರವಾಗಿದೆ. ಈ ಬೇಸಿಗೆಯ ಅವಧಿಯಲ್ಲಿ ಒಟ್ಟು 7,408 ಹಳ್ಳಿಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ 1,115 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಅಭಾವ ಎದುರಾಗಬಹುದು ಎಂಬ ಅಂದಾಜು ವರದಿಯೂ ರಾಜ್ಯ ಸರ್ಕಾರದ ಮುಂದಿದೆ. ಇವು ರಾಜ್ಯವು ಈ ಬಾರಿ ಎದುರಿಸುತ್ತಿರುವ ಕುಡಿಯುವ ನೀರಿನ ಕೊರತೆಯ ತೀವ್ರತೆಗೆ ಸಾಕ್ಷ್ಯ ಒದಗಿಸುತ್ತವೆ. ಮುಂಗಾರು ಆರಂಭಕ್ಕೂ ಮುನ್ನ ಬೇಸಿಗೆಯಲ್ಲಿ ಮಳೆ ಬೀಳದೇ ಇದ್ದರೆ ನೀರಿನ ಕೊರತೆ ಇನ್ನಷ್ಟು ಪ್ರದೇಶಗಳನ್ನು ವ್ಯಾಪಿಸುವ ಸಾಧ್ಯತೆಯೂ ಇದೆ. ದೇಶದಲ್ಲೇ ಬಹುಬೇಗ ಬರಪೀಡಿತ ತಾಲ್ಲೂಕುಗಳ ಪಟ್ಟಿಯನ್ನು ಘೋಷಿಸಿದ್ದ ರಾಜ್ಯ ಸರ್ಕಾರ, ನೀರು ಮತ್ತು ಮೇವಿನ ಕೊರತೆ ಸೃಷ್ಟಿಯಾಗಬಹುದಾದ ಜನವಸತಿಗಳ ಪಟ್ಟಿ ಸಿದ್ಧಪಡಿಸುವ ಕೆಲಸವನ್ನೂ ಆರಂಭಿಸಿತ್ತು. ಅಂದಾಜು ವರದಿ ಈಗ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗದ ಬಳಿ ಇದೆ. ಆದರೆ, ವರದಿ ಪಡೆದ ಮಾತ್ರಕ್ಕೆ ಸಮಸ್ಯೆ ಪರಿಹಾರವಾಯಿತು ಎಂದು ಭಾವಿಸಲಾಗದು. ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯ ಕಾರ್ಯಪಡೆಗಳು ಮತ್ತು ಜಿಲ್ಲಾ ಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ನಿರಂತರವಾಗಿ ಸಭೆಗಳನ್ನು ನಡೆಸಿವೆ. ಕುಡಿಯುವ ನೀರು ಮತ್ತು ಮೇವಿನ ಕೊರತೆಗೆ ಪರಿಹಾರ ಒದಗಿಸಲು ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗಳಲ್ಲಿ ₹ 854 ಕೋಟಿ ಲಭ್ಯವಿದೆ ಎಂದೂ ಸರ್ಕಾರ ಹೇಳಿದೆ. ಇಷ್ಟಾಗಿಯೂ ಕುಡಿಯುವ ನೀರಿನ ಕೊರತೆ ಉಲ್ಬಣಿಸತೊಡಗಿದೆ. ಸಮಸ್ಯೆ ಎದುರಿಸಲು ವ್ಯವಸ್ಥಿತ ಕಾರ್ಯತಂತ್ರ ರೂಪಿಸುವಲ್ಲಿ ಮತ್ತು ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಆಡಳಿತ ವ್ಯವಸ್ಥೆ ಎಡವಿರುವುದನ್ನು ಇದು ಸೂಚಿಸುತ್ತದೆ.

ಕುಡಿಯುವ ನೀರಿನ ಕೊರತೆ ಕಾಡುತ್ತಿರುವ ಈ ಹೊತ್ತಿನಲ್ಲೇ ಲೋಕಸಭಾ ಚುನಾವಣೆಯೂ ಹೊಸಿಲಲ್ಲಿ ನಿಂತಿದೆ. ರಾಜ್ಯದ ಆಡಳಿತ ವ್ಯವಸ್ಥೆ ಈಗಾಗಲೇ ಚುನಾವಣಾ ತಯಾರಿಯಲ್ಲಿ ಸಕ್ರಿಯವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಆಡಳಿತಯಂತ್ರವು ಸಂಪೂರ್ಣವಾಗಿ ತೊಡಗಿಕೊಳ್ಳಲೇಬೇಕು. ಆದರೆ, ಚುನಾವಣೆಯ ಕಾರಣಕ್ಕಾಗಿ, ಕುಡಿಯುವ ನೀರಿನ ಕೊರತೆಗೆ ಪರಿಹಾರ ಒದಗಿಸುವ ಹೊಣೆಗಾರಿಕೆಯನ್ನು ನಿಭಾಯಿಸುವುದರಿಂದ ತಪ್ಪಿಸಿಕೊಳ್ಳಲಾಗದು. ನೀರಿನ ಬವಣೆಯಿಂದ ರಾಜ್ಯದ ಜನ ಮತ್ತು ಜಾನುವಾರುಗಳನ್ನು ಪಾರು ಮಾಡಲು ರಾಜ್ಯ ಸರ್ಕಾರ ತಕ್ಷಣದಿಂದಲೇ ಸಮರೋಪಾದಿಯಲ್ಲಿ ಕಾರ್ಯಪ್ರವೃತ್ತವಾಗಬೇಕು. ನೀರು ಲಭ್ಯವಿರುವ ಜಲಮೂಲಗಳನ್ನು ಗುರುತಿಸಿ, ಕೊರತೆ ಇರುವ ಪ್ರದೇಶಗಳಲ್ಲಿ ಪೂರೈಕೆಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು. ಟ್ಯಾಂಕರ್ ಮಾಫಿಯಾದವರು ಜನರನ್ನು ಸುಲಿಗೆ ಮಾಡದಂತೆ ನಿಗಾ ವಹಿಸಬೇಕು. ಜತೆಯಲ್ಲೇ ನೀರಿನ ಮಿತಬಳಕೆ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನೂ ಆರಂಭಿಸಬೇಕು. ರಾಜ್ಯದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸೇರಿದಂತೆ ಹಲವು ಯೋಜನೆಗಳು ಅನುಷ್ಠಾನಕ್ಕೆ ಬಂದಿದ್ದರೂ, ಪರಿಹಾರ ಮರೀಚಿಕೆಯಾಗಿಯೇ ಉಳಿದಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದ ಜಲ ಜೀವನ್ ಮಿಷನ್ ಯೋಜನೆ ಪ್ರಗತಿಯಲ್ಲಿದೆ. ಈ ಅವಧಿಯಲ್ಲಿ ಸಮಸ್ಯೆ ಎದುರಿಸಲು ಅದರಿಂದ ಹೆಚ್ಚೇನೂ ಅನುಕೂಲ ಆಗುವುದಿಲ್ಲ. ತಕ್ಷಣದ ಆದ್ಯತೆಗಳಿಗೆ ಸ್ಪಂದಿಸುವುದರ ಜತೆಗೇ ಭವಿಷ್ಯದ ದಿನಗಳಲ್ಲಿ ಕುಡಿಯುವ ನೀರಿನ ಕೊರತೆಗೆ ಶಾಶ್ವತ ಪರಿಹಾರ ಒದಗಿಸುವ ದಿಸೆಯಲ್ಲಿ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಬದ್ಧತೆಯನ್ನು ರಾಜ್ಯ ಸರ್ಕಾರ ತೋರಬೇಕು.

ದಿನದ ಟ್ವೀಟ್

ಆಹಾರ ಸಂಸ್ಕೃತಿ ಗೌರವಿಸಿ

ಯಾವುದೇ ಪಕ್ಷವು ಆಡಳಿತದ ಚುಕ್ಕಾಣಿ ಹಿಡಿಯಲಿ, ಹಬ್ಬದ ದಿನ ಮಾಂಸ ಮಾರಾಟವನ್ನು ನಿಷೇಧಿಸುವ ಮೌಢ್ಯ ಮಾತ್ರ ಮುಂದುವರಿದುಕೊಂಡೇ ಬಂದಿದೆ! ಜನರ ಆಹಾರಾಭ್ಯಾಸದ ನಡುವೆ ಇವರು ಮೂಗು ತೂರಿಸುವುದೇಕೆ? ರಚನಾತ್ಮಕವಾಗಿ ಮಾಡುವಂತಹ ಬೇರೆ ಯಾವ ಕೆಲಸವೂ ಇವರಿಗೆ ಇಲ್ಲವೇ?



ರಾಮಚಂದ್ರ ಎಮ್.

ಕಿಡಿನುಡಿ

ಎಲ್‌ಪಿಜಿ ಅನಿಲ ಸಿಲಿಂಡರನ್ನು ಮಹಿಳಾ ದಿನಾಚರಣೆಯೊಂದಿಗೆ ಸಮೀಕರಿಸುವುದು ಲಿಂಗತಾರತಮ್ಯ!

(ಮಹಿಳಾ ದಿನಾಚರಣೆ ಪ್ರಯುಕ್ತ ಎಲ್‌ಪಿಜಿ ಸಿಲಿಂಡರ್ ದರ ತಗ್ಗಿಸಿರುವ ಕೇಂದ್ರ ಸರ್ಕಾರದ ಕ್ರಮಕ್ಕೆ ಪ್ರತಿಕ್ರಿಯೆ)



ಮಿನಿ ನಾಯರ್, ಲೇಖಕಿ

25 ವರ್ಷಗಳ ಹಿಂದೆ

ಮಂಗಳವಾರ, 9-3-1999

● **ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ರದ್ದು**

ನವದೆಹಲಿ, ಮಾರ್ಚ್ 8– ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿದ ಸುಗ್ರೀವಾಜ್ಞೆಯನ್ನು ಇಂದು ರಾತ್ರಿ ವಾಪಸ್ ಪಡೆಯುವ ಮೂಲಕ, 24 ದಿನಗಳ ನಂತರ ರಾಬ್ಡಿದೇವಿ ನೇತೃತ್ವದ ರಾಷ್ಟ್ರೀಯ ಜನತಾದಳ ನೇತೃತ್ವದ ಸರ್ಕಾರದ ಪುನರ್ ಪ್ರತಿಷ್ಠಾಪನೆಗೆ ದಾರಿ ಮಾಡಿಕೊಡಲಾಯಿತು.

ರಾಷ್ಟ್ರಪತಿ ಆಳ್ವಿಕೆಯ ಆಜ್ಞೆಯನ್ನು ಹಿಂತೆಗೆದುಕೊಂಡಿರುವುದನ್ನು ಗೃಹ ಸಚಿವ ಅಡ್ವಾಣಿ ಲೋಕಸಭೆಗೆ ಮುಜುಗರದಿಂದ ತಿಳಿಸಿದರು. ಪ್ರಧಾನಿ ವಾಜಪೇಯಿ ಅವರು ರಾಜ್ಯಸಭೆಯಲ್ಲಿ ಬಿಹಾರದ ಗೊತ್ತುವಳಿಗೆ ಕಾಂಗ್ರೆಸ್ ಪಕ್ಷದ ಬೆಂಬಲ ಪಡೆಯಲು ಅದರ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಜತೆ ನಡೆಸಿದ ಮಾತುಕತೆ ವಿಫಲವಾಗಿತ್ತು.

ಗೊತ್ತುವಳಿಯನ್ನು ವಿರೋಧಿ ಕಾಂಗ್ರೆಸ್ ಪಕ್ಷವು ರಾಜ್ಯಸಭೆಯಲ್ಲಿ ಬೆಂಬಲಿಸದೇ ಇರಲು ಕೈಗೊಂಡ ದೃಢ ನಿರ್ಧಾರದ ಹಿನ್ನೆಲೆಯಲ್ಲಿ ಕೇಂದ್ರಕ್ಕೆ ಕೈಕಟ್ಟಿದಂತಾಯಿತು. ಇಂದು ಬೆಳಿಗ್ಗೆ ನಡೆದ ಸಚಿವ ಸಂಪುಟದ ಸಭೆಯು ರಾಷ್ಟ್ರಪತಿ ಆಜ್ಞೆಯನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿತು.

50 ವರ್ಷಗಳ ಹಿಂದೆ

ಶನಿವಾರ, 9-3-1974

● **ಶಾಸನಕ್ಕಾಗಿ ಕಾಯದೇ ಹೊಸ ತೆರಿಗೆಗಳ ವಸೂಲಿ**

ಬೆಂಗಳೂರು, ಮಾರ್ಚ್ 8– ಹೊಸ ಅಥವಾ ಅಧಿಕ ತೆರಿಗೆಗಳಿಗೆ ಸಂಬಂಧಿಸಿದ ವಿಧೇಯಕವು ಶಾಸನವಾಗುವುದಕ್ಕೆ ಕಾಯದೇ, ವಿಧೇಯಕವು ವಿಧಾನ ಮಂಡಲದಲ್ಲಿ ಮಂಡಿಸಲ್ಪಟ್ಟ ದಿನದಿಂದಲೇ ಅಂಥ ತೆರಿಗೆಗಳ ವಸೂಲಿಗೆ ಅವಕಾಶ ಕಲ್ಪಿಸುವ ವಿಧೇಯಕವನ್ನು ವಿಧಾನಸಭೆ ಇಂದು ಅಂಗೀಕರಿಸಿತು.

ಒಂದು ವೇಳೆ ತೆರಿಗೆ ವಿಧೇಯಕವು ಶಾಸನವಾಗಿ ಜಾರಿಗೆ ಬರದೇಹೋದರೆ, ಆ ಅವಧಿಯಲ್ಲಿ (ಗರಿಷ್ಠ ಅವಧಿ 2 ತಿಂಗಳು) ಸಂಗ್ರಹವಾದ ತೆರಿಗೆಯನ್ನು ಸಂಗ್ರಹಿಸಿದ ವರಿಗೆ ವಾಪಸು ಕೊಡುವ ವ್ಯವಸ್ಥೆ ಮಾಡಲು ಸಾಧ್ಯವಿದೆ ಎಂದು ವಿಧೇಯಕ ಮಂಡಿಸಿದ ಅರ್ಥಮಂತ್ರಿ ಎಂ.ವೈ.ಘೋರ್ಪಡೆ ಅವರು ತಿಳಿಸಿದರು.

● **ವಿಜಯನಗರ ಉಕ್ಕು ಕಾರ್ಖಾನೆ ನಿರಾಶೆ ಬೇಡ–ಸಚಿವ ಕೃಷ್ಣ**

ಬೆಂಗಳೂರು, ಮಾರ್ಚ್ 8– ವಿಜಯನಗರ ಉಕ್ಕಿನ ಕಾರ್ಖಾನೆಯ ವಿಚಾರದಲ್ಲಿ ಕರ್ನಾಟಕದ ಜನತೆ ನಿರಾಶರಾಗಬೇಕಾಗಿಲ್ಲ ಎಂದು ಕೈಗಾರಿಕಾ ಸಚಿವ ಎಸ್.ಎಂ.ಕೃಷ್ಣ ಅವರು ಇಂದು ವಿಧಾನಪರಿಷತ್ತಿನಲ್ಲಿ ಹೇಳಿ, ಐದನೇ ಯೋಜನೆಯಲ್ಲಿ ಅದನ್ನು ಕೈಬಿಡಲಾಗಿದೆ ಎಂದು ಕೇಂದ್ರ ಸರ್ಕಾರ ಅಧಿಕೃತವಾಗಿ ಯಾವುದೇ ವಿಚಾರವನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿಲ್ಲ ಎಂದರು.

‘ಉಕ್ಕಿನ ಕಾರ್ಖಾನೆ ವಿಚಾರ ಇಷ್ಟು ಬೇಗ ಪರಿಸಮಾಪ್ತಿ ಆಗಲು ರಾಜ್ಯ ಸರ್ಕಾರ ಬಿಡೋದಿಲ್ಲ’ ಎಂದು ಹೇಳಿ ‘900 ಕೋಟಿ ರೂ.ಗಳ ಕೆಲಸ ಮಾತನಾಡುವಷ್ಟು ಸುಲಭವಲ್ಲ’ ಎಂದರು.

ಜಲ ಹಾಹಾಕಾರಕ್ಕೆ ನೀರಾವಿಯಿಂದ ಪಡೆಯುವ ನೀರು ಉತ್ತರವಾಗಬಹುದು

ವಾಯುಮಂಡಲದಿಂದ ಕುಡಿಯುವ ನೀರು



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಈ ವರ್ಷ ಬೇಸಿಗೆಯ ಪ್ರಾರಂಭದಲ್ಲೇ ಕುಡಿಯುವ ನೀರಿಗಾಗಿ ಬೆಂಗಳೂರಿನಲ್ಲಿ ಹಾಹಾಕಾರವೆದ್ದಿದೆ. ಸಮಸ್ಯೆಯ ಪರಿಹಾರಕ್ಕೆ ₹ 556 ಕೋಟಿ ಮೀಸಲಾಗಿಟ್ಟಿರುವ ಸರ್ಕಾರ, ಯಥಾಪ್ರಕಾರ ಮತ್ತಷ್ಟು ಕೊಳವೆಬಾವಿಗಳನ್ನು ಕೊರೆಯುವುದರ ಜೊತೆಗೆ ಇನ್ನಿತರ ಹಲವಾರು ಕ್ರಮಗಳನ್ನು ಪ್ರಕಟಿಸಿದೆ. ಮಳೆನೀರಿನ ಸಂಗ್ರಹಕ್ಕೆ ಅತಿಹೆಚ್ಚಿನ ಆದ್ಯತೆ ಅಗತ್ಯವೆಂಬ ಮಾತನ್ನು ಪುನರುಚ್ಚರಿಸಿರುವ ಜಲತಜ್ಞರು, ವಾಯುಮಂಡಲದಿಂದ ನೀರು ಪಡೆದು ಪೂರೈಸಬೇಕೆಂಬ ಸಲಹೆಯನ್ನು ನೀಡಿದ್ದಾರೆ. ಈ ಸಲಹೆ ಅತ್ಯಂತ ಸಮಯೋಚಿತ.

ಸಿಕಂದರಾಬಾದ್ ರೈಲು ನಿಲ್ದಾಣದ ಪ್ಲಾಟ್‌ಫಾರಂನಲ್ಲಿ, ಬೆಂಗಳೂರಿನ ಬಿಇಎಲ್ ಸಂಸ್ಥೆ ನಿರ್ಮಿಸಿರುವ ‘ಮೇಘದೂತ’ ಹೆಸರಿನ ಯಂತ್ರವೊಂದಿದೆ. ಈ ಯಂತ್ರ ವಾಯುಮಂಡಲದಿಂದ ಗಾಳಿಯನ್ನು ಹೀರಿಕೊಂಡು ನೇರವಾಗಿ ಕುಡಿಯುವ ನೀರನ್ನು ಉತ್ಪಾದಿಸುತ್ತದೆ. ಒಂದು ಲೀಟರ್ ನೀರಿಗೆ ₹ 8 ದರ ನಿಗದಿಪಡಿಸಲಾಗಿದೆ. ಇದು ಮಾರುಕಟ್ಟೆಯಲ್ಲಿರುವ ಎಲ್ಲ ಬಾಟಲಿ ನೀರಿಗಿಂತ ಅಗ್ಗ. ಬಾಟಲಿ ಬೇಡವೆಂದರೆ ಒಂದು ಲೀಟರ್ ನೀರಿಗೆ ₹ 5 ಮಾತ್ರ. ಕೇಂದ್ರ ರೈಲ್ವೆಯ ಮುಂಬೈ ವಿಭಾಗದ ಛತ್ರಪತಿ ಶಿವಾಜಿ ಟರ್ಮಿನಲ್, ದಾದರ್, ಕುರ್ಲಾ, ಥಾಣೆ, ಘಾಟ್‌ಕೋಪರ್ ಮತ್ತು ವಿಕ್ರೋಲಿ ನಿಲ್ದಾಣಗಳಲ್ಲಿ ಗಾಳಿಯಿಂದ ನೀರು ಪಡೆಯುವ, ಒಟ್ಟು 17 ‘ಮೇಘದೂತ’ ಕಿಯೋಸ್ಕ್‌ಗಳನ್ನು ಹೈದರಾಬಾದ್ ಮೂಲದ ಖಾಸಗಿ ಸಂಸ್ಥೆ ‘ಮೈತ್ರಿ ಅಕ್ವಾಟೆಕ್’ ಸ್ಥಾಪಿಸಿದೆ.

ಹಿಂದಿನ ವರ್ಷದ ಜನವರಿಯಲ್ಲಿ ಒಡಿಶಾದ ಭುವನೇಶ್ವರ ಮತ್ತು ರೂರ್ಕೆಲಾದಲ್ಲಿ ನಡೆದ ಪುರುಷರ ವಿಶ್ವಕಪ್ ಹಾಕಿ ಪಂದ್ಯಗಳ ಸಂದರ್ಭದಲ್ಲಿ ಪ್ರತಿನಿತ್ಯ 20,000 ಪ್ರೇಕ್ಷಕರಿಗೆ ಗಾಳಿಯಿಂದ ಪಡೆದ ಕುಡಿಯುವ ನೀರನ್ನು ಒದಗಿಸಲಾಗಿದೆ. ಈ ಎರಡೂ ನಗರಗಳ ಕ್ರೀಡಾಂಗಣಗಳಲ್ಲಿ ಗಾಳಿಯಿಂದ ನೀರು ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಿದ್ದು ಇಸ್ರೇಲ್‌ನ ವಾಟರ್‌ಜೆನ್ ಎಂಬ ಸಂಸ್ಥೆ. ಪ್ರಪಂಚದ 90 ದೇಶಗಳ ವಿವಿಧ ನಗರ, ಪಟ್ಟಣ ಪ್ರದೇಶಗಳಲ್ಲಿ ಜಲೋತ್ಪಾದಕ ಯಂತ್ರಗಳನ್ನು ವಾಟರ್‌ಜೆನ್ ಸ್ಥಾಪಿಸಿದೆ.

ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆ ತಯಾರಿಸಿರುವ ಮೇಘದೂತ ಸಾಧನವನ್ನು ವಿನ್ಯಾಸ ಮಾಡಿ, ರೂಪಿಸಿದವರು ಮೈತ್ರಿ ಅಕ್ವಾಟೆಕ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿ ಸಂಸ್ಥೆಯ ವಿಜ್ಞಾನಿ, ತಂತ್ರಜ್ಞರು. ಆದರೆ ಮೇಘದೂತವೇ ನಮ್ಮ ದೇಶದ ಮೊದಲ ವಾಯುಮಂಡಲ ಜಲೋತ್ಪಾದಕ ಅಲ್ಲ. 2005ರಷ್ಟು ಹಿಂದೆಯೇ ಮುಂಬೈ ಮೂಲದ ‘ವಾಟರ್ ಮೇಕರ್’ ಎಂಬ ಕಂಪನಿ, ಗಾಳಿಯಲ್ಲಿರುವ ತೇವಾಂಶದಿಂದ ಕುಡಿಯುವ ನೀರನ್ನು ಪಡೆಯುವ ತಂತ್ರಜ್ಞಾನವನ್ನು ಭಾರತಕ್ಕೆ ಪರಿಚಯಿಸಿತು. ಪ್ರಾರಂಭದಲ್ಲಿ ತನ್ನ ಉತ್ಪನ್ನಗಳನ್ನು ಮಧ್ಯಪ್ರಾಚ್ಯದ ದೇಶಗಳಿಗೆ ರಫ್ತು ಮಾಡಿದ ವಾಟರ್ ಮೇಕರ್, ಆನಂತರ ಆಂಧ್ರಪ್ರದೇಶ ಹಾಗೂ ಗುಜರಾತ್‌ನ ತೀವ್ರ ನೀರಿನ ಕೊರತೆಯಿರುವ ಹಳ್ಳಿಗಳಲ್ಲಿ ಇಂತಹ ಯಂತ್ರಗಳನ್ನು ಸ್ಥಾಪಿಸಿತು. ಇದೀಗ ನಮ್ಮ ದೇಶದ ಅನೇಕ ಭಾಗಗಳಲ್ಲಿ ಜಲೋತ್ಪಾದಕ ಯಂತ್ರಗಳು ಕೆಲಸ ಮಾಡುತ್ತಿವೆ.

ಚೆನ್ನೈ ನಗರದಲ್ಲಿ ದಿನವೊಂದಕ್ಕೆ 120 ಲೀಟರ್ ಶುದ್ಧ ಕುಡಿಯುವ ನೀರನ್ನು ಪಡೆಯುತ್ತಿರುವ ಕುಟುಂಬಗಳಿವೆ. ಅದೇ ನಗರದ ಸೆಕೆಂಡರಿ ಶಾಲೆಯೊಂದರಲ್ಲಿ ನಾಲ್ಕು ಯಂತ್ರಗಳನ್ನು ಅಳವಡಿಸಲಾಗಿದೆ. ಮಧ್ಯ ಪ್ರದೇಶದ ಗ್ರಾಮವೊಂದರಲ್ಲಿ ಸ್ಥಾಪಿಸಲಾಗಿರುವ 1,000 ಲೀಟರ್ ಘಟಕ ಅಲ್ಲಿನ 400 ಜನರಿಗೆ ಶುದ್ಧ ಕುಡಿಯುವ ನೀರನ್ನು ಪ್ರತಿದಿನ ಒದಗಿಸುತ್ತಿದೆ. ಪಶ್ಚಿಮ ಬಂಗಾಳದ ಹಾಲ್ದಿಯಾ ತೈಲ ಸಂಸ್ಕರಣಾ ಸ್ಥಾವರದಲ್ಲಿ 1,000 ಲೀಟರ್ ಸಾಮರ್ಥ್ಯದ ಆರು ಘಟಕಗಳಿವೆ. ಲಡಾಕ್ ಗಡಿ ಪ್ರದೇಶದಲ್ಲಿ ಭಾರತೀಯ ಸೈನ್ಯದ ತುಕಡಿಗಳು ಈ ಯಂತ್ರವನ್ನು ಬಳಸುತ್ತಿವೆ. ಅನೇಕ ಕಾರ್ಪೊರೇಟ್ ಸಂಸ್ಥೆಗಳು ಶಾಲೆ, ಚಿಕಿತ್ಸಾಲಯ, ಆಸ್ಪತ್ರೆ, ಸಮುದಾಯ ಕೇಂದ್ರಗಳಲ್ಲಿ ಈ ಯಂತ್ರಗಳನ್ನು ಸ್ಥಾಪಿಸುತ್ತಿವೆ. ಬೆಂಗಳೂರಿನಲ್ಲೇ ಹಲವಾರು ತಾರಾ ಹೋಟೆಲ್‌ಗಳಲ್ಲೂ ಇದು ಲಭ್ಯವಿದೆ. ದಿನಕ್ಕೆ 25 ಲೀಟರ್‌ನಿಂದ 5,000 ಲೀಟರ್‌ಗಳಷ್ಟು ಕುಡಿಯುವ ನೀರನ್ನು ಒದಗಿಸಬಲ್ಲ ಯಂತ್ರಗಳನ್ನು ತಯಾರಿಸಲಾಗುತ್ತಿದೆ.

ನಮ್ಮ ಭೂಮಿಯನ್ನು ಆವರಿಸಿರುವ ವಾಯುಮಂಡಲದಲ್ಲಿ ಇತರ ಅನಿಲಗಳೊಡನೆ ನೀರಾವಿಯೂ ಇದೆ. ಅನಿಲ ಸ್ಥಿತಿಯಲ್ಲಿರುವ ಈ ನೀರು, ದಟ್ಟವಾಗಿರದೆ ವಿರಳವಾಗಿ ಹರಡಿಕೊಂಡಿರುತ್ತದೆ. ಯಾವುದೇ ಸಮಯದಲ್ಲಿ ವಾಯುಮಂಡಲದಲ್ಲಿರುವ ನೀರಾವಿಯ ಪ್ರಮಾಣವು ಇಡೀ ಭೂಮಿಯಲ್ಲಿ ಅಂತರ್ಜಲದ ರೂಪದಲ್ಲಿರುವ ನೀರಿನ ಪ್ರಮಾಣಕ್ಕಿಂತ ಹೆಚ್ಚು. ವಾಯುಮಂಡಲದ ತಾಪ ಹೆಚ್ಚಾದಂತೆ ಅದು ಹಿಡಿದಿಟ್ಟುಕೊಳ್ಳುವ ನೀರಾವಿಯ ಪ್ರಮಾಣವೂ ಏರುತ್ತದೆ. ಈ ಪ್ರಮಾಣ ಗರಿಷ್ಠ ಶೇಕಡ 400ರ ಮಿತಿಯನ್ನು ದಾಟಿದಾಗ ಮತ್ತು ಗಾಳಿಯ ಉಷ್ಣತೆ ಇಳಿದಾಗ, ನೀರಾವಿ ಸಾಂದ್ರೀಕರಣಗೊಂಡು ಇಬ್ಬನಿ, ಕಾವಳ, ಹಿಮದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನೀರಾವಿಯಿರುವ ವಾಯುಮಂಡಲದ ಗಾಳಿಯ ಉಷ್ಣತೆಯನ್ನು ಇಳಿಸುವುದರ ಮೂಲಕ ಸಾಂದ್ರೀಕರಣವನ್ನು ಪ್ರಾರಂಭಿಸಿ ಕುಡಿಯುವ ನೀರನ್ನು ಪಡೆಯಬಹುದು.

ವಾಯುಮಂಡಲದಿಂದ ನೇರವಾಗಿ ಕುಡಿಯುವ ನೀರನ್ನು ಉತ್ಪಾದಿಸುವ ಕ್ಷೇತ್ರದಲ್ಲಿರುವ ಎಲ್ಲ ಕಂಪನಿಗಳೂ ಮೂಲಭೂತವಾಗಿ ಎರಡು ಮಾರ್ಗಗಳನ್ನು ಬಳಸುತ್ತಿವೆ. ಮೊದಲನೆಯದು, ಶೈತ್ಯೀಕರಣ ಶೀತಲನ (ಕೂಲಿಂಗ್ ಬೈ ರೆಫ್ರಿಜಿರೇಷನ್). ಈ ವಿಧಾನದಲ್ಲಿ ತೇವಾಂಶಭರಿತ ಗಾಳಿಯನ್ನು ಯಂತ್ರದ ಮೂಲಕ ಹಾಯಿಸಿ, ಗಾಳಿಯ ತಾಪವನ್ನು ಅದರ ಇಬ್ಬನಿಯ ಬಿಂದುವಿಗಿಂತ (ಡ್ಯೂ ಪಾಯಿಂಟ್) ಕೆಳಗೆ ಇಳಿಸಲಾಗುತ್ತದೆ. ಹೀಗೆ ಮಾಡಿದಾಗ ನೀರಿನ ಬಾಷ್ಪ ಸಾಂದ್ರೀಕರಣಗೊಂಡು ನೀರಿನ ಹನಿಗಳಾಗಿ ಸಂಗ್ರಹವಾಗುತ್ತದೆ. ಎರಡನೆಯ ವಿಧಾನದಲ್ಲಿ, ವಾಯುಮಂಡಲದಲ್ಲಿನ ತೇವಾಂಶವನ್ನು ಸಮರ್ಥವಾಗಿ ಹೀರಿಕೊಳ್ಳುವ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಹೀಗೆ ಹೀರಿಕೊಂಡ ನೀರನ್ನು ಆನಂತರ ಪ್ರತ್ಯೇಕಿಸಿ ಪಡೆಯಲಾಗುತ್ತದೆ.

ವಾಯುಮಂಡಲದಲ್ಲಿರುವ ತೇವಾಂಶದ ಪ್ರಮಾಣವೇ ಆರ್ದ್ರತೆ (ಹ್ಯುಮಿಡಿಟಿ). ಗಾಳಿಯಲ್ಲಿ ಈಗ ಇರುವ ನೀರಿನ ಪ್ರಮಾಣಕ್ಕೂ ಅದೇ ಒತ್ತಡ, ತಾಪದಲ್ಲಿ ಇರಬಹುದಾದ ಗರಿಷ್ಠ ನೀರಾವಿಯ ಪ್ರಮಾಣಕ್ಕೂ ಇರುವ ಅನುಪಾತವೇ ಸಾಪೇಕ್ಷ ಆರ್ದ್ರತೆ (ರಿಲೇಟಿವ್ ಹ್ಯುಮಿಡಿಟಿ). ಗಾಳಿಯಿಂದ ಉತ್ಪಾದಿಸಬಹುದಾದ ಕುಡಿಯುವ ನೀರಿನ ಪ್ರಮಾಣ ಆ ಸ್ಥಳದಲ್ಲಿನ ಗಾಳಿಯ ತಾಪ, ಸಾಪೇಕ್ಷ ಆರ್ದ್ರತೆ ಮತ್ತು ಯಂತ್ರದಲ್ಲಿನ ಕಂಪ್ರೆಸರ್ ಗಾತ್ರದ ಮೇಲೆ ಅವಲಂಬಿತವಾಗಿದೆ. ಇವು ಹೆಚ್ಚಾದಾಗ ಪಡೆಯಬಲ್ಲ ನೀರಿನ ಪ್ರಮಾಣವೂ ಏರುತ್ತದೆ.


ವಾಯುಮಾಲಿನ್ಯ ಹೆಚ್ಚಾದಷ್ಟೂ ಗಾಳಿಯಿಂದ ಪಡೆಯುವ ನೀರಿನಲ್ಲೂ ಮಾಲಿನ್ಯದ ಅಂಶಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ, ಈ ಎಲ್ಲ ಯಂತ್ರಗಳಲ್ಲಿ ಗಾಳಿ ಮತ್ತು ನೀರು ಎರಡನ್ನೂ ವಿವಿಧ ಮಾರ್ಗಗಳಿಂದ ಶೋಧಿಸಿ, ಶುದ್ಧೀಕರಿಸುವ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ. ಅಗತ್ಯವಾದ ಖನಿಜಗಳನ್ನು ಸೇರಿಸುವ ಸೌಲಭ್ಯವೂ ಇದೆ. ವಾಯುಮಂಡಲದಿಂದ ಶುದ್ಧ ನೀರನ್ನು ಉತ್ಪಾದಿಸುವ ಈ ಯಂತ್ರಗಳ ಬೆಲೆ, ನೀರನ್ನು ಉತ್ಪಾದಿಸುವ ಯಂತ್ರದ ಸಾಮರ್ಥ್ಯಕ್ಕೆ ಅನುಸಾರವಾಗಿ ₹ 45,000ದಿಂದ ಹಿಡಿದು ₹ 1 ಕೋಟಿಯವರೆಗೂ ಬದಲಾಗುವುದುಂಟು. ಆದರೆ ಕೆಲವೊಮ್ಮೆ ಕೊಳವೆಬಾವಿ ಕೊರೆಯುವುದಕ್ಕಿಂತ ಅಗ್ಗವಾಗುವುದೂ ಇದೆ.



ಈ ಜಲೋತ್ಪಾದಕ ಯಂತ್ರಗಳು ವಾಯುಮಂಡಲದಿಂದ ತೇವಾಂಶವನ್ನು ಸತತವಾಗಿ ಹೀರಿ ತೆಗೆಯುತ್ತಿದ್ದರೆ ಅಲ್ಲಿನ ತೇವಾಂಶ ಕಡಿಮೆಯಾಗುವುದಿಲ್ಲವೇ, ಜಲಚಕ್ರ ವ್ಯವಸ್ಥೆ ಏರುಪೇರಾಗುವುದಿಲ್ಲವೇ ಎಂಬಂತಹ ಪ್ರಶ್ನೆಗಳು ಸಹಜ. ಆದರೆ ವಾಯುಮಂಡಲದಲ್ಲಿರುವ ಒಟ್ಟು ನೀರಾವಿಯಲ್ಲಿ ಶೇ 0.1ರಷ್ಟನ್ನು ತೆಗೆದರೂ ಪ್ರಪಂಚದ ಜನಸಂಖ್ಯೆಯ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಬಹುದು ಎಂಬುದು ವಿಜ್ಞಾನಿಗಳ ಲೆಕ್ಕಾಚಾರ. ವಾಯುಮಂಡಲದಲ್ಲಿರುವ ನೀರಾವಿಯ ಪ್ರಮಾಣ ವರ್ಷದಲ್ಲಿ 40 ಬಾರಿ ಮರು ಪೂರೈಕೆಯಾಗುವುದರಿಂದ, ನೀರಾವಿಯನ್ನು ಹೊರತೆಗೆಯುವುದರಿಂದ ಲಭ್ಯವಿರುವ ನೀರಿನ ಪ್ರಮಾಣ ಕಡಿಮೆಯಾಗುವುದಿಲ್ಲ ಎಂಬುದು ತಜ್ಞರ ಅಭಿಪ್ರಾಯ. ಆದರೆ ಪ್ರಕೃತಿಯ ಜಲವ್ಯವಸ್ಥೆಯಲ್ಲಿ ನಾವು ನೇರವಾಗಿ ಹಸ್ತಕ್ಷೇಪ ಮಾಡುತ್ತಿರುವುದರಿಂದ ಅದರ ಪರಿಣಾಮಗಳು ಮತ್ತೆಲ್ಲೋ ಕಾಣಬಹುದೆಂಬ ಅನುಮಾನ ಸದ್ಯಕ್ಕಂತೂ ಬಗೆಹರಿದಿಲ್ಲ.

ಕುಡಿಯುವ ನೀರಿಗಾಗಿ ಪರಿತಪಿಸುತ್ತಿರುವ ಜನರಿಗೆ ತಕ್ಷಣಕ್ಕೆ ಬೇಕಿರುವುದು ನೀರು. ಅಳವಡಿಸಿದ ಎರಡೇ ಗಂಟೆಯಲ್ಲಿ ನೀರನ್ನು ಒದಗಿಸುವ ಸಾಮರ್ಥ್ಯ ಈ ಯಂತ್ರಗಳಿಗಿದೆ. ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದ ಕಂಪನಿಗಳು ಬೆಂಗಳೂರಿನಲ್ಲೇ ಇವೆ. ಸಮರೋಪಾದಿಯಲ್ಲಿ ಸಮಸ್ಯೆಯನ್ನು ಪರಿಹರಿಸಲು ನಿರ್ಧರಿಸಿರುವ ಸರ್ಕಾರ ಈ ಪ್ರಯತ್ನವನ್ನೂ ಮಾಡಬೇಕು.

ಚುರುಮುರಿ



ಸರ್ಕಾರದ್ದೇ ವ್ಯವಸ್ಥೆ?

● ಮಣ್ಣೆ ರಾಜು

ಚಟ್ನಿಹಳ್ಳಿಯಲ್ಲಿ ಶಾಸಕರು ಗೋಶಾಲೆ ಉದ್ಘಾಟಿಸಿದರು. ದನಕರುಗಳನ್ನು ಗೋಶಾಲೆಗೆ ಸೇರಿಸಲು ರೈತರು ಮುಗಿಬಿದ್ದರು. ಜನಜಂಗುಳಿಗೆ ಹೆದರಿದ್ದ ದನಗಳನ್ನು ಬಲವಂತವಾಗಿ ಎಳೆದುಕೊಂಡು ಹೋಗಿ ಗೋಶಾಲೆಗೆ ಬಿಟ್ಟರು. ಗಾಬರಿಯಾಗಿದ್ದ ದನಗಳು ‘ಅಂಬಾ…’ ಎನ್ನುತ್ತಾ ಗೋಶಾಲೆಯಲ್ಲಿ ಗದ್ದಲ ಮಾಡಿದವು. ಶಿವಲಿಂಗನ ಎತ್ತು ಹಗ್ಗ ಕಿತ್ತುಕೊಂಡು ಓಡಿಹೋಯಿತು. ಊರ ತುಂಬಾ ಓಡಾಡಿದ ಎತ್ತನ್ನು ಹಿಡಿದು ತಂದು ಗೋಶಾಲೆಯಲ್ಲಿ ಬಿಟ್ಟ.

ಹಸುವನ್ನು ಗೋಶಾಲೆಗೆ ಸೇರಿಸಿದ ತಿಮ್ಮಜ್ಜಿ, ‘ಪುಣ್ಯಕೋಟಿಯಂಥಾ ನಮ್ಮ ಹಸು… ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ…’ ಅಂತ ಇತರ ದನಗಳನ್ನು ಬೇಡಿಕೊಂಡಳು.

‘ತಂಟೆ ದನಗಳು ನಮ್ಮ ಹಸುವನ್ನು ಹಾಯದಂತೆ, ತಿವಿಯದಂತೆ ನೋಡಿಕೊಳ್ಳಿ’ ತಿಮ್ಮಜ್ಜ ಶಾಸಕರಿಗೆ ಮನವಿ ಮಾಡಿದ.

‘ತಂಟೆ, ತಕರಾರು ಮಾಡುವ ದನಗಳನ್ನು ಟಿ.ಸಿ. ಕೊಟ್ಟು ಆಚೆ ಹಾಕ್ತೀವಿ. ಡೊನೇಷನ್ ಕೊಟ್ಟು ಖಾಸಗಿ ಗೋಶಾಲೆಗೆ ಸೇರಿಸಿಕೊಳ್ಳಿ’ ಶಾಸಕರು ಖಡಕ್ಕಾಗಿ ಹೇಳಿದರು.

‘ಗೋಶಾಲೆ ದನಗಳಿಗೂ ಅಕ್ಷರ ಕಲಿಸುವಂತಿದ್ದರೆ ನಮ್ಮ ಹಸುವೂ ವಿದ್ಯಾವಂತ ಆಗುತ್ತಿತ್ತು’ ಅಂದ ಗೋಪಾಲಿ.

‘ಮೇವು ತಿನ್ನುವ ಸ್ಪರ್ಧೆಯಾದರೂ ಏರ್ಪಡಿಸಿ, ಗೆಲ್ಲುವ ದನಗಳ ಮಾಲೀಕರಿಗೆ ಬಹುಮಾನ ಕೊಡಿ’ ಕೆಂಪಣ್ಣ ಕೇಳಿಕೊಂಡ.

‘ವರ್ಷದಿಂದ ಮುಚ್ಚಿರುವ ನಮ್ಮೂರಿನ ಮಕ್ಕಳ ಶಾಲೆ ತೆರೆಯಿರಿ ಸಾರ್’ ಅಂದ ಸೀನಪ್ಪ.

‘ಮಕ್ಕಳನ್ನೆಲ್ಲಾ ನೀವು ಖಾಸಗಿ ಶಾಲೆಗೆ ಸೇರಿಸಿದ್ದೀರಿ, ಶಾಲೆ ತೆರೆಯಲು ಮಕ್ಕಳು ಬೇಕಲ್ವಾ?’ ಅಂದರು ಶಾಸಕರು.

‘ಬಿಸಿಯೂಟ, ಯೂನಿಫಾರಂ ಕೊಟ್ಟರೆ ಸಾಕೆ? ಶಾಲೆಗೆ ಮಕ್ಕಳನ್ನೂ ಸರ್ಕಾರವೇ ವ್ಯವಸ್ಥೆ ಮಾಡಬೇಕು’ ಮಲ್ಲೇಶಿ ಒತ್ತಾಯಿಸಿದ.

‘ರೈತರ ಮಕ್ಕಳು ಮದ್ವೆಯಾಗಲು ಹೆಣ್ಣು ಕೊಡಿಸಿ ಅಂತ ಸರ್ಕಾರವನ್ನೇ ಕೇಳ್ತೀರಿ, ಶಾಲೆಗೆ ಮಕ್ಕಳನ್ನೂ ಸರ್ಕಾರವೇ ಕೊಡಬೇಕು ಅಂದ್ರೆ ಹೆಂಗ್ರಲಾ?’ ಕೋಪಗೊಂಡ ಶಾಸಕರು ಕಾರು ಹತ್ತಿ ಹೊರಟರು.

ಸಂಗತ

ಕೂಸು ಹುಟ್ಟಿದೆ, ‘ಕುಲಾವಿ’ ಸಿದ್ಧವೇ?

‘ಕೂಸಿನ ಮನೆ’ ಯೋಜನೆಯು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದರೆ, ಕಾರ್ಮಿಕ ಮಹಿಳೆಯರ ಸ್ವಾವಲಂಬಿ ಬದುಕಿಗೆ ಬಹುದೊಡ್ಡ ಬೆಂಬಲ ಸಿಕ್ಕಂತೆ ಆಗುತ್ತದೆ

● ಡಾ. ಕೆ.ಎಸ್.ಚೈತ್ರಾ

ಹಳ್ಳಿಗಳಲ್ಲಿರುವ ಬಡ ಕುಟುಂಬಗಳಲ್ಲಿ ಮನೆಯಲ್ಲಿ ಇರುವವರೆಲ್ಲರೂ ಕೆಲಸ ಮಾಡಿ ಒಂದಷ್ಟು ಹಣ ಗಳಿಸಿದರೆ ಮಾತ್ರ ಬದುಕು ಸಾಧ್ಯ. ಪೋಷಕರು ಕೆಲಸಕ್ಕೆ ಹೋದಾಗ, ಮನೆಯಲ್ಲಿದ್ದ ಹಿರಿಯರು ಮಕ್ಕಳ ಲಾಲನೆ- ಪಾಲನೆ ಮಾಡುತ್ತಿದ್ದ ಕಾಲ ಇದಲ್ಲ. ಇಲ್ಲಿ ಜನರು ಸ್ವತಃ ಹೊಲ, ಗದ್ದೆ, ತೋಟ ಹೊಂದಿಲ್ಲ, ಶಿಕ್ಷಣದ ಮಟ್ಟವೂ ಹೆಚ್ಚಿಲ್ಲ. ಹೀಗಿರುವಾಗ, ನಿರ್ಮಾಣ, ಕಟ್ಟಡ ಕಾಮಗಾರಿಗಳಲ್ಲಿ ಅವರು ತೊಡಗಿಸಿಕೊಳ್ಳುತ್ತಿದ್ದಾರೆ. ಮಹಿಳೆಯರೂ ಇದಕ್ಕೆ ಹೊರತಲ್ಲ. ಆದರೆ ಇಂತಹ ಮಹಿಳಾ ಕಾರ್ಮಿಕರು ತಾಯಂದಿರಾದಾಗ ಅನುಭವಿಸುವ ಪಾಡು ಹೇಳತೀರದು. ಹಾಲು ಕುಡಿಯುವ ಹಸುಗೂಸುಗಳನ್ನು ಬೆನ್ನ ಹಿಂದೆ ಕಟ್ಟಿಕೊಂಡು ಕೆಲಸ ಮಾಡುವುದು ಅಥವಾ ರಸ್ತೆ ಬದಿ, ಹೊಲ, ಮರ ಹೀಗೆ ಅಲ್ಲಲ್ಲೇ ಮಕ್ಕಳನ್ನು ಮಲಗಿಸುವುದು ಸಾಮಾನ್ಯ.

ಒಂದೊಮ್ಮೆ ಮನೆಯಲ್ಲಿಯೇ ಮಗುವನ್ನು ಬಿಟ್ಟು ಹೋದರೆ ಸಂಜೆ ತಾಯಿ ಮರಳಿ ಬರುವ ತನಕವೂ ಮಗುವಿಗೆ ಸಿಗುವ ಆಹಾರ, ಆರೈಕೆ ಅಷ್ಟಕ್ಕಷ್ಟೇ. ಪರಿಣಾಮವಾಗಿ, ಬೆಳೆಯುವ ಹಂತದಲ್ಲಿಯೇ ಅಪೌಷ್ಟಿಕತೆಗೆ ತುತ್ತಾಗಿ ನರಳುತ್ತಿರುವ ಮಕ್ಕಳು ಸಾವಿರಾರು. ಇವೆಲ್ಲದರ ಅರಿವಿದ್ದೂ ತಾಯಿಯಾದ ಕಾರ್ಮಿಕ ಮಹಿಳೆ ಸೂಕ್ತ ಬೆಂಬಲ, ತಕ್ಕ ವ್ಯವಸ್ಥೆ ಇಲ್ಲದ ಕಾರಣ, ಯಾವಾಗ ಏನಾಗುತ್ತದೋ ಎಂದು ಹೆದರುತ್ತಾ, ತಪ್ಪಿತಸ್ಥ ಭಾವನೆಯಿಂದ ನರಳುತ್ತಾ ಮಾನಸಿಕ ಒತ್ತಡದಲ್ಲಿಯೇ ಹೊಟ್ಟೆಪಾಡಿಗಾಗಿ ಕೆಲಸವನ್ನು ಮಾಡಲೇಬೇಕಾದ ಅನಿವಾರ್ಯ ಇದೆ.

ಇದನ್ನೆಲ್ಲ ಗಮನದಲ್ಲಿಟ್ಟು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ಮನರೇಗ) ಕೂಲಿಗೆ ಬರುವ ತಾಯಂದಿರ ಎಳೆಯ ಮಕ್ಕಳ ಆರೈಕೆಗಾಗಿ ರೂಪುಗೊಂಡಿರುವ ತಾಣ ‘ಕೂಸಿನ ಮನೆ’. ಇಲ್ಲಿ ಮೂರು ವರ್ಷದ ಒಳಗಿನ ಮಕ್ಕಳ ಪೋಷಣೆ, ರಕ್ಷಣೆ ಮತ್ತು ಪೌಷ್ಟಿಕತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅನುಕೂಲವಾಗುವ ಹಾಗೆ ಆಕರ್ಷಕ ಆಟಿಕೆಗಳು, ಅಕ್ಷರಗಳನ್ನು ಚಿತ್ರದ ಮೂಲಕ ಬರೆಯುವುದು, ಆಟ, ಹಾಡು, ಕುಣಿತದ ಜತೆ ನಲಿಯುತ್ತಾ ಕಲಿಯುವ ಅವಕಾಶ ಕಲ್ಪಿಸಲಾಗಿದೆ.

ಮಕ್ಕಳಿಗೆ ಅನುಕೂಲವಾಗುವಂತೆ ಶೌಚಾಲಯದ ಜತೆ ಅಂಗವಿಕಲ ಮಕ್ಕಳಿಗಾಗಿ ಹೆಚ್ಚಿನ ವ್ಯವಸ್ಥೆಯೂ ಕೆಲವೆಡೆ ಇದೆ. ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಕಾರ್ಯನಿರ್ವಹಿಸುವ ಈ ಕೇಂದ್ರಗಳಲ್ಲಿ ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರುವ 22ರಿಂದ 45 ವರ್ಷದ ಒಳಗಿನವರನ್ನು ಮಕ್ಕಳ ಆರೈಕೆದಾರರಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ. ಮಕ್ಕಳಿಗೆ ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಊಟ ಮತ್ತು ಸಂಜೆ ಲಘು ಆಹಾರ ನೀಡಲಾಗುತ್ತಿದೆ. ಅದು ಹಾಲು, ಪೊಂಗಲ್, ಗಂಜಿ, ಮೊಳಕೆ ಬರಿಸಿದ ಕಾಳು, ಗೋಧಿ ಪಾಯಸ... ಹೀಗೆ ವೈವಿಧ್ಯಮಯ ಪೌಷ್ಟಿಕ ಆಹಾರವನ್ನು ಒಳಗೊಂಡಿದೆ.

ಹಿಂದಿನ ವರ್ಷವೇ ಯೋಜನೆ ಘೋಷಣೆಯಾಗಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಾಣಲಿಲ್ಲ. ಕಾರಣ, ಈ ಕೂಸಿನ ಮನೆಗಳ ಉಸ್ತುವಾರಿ ಮತ್ತು ನಿರ್ವಹಣೆ ವಿಷಯದಲ್ಲಿ ಬಹಳಷ್ಟು ಗೊಂದಲಗಳಿವೆ. ಮುಖ್ಯವಾದ ಸಮಸ್ಯೆ ಎಂದರೆ, ಕೂಸಿನ ಮನೆಗೆ ಸೂಕ್ತ ಕೊಠಡಿಗಳು ಲಭ್ಯವಿಲ್ಲದೇ ಇರುವುದು. ಈ ಯೋಜನೆಗೆ ಅಗತ್ಯವಿರುವ ಕಟ್ಟಡ, ಇತರ ಮೂಲ ಸೌಲಭ್ಯಗಳನ್ನು ಗ್ರಾಮ ಪಂಚಾಯಿತಿಗಳು ತಮ್ಮ ಸಂಪನ್ಮೂಲದಲ್ಲಿಯೇ ಒದಗಿಸಬೇಕು. ಸದ್ಯಕ್ಕೆ ಗ್ರಾಮಗಳಲ್ಲಿರುವ ಶಾಲೆ, ಸಮುದಾಯ ಭವನ, ಅಂಗನವಾಡಿಗಳ ಹಳೆಯ ಕಟ್ಟಡ ಮತ್ತು ಕೆಲವು ಕಡೆ ಬಳಕೆಯಾಗದೇ ಇರುವ ಸರ್ಕಾರಿ ಕಟ್ಟಡಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಅನೇಕ ಅಂಗನವಾಡಿ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳಿಲ್ಲ. ಆ ವ್ಯವಸ್ಥೆ ಮಾಡುವ ಮೊದಲೇ ಈ ರೀತಿ ಹೊಸ ಯೋಜನೆ ಆರಂಭಿಸಿರುವುದರಿಂದ ಹಿನ್ನಡೆಯಾಗುವ ಸಾಧ್ಯತೆ ಹೆಚ್ಚು. ಜತೆಗೆ, ಆರೈಕೆದಾರರ ಅನುದಾನ, ಅವರಿಗೆ ಸರಿಯಾದ ತರಬೇತಿಯನ್ನು ನೀಡಲಾಗಿದೆಯೇ ಇಲ್ಲವೇ ಎಂದು ಖಚಿತಪಡಿಸಿಕೊಳ್ಳುವುದು, ಆಹಾರ ಪಟ್ಟಿ ಸಿದ್ಧಪಡಿಸು ವುದು, ಅದರ ನಿರ್ವಹಣೆ, ಚಟುವಟಿಕೆ ಕುರಿತಂತೆ ಸಭೆ ನಡೆಸುವುದು ಇವೆಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆರ್ಥಿಕ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಹೆಚ್ಚಿನ ಹೊರೆ. ಇದನ್ನು ನಿರ್ವಹಿಸುವುದು ಕಷ್ಟ ಎನ್ನುವ ಅಭಿಪ್ರಾಯ ಹಲವು ಸದಸ್ಯರದ್ದಾಗಿದೆ.



ಇದರೊಂದಿಗೆ ಗ್ರಾಮ ಪಂಚಾಯಿತಿಯ ವ್ಯಾಪ್ತಿ ಆರರಿಂದ ಹತ್ತು ಕಿಲೊಮೀಟರ್ ಇದ್ದು, ಬೇರೆ ಬೇರೆ ಸ್ಥಳಗಳಲ್ಲಿ ಕಾಮಗಾರಿ ನಡೆಯುತ್ತಿದ್ದಾಗ ಶಿಶುವನ್ನು ಕರೆದೊಯ್ದು ತರುವ ವ್ಯವಸ್ಥೆ, ಹಾಲುಣಿಸಲು ಮತ್ತೆ ಮತ್ತೆ ಓಡಾಡುವುದು ಹೇಗೆ ಎಂಬ ಸಮಸ್ಯೆಗಳು ಕಾರ್ಮಿಕ ಮಹಿಳೆಯರನ್ನು ಕಾಡುತ್ತಿವೆ. ಶಿಶುಗಳನ್ನು ಸಾಕುವ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಲು ನೇಮಿಸಲಾದ ಆರೈಕೆದಾರರಿಗೆ ಎರಡು ವಾರಗಳ ತರಬೇತಿ ಸಾಕೇ? ಪ್ರತಿ ಮಗುವಿಗೆ ಪೌಷ್ಟಿಕ ಆಹಾರಕ್ಕಾಗಿ ಹನ್ನೆರಡು ರೂಪಾಯಿ ನೀಡಲಾಗುತ್ತಿದೆ. ಇಷ್ಟು ಕಡಿಮೆ ದರದಲ್ಲಿ ಗುಣಮಟ್ಟದ ಆಹಾರ ಸಿಗಲು ಸಾಧ್ಯವೇ, ಪೂರೈಕೆ ಹೇಗೆ ಎಂಬ ಆತಂಕಕ್ಕೆ ಒಳಗಾಗಿ ಅನೇಕ ಕಡೆ ಮಹಿಳೆಯರು ಈ ಸೌಲಭ್ಯ ಪಡೆಯಲು ಹಿಂಜರಿಯುತ್ತಿದ್ದಾರೆ.

ಕೂಸಿನ ಮನೆ ಯೋಜನೆ ಅತ್ಯುತ್ತಮವಾದದ್ದು. ಆದರೆ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಿರುವ ವಿವಿಧ ಇಲಾಖೆಗಳ ಸಮನ್ವಯ- ನಿರ್ವಹಣೆ ವಿಷಯದಲ್ಲಿ ಸರ್ಕಾರ ಬದ್ಧವಾಗಿದ್ದರೆ, ಕಾರ್ಮಿಕ ಮಹಿಳೆಯರ ಸ್ವಾವಲಂಬಿ ಬದುಕಿನ ಹೋರಾಟಕ್ಕೆ ಬಹುದೊಡ್ಡ ಬೆಂಬಲ ಸಿಕ್ಕಂತೆ ಆಗುವುದರಲ್ಲಿ ಸಂಶಯವಿಲ್ಲ.

ವಾಚಕರ ವಾಣಿ

ಪರೀಕ್ಷಾ ಕ್ರಮ: ಪೂರ್ವತಯಾರಿ ಅಗತ್ಯ

ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಗೆ ಅನ್ವಯಿಸುವ ‘ಬೋರ್ಡ್ ಪರೀಕ್ಷೆ’ ಬೇಕೋ ಬೇಡವೋ ಎಂಬ ಗೊಂದಲವನ್ನು ಪರೀಕ್ಷೆಗೆ ಕೆಲವೇ ದಿನಗಳಿವೆ ಎಂದಾಗ ಸೃಷ್ಟಿಸುವ ಪರಿಪಾಟ ಹೊಸದೇನಲ್ಲ. ಇಂತಹ ಸನ್ನಿವೇಶ ಹೋದ ವರ್ಷವೂ ಸೃಷ್ಟಿಯಾಗಿತ್ತು. ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ಲೋಪಗಳಿವೆ ಎಂದು ಕೊನೆಗೂ ಒಪ್ಪಿಕೊಂಡ ಸರ್ಕಾರದ ನಡೆ, ಇಂದು ಏಕೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆ ಆಗುತ್ತಿದೆ ಹಾಗೂ ಪಾಲಕರು ಖಾಸಗಿ ಶಾಲೆಗಳತ್ತ, ಬೇರೆ ಬೋರ್ಡ್‌ಗಳ (ಸಿಬಿಎಸ್‌ಇ, ಐಸಿಎಸ್‌ಇ) ಪಠ್ಯಕ್ರಮದ ಕಡೆಗೆ ಹೆಚ್ಚು ಒಲವು ಹೊಂದಿದ್ದಾರೆ ಎಂಬುದನ್ನು ತೋರಿಸಿಕೊಡುತ್ತದೆ.

ಇರುವ ಲೋಪಗಳನ್ನು ಸರಿಪಡಿಸಲು ಹೋಗಿ ಇನ್ನಷ್ಟು ಲೋಪಗಳನ್ನು ಸೃಷ್ಟಿಸುವುದು ಜಾಣತನವಲ್ಲ. ಇದು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದಲ್ಲದೆ, ಅವರಲ್ಲಿ ವಿನಾಕಾರಣ ಆತಂಕವನ್ನು ಹೆಚ್ಚಿಸುತ್ತದೆ. ಪ್ರತಿವರ್ಷ ಒಂದೊಂದು ನಿಯಮ ತರುವುದು ಸಮಂಜಸವಲ್ಲ. ಶೈಕ್ಷಣಿಕ ವರ್ಷದ ಆರಂಭದಲ್ಲೇ ಒಂದು ವರ್ಷದ ಪೂರ್ಣ ಕ್ರಿಯಾ ಯೋಜನೆಯ ಬಗ್ಗೆ ನಿರ್ಧಾರ ಮಾಡಿ ಅದರಂತೆಯೇ ನಡೆಯಬೇಕು. ಇದರಿಂದ ಎಲ್ಲರಿಗೂ ಪೂರ್ವತಯಾರಿ ಮಾಡಿಕೊಳ್ಳಲು ಬಹಳಷ್ಟು ಅವಕಾಶ ಲಭಿಸುತ್ತದೆ. ಇದೇ ಮಾರ್ಗವನ್ನು ಇತರ ಬೋರ್ಡ್‌ಗಳು ಮಾಡಿ ಯಶಸ್ವಿಯಾಗುತ್ತಿವೆ.

ಸುರೇಂದ್ರ ಪೈ, ಭಟ್ಕಳ

ವಚನ ಸಾಹಿತ್ಯ ಪ್ರಸಾರಕ್ಕೆ ಪೂರಕ ಕ್ರಮ

ಜಗತ್ತಿನ ಇಂದಿನ ಅನೇಕ ಸಮಸ್ಯೆಗಳಿಗೆ ವಚನ ಸಾಹಿತ್ಯ ಪರಿಹಾರ ನೀಡಬಲ್ಲದು. ಅಲ್ಲದೆ, ನಮ್ಮ ಸಂವಿಧಾನದ ಎಲ್ಲ ತತ್ವಸಿದ್ಧಾಂತಗಳೂ ವಚನಗಳಲ್ಲಿ ಇವೆ. ಹೀಗಾಗಿ, ವಚನ ಸಾಹಿತ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜನಸಮುದಾಯಕ್ಕೆ ಮುಟ್ಟಿಸುವ ದಿಸೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಚನ ಸಾಹಿತ್ಯ ವಿಶ್ವವಿದ್ಯಾಲಯ ಸ್ಥಾಪನೆಯ ಭರವಸೆ ನೀಡಿರುವುದು ಸ್ವಾಗತಾರ್ಹ.

ಗಿರಿಜಾಶಂಕರ್ ಜಿ.ಎಸ್., ಇಡೇಹಳ್ಳಿ, ಹೊಳಲ್ಕೆರೆ

ಹೀಗಿದೆ ‘ಪ್ರಬುದ್ಧ’ ನಾಯಕನ ಭಾಷೆ!

‘ರಾಹುಲ್ ಗಾಂಧಿ ಸದಾ ತಮ್ಮೊಂದಿಗೆ ನಾಯಿಯೊಂದನ್ನು ಕರೆದೊಯ್ಯುತ್ತಾರೆ. ನಾಯಿಯೂ ತಿನ್ನದ ಬಿಸ್ಕತ್ತನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ನೀಡುತ್ತಾರೆ’ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ವ್ಯಂಗ್ಯವಾಡಿರುವುದನ್ನು ಓದಿ (ಪ್ರ.ವಾ., ಮಾರ್ಚ್ 8), ರಾಜಕಾರಣಿಗಳ ಭಾಷಾ ಬಳಕೆ ಬಗ್ಗೆ ಅಸಹ್ಯವೆನಿಸಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಟೀಕೆ, ಪ್ರತಿಟೀಕೆ ಸಹಜ. ಒಂದು ರಾಜ್ಯದ ಮುಖ್ಯಮಂತ್ರಿ ಆಗಿರುವ ವ್ಯಕ್ತಿಯೊಬ್ಬರು ಪ್ರತಿಪಕ್ಷದ ನಾಯಕನ ಮೇಲೆ ಬಳಸಬಹುದಾದ ಪದಪ್ರಯೋಗ ಇದಲ್ಲ ಎಂಬುದು ಚಿಕ್ಕ ಮಕ್ಕಳಿಗೂ ತಿಳಿಯುತ್ತದೆ. ವಿದೇಶಿ ಸಂಸ್ಕೃತಿಯ ಸ್ವಲ್ಪ ಭಾಗವನ್ನು ಇಂದಿಗೂ ಒಡಲಲ್ಲಿ ಉಳಿಸಿಕೊಂಡಿರುವ ಗೋವಾದಂತಹ ಬಹುಸಂಸ್ಕೃತಿಯ ನಾಡನ್ನು ಸಾವಂತ್ ಪ್ರತಿನಿಧಿಸುತ್ತಿದ್ದಾರೆ. ಅಷ್ಟಕ್ಕೂ ಈ ಮುಖ್ಯಮಂತ್ರಿ ಮಾತನಾಡಿರುವುದು, ಮಧ್ಯ ಕರ್ನಾಟಕದ ಚಿತ್ರದುರ್ಗ ನಗರದಲ್ಲಿ ಏರ್ಪಡಿಸಿದ್ದ ಬಿಜೆಪಿ ಬೂತ್ ಪ್ರಮುಖರ ಸಮಾವೇಶ ಹಾಗೂ ಪ್ರಬುದ್ಧರ ಸಭೆಯಲ್ಲಿ ಎಂಬುದು ಗಮನಾರ್ಹ.

ಕಾರ್ಯಕ್ರಮ ಉದ್ಘಾಟಿಸಿದ ಮುಖಂಡನೇ ಈ ಪರಿಯಾದ ಉಪಮೆ, ಪದ ಬಳಸಿರುವಾಗ, ಅಲ್ಲಿ ಸೇರಿದ್ದ ‘ಪ್ರಬುದ್ಧ’ರೆನಿಸಿಕೊಂಡ ಇತರರು ಏನೆಲ್ಲಾ ಮಾತಿನ ಮುತ್ತುಗಳನ್ನು ಉದುರಿಸಿರಬಹುದು ಎಂದು ನೆನೆದರೆ ಭಯವಾಗುತ್ತದೆ. ಇಂತಹ ಭೀಕರ ಭಾಷಣಕಾರರನ್ನು ಕನ್ನಡ ನಾಡಿಗೆ ಪರಿಚಯಿಸುವ ಕೆಲಸವನ್ನು ನಿಜಕ್ಕೂ ಯಾವುದೇ ರಾಜಕೀಯ ಪಕ್ಷ ಮಾಡಬಾರದು. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಇವರದೇ ಪಕ್ಷದ ದೆಹಲಿ ನಾಯಕರು ರಾಜ್ಯದ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಸೋಮಣ್ಣ, ಕೆ.ಎಸ್.ಈಶ್ವರಪ್ಪ ಅವರಂತಹ ಮುಖಂಡರನ್ನು ನಡೆಸಿಕೊಂಡ ರೀತಿಯನ್ನು ಕನ್ನಡಿಗರು ಈಗಲೂ ಮರೆತಿಲ್ಲ. ಕೆಲ ದಿನ ಕಾಂಗ್ರೆಸ್ ಸೇರಿದ್ದ ಜಗದೀಶ ಶೆಟ್ಟರ್, ಆಗ ಮೂಲ ಪಕ್ಷ ಹಾಗೂ ಮುಖಂಡರ ಕುರಿತು ಮಾಡಿದ್ದ ಗುಣಗಾನ ಕನ್ನಡಿಗರ ಕಿವಿಗಳಲ್ಲಿ ಈಗಲೂ ರಿಂಗಣಿಸುತ್ತಿದೆ. ಎಲ್ಲ ರಾಜಕೀಯ ಪಕ್ಷಗಳಲ್ಲೂ ನ್ಯೂನತೆಗಳು ಇರುವುದು ಸಹಜ. ಆದರೆ ತನ್ನ ಪಕ್ಷವೇ ಸರ್ವಶ್ರೇಷ್ಠ ಎಂಬ ಅಹಮಿಕೆಯನ್ನು ಬದಿಗಿಟ್ಟು, ನಾಡಿನ ಸಂಸ್ಕೃತಿ, ಘನತೆಯ ದೃಷ್ಟಿಯಿಂದ ರಾಜಕೀಯ ಮುಖಂಡರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವುದನ್ನು ರೂಢಿಸಿಕೊಳ್ಳಬೇಕಿದೆ.

ರಂಗಸ್ವಾಮಿ, ಹಿರಿಯೂರು

ಅಸ್ತು-ಸುಸ್ತು

‘ಬೋರ್ಡ್ ಪರೀಕ್ಷೆ ರದ್ದು’
ಮೊನ್ನೆಯ ತೀರ್ಪಿಗೆ
ಕೇಳಿತ್ತು ಮಕ್ಕಳ ಖುಷಿಯ ಸದ್ದು!
‘ಬೋರ್ಡ್ ಪರೀಕ್ಷೆಗೆ ಅಸ್ತು’
ಇಂದಿನ ತೀರ್ಪಿಗೆ
ಮಕ್ಕಳು ಸುಸ್ತೋ ಸುಸ್ತು!
‘ನಾಳೆ ಯಾವ ತೀರ್ಪೋ’
ಎಂಬ ಚಿಂತೆಯಲ್ಲಿ
ಪೋಷಕರು ಬೇಸ್ತು!

ಮಹಾಂತೇಶ್ ಬಿ. ನಿಟ್ಟೂರು
ದಾವಣಗೆರೆ

ಟ್ರಾಯ್ ಶಿಫಾರಸು: ಅಧಿಕಪ್ರಸಂಗಕ್ಕೆ ಕಡಿವಾಣ

ಯಾವುದೋ ತುರ್ತು ಕೆಲಸ ಮುಗಿಸಬೇಕೆಂದು ತೀವ್ರವಾಗಿ ತೊಡಗಿಕೊಂಡು ಕಾರ್ಯನಿರತವಾಗಿದ್ದ ಸಮಯದಲ್ಲೇ ಮೇಲಿಂದ ಮೇಲೆ ಫೋನ್ ರಿಂಗಣಿಸುತ್ತದೆ. ತುರ್ತು ಕರೆ ಇರಬಹುದು ಎಂದುಕೊಂಡು ಫೋನೆತ್ತಿದರೆ ಅವು ‘ಸಾಲ ಬೇಕೆ?’ ‘ಡೆಬಿಟ್ ಕಾರ್ಡ್ ಬೇಕೆ?’ ಎಂಬಂತಹ ಕಿರಿಕಿರಿಯ ಕರೆಗಳಾಗಿರುತ್ತವೆ. ‘ನಿಮಗೆ ನಮ್ಮ ನಂಬರ್ ಹೇಗೆ ಸಿಕ್ಕಿತು?’, ‘ನಮ್ಮ ಆರ್ಥಿಕ ಅಡಚಣೆ ಕುರಿತು ನಿಮಗೆ ಹೇಗೆ ಗೊತ್ತಾಯಿತು?’ ‘ನಾವೇ ಸಾಲ ಕೊಡುತ್ತೇವೆ ಪಡೆಯುವಿರಾ?’ ಎಂಬಂಥ ನಮ್ಮ ಯಾವ ಪ್ರಶ್ನೆಗಳಿಗೂ ಸಮರ್ಪಕ ಉತ್ತರ ಸಿಗುವುದಿಲ್ಲ.

ಇದು ಗ್ರಾಹಕರ ಖಾಸಗಿ ಜೀವನದಲ್ಲಿ ಮೂಗು ತೂರಿಸಿ ಮೋಜು ನೋಡುವ ಪರಿ ಅಲ್ಲವೇ? ಒಬ್ಬ ವ್ಯಕ್ತಿಯ ಕೆಲಸದ ಸಮಯವನ್ನು ವ್ಯರ್ಥ ಮಾಡುವ ಅಧಿಕಪ್ರಸಂಗ ಅಲ್ಲವೇ ಎಂಬಂತಹ ಪ್ರಶ್ನೆಗಳು ಉದ್ಭವವಾದರೂ ಕರೆ ಮುಗಿದ ನಂತರ ನಾವು ಅದನ್ನು ಮರೆತುಬಿಡುತ್ತೇವೆ. ಇಂಥ ಕಿರಿಕಿರಿ ತಪ್ಪಿಸಲು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ‘ಫೋನ್‌ನಲ್ಲಿ ಕರೆ ರಿಂಗಣಿಸಿದ ಕೂಡಲೇ ಕರೆ ಮಾಡಿದವರ ಹೆಸರು ಕಾಣುವಂತೆ ಮಾಡಲು’ ದೂರವಾಣಿ ಕಂಪನಿಗಳಿಗೆ ಶಿಫಾರಸು ಮಾಡಿರುವುದು ಸ್ವಾಗತಾರ್ಹ ಕ್ರಮ. ಗ್ರಾಹಕರ ಹಿತರಕ್ಷಣೆ ಮಾಡುವ ಈ ಶಿಫಾರಸನ್ನು ನೆಟ್‌ವರ್ಕ್ ಸೇವೆ ಒದಗಿಸುವ ಕಂಪನಿಗಳು ಸಕಾರಾತ್ಮಕವಾಗಿ ಸ್ವೀಕರಿಸಿ ಜಾರಿಗೊಳಿಸಬೇಕು.

ಡಿ.ಎಂ.ನದಾಫ್, ಅಫಜಲಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ರಾಷ್ಟ್ರೀಯ ಪೌರತ್ವ ನೋಂದಣಿಗೆ ಕೇಂದ್ರ ಸರ್ಕಾರದ ರಹಸ್ಯ ಸಿದ್ಧತೆ

ರಾಷ್ಟ್ರೀಯ ಪೌರತ್ವ ನೋಂದಣಿಯಿಂದ (ಎನ್‌ಆರ್‌ಸಿ) ಹೊರಗೆ ಉಳಿದವರನ್ನು ದೇಶದಿಂದ ಗಡಿಪಾರು ಮಾಡಲು ಅವಕಾಶವಿದೆ. ಎನ್‌ಆರ್‌ಸಿಯಿಂದ ಹೊರಗುಳಿದ ಮುಸ್ಲಿಮೇತರರಿಗೆ ಭಾರತದ ಪೌರತ್ವ ನೀಡಲು ಸಿಎಎ ಅವಕಾಶ ಮಾಡಿಕೊಡುತ್ತದೆ. ಮುಸ್ಲಿಮರು ಮಾತ್ರ ಗಡಿಪಾರಿನ ಭೀತಿ ಎದುರಿಸಬೇಕಾಗುತ್ತದೆ. ಎನ್‌ಆರ್‌ಸಿಯನ್ನು ರೂಪಿಸಲು ಮನೆ–ಮನೆಗೆ ಭೇಟಿ ನೀಡಿ, ಮಾಹಿತಿ ಕಲೆಹಾಕಿ ಜನಸಂಖ್ಯಾ ನೋಂದಣಿಯನ್ನು (ಎನ್‌ಪಿಆರ್) ರಚಿಸಬೇಕು. ಆದರೆ ಕೇಂದ್ರ ಸರ್ಕಾರವು ಆಧಾರ್ ದತ್ತಾಂಶಗಳನ್ನು ಬಳಸಿಕೊಂಡು ರಹಸ್ಯವಾಗಿ ಎನ್‌ಆರ್‌ಸಿಯನ್ನು ರೂಪಿಸಲು ಹೊರಟಿದೆ ಎನ್ನುತ್ತಿದೆ ಮಿಟಿಯಾಬುರ್ಜ್ ಕೋಲ್ಕತ್ತಾ ಮತ್ತು ಸಿಟಿಜನ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್ ನಡೆಸಿದ ತನಿಖಾ ವರದಿ

● ತೀಸ್ತಾ ಸೆಟಲ್ವಾಡ್




ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ಹಾಗೂ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಕುರಿತು ಕೇಂದ್ರ ಗೃಹ ಸಚಿವಾಲಯವು ರಹಸ್ಯವಾದ, ಬಹುದೊಡ್ಡ ಹೆಜ್ಜೆಯೊಂದನ್ನು ಈಗಾಗಲೇ ಇಟ್ಟಿರುವ ಸಾಧ್ಯತೆ ಇದೆ ಎಂಬುದನ್ನು ಮಾಹಿತಿ ಹಕ್ಕು ಕಾಯ್ದೆ ಅಡಿ ಪಡೆಯಲಾದ ಮಾಹಿತಿಗಳು ಹೇಳುತ್ತವೆ. ನಿಯಮಗಳ ಪ್ರಕಾರ ಮನೆ–ಮನೆಗೆ ಭೇಟಿ ನೀಡಿ ಎನ್‌ಪಿಆರ್‌ಗೆ ದತ್ತಾಂಶಗಳನ್ನು ಕಲೆ ಹಾಕಬೇಕಿತ್ತು ಮತ್ತು 2010ರಲ್ಲಿ ಅಂತಹ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು ಕೂಡ. ಹಲವು ತೊಡಕುಗಳು ಇದ್ದ ಕಾರಣ ಆ ಕಾರ್ಯವನ್ನು ಆಗಲೇ ಕೈಬಿಡಲಾಗಿತ್ತು. ಆದರೆ ಈಗಿನ ಸರ್ಕಾರವು ಎನ್‌ಪಿಆರ್ ಅನ್ನು ಪರಿಷ್ಕರಿಸುವ ಕಾರ್ಯಕ್ಕೆ 2015ರಲ್ಲೇ ಚಾಲನೆ ನೀಡಿದೆ. ಅದೂ ಆಧಾರ್ ದತ್ತಾಂಶಗಳನ್ನು ಎನ್‌ಪಿಆರ್‌ನೊಂದಿಗೆ ರಹಸ್ಯವಾಗಿ ಜೋಡಿಸುವ ಮೂಲಕ.

ಎನ್‌ಪಿಆರ್ ಮತ್ತು ಆಧಾರ್ ಕಾರ್ಡ್ ಅನ್ನು ಜೋಡಿಸಲು ಪ್ರತಿಯೊಬ್ಬ ಭಾರತೀಯನ ಅನುಮತಿ ಅಗತ್ಯ. ಜತೆಗೆ ಯಾವುದೇ ನಾಗರಿಕನ ಎನ್‌ಪಿಆರ್ ದತ್ತಾಂಶಗಳನ್ನು ಆಧಾರ್ ದತ್ತಾಂಶದೊಂದಿಗೆ ಹೋಲಿಸಿ ನೋಡಲಾಗುತ್ತಿದೆ ಮತ್ತು ಪರಸ್ಪರ ಜೋಡಿಸಲಾಗುತ್ತಿದೆ ಎಂಬುದರ ಕುರಿತು ಸರ್ಕಾರವು ಆತನಿಗೆ ಮಾಹಿತಿ ನೀಡಲೇಬೇಕು. ಹೀಗೆ ಮಾಹಿತಿ ನೀಡಿ ಮತ್ತು ಒಪ್ಪಿಗೆ ಪಡೆದರೆ ಮಾತ್ರ ಅದು ಕಾನೂನುಬದ್ಧ ಪ್ರಕ್ರಿಯೆ ಆಗುತ್ತದೆ. ಆದರೆ ಈಗ ಸರ್ಕಾರವು ಜನರಿಗೆ ಮಾಹಿತಿಯನ್ನೂ ನೀಡದೆ ಮತ್ತು ಅವರ ಒಪ್ಪಿಗೆಯನ್ನೂ ಪಡೆಯದೆ ಎನ್‌ಪಿಆರ್ ಮತ್ತು ಆಧಾರ್ ಜೋಡಣೆ ಕಾರ್ಯ ನಡೆಸುತ್ತಿದೆ.

ಈ ವಿಷಯಕ್ಕೆ ಮತ್ತೊಂದು ಮಹತ್ವದ ಆಯಾಮವಿದೆ ಅಥವಾ ಅದನ್ನು ಟ್ವಿಸ್ಟ್ ಅನ್ನಬಹುದು. ಅದು 2020. ಆಗ ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ)–ಎನ್‌ಆರ್‌ಸಿ–ಎನ್‌ಪಿಆರ್ ಕುರಿತು ದೇಶದಾದ್ಯಂತ ದೊಡ್ಡ ಮಟ್ಟದ ಪ್ರತಿಭಟನೆ ನಡೆಯುತ್ತಿತ್ತು. ಅದೇ ಹೊತ್ತಿನಲ್ಲೇ ಕೇಂದ್ರ ಸರ್ಕಾರವು ಜನಗಣತಿ ನಡೆಸುವುದಾಗಿ ಘೋಷಣೆ ಮಾಡಿತು (ಕಳೆದ ಜನಗಣತಿಯು 2011ರಲ್ಲಿ ನಡೆದಿತ್ತು. 2021ರಲ್ಲಿ ಜನಗಣತಿ ನಡೆಯಬೇಕಿತ್ತು) ಮತ್ತು ಜನಗಣತಿ ಒಟ್ಟೊಟ್ಟಿಗೇ ಎನ್‌ಪಿಆರ್ ಪ್ರಕ್ರಿಯೆಯನ್ನು ನಡೆಸುವುದಾಗಿಯೂ ಹೇಳಿತು. ಕೇಂದ್ರ ಸರ್ಕಾರದ ಈ ಘೋಷಣೆಯ ನಂತರ ದೊಡ್ಡ ಮಟ್ಟದ ಮತ್ತೊಂದು ಪ್ರತಿಭಟನೆ, ಪ್ರತಿರೋಧವೂ ಆರಂಭವಾಯಿತು. ಹಲವು ರಾಜ್ಯ ಸರ್ಕಾರಗಳೇ ಎನ್‌ಪಿಆರ್ ದತ್ತಾಂಶ ಸಂಗ್ರಹಕ್ಕೆ ಕಟು ವಿರೋಧ ವ್ಯಕ್ತಪಡಿಸಿದವು. 'ಜನಗಣತಿ ನಡೆಸಲು ಬರುವ ಅಧಿಕಾರಿಗಳು ಎನ್‌ಪಿಆರ್ ಸಂಬಂಧಿತ ಪ್ರಶ್ನೆಗಳನ್ನು ಕೇಳಿದರೆ, ನೀವು ಉತ್ತರಿಸಬೇಡಿ' ಎಂದು ಹಲವು ರಾಜ್ಯ ಸರ್ಕಾರಗಳು ಜನರಿಗೆ ಹೇಳಿದವು.

ಎನ್‌ಪಿಆರ್ ಮತ್ತು ಎನ್‌ಆರ್‌ಸಿ ರೂಪಿಸಲು ಮಾಹಿತಿ ಸಂಗ್ರಹಿಸುವ ಕಾರ್ಯವನ್ನು 'ಪೌರತ್ವ (ನಾಗರಿಕ ನೋಂದಣಿ ಮತ್ತು ರಾಷ್ಟ್ರೀಯ ಗುರುತಿನ ಚೀಟಿ ವಿತರಣೆ) ನಿಯಮಗಳು–2003'ರ ಅನ್ವಯ ಮಾತ್ರವೇ ನಡೆಸಬೇಕು. ಆದರೆ, 2021ರ ಜನಗಣತಿಗೆ ಸಿದ್ಧತೆ ನಡೆಸಿದ್ದ ಕೇಂದ್ರ ಸರ್ಕಾರವು ಎನ್‌ಪಿಆರ್–ಎನ್‌ಆರ್‌ಸಿಗೆ ಸಂಬಂಧಿಸಿದ ಮಾಹಿತಿಯನ್ನು ಕಲೆ ಹಾಕಲು ಜನಗಣತಿಯ ಅರ್ಜಿ ನಮೂನೆಯಲ್ಲಿಯೇ ಅವಕಾಶ ಮಾಡಿತ್ತು. ಇದಕ್ಕಾಗಿ ಹೆಚ್ಚುವರಿಯಾಗಿ ನಾಲ್ಕು ಪ್ರಶ್ನೆಗಳನ್ನು ಸೇರಿಸಿತ್ತು. ವ್ಯಕ್ತಿಯ ಪೋಷಕರ ಮೂಲ ಊರಿನ ಕುರಿತ ಮಾಹಿತಿ ಹಾಗೂ ಅವರ ಹುಟ್ಟಿದ ದಿನಾಂಕವನ್ನು ಪಡೆದುಕೊಳ್ಳುವಂಥ ಪ್ರಶ್ನೆಯೂ ಅವುಗಳಲ್ಲಿ ಒಂದಾಗಿತ್ತು. ಇಂಥ ಪ್ರಶ್ನೆಗಳನ್ನು ಕೇಳುವುದನ್ನೇ ಹಲವು ರಾಜ್ಯ ಸರ್ಕಾರಗಳು ವಿರೋಧಿಸಿದ್ದವು. ಈ ವಿರೋಧಕ್ಕೆ ಮಣಿದು, 'ಎನ್‌ಪಿಆರ್ ಕುರಿತ ಪ್ರಶ್ನೆಗಳಿಗೆ ಉತ್ತರಿಸುವುದು ಕಡ್ಡಾಯವಲ್ಲ. ಅದು ಐಚ್ಛಿಕವಾದುದು' ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿತು. ಆದರೆ, ಜನಗಣತಿ ಕಾಯ್ದೆ–1948ರ ಅನ್ವಯ, ಜನಗಣತಿ ಪ್ರಕ್ರಿಯೆಗಾಗಿ ಅಧಿಕಾರಿಗಳು ಕೇಳುವ ಪ್ರಶ್ನೆಗಳಿಗೆ ಜನರು ಉತ್ತರಿಸಲೇಬೇಕಿರುವುದು ಕಡ್ಡಾಯ. ಜನಗಣತಿ ನಡೆದಿದ್ದರೆ, ಆ ಎಲ್ಲಾ ಮಾಹಿತಿಯನ್ನು ಸರ್ಕಾರವು ಕಲೆಹಾಕುತ್ತಿತ್ತು. ಆದರೆ ಕೋವಿಡ್ ಕಾರಣದಿಂದ ಜನಗಣತಿ ನಡೆಯಲಿಲ್ಲ.



2023ರಲ್ಲಿ ಬಿಡುಗಡೆಯಾದ ಕೇಂದ್ರ ಗೃಹ ಸಚಿವಾಲಯದ ವಾರ್ಷಿಕ ವರದಿಯಲ್ಲಿ ಸರ್ಕಾರವು, 'ಎಲ್ಲ ಭಾರತೀಯರ ಖಾಸಗಿ ವಿವರಗಳನ್ನು ಪಡೆದುಕೊಂಡು ಎನ್‌ಪಿಆರ್ ಅನ್ನು ಪರಿಷ್ಕರಿಸಲಾಗಿದೆ' ಎಂದು ಘೋಷಿಸಿಬಿಟ್ಟಿತು. ಎನ್‌ಪಿಆರ್ ಅನ್ನು ಪರಿಷ್ಕರಿಸಲು ಅಧಿಕಾರಿಗಳು ಮನೆಮನೆಗೆ ಹೋಗಿ ಮಾಹಿತಿಗಳನ್ನು ಪಡೆದುಕೊಳ್ಳಬೇಕಿತ್ತು. ಆದರೆ ಇಲ್ಲಿ ಮನೆ ಮನೆ ಭೇಟಿ ನೀಡದೆಯೇ, ರಹಸ್ಯವಾಗಿ ಆಧಾರ್ ಅನ್ನು ಜೋಡಿಸುವ ಮೂಲಕ ಎನ್‌ಪಿಆರ್ ಅನ್ನು ಪರಿಷ್ಕರಿಸಲಾಯಿತು. ದೇಶದ ಪ್ರತಿಯೊಬ್ಬ ನಾಗರಿಕನ ಆಧಾರ್ ವಿವರ, ಪಡಿತರ ಚೀಟಿ ವಿವರ ಮತ್ತು ಮೊಬೈಲ್ ಸಂಖ್ಯೆಯ ವಿವರಗಳನ್ನು ಅವರ ಅರಿವಿಗೆ ಬಾರದಂತೆ ಮತ್ತು ಅವರ ಒಪ್ಪಿಗೆ ಇಲ್ಲದೆಯೇ ಬಳಸಿಕೊಳ್ಳಲಾಗಿದೆ. ಆ ಮೂಲಕ ಎನ್‌ಪಿಆರ್ ಅನ್ನು ಪರಿಷ್ಕರಿಸಲಾಗಿದೆ. ಆರ್‌ಟಿಐ ಮೂಲಕ ಪಡೆದುಕೊಳ್ಳಲಾದ ಹಲವು ದಾಖಲಾತಿಗಳು ಇದನ್ನೇ ಹೇಳುತ್ತವೆ.

ಸಾರ್ವಜನಿಕರೊಂದಿಗೆ ಮಾಹಿತಿ ಹಂಚಿಕೊಳ್ಳಲು ಈ ಕೇಂದ್ರ ಸರ್ಕಾರವು ಹಿಂದೇಟು ಹಾಕುತ್ತದೆ ಎಂಬುದಕ್ಕೆ ಹತ್ತಾರು ನಿದರ್ಶನಗಳಿವೆ. ಹೀಗಾಗಿ ಈ ಸರ್ಕಾರ ಸಂಗ್ರಹಿಸಲು ಹೊರಟಿರುವ ದತ್ತಾಂಶಗಳು ಮತ್ತು ಅವುಗಳ ನಿರ್ವಹಣೆಯಲ್ಲಿ, ಸರ್ಕಾರದ ಉದ್ದೇಶವನ್ನು ಅನುಮಾನದಿಂದಲೇ ನೋಡಬೇಕಾಗಿದೆ. ಈ ಅನುಮಾನಗಳನ್ನು ಕೇಂದ್ರ ಸರ್ಕಾರದ್ದೇ ದಾಖಲೆಗಳು ಮತ್ತು ವರದಿಗಳು ಮತ್ತಷ್ಟು ಗಟ್ಟಿಯಾಗಿಸುತ್ತವೆ. ಮತ್ತು ಸರ್ಕಾರದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತವೆ.

ಲೇಖಕಿ: ಸಾಮಾಜಿಕ ಕಾರ್ಯಕರ್ತೆ, ಸಿಟಿಜನ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಎನ್‌ಪಿಆರ್–ಆಧಾರ್ ಜೋಡಣೆ ಅಕ್ರಮ

ಎನ್‌ಪಿಆರ್‌ನಲ್ಲಿನ ಮಾಹಿತಿಯೇ ಬೇರೆ, ಆಧಾರ್ ಕಾರ್ಡ್‌ನಲ್ಲಿರುವ ಮಾಹಿತಿಗಳೇ ಬೇರೆ. ನಾಗರಿಕರಿಗೆ ಗುರುತಿನ ಚೀಟಿ ನೀಡಬಹುದು ಎಂದು ಕಾಯ್ದೆ ಇರುವುದರಿಂದ ಎನ್‌ಪಿಆರ್‌ಗೆ ಬಲ ಬಂದಿದೆ. ಆಧಾರ್ ಕಾರ್ಡ್ ಎನ್ನುವುದು ವ್ಯಕ್ತಿಯೊಬ್ಬರ ವಿಳಾಸಕ್ಕೆ ಇರುವ ಸಾಕ್ಷ್ಯ ಮಾತ್ರ. ಇದರಲ್ಲಿ ವ್ಯಕ್ತಿಗಳ ಬಯೋಮೆಟ್ರಿಕ್ ದತ್ತಾಂಶಗಳೂ ಇರುತ್ತವೆ. ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿಯಾದರೂ ಸರಿ, ಜನರ ಅನುಮತಿ ಪಡೆದುಕೊಂಡೇ ಆಧಾರ್ ಸಂಖ್ಯೆಯನ್ನು ಸರ್ಕಾರ ಬಳಸಿಕೊಳ್ಳಬೇಕು ಎಂದು 2016ರಲ್ಲಿ ತಂದ ಆಧಾರ್ ಕಾಯ್ದೆ ಹೇಳುತ್ತದೆ.

ಗೃಹ ಸಚಿವಾಲಯದ ಅಡಿಯಲ್ಲಿ ಬರುವ ಎನ್‌ಪಿಆರ್ ಹಾಗೂ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಅಡಿಯಲ್ಲಿ ಬರುವ ಆಧಾರ್ ಕಾರ್ಡ್ ಅನ್ನು ಪರಸ್ಪರ ಜೋಡಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಎರಡೂ ಪರಸ್ಪರ ಭಿನ್ನವಾದ ದತ್ತಾಂಶಗಳು. ನಿಯಮಗಳ ಪ್ರಕಾರ ಎನ್‌ಪಿಆರ್ ಅನ್ನು ಮನೆ–ಮನೆಗೆ ಭೇಟಿ ನೀಡಿಯೇ ಸಿದ್ಧಪಡಿಸಬೇಕು ಮತ್ತು ಪರಿಷ್ಕರಿಸಬೇಕು. ಜನರೇ ಯಾವುದೋ ಏಜೆನ್ಸಿಗೆ ಹೋಗಿ ನೀಡಿದ ಮಾಹಿತಿಯಿಂದ ರೂಪುಗೊಂಡ ಆಧಾರ್‌ನ ಮೂಲಕ ಎನ್‌ಪಿಆರ್ ಅನ್ನು ಪರಿಷ್ಕರಿಸುವಂತಿಲ್ಲ. ಆದರೆ ಈ ಎಲ್ಲಾ ನಿಯಮ ಮತ್ತು ನಿರ್ಬಂಧಗಳನ್ನು ಮೀರಿ ಗೃಹ ಸಚಿವಾಲಯವು ಎನ್‌ಪಿಆರ್ ಮತ್ತು ಆಧಾರ್ ಮಾಹಿತಿಯನ್ನು ಜೋಡಿಸಿದೆ. ಮತ್ತು ಎನ್‌ಪಿಆರ್ ಅನ್ನು ಪರಿಷ್ಕರಿಸಿದೆ.

ಎನ್‌ಪಿಆರ್‌ನ ಮುಖ್ಯ ಉದ್ದೇಶವು ಜನರ ವಿಳಾಸವನ್ನು ದಾಖಲೆಗಳ ಮೂಲಕ ಸಾಬೀತು ಮಾಡುವುದು. ಇದು ಸರ್ಕಾರವು ತನ್ನ ಜವಾಬ್ದಾರಿಯನ್ನು ಜನರ ಮೇಲೆ ಹಾಕಿದಂತಾಗಿದೆ. ಸರ್ಕಾರಗಳೇ ನಿಯಂತ್ರಿಸುವ ಸ್ಥಳೀಯ ಅಧಿಕಾರಿಗಳಿಂದ ಜನರು ದೌರ್ಜನ್ಯ ಅನುಭವಿಸುವಂತೆ ಎನ್‌ಪಿಆರ್ ಮಾಡುತ್ತದೆ. ದಾಖಲೆಗಳು ಇಲ್ಲದಿರುವುದು ಅಥವಾ ದಾಖಲೆಗಳು ಸರ್ಕಾರದ ದಾಖಲೆಯೊಂದಿಗೆ ಹೊಂದಿಕೆ ಆಗದೇ ಇರುವುದು ಜನರನ್ನು 'ಸಾಮಾನ್ಯ ನಿವಾಸಿ' (ಪೌರತ್ವ ಪಟ್ಟಿ) ಪಟ್ಟಿಯಿಂದ ಹೊರಹಾಕಿ ಬಿಡುತ್ತದೆ. ಅಸ್ಸಾಂನಲ್ಲಿ ಇಂಥ ಹಲವು ಘಟನೆಗಳು ನಡೆದಿವೆ ಮತ್ತು ನಡೆಯುತ್ತಿವೆ. ಈ ಪ್ರಕ್ರಿಯೆಗಳು ಮೂಲದಲ್ಲಿಯೇ ಅನ್ಯಾಯ ಪ್ರವೃತ್ತಿಯದ್ದಾಗಿದೆ ಮತ್ತು ಇಂಥ ನ್ಯಾಯಸಮ್ಮತವಲ್ಲದ ಪ್ರಕ್ರಿಯೆಗಳು ದುರ್ಬಲ ವ್ಯಕ್ತಿಯ ಪೌರತ್ವವನ್ನು ನಿರ್ಧರಿಸುವ ಅಧಿಕಾರವನ್ನು ಸರ್ಕಾರಿ ನೌಕರರ ವಿವೇಚನೆಗೆ ನೀಡುತ್ತದೆ. ಅಂಥದ್ದರಲ್ಲಿ ಎನ್‌ಪಿಆರ್ ಅನ್ನು ಯಾವುದೋ ದತ್ತಾಂಶದ ಆಧಾರದಲ್ಲಿ ಪರಿಷ್ಕರಿಸುವ ಕಾರ್ಯವನ್ನು ಕೇಂದ್ರ ಸರ್ಕಾರ ನಡೆಸಿದೆ.

ಭಾರತೀಯರನ್ನೂ ಗಡೀಪಾರು ಮಾಡುವ ಅಪಾಯ

ಧರ್ಮದ ಆಧಾರದಲ್ಲಿ ಪೌರತ್ವವನ್ನು ನೀಡುವ 'ಪೌರತ್ವ ತಿದ್ದುಪಡಿ ಕಾಯ್ದೆ–ಸಿಎಎ' 2019ರ ಡಿಸೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂದಿತು. ಆದರೆ ಅದರ ವಿರುದ್ಧ ದೇಶದಾದ್ಯಂತ ದೊಡ್ಡ ಹೋರಾಟವೂ ನಡೆಯಿತು. ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ಒಂದರ ನಂತರ ಒಂದು ಬರುತ್ತದೆ, ಅವುಗಳ 'ಕ್ರೊನಾಲಜಿಯನ್ನು ಅರ್ಥಮಾಡಿಕೊಳ್ಳಿ' ಎಂದು ಬಿಜೆಪಿ ಸರ್ಕಾರದ ಹಿರಿಯ ನಾಯಕರು ಹೇಳಿದ್ದು, ಜನರಲ್ಲಿ ಆತಂಕವನ್ನು ಸೃಷ್ಟಿ ಮಾಡಿತು. ಈ 'ಕ್ರೊನಾಲಜಿ'ಯನ್ನು ಬಳಸಿಕೊಂಡು, ಸರ್ಕಾರದ ಬಳಿ ಇರುವ ದಾಖಲಾತಿಗಳ ಆಧಾರದಲ್ಲಿ ಕೋಟ್ಯಂತರ ಸಂಖ್ಯೆಯಲ್ಲಿರುವ ಅಸಹಾಯಕ ನಾಗರಿಕರನ್ನು ದೇಶದಿಂದ ಗಡಿಪಾರು ಮಾಡಲಾಗುತ್ತದೆ ಎಂಬ ಆತಂಕ ಜನರಲ್ಲಿ ಮನೆಮಾಡಿತು. ಜನರಲ್ಲಿನ ಈ ಭಯವನ್ನು ಸಿಎಎ ನಿಯಮಗಳನ್ನು ರೂಪಿಸುವ ಮೂಲಕ ನಿಜ ಮಾಡುವಂತಹ ಕ್ರಿಯೆಗಳು ಚಾಲ್ತಿಯಲ್ಲಿವೆ ಮತ್ತು ಅವು ಯಾವಾಗ ಬೇಕಾದರೂ ನಿಜವಾಗಬಹುದು.

ದಾಖಲಾತಿಗಳ ಆಧಾರದಲ್ಲಿ ಜನರನ್ನು ಹೊರಗಟ್ಟುವ ಇಂಥದ್ದೇ ಕಾರ್ಯಕ್ಕಾಗಿ ಅಸ್ಸಾಂ ಸರ್ಕಾರ ₹1,700 ಕೋಟಿ ವ್ಯಯ ಮಾಡಿದೆ. ಇದು ಸರ್ಕಾರದ ಮೇಲಿನ ಹೊರೆ ಮಾತ್ರವಲ್ಲ 3.3 ಕೋಟಿಯಷ್ಟಿರುವ ಅಸ್ಸಾಂನ ಜನರ ಮೂರನೇ ಒಂದು ಭಾಗದಷ್ಟು ಜನರ ಮೇಲಿನ ಹೊರೆಯೂ ಹೌದು. ಈ ಕಾರ್ಯದ ಭಾಗವಾಗಿ ಅಸ್ಸಾಂ ಗಡಿ ಪೊಲೀಸರು ಮತ್ತು ವಿದೇಶಿಯರ ನ್ಯಾಯಮಂಡಳಿಗಳು ಅಸ್ಸಾಂನ ಜನರಿಗೆ 'ನೋಟಿಸ್'ಗಳನ್ನು ನೀಡುತ್ತಿವೆ. 2.22 ಲಕ್ಷ ಜನರು ಮತ್ತು ಅವರ ಕುಟುಂಬದ ಸದಸ್ಯರು ಈಗ ಎನ್‌ಆರ್‌ಸಿಯಿಂದ ಹೊರಗುಳಿಯುವ ಆತಂಕದಲ್ಲಿದ್ದಾರೆ. ಅಥವಾ ಅವರನ್ನು ಶಂಕಿತ ವಿದೇಶಿ ವಲಸಿಗ ಎಂದೂ ಘೋಷಿಸುವ ಅಪಾಯಗಳಿವೆ. ಆದರೆ ವಾಸ್ತವದಲ್ಲಿ ಅವರಲ್ಲಿ ಶೇ 99ರಷ್ಟು ಜನರು ಭಾರತೀಯರೇ ಆಗಿದ್ದಾರೆ. ಜನರ ಒಪ್ಪಿಗೆ ಇಲ್ಲದೆ ಮತ್ತು ಜನರಿಗೆ ಅರಿವಿಗೆ ಬರದಂತೆ ಎನ್‌ಪಿಆರ್ ಮತ್ತು ಆಧಾರ್ ದತ್ತಾಂಶಗಳನ್ನು ರಹಸ್ಯವಾಗಿ ಜೋಡಣೆ ಮಾಡುತ್ತಿರುವುದು ಹಲವು ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಜತೆಗೆ ಈಗಾಗಲೇ ಇರುವ ಆತಂಕಗಳನ್ನು ಇಮ್ಮಡಿ ಮಾಡುತ್ತದೆ. ಈ ದತ್ತಾಂಶಗಳು ಹೊಂದಾಣಿಕೆ ಆಗದೇ ಇದ್ದಲ್ಲಿ, ಅವು ಸರಿಯಾಗಿವೆ ಎಂದು ಸಾಬೀತುಮಾಡುವ ಹೊರೆ ನಾಗರಿಕರ ಮೇಲೆಯೇ ಬೀಳುತ್ತದೆ. ತಾವು ಭಾರತೀಯರೇ ಹೌದು ಎಂದು ಸ್ವತಃ ನಾಗರಿಕರೇ ಸಾಬೀತು ಮಾಡಬೇಕು ಎಂಬ ಹೊಣೆಗಾರಿಕೆಯನ್ನು 2003ರ ಪೌರತ್ವ ನಿಯಮ ನಾಗರಿಕರ ಮೇಲೆಯೇ ಹೊರಿಸಿದೆ. ಇದು ದೊಡ್ಡ ಮಟ್ಟದ ಸಾಮಾಜಿಕ ತಲ್ಲಣಕ್ಕೆ ಎಡೆಮಾಡಿಕೊಡಲಿದೆ.

ಇಂಥಹ ಸಂಕೀರ್ಣತೆಗಳು ಇದ್ದ ಕಾರಣಕ್ಕೇ, 2010ರಲ್ಲಿ ಆರಂಭಿಸಿದ್ದ ಇಂತಹ ಕಾರ್ಯವನ್ನು ಸರ್ಕಾರ ಕೈಬಿಟ್ಟಿತ್ತು. ಇಲ್ಲಿ ಹೇಳುತ್ತಿರುವ ಸಂಕೀರ್ಣತೆ ಅಂದರೆ ಜನರ ಬಳಿ ದಾಖಲಾತಿಗಳು ಇಲ್ಲದೇ ಇರುವುದು. ನಿಜವಾದ ಭಾರತೀಯರ ಬಳಿಯೂ ಈ ಎಲ್ಲಾ ಅಗತ್ಯ ದಾಖಲೆಗಳು ಇಲ್ಲ ಮತ್ತು ಸ್ಥಳೀಯ ಸಂಸ್ಥೆಗಳ ಜತೆಗೆ ಅಂತಹ ಸಾಮಾನ್ಯ ಜನರು ವ್ಯವಹರಿಸುವುದು ಸುಲಭವಲ್ಲ. ಅಸ್ಸಾಂನಲ್ಲಿ ಇಂತಹ ತೊಡಕುಗಳಿಂದ ಎದುರಾಗಿರುವ ಬಿಕ್ಕಟ್ಟನ್ನು ನಿಜವಾದ ಜನಸರ್ಕಾರವು ಅರ್ಥಮಾಡಿಕೊಳ್ಳಬೇಕಿತ್ತು, ಅರ್ಥಮಾಡಿಕೊಳ್ಳುತ್ತದೆ ಕೂಡ. ಆದರೆ ಯಾವುದೇ ಹೊಣೆಗಾರಿಕೆ ಇಲ್ಲದ ಸರ್ಕಾರದಿಂದ ಮಾತ್ರ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಅಪಾರದರ್ಶಕ ಮಾಹಿತಿ

ಎನ್‌ಪಿಆರ್ ಮತ್ತು ಆಧಾರ್ ಜೋಡಣೆ ಸಂಬಂಧ ಗೃಹ ಸಚಿವಾಲಯವು ಬಿಡುಗಡೆ ಮಾಡಿರುವ 2010, 2015–16 ಹಾಗೂ 2020ರ ಸಾಲಿನ ವಾರ್ಷಿಕ ವರದಿಗಳು ಯಾವುದೇ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸುವುದೇ ಇಲ್ಲ.

2015–16ರಲ್ಲಿ ಕೈಗೊಂಡ ಎನ್‌ಪಿಆರ್ ಪರಿಷ್ಕರಣೆ (ಎನ್‌ಪಿಆರ್–ಆಧಾರ್ ಕಾರ್ಡ್ ಜೋಡಣೆಯ ಪ್ರಕ್ರಿಯೆ) ಮೂಲಕ ಎನ್‌ಪಿಆರ್‌ನಲ್ಲಿ ಆಧಾರ್ ಸಂಖ್ಯೆಯನ್ನು ಸೇರಿಸಲಾಗಿದೆ ಎಂದು 2020ರ ಎನ್‌ಪಿಆರ್ ಕೈಪಿಡಿಯಲ್ಲಿ ಹೇಳಲಾಗಿದೆ. ಯಾವ ಪ್ರಮಾಣದಲ್ಲಿ ಜೋಡಣೆ ಕಾರ್ಯ ನಡೆಸಿದೆ ಎಂಬ ಕುರಿತು ಆರ್‌ಟಿಐ ಮೂಲಕ ಎಷ್ಟೇ ಅರ್ಜಿಗಳನ್ನು ಸಲ್ಲಿಸಿದರೂ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಮಾತ್ರ ಮೌನವಹಿಸಿದೆ.

'ಮಾಹಿತಿಗಳ ಡಿಜಿಟಲೀಕರಣ ಪ್ರಕ್ರಿಯೆ ಮುಗಿದಿದೆ ಮತ್ತು 119.19 ಕೋಟಿ ಜನರ ಮಾಹಿತಿಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ' ಎಂದು 2014–15ರ ಗೃಹ ಸಚಿವಾಲಯದ ವಾರ್ಷಿಕ ವರದಿಯಲ್ಲಿ ಹೇಳಲಾಗಿತ್ತು. '119.19 ಕೋಟಿ ಜನರ ಡೆಮೊಗ್ರಾಫಿಕ್ ಮಾಹಿತಿಯನ್ನು 2010ರಲ್ಲಿಯೇ ಸಂಗ್ರಹಿಸಲಾಗಿದೆ ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶ ಹಾಗೂ ಎಲ್ಲ ರಾಜ್ಯಗಳಲ್ಲಿನ (ಅಸ್ಸಾಂ ಹಾಗೂ ಮೇಘಾಲಯ ಹೊರತುಪಡಿಸಿ) ಜನರ ಮಾಹಿತಿಗಳನ್ನು 2015–16ರಲ್ಲಿ ಪರಿಷ್ಕರಿಸಲಾಗಿದೆ' ಎನ್ನುವ ಮಾಹಿತಿಯನ್ನು 2017–18ರ ವಾರ್ಷಿಕ ವರದಿ ನೀಡುತ್ತದೆ.

ಎನ್‌ಪಿಆರ್ ಹಾಗೂ ಆಧಾರ್ ಕಾರ್ಡ್ ಜೋಡಣೆಯು ಯಾವ ಪ್ರಮಾಣದಲ್ಲಿ ನಡೆದಿದೆ ಎನ್ನುವ ಮಾಹಿತಿಯನ್ನು ಗೃಹ ಸಚಿವಾಲಯದ ಹಲವು ವಾರ್ಷಿಕ ವರದಿಗಳೇ ನೀಡುತ್ತವೆ. 2015–16ರ ಜೋಡಣೆ ಪ್ರಕ್ರಿಯೆ ಆರಂಭವಾಗುವ ಮುನ್ನವೂ ಇಂಥ ಜೋಡಣೆ ಪ್ರಕ್ರಿಯೆಯು ನಡೆಯುತ್ತಿತ್ತು ಎನ್ನುವುದನ್ನೂ ಇದೇ ವರದಿಗಳು ಸಾದರ ಪಡಿಸುತ್ತವೆ. ಇದಕ್ಕೆ ಉದಾಹರಣೆ ನೀಡಬಹುದು. '23.51 ಕೋಟಿ ಜನರ ಎನ್‌ಪಿಆರ್ ಮಾಹಿತಿಗಳನ್ನು ಪರಿಷ್ಕರಿಸಲು ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರಕ್ಕೆ (ಯುಐಡಿಎಐ) ನೀಡಲಾಗಿದೆ' ಎಂದು 2014–15ರ ವಾರ್ಷಿಕ ವರದಿ ಹೇಳುತ್ತದೆ. ಈ ಮಟ್ಟದ ಪರಿಷ್ಕರಣೆಯು, 2015–16ರ ಪರಿಷ್ಕರಣೆ ಪ್ರಕ್ರಿಯೆಯ ಘೋಷಣೆಯ ನಂತರ ನಡೆಯಬೇಕಿತ್ತು. ಆದರೆ, ಈ ವರ್ಷಕ್ಕೂ ಮೊದಲೇ ಪರಿಷ್ಕರಣೆ ಪ್ರಕ್ರಿಯೆ ಆರಂಭಗೊಂಡಿತ್ತು. ದೊಡ್ಡ ಮಟ್ಟದ ರಹಸ್ಯ ಹೆಜ್ಜೆಯನ್ನಂತೂ ಇಡಲಾಗಿತ್ತು. ಆದರೆ, ಎಷ್ಟು ದೊಡ್ಡ ಪ್ರಮಾಣದಲ್ಲಿ ಜೋಡಣೆ ಪ್ರಕ್ರಿಯೆ ನಡೆದಿದೆ ಎನ್ನುವುದರ ಕುರಿತು ಮಾತ್ರ ನಿಖರ ಮಾಹಿತಿಗಳಿಲ್ಲ.



ಮಾತಿನ ಮಂಟಪದಲ್ಲಿ 'ರಂಗನಾಯಕ'

ಟಿವಿ ವಾಹಿನಿಯೊಂದರಲ್ಲಿ ಸಮ್ಮೋಹನ ವಿದ್ಯೆ ಬಳಸಿ ಮನುಷ್ಯನನ್ನು ಹಿಂದಿನ ಜನ್ಮಕ್ಕೆ ಕರೆದುಕೊಂಡು ಹೋಗುವ ಕಾರ್ಯಕ್ರಮ. ಅದಕ್ಕೆ ಅತಿಥಿಯಾಗಿ ಬರುವುದು ನಿರ್ದೇಶಕ ಗುರುಪ್ರಸಾದ್. ಅವರ ಬಗ್ಗೆ ಮಾತನಾಡಲು ಪ್ಯಾನೆಲ್‌ನಲ್ಲಿ ಕುಳಿತವರು ನಿರ್ದೇಶಕ ಯೋಗರಾಜ್ ಭಟ್ಟರು. ಇಲ್ಲಿಂದ ರಂಗನಾಯಕ ಚಿತ್ರ ಪ್ರಾರಂಭವಾಗುತ್ತದೆ. 15 ವರ್ಷಗಳ ನಂತರ 'ಮಠ' ಜೋಡಿಯಿಂದ ಬಂದ ಮತ್ತೊಂದು ಚಿತ್ರ. 'ಮಠ'ದಂತೆ ಇಲ್ಲಿಯೂ ಹಾಸ್ಯಕ್ಕೆ, ದ್ವಂದ್ವಾರ್ಥದ ಸಂಭಾಷಣೆಗಳಿಗೆ ಬರವಿಲ್ಲ!

ಸಮ್ಮೋಹನಕ್ಕೆ ಒಳಗಾಗುವ ಮೊದಲು ಗುರುಪ್ರಸಾದ್ ಈ ಜನ್ಮದ ಬಗ್ಗೆ, ಕನ್ನಡ ಚಿತ್ರರಂಗದ ಕುರಿತು ಒಂದಷ್ಟು ಮಾತನಾಡುತ್ತಾರೆ. ಆ ಸನ್ನಿವೇಶದಲ್ಲಿ ರಂಗನಾಯಕನಾಗಿ ಜಗ್ಗೇಶ್ ಆಗಮನವಾಗುತ್ತದೆ. ನಾಯಕನ ಪ್ರೇಯಸಿಯಾಗಿ ರಚಿತಾ ಮಹಾಲಕ್ಷ್ಮಿ ಕಾಣಿಸಿಕೊಂಡಿದ್ದಾರೆ. ಒಂದು ಕಡೆ ಗುರುಪ್ರಸಾದ್ ಕಥೆ ನಡೆಯುತ್ತಿದ್ದರೆ ಮತ್ತೊಂದೆಡೆ ರಂಗನಾಯಕನ ಟ್ರ್ಯಾಕ್ ತೆರೆದುಕೊಳ್ಳುತ್ತದೆ.

ಚಿತ್ರದ ಮೊದಲಾರ್ಧ ಕನ್ನಡದ ಮೊದಲ ಚಿತ್ರ ಮಾಡಿದ ವ್ಯಕ್ತಿಯ ಕಥೆಯ ಹಿಂದೆ ಸಾಗುತ್ತದೆ. ಇಲ್ಲಿ ಗುರುಪ್ರಸಾದ್ ಹೆಚ್ಚು ಆವರಿಸಿಕೊಂಡು, ಅವರ ತಂದೆಯ ಕಥೆ ತೆರೆದುಕೊಂಡು, ಜಗ್ಗೇಶ್‌ಗೆ ಅವಕಾಶ ಕಡಿಮೆ. ದ್ವಿತೀಯಾರ್ಧದಲ್ಲಿ ಮಕ್ಕಳಿಲ್ಲದ ರಾಜನ ಮನೆಗೆ ದತ್ತುಪುತ್ರನಾಗಿ ಬರುವುದರೊಂದಿಗೆ ರಂಗನಾಯಕನ ಕಥೆ ಪ್ರಾರಂಭವಾಗುತ್ತದೆ. ನಂತರ ಇವೆರಡೂ ಕಥೆಗಳು ಬೆಸೆದುಕೊಳ್ಳುತ್ತ ಹೋಗುತ್ತವೆ. ಇದು ಅಪ್ಪಟ್ಟ ಗುರುಪ್ರಸಾದ್ ಶೈಲಿಯ ಚಿತ್ರ. ಕನ್ನಡ ಚಿತ್ರರಂಗಕ್ಕೆ ಟಾಂಗ್ ಕೊಡುತ್ತ ಮಾತಿನಿಂದಲೇ ನಗಿಸುತ್ತಾರೆ. ಹಲವು ಕಡೆ ಮೌನಕ್ಕೆ ಜಾಗವಿಲ್ಲದೆ ಮಾತು ವಿಪರೀತವಾಯಿತು ಎನ್ನಿಸುತ್ತದೆ. ಕಥೆ ನ್ಯೂಸ್‌ರೂಂ ಮತ್ತು ಅರಮನೆ ಬಿಟ್ಟು ಕದಲದಿರುವುದು ಓಘವನ್ನು ತಗ್ಗಿಸುತ್ತದೆ.

ರಂಗನಾಯಕ
- **ನಿರ್ದೇಶನ:** ಗುರುಪ್ರಸಾದ್
- **ನಿರ್ಮಾಣ:** ವಿಖ್ಯಾತ್
- **ತಾರಾಗಣ:** ಜಗ್ಗೇಶ್, ರಚಿತಾ ಮಹಾಲಕ್ಷ್ಮಿ, ಗುರುಪ್ರಸಾದ್ ಮತ್ತಿತರರು

ನಾವು ನೋಡಿದ ಸಿನಿಮಾ


ಇಡೀ ಚಿತ್ರದಲ್ಲಿ ಕ್ಲೋಸಪ್‌ಗಳು ಹೆಚ್ಚಿವೆ. ಜಗ್ಗೇಶ್ ಹಾವಭಾವ, ವಿಚಿತ್ರ ವರ್ತನೆಯ ಹಾಸ್ಯದಿಂದ ಇಷ್ಟವಾಗುತ್ತಾರೆ. ರಚಿತಾ ಮಹಾಲಕ್ಷ್ಮಿ ಕೂಡ ಸಿಕ್ಕ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಯೋಗರಾಜ್ ಭಟ್ಟರು ಕೂಡ ನಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅನೂಪ್ ಸೀಳಿನ್ ಹಾಡುಗಳು ಮತ್ತು ಹಿನ್ನೆಲೆ ಸಂಗೀತ ಗಮನ ಸೆಳೆಯುವಂತಿವೆ. ಸಾಮ್ರಾಟ್ ಅಶೋಕ್ ಗೌತಂ ಫ್ರೇಮುಗಳನ್ನು ವರ್ಣಮಯವಾಗಿಸಿದ್ದಾರೆ. ಚಿತ್ರದ ಕಲರ್ ಟೋನ್ ಇಷ್ಟವಾಗುತ್ತದೆ. ಚಿತ್ರಕಥೆಯನ್ನು ಇನ್ನಷ್ಟು ಬಿಗಿಯಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ❖

ಪದಬಂಧ 5615

–ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅರಮನೆಗೆ ಹಾಜರಾದ ಚಕ್ರವರ್ತಿ (4)
3.ಈತ ಏಕಾಂಗಿ (4)
5.ಒಲುಮೆ ತೋರುತ್ತಲೇ ಮಾಡಿದ ಒತ್ತಾಯ (3)
6.ಕುದುರೆಯನ್ನೇರುವ ಬಳೆ (3)
8.ಚಾರ ಹೇಳಿರುವ ವಿಷಯ (3)
9.ಹರ್ಷವಿಲ್ಲಿ ವಿರಳವಾಗಿ ಬಂದಿದೆ (3)
10.ಕೈಯಲ್ಲಿರುವ ಹಣ (3)
12.ಉಂಟಾಗಬಹುದಾದುದನ್ನು ಹೀಗೆನ್ನಿ (3)
14.ರತ್ನಗಳ ಆಶ್ರಯಸ್ಥಾನ (4)
15.ಗೃಹದ ಮಧ್ಯೆ ಇರುವ ಹಜಾರ (4)

ಮೇಲಿಂದ ಕೆಳಕ್ಕೆ
1.ನಾರಿಗೊಲಿದಿರುವ ಶಿವ (4)
2.ಹಡಗು ಇಲ್ಲಿಗೆ ಕಾಣುತ್ತಿದೆ (3)
3.ಮೆಲುವಾಗಿ ಆವರಿಸಿದ ಪ್ರೀತಿ (3)
4.ಕಾಲ ಸೂಚಕ ಯಂತ್ರ (4)
7.ಗಂಡು ವ್ಯಕ್ತಿಯನ್ನು ಹೀಗೆನ್ನಿ (3)
8.ರೀತಿಗೊಂದು ಪರ್ಯಾಯ ಪದ (3)
9.ಈತ ಅಂಚೆಯ ಆಳು (4)
11.ಕೆಟ್ಟ ನಡುವಳಿಕೆಯಿದು (4)
12.ಕರದ ಕೊನೆಗಿರುವ ಮಿಶ್ರಣ (3)
13.ವ್ಯವಸಾಯಗಾರನ ಕೆಟ್ಟಚಟ! (3)



5614ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಕಸ್ತೂರಿಮೃಗ 5.ಪದರ
6.ರಜತ 8.ಣಕ
11.ವಿಲಾಸ 12.ರುಕ
14.ನಕುಲ 17.ಶವಹ
18.ವನಪಾಲಕ

ಮೇಲಿಂದ ಕೆಳಕ್ಕೆ:
1.ಪ್ರಕರಣ 2.ಅರಿವು
3.ಜಾಗರ 5.ಪದವೀದಾನ
7.ತಲೆಬರಹ 9.ಕವಿತೆ
10.ಮೊಸರು 13.ಕಳಕಳಿ
15.ಲವಣ 16.ನಪಾಸು

ಸುಡೊಕು 6000

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5999 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಮಾರ್ಚ್ 9, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಚತುರ್ದಶಿ ಗಂ. 18-18 **ನಕ್ಷತ್ರ:** ಧನಿಷ್ಠ ಗಂ. 07-55 ನಂತರ ಶತಭಿಷ ಗಂ. 28-56 **ಯೋಗ:** ಸಿದ್ಧ ಗಂ. 20-32 **ಕರಣ:** ವಿಷ್ಟಿ ಗಂ. 08-10, ಕುಂಭ ಮಾಸದ 25 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 2. **ರಾಹುಕಾಲ:** ಬೆಳಿಗ್ಗೆ 09-00 – 10-30
ಸೂರ್ಯೋದಯ: 06-45 **ಸೂರ್ಯಾಸ್ತ:** 06-37
ಮುಸ್ಲಿಂ ದಿನಾಂಕ: 27 ಶಬನ್
ಅದೃಷ್ಟ ಸಂಖ್ಯೆ: 1, 10

ಮೇಷ: ಇತ್ತೀಚಿನ ದಿನದಲ್ಲಿ ಸಹೋದರರಲ್ಲಿ ಮೂಡಿದ ಭಿನ್ನಾಭಿಪ್ರಾಯವು ತಂದೆ ತಾಯಿಯ ಹಿತವಚನಗಳಿಂದ ಉತ್ತಮವಾಗಲಿದೆ. ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಸೇರುವ ಆಸಕ್ತಿಗೆ ಇಂದು ಹಾದಿ ದೊರಕಲಿದೆ.

ವೃಷಭ: ವಿದ್ಯಾರ್ಥಿಗಳಿಗೆ ಉನ್ನತ ಶ್ರೇಣಿ ಪ್ರಾಪ್ತವಾಗಿ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಭಾಗ್ಯವಿದೆ. ಆದರೆ ಉದ್ಯೋಗದ ಸ್ಥಳದ ಬಗ್ಗೆ ಗಮನವಿರಲಿ. ಈ ದಿನ ನಿರಾಸೆಯ ಜೀವನ ಶೈಲಿಯು ಹಂತ ಹಂತವಾಗಿ ಮುಕ್ತಾಯವಾಗಲಿದೆ.

ಮಿಥುನ: ಮಧ್ಯಾಹ್ನದ ನಂತರ ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರಲಿದೆ. ಇಂದಿನ ಪರಿಸ್ಥಿತಿಯಲ್ಲಿ ಮನಸ್ಸು ಹತೋಟಿಯಲ್ಲಿಟ್ಟುಕೊಳ್ಳುವುದು ಸಾಹಸದ ವಿಚಾರ. ಹೊರ ಪ್ರಪಂಚದಲ್ಲಿ ಬೆರೆಯುವುದನ್ನು ರೂಢಿಸಿಕೊಳ್ಳಿ.

ಕರ್ಕಾಟಕ: ಹೊಸ ಕೆಲಸ ಶುರು ಮಾಡುವ ಮುನ್ನ ಮುಂದಿನ ಕ್ರಮಗಳ ಕುರಿತು ಗಂಭೀರವಾಗಿ ಯೋಚಿಸಿ ತೀರ್ಮಾನಿಸಬೇಕು. ಕೌಟುಂಬಿಕ ಸಮಸ್ಯೆಗಳಿಗೆ ತಾಳ್ಮೆಯಿಂದ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿ.

ಸಿಂಹ: ಹಿರಿಯ ಅಧಿಕಾರಿಗಳಿಂದ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಶುಭ ಫಲಗಳಿಗಾಗಿ ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.

ಕನ್ಯಾ: ಅನಿರೀಕ್ಷಿತವಾಗಿ ದೊರೆತ ಅವಕಾಶಗಳನ್ನು ಯಾವುದೇ ಮುಜುಗರವಿಲ್ಲದೆ ಬಳಸಿಕೊಳ್ಳಲು ಸಿದ್ಧರಾಗಿ. ನಿಮ್ಮ ಮಾತಿನ ಕೌಶಲ, ಚತುರತೆಯಿಂದ ನಡೆಯಬಹುದಾದ ವೃತ್ತಿ ವೈಷಮ್ಯದ ಕಲಹಗಳು ದೂರಾಗಲಿವೆ.

ತುಲಾ: ವಚನ ಪಾಲನೆಯಿಂದ ಹಾಗೂ ಉನ್ನತ ಅಧಿಕಾರಿಗಳ ಸವಿನುಡಿಯಿಂದ ಮಾನಸಿಕ ಉಲ್ಲಾಸ ಸಿಗಲಿದೆ. ಕಬ್ಬಿಣ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ. ಹೊಸ ಅಲಂಕಾರಿಕ ವಸ್ತು ಖರೀದಿಸುವ ಯೋಗವಿದೆ.

ವೃಶ್ಚಿಕ: ಭೂಮಿ ಖರೀದಿಗೆ ಸಂಬಂಧಿಸಿದಂತೆ ಈ ಹಿಂದೆ ತೆಗೆದುಕೊಂಡ ನಿಲುವುಗಳನ್ನು ಕೆಲವು ಕಾರಣಗಳಿಂದ ಬದಲಾಯಿಸಬೇಕಾಗಬಹುದು. ಕುಶಲ ಕರ್ಮಿಗಳಿಗೆ ಪ್ರದರ್ಶನ ಮಾರಾಟದಿಂದ ಅಧಿಕ ಆದಾಯವಿದೆ.

ಧನು: ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಉತ್ತಮ ಆದಾಯ ಪ್ರಾಪ್ತಿಯಾಗಲಿದೆ. ಸ್ವಂತ ವ್ಯವಹಾರ ನಡೆಸಲು ಇದು ಸರಿಯಾದ ಸಮಯವಲ್ಲ. ನಿಮ್ಮ ವೃತ್ತಿರಂಗದಲ್ಲಿ ಪ್ರತಿಸ್ಪರ್ಧಿಗಳು ಹೆಚ್ಚಲಿದ್ದಾರೆ.

ಮಕರ: ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ವ್ಯಾಪಾರಗಳಿಂದ ಹೇರಳ ಲಾಭ ಸಿಗಲಿದೆ. ಕುಡಿಯುವ ನೀರಿನಿಂದ ಅನಾರೋಗ್ಯ ಉಂಟಾಗಬಹುದು. ರಾಜಕೀಯವಾದ ವಿಚಾರಗಳನ್ನು ಆದಷ್ಟು ಗುಪ್ತವಾಗಿ ಇರಿಸಿ.

ಕುಂಭ: ಕೆಲಸದಲ್ಲಿ ಹೊಸ ಪರಿವರ್ತನೆ ಮಾಡಬೇಕೆಂಬ ಬಹಳ ದಿನಗಳ ನಿಮ್ಮ ಆಲೋಚನೆಗೆ ಇದು ಸುಸಂದರ್ಭ. ವಿವಾಹ ಸಂಬಂಧ ಬೆಳೆಸುವ ಮೊದಲು ಸರಿಯಾಗಿ ಸಮಾಲೋಚನೆ ನಡೆಸಿ ಯೋಚಿಸುವುದು ಉತ್ತಮ.

ಮೀನ: ಕೃಷಿ ಅಥವಾ ಕೃಷಿ ಕೈಗಾರಿಕೆಯಲ್ಲಿನ ವ್ಯವಹಾರಗಳು ಸಮಾಧಾನಕರ ಆದಾಯ ತರಲಿವೆ. ಮಕ್ಕಳ ವಿದ್ಯಾಭ್ಯಾಸದಲ್ಲಿನ ಪ್ರಗತಿ ಕಂಡು ಸಮಾಧಾನವಾಗಲಿದೆ. ಜೀವನದಲ್ಲಿ ಅಧಿಕಾರದ ಹುದ್ದೆ ಹೊಂದುವಿರಿ.

ವರ್ಷಕ್ಕೆ 3 ಬಾರಿ ಸಿಎ ಫೌಂಡೇಷನ್, ಇಂಟರ್‌ಮೀಡಿಯೇಟ್ ಪರೀಕ್ಷೆ

ನವದೆಹಲಿ (ಪಿಟಿಐ): ವರ್ಷದಲ್ಲಿ ಮೂರು ಬಾರಿ ಸಿಎ ಫೌಂಡೇಷನ್ ಕೋರ್ಸ್ ಹಾಗೂ ಸಿಎ ಮಧ್ಯಂತರ (ಇಂಟರ್‌ಮೀಡಿಯೇಟ್) ಕೋರ್ಸ್ ಪರೀಕ್ಷೆಗಳನ್ನು ನಡೆಸಲು ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯು (ಐಸಿಎಐ) ನಿರ್ಧರಿಸಿದೆ.

ಪ್ರಸ್ತುತ ವರ್ಷಕ್ಕೆ ಎರಡು ಬಾರಿ ಈ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಚಾರ್ಟೆಡ್ ಅಕೌಂಟೆಂಟ್ (ಸಿಎ) ಅಧ್ಯಯನಕ್ಕೆ ಇಚ್ಛಿಸುವ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಇತ್ತೀಚೆಗೆ ನಡೆದ ಸಂಸ್ಥೆಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

'ಪ್ರತಿ ವರ್ಷದ ಜನವರಿಯಲ್ಲಿ ಪರೀಕ್ಷೆ ನಡೆಸಲಾಗುವುದು. ಬಳಿಕ ಮೇ ಅಥವಾ ಜೂನ್‌ನಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ನಂತರ ಸೆಪ್ಟೆಂಬರ್‌ನಲ್ಲಿ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಸಂಸ್ಥೆಯು ಶುಕ್ರವಾರ ತಿಳಿಸಿದೆ. ಪ್ರಸ್ತುತ ಸಂಸ್ಥೆಯು 4 ಲಕ್ಷಕ್ಕೂ ಹೆಚ್ಚು ಸದಸ್ಯರು ಹಾಗೂ 8.5 ಲಕ್ಷ ವಿದ್ಯಾರ್ಥಿಗಳನ್ನು ಒಳಗೊಂಡಿದೆ.

ಮೈಗೇಟ್‌ನಿಂದ ಉದ್ಯೋಗಿಗಳಿಗೆ ಷೇರು ಮರು ಖರೀದಿ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಗೇಟ್ ಕಂಪನಿಯು ತನ್ನ 50ಕ್ಕೂ ಹೆಚ್ಚು ಉದ್ಯೋಗಿಗಳಿಗೆ ಷೇರು ಮರು ಖರೀದಿ ಯೋಜನೆಯನ್ನು ಪ್ರಕಟಿಸಿದೆ.

ನಾಲ್ಕು ವರ್ಷಗಳ ಕಾಲ ಸೇವೆ ಪೂರೈಸಿರುವ ಉದ್ಯೋಗಿಗಳಿಗೆ ಈ ಸೌಲಭ್ಯ ಸಿಗಲಿದೆ. ಸ್ಥಾಪಿತ ಷೇರುಗಳ ಶೇ 20ರಷ್ಟನ್ನು ನಗದೀಕರಿಸುವ ಆಯ್ಕೆ ನೀಡಲಾಗಿದೆ ಎಂದು ಮೈಗೇಟ್‌ನ ಸಹ ಸಂಸ್ಥಾಪಕ ಅಭಿಷೇಕ್ ಕುಮಾರ್ ತಿಳಿಸಿದ್ದಾರೆ.

2022–23ನೇ ಹಣಕಾಸು ವರ್ಷದಲ್ಲಿ ಕಂಪನಿಯು ₹40.1 ಕೋಟಿ ಆದಾಯ ಗಳಿಸಿತ್ತು. ಇದಕ್ಕೆ ಹೋಲಿಸಿದರೆ 2023–24ರಲ್ಲಿ ಆದಾಯವು 77.3ರಷ್ಟು ಹೆಚ್ಚಳವಾಗಿದೆ. ಒಟ್ಟು ₹71.10 ಕೋಟಿಗೆ ತಲುಪಿದೆ ಎಂದು ತಿಳಿಸಿದ್ದಾರೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹164.50
ಆರ್‌ಎಸ್‌ಎಸ್-5	₹159.50
ಗುಡ್ ಲಾಟ್	₹147.50

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಮುಂಬೈ ಧಾರಣೆ

ಶೇಂಗಾ

08-03-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1500)
ಒಂದು ವಾರದ ಡೆಲಿವರಿ	1485 (1495)
ಸೋಯಾ ಕಚ್ಚಾ	940 (930)
ಪಾಮ್ ವಾರದ ಡೆಲಿವರಿ	913 (898)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹65,000 (64,800)
ಬೆಳ್ಳಿ ಕೆ.ಜಿ ₹73,000 (72,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1480 (1490)
ಸೋಯಾ (ರಿಫೈನ್ಡ್)	₹960 (940)
ಸೂರ್ಯಕಾಂತಿ (ರಿಫೈನ್ಡ್)	₹940 (940)
ಪಾಮೋಲಿನ್	₹915 (900)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹223-422
ದ್ವಿತಳಿ (ಬಿ.ವಿ)	₹333-568

ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ಆದೇಶ ಜಾರಿ: ಸರ್ಕಾರ ಹೇಳಿಕೆ

ಇ–ಬೈಕ್ ಟ್ಯಾಕ್ಸಿ ಸೇವೆ ರದ್ದು

ಪ್ರಜಾವಾಣಿ ವಾರ್ತೆ



ವಿದ್ಯುತ್ ಚಾಲಿತ ಬೈಕ್ ಟ್ಯಾಕ್ಸಿ ಯೋಜನೆಯಿಂದ ಸಂಕಷ್ಟಕ್ಕೆ ಸಿಲುಕಿದ್ದೆವು. ಈಗ ಸರ್ಕಾರ ಕೈಗೊಂಡಿರುವ ನಿರ್ಧಾರದಿಂದ ಅನುಕೂಲವಾಗಲಿದೆ

ತನ್ವೀರ್ ಪಾಶಾ, ಅಧ್ಯಕ್ಷ, ಓಲಾ ಉಬರ್ ಚಾಲಕರು ಮತ್ತು ಮಾಲೀಕರ ಸಂಘ

ಬೆಂಗಳೂರು: ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ಬೆಂಗಳೂರು ನಗರ ಸೇರಿದಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಆ್ಯಪ್ ಆಧಾರಿತ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯ ಸರ್ಕಾರ ರದ್ದುಪಡಿಸಿದೆ.

ಬಸ್, ರೈಲು ಹಾಗೂ ಮೆಟ್ರೊ ನಿಲ್ದಾಣಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಲು ಹಾಗೂ ವಾಹನಗಳ ಸಂಚಾರ ದಟ್ಟಣೆ ಕಡಿಮೆಗೊಳಿಸುವ ಉದ್ದೇಶದಿಂದ 2021ರಲ್ಲಿ ಬಿಜೆಪಿ ಸರ್ಕಾರವು, ಕರ್ನಾಟಕ ವಿದ್ಯುತ್ ಬೈಕ್ ಟ್ಯಾಕ್ಸಿ ಯೋಜನೆಯನ್ನು ಜಾರಿಗೊಳಿಸಿತ್ತು.

2022ರ ಡಿಸೆಂಬರ್‌ನಲ್ಲಿ ಸಾರಿಗೆ ಇಲಾಖೆಯು ಇ-ಬೈಕ್ ಟ್ಯಾಕ್ಸಿ ಸೇವೆ ಆರಂಭಿಸಲು ಬ್ಲೂಸ್ಮಾರ್ಟ್ ಮತ್ತು ಬೌನ್ಸ್ ಸಂಸ್ಥೆಗಳಿಗೆ ಪರವಾನಗಿ ನೀಡಿತ್ತು.

ಬಿಳಿಬಣ್ಣದ ನಂಬರ್ ಪ್ಲೇಟ್ ಹೊಂದಿರುವ ಬೈಕ್‌ಗಳ ಮೂಲಕವೂ ಈ ಸೇವೆ ಒದಗಿಸಲು ಸರ್ಕಾರ ಅನುಮತಿ ನೀಡಿತ್ತು. ಇದಕ್ಕೆ ಆಟೊ ಮತ್ತು ಟ್ಯಾಕ್ಸಿ ಚಾಲಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅಲ್ಲದೆ, ಬೈಕ್ ಟ್ಯಾಕ್ಸಿ ಸವಾರರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣಗಳು ವರದಿಯಾಗಿದ್ದವು. ಕೆಲವು ಸವಾರರು ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ ಬಗ್ಗೆ ದೂರುಗಳು ದಾಖಲಾಗಿದ್ದವು.

ಹಾಗಾಗಿ, ಇ-ಬೈಕ್ ಟ್ಯಾಕ್ಸಿ ಸೇವೆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ಈ ಸಮಿತಿಯ ವರದಿ ಆಧಾರದ ಮೇಲೆ ಯೋಜನೆಯನ್ನು ರದ್ದುಪಡಿಸಲಾಗಿದೆ.

ಸಮಿತಿ ಹೇಳಿದ್ದೇನು?: ಪ್ರಸ್ತುತ ಕೆಲವು ಖಾಸಗಿ ಆ್ಯಪ್ ಆಧಾರಿತ ಸಂಸ್ಥೆಗಳು ಮೋಟಾರು ವಾಹನ ಕಾಯ್ದೆ ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಿವೆ. ಸಾರಿಗೆಯೇತರ ದ್ವಿಚಕ್ರವಾಹನಗಳನ್ನು ಸಾರಿಗೆ ವಾಹನಗಳನ್ನಾಗಿ ಬಳಕೆ ಮಾಡುತ್ತಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಆಟೊ, ಮ್ಯಾಕ್ಸಿ ಕ್ಯಾಬ್, ಟ್ಯಾಕ್ಸಿ ಸಂಘಗಳು, ಚಾಲಕರು ಮತ್ತು ಬೈಕ್ ಟ್ಯಾಕ್ಸಿ ಸವಾರರ ನಡುವೆ ಹಲವು ಬಾರಿ ಸಂಘರ್ಷ ನಡೆದಿವೆ. ಈ ಬಗ್ಗೆ ಠಾಣೆಗಳಲ್ಲಿ ದೂರು ದಾಖಲಾಗುತ್ತಿವೆ. ಇದರಿಂದ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿದೆ. ಜೊತೆಗೆ ಮಹಿಳೆಯರಿಗೆ ಈ ಸೇವೆಯು ಸುರಕ್ಷಿತವಾಗಿಲ್ಲ ಎಂದು ವಿವರಿಸಿದೆ.

'ಸಾರಿಗೆ ಇಲಾಖೆಯ ರಾಜಸ್ವ ಸಂಗ್ರಹ ಮತ್ತು ಪ್ರವರ್ತನ ಚಟುವಟಿಕೆಗಳ ಸಮರ್ಪಕ ಕಾರ್ಯ ನಿರ್ವಹಣೆಗೆ ಈ ಯೋಜನೆಯಿಂದ ಕಷ್ಟವಾಗುತ್ತಿದೆ ಎಂದು ಸಮಿತಿ ತಿಳಿಸಿದೆ. ಹಾಗಾಗಿ, ರದ್ದುಪಡಿಸಲಾಗಿದೆ' ಎಂದು ಸಾರಿಗೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಪುಷ್ಪ ವಿ.ಎಸ್. ಆದೇಶದಲ್ಲಿ ತಿಳಿಸಿದ್ದಾರೆ.

ರ‍್ಯಾಪಿಡೊಗೆ ಧಕ್ಕೆ ಇಲ್ಲ: ಕಂಪನಿ ಸ್ಪಷ್ಟನೆ

ಸರ್ಕಾರದ ಆದೇಶದಿಂದ ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಸೇವೆಗೆ ಯಾವುದೇ ಧಕ್ಕೆಯಾಗುವುದಿಲ್ಲ ಎಂದು ಕಂಪನಿ ಹೇಳಿದೆ.

ಈ ಆದೇಶವು ರಾಜ್ಯದೊಳಗಿನ ವಿದ್ಯುತ್ ಚಾಲಿತ ಬೈಕ್‌ಗಳ ಸಂಚಾರಕ್ಕೆ ಮಾತ್ರ ಅನ್ವಯಿಸುತ್ತದೆ. ರಾಜ್ಯದಲ್ಲಿ ರ‍್ಯಾಪಿಡೊ ತನ್ನ ಗ್ರಾಹಕರು ಮತ್ತು ಕ್ಯಾಪ್ಟನ್‌ಗಳಿಗೆ ಯಾವುದೇ ಅಡೆತಡೆ ಇಲ್ಲದೆ ಸೇವೆಯನ್ನು ಮುಂದುವರಿಸುತ್ತದೆ ಎಂದು ತಿಳಿಸಿದೆ.

ರಾಜ್ಯದಲ್ಲಿ ಕಂಪನಿಯ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ಸಂಬಂಧಿಸಿದಂತೆ 2021ರಲ್ಲಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ. ಅದೇ ವರ್ಷದ ಆಗಸ್ಟ್‌ನಲ್ಲಿ ನೀಡಿರುವ ಮಧ್ಯಂತರ ಆದೇಶದಲ್ಲಿ ರ‍್ಯಾಪಿಡೊ ಅಥವಾ ಅದರ ಸವಾರರ ವಿರುದ್ಧ ಯಾವುದೇ ದಬ್ಬಾಳಿಕೆಯ ಕ್ರಮ ತೆಗೆದುಕೊಳ್ಳದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ. ಸದ್ಯ ಈ ಪ್ರಕರಣದ ವಿಚಾರಣೆಯನ್ನು ಮಾರ್ಚ್ 20ಕ್ಕೆ ಮುಂದೂಡಲಾಗಿದೆ ಎಂದು ತಿಳಿಸಿದೆ.

ಸಣ್ಣ ಉಳಿತಾಯದ ಬಡ್ಡಿದರ ಯಥಾಸ್ಥಿತಿ

ನವದೆಹಲಿ (ಪಿಟಿಐ): ಸುಕನ್ಯಾ ಸಮೃದ್ಧಿ ಸೇರಿದಂತೆ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡದೆ 2024–25ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದವರೆಗೂ ಕೇಂದ್ರ ಸರ್ಕಾರವು, ಯಥಾಸ್ಥಿತಿ ಕಾಯ್ದುಕೊಂಡಿದೆ.

2023–24ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ನಿಗದಿಪಡಿಸಿರುವ ಬಡ್ಡಿದರವು ಏಪ್ರಿಲ್ 1ರಿಂದ ಜೂನ್ 30ರ ವರೆಗೆ ಮುಂದುವರಿಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ.

ಪ್ರಸ್ತುತ ಸುಕನ್ಯಾ ಸಮೃದ್ಧಿ ಶೇ 8.2, ಪಿಪಿಎಫ್ ಶೇ 7.1, ಉಳಿತಾಯ ಠೇವಣಿ ಶೇ 4, ಕಿಸಾನ್ ವಿಕಾಸ್ ಪತ್ರ ಶೇ 7.5, ಎನ್‌ಎಸ್‌ಸಿ ಶೇ 7.7 ಹಾಗೂ ಮಾಸಿಕ ಉಳಿತಾಯ ಯೋಜನೆಗೆ ಶೇ7.4 ಬಡ್ಡಿದರ ನಿಗದಿಪಡಿಸಲಾಗಿದೆ.



ಲಾಠಿ ಪ್ರಹಾರ ಖಾಸಗಿ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಮಸೂದೆಗೆ ಗ್ರೀಸ್‌ನ ಸಂಸತ್ತಿನಲ್ಲಿ ಅನುಮೋದನೆ ನೀಡಬಾರದು ಎಂದು ಆಗ್ರಹಿಸಿ ರಾಜಧಾನಿ ಅಥೆನ್ಸ್‌ನಲ್ಲಿ ಶುಕ್ರವಾರ ಭಾರಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಸಮೂಹವನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು –ಎಎಫ್‌ಪಿ ಚಿತ್ರ

ಸುದ್ದಿ 2 ನಿಮಿಷ

ಸುಧಾಮೂರ್ತಿ ₹5,600 ಕೋಟಿ ಮೌಲ್ಯದ ಷೇರುಗಳ ಒಡತಿ

ನವದೆಹಲಿ (ಪಿಟಿಐ): ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರು, ಇನ್ಫೊಸಿಸ್ ಕಂಪನಿಯಲ್ಲಿ ₹5,600 ಕೋಟಿ ಮೌಲ್ಯದ ಷೇರುಗಳನ್ನು ಹೊಂದಿದ್ದಾರೆ.

ಮೂರ್ತಿ ಟ್ರಸ್ಟ್‌ನ ಅಧ್ಯಕ್ಷೆಯೂ ಆಗಿ ಸೇವೆ ಸಲ್ಲಿಸುತ್ತಿರುವ ಅವರು, ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಸುಧಾ ಅವರು, 3.45 ಕೋಟಿ ಷೇರುಗಳನ್ನು (ಶೇ 0.83) ಹೊಂದಿದ್ದಾರೆ. ಬಿಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ₹1,616.95 ಆಗಿದೆ ಎಂದು ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್‌ಗೆ ಕಂಪನಿಯು ತಿಳಿಸಿದೆ.

ಸುಧಾ ಅವರ ಪತಿ ನಾರಾಯಣಮೂರ್ತಿ ಅವರು, 1.66 ಕೋಟಿ ಈಕ್ವಿಟಿ ಷೇರುಗಳನ್ನು ಹೊಂದಿದ್ದು, ಇವುಗಳ ಮೌಲ್ಯ ₹2,691 ಕೋಟಿ ಆಗಿದೆ.

ನೇಪಾಳ: ಯುಪಿಐ ಸೇವೆ ಆರಂಭ

ಮುಂಬೈ (ಪಿಟಿಐ): ಡಿಜಿಟಲ್ ವಹಿವಾಟು ಹೆಚ್ಚಿಸಲು ನೇಪಾಳದಲ್ಲಿ ಶುಕ್ರವಾರದಿಂದ ಯುಪಿಐ ಪಾವತಿ ಸೇವೆ ಆರಂಭಗೊಂಡಿದೆ ಎಂದು ರಾಷ್ಟ್ರೀಯ ಪಾವತಿಗಳ ನಿಗಮ (ಎನ್‌ಪಿಸಿಐ) ತಿಳಿಸಿದೆ.

ಎನ್‌ಪಿಸಿಐನ ಇಂಟರ್‌ನ್ಯಾಷನಲ್ ಪೇಮೆಂಟ್ಸ್ ಲಿಮಿಟೆಡ್ (ಎನ್‌ಐಪಿಎಲ್) ಹಾಗೂ ನೇಪಾಳದ ಫೋನ್‌ಪೇ ಪೇಮೆಂಟ್ ಸರ್ವಿಸ್ ನಡುವೆ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಈ ಸಂಬಂಧ ಒಪ್ಪಂದವಾಗಿತ್ತು. ಸದ್ಯ ವಹಿವಾಟು ನಡೆಸುವ ಯುಪಿಐ ಬಳಕೆದಾರರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೇಪಾಳದ ವರ್ತಕರಿಗೆ ಹಣ ಪಾವತಿಸಬಹುದಾಗಿದೆ.

'ಈ ಡಿಜಿಟಲ್ ಪೇಮೆಂಟ್ ಸೇವೆಯಿಂದ ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ಸಂಬಂಧವು ಸದೃಢಗೊಳ್ಳಲಿದೆ' ಎಂದು ಎನ್‌ಐಪಿಎಲ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಿತೇಶ್ ಶುಕ್ಲಾ ಹೇಳಿದ್ದಾರೆ.

ಟ್ರಂಪ್ ವಿರುದ್ಧ ಅಧ್ಯಕ್ಷ ಜೋ ಬೈಡನ್ ವಾಗ್ದಾಳಿ



ಜೋ ಬೈಡನ್

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷರಾಗಿ ಎರಡನೇ ಅವಧಿಗೆ ಪುನರಾಯ್ಕೆ ಬಯಸಿರುವ ಜೋ ಬೈಡನ್, ಗುರುವಾರ ತನ್ನ ಪ್ರತಿಸ್ಪರ್ಧಿ ಮತ್ತು ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

'ಟ್ರಂಪ್ ಅವರು ಅಮೆರಿಕ ಮತ್ತು ಜಾಗತಿಕವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುತ್ತಿದ್ದಾರೆ. ರಷ್ಯಾದ ಎದುರು ಮಂಡಿಯೂರಿರುವ ಅವರು ಪ್ರತೀಕಾರ ಮತ್ತು ದ್ವೇಷದ ಮನಸ್ಥಿತಿಯನ್ನು ಬೆಂಬಲಿಸುತ್ತಿದ್ದಾರೆ' ಎಂದು ಆರೋಪಿಸಿದರು. ಅಮೆರಿಕ ಸಂಸತ್ತಿನಲ್ಲಿ ಕೊನೆಯ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಬೈಡನ್, ಟ್ರಂಪ್ ಹೆಸರನ್ನು ನೇರವಾಗಿ ಪ್ರಸ್ತಾಪಿಸದ ಅವರು, ಸುಮಾರು 1 ಗಂಟೆಯ ಭಾಷಣದಲ್ಲಿ ಸುಮಾರು 13 ಬಾರಿ ಹಿಂದಿನ ಅಧ್ಯಕ್ಷರು ಎಂದು ಉಲ್ಲೇಖಿಸಿದರು.

ಕೊನೆಯ ಅಧಿವೇಶನದ ಹಿಂದೆಯೇ ನವೆಂಬರ್‌ನಲ್ಲಿ ನಡೆಯಲಿರುವ ಅಧ್ಯಕ್ಷ ಸ್ಥಾನದ ಚುನಾವಣೆಗೂ ಸಿದ್ಧತೆ ಆರಂಭವಾದಂತಿದೆ. 81 ವರ್ಷ ವಯಸ್ಸಿನ ಬೈಡನ್, ವಯಸ್ಸಿನಲ್ಲಿ ಅಮೆರಿಕ ಅಧ್ಯಕ್ಷರಲ್ಲಿಯೇ ಹಿರಿಯರು. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕುರಿತು, ವಲಸೆ, ಗನ್ ಕಡಿವಾಣ, ಗರ್ಭಪಾತ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿ 77 ವರ್ಷದ ಟ್ರಂಪ್ ನಿಲುವನ್ನು ಉಲ್ಲೇಖಿಸಿ ತರಾಟೆಗೆ ತೆಗೆದುಕೊಂಡರು.

ಯಾವುದೇ ಅಧ್ಯಕ್ಷ ಅಮೆರಿಕದ ಜನರ ಸೇವೆಗೆ ಬದ್ಧರಾಗಿರಬೇಕು. ಹಿಂದಿನ ಅಧ್ಯಕ್ಷರು ತಮ್ಮ ಪ್ರಾಥಮಿಕ ಕರ್ತವ್ಯದಲ್ಲಿಯೇ ವಿಫಲರಾಗಿದ್ದರು. ಇದು, ಕ್ಷಮಿಸಲಾಗದ್ದು ಎಂದು ಬೈಡನ್ ಟೀಕಿಸಿದರು.



ಹಾಸನ ಜಿಲ್ಲೆಯ ಅರಸೀಕೆರೆ ಎಪಿಎಂಸಿಯಲ್ಲಿ ಶಾಸಕ ಕೆ.ಎಂ.ಶಿವಲಿಂಗೇಗೌಡ, ಶುಕ್ರವಾರ ಕೈಯಲ್ಲಿ ಲಾಠಿ ಹಿಡಿದು ರೈತರನ್ನು ನಿಯಂತ್ರಿಸಿದರು

ಕೊಬ್ಬರಿ ಖರೀದಿ ನೋಂದಣಿ ಮುಕ್ತಾಯ: ರೈತರಿಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಗೆ ನಿಗದಿಯಾಗಿದ್ದ 22 ಸಾವಿರ ಟನ್ ಕೊಬ್ಬರಿ ಖರೀದಿಯ ಮಿತಿ ಪೂರ್ಣವಾಗುತ್ತಿದ್ದಂತೆಯೇ ನೋಂದಣಿ ಪ್ರಕ್ರಿಯೆ ಶುಕ್ರವಾರ ಮಧ್ಯಾಹ್ನ ಸ್ಥಗಿತವಾಯಿತು. ನೋಂದಣಿ ಸಾಧ್ಯವಾಗದವರು, ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಾ ಮನೆಗೆ ಮರಳಿದರು.

ಅರಸೀಕೆರೆಯಲ್ಲಿ ಬೆಳಿಗ್ಗೆಯಿಂದಲೇ ನೂಕುನುಗ್ಗಲು ಉಂಟಾಗಿತ್ತು. ಶಾಸಕ ಕೆ.ಎಂ.ಶಿವಲಿಂಗೇಗೌಡ, ಕೈಯಲ್ಲಿ ಲಾಠಿ ಹಿಡಿದು, ಜನರನ್ನು ನಿಯಂತ್ರಿಸಿದರು. ಹಿರೀಸಾವೆ, ನುಗ್ಗೇಹಳ್ಳಿ, ಚನ್ನರಾಯಪಟ್ಟಣ, ಉದಯಪುರ, ಗಂಡಸಿಯಲ್ಲಿ ರೈತರು ಸರದಿಯಲ್ಲಿ ನಿಂತಿದ್ದರು.

ಮಾರ್ಚ್ 4ರಿಂದ ಆರಂಭವಾಗಿದ್ದ ನೋಂದಣಿ ಐದು ದಿನ ನಡೆದಿದ್ದು, 18,879 ರೈತರು ಒಟ್ಟು 22,092 ಟನ್ ಕೊಬ್ಬರಿ ಮಾರಾಟಕ್ಕೆ ನೋಂದಣಿ ಮಾಡಿಕೊಂಡರು.

ಶುಕ್ರವಾರ ಶಿವರಾತ್ರಿ ಹಬ್ಬವಿದ್ದರೂ ರೈತರು ನೋಂದಣಿ ಕೇಂದ್ರಗಳಲ್ಲಿಯೇ ಉಳಿದಿದ್ದರು. ಗುರುವಾರವೇ ನೋಂದಣಿ ಮುಗಿಯುವ ಸೂಚನೆ ನೀಡಲಾಗಿತ್ತು. 'ಕೊನೆಯ ಕ್ಷಣದಲ್ಲಾದರೂ ನೋಂದಣಿಯಾಗಲಿ' ಎಂದು ಕಾದಿದ್ದ ರೈತರು ನಿರಾಸೆ ಅನುಭವಿಸಿದರು.

'ಭಾರತದ ನಾಯಕತ್ವದಲ್ಲಿ ದಕ್ಷಿಣ ರಾಷ್ಟ್ರಗಳ ವಿಶ್ವಾಸ'

ಟೋಕಿಯೊದಲ್ಲಿ ಸಚಿವ ಎಸ್.ಜೈ.ಶಂಕರ್ ಹೇಳಿಕೆ

ಟೋಕಿಯೊ (ಪಿಟಿಐ): ವಿಶ್ವದ ದಕ್ಷಿಣ ಭಾಗದಲ್ಲಿರುವ (ಗ್ಲೋಬಲ್ ಸೌತ್) 125 ರಾಷ್ಟ್ರಗಳು ಭಾರತದ ನಾಯಕತ್ವದ ಮೇಲೆ ಹೆಚ್ಚಿನ ವಿಶ್ವಾಸವನ್ನು ಹೊಂದಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಶುಕ್ರವಾರ ಪ್ರತಿಪಾದಿಸಿದರು.

ಈ ರಾಷ್ಟ್ರಗಳ ಅಭಿಪ್ರಾಯಗಳು, ಅಹವಾಲು ಆಲಿಸಲು ಭಾರತ ಕಳೆದ ವರ್ಷ ಏರ್ಪಡಿಸಿದ್ದ ಎರಡೂ ಸಭೆಗಳಲ್ಲಿ ಚೀನಾ ಗೈರುಹಾಜರಾಗಿತ್ತು. ಜಿ20 ಸಭೆಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಉಪ ಪ್ರಧಾನಿ ಲಿ ಕಿಯಾಂಗ್ ಅವರನ್ನು ನಿಯೋಜಿಸಿದ್ದರು ಎಂದು ಉಲ್ಲೇಖಿಸಿದರು.

ಭಾರತ ಮತ್ತು ಜಪಾನ್ ಸಹಭಾಗಿತ್ವದ ನಿಕೇಹಿ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದ ಎಸ್. ಜೈಶಂಕರ್ ಅವರು, 'ದಕ್ಷಿಣದ ರಾಷ್ಟ್ರಗಳು ಹಲವು ವಿಷಯಗಳಲ್ಲಿ ಪರಸ್ಪರ ಸಹಮತ ಹೊಂದಿವೆ' ಎಂದು ಅಭಿಪ್ರಾಯಪಟ್ಟರು.

'ಪರಸ್ಪರ ಸಹಮತ ಹೊಂದುವ ನಿಲುವಿಗೆ ಕೋವಿಡ್ ಸ್ಥಿತಿ ಬಳಿಕ ಹೆಚ್ಚಿನ ಬಲ ಬಂದಿದೆ. ಭಾರತ ಜಿ20 ಶೃಂಗದ ಅಧ್ಯಕ್ಷತೆ ವಹಿಸಿಕೊಳ್ಳುವವರೆಗೆ, ನಮ್ಮ ರಾಷ್ಟ್ರಗಳಿಗೆ ಸಂಬಂಧಿಸಿದ ವಿಷಯಗಳು ಜಿ20 ಕಾರ್ಯಸೂಚಿಯಲ್ಲೂ ಇರುವುದಿಲ್ಲ ಎಂದು ಭಾವಿಸಿದ್ದವು' ಎಂದರು.

ಈ ರಾಷ್ಟ್ರಗಳ ಭಾವನೆಗಳಿಗೆ ಧ್ವನಿ ನೀಡಲು, ಅಭಿಪ್ರಾಯಗಳನ್ನು ಆಲಿಸಲು ಕಳೆದ ವರ್ಷ ಎರಡು ಸಭೆ ಮಾಡಿದ್ದೆವು. ಬಳಿಕ 125 ರಾಷ್ಟ್ರಗಳ ಅಭಿಪ್ರಾಯ ಆಧರಿಸಿ ಜಿ20 ಶೃಂಗದ ಮುಂದಿಟ್ಟಿದ್ದೆವು ಎಂದು ಜೈಶಂಕರ್ ತಿಳಿಸಿದರು.

ಆಫ್ರಿಕನ್ ಯೂನಿಯನ್‌ಗೆ ಭಾರತ ಅಧ್ಯಕ್ಷತೆಯಲ್ಲಿಯೇ ಜಿ20 ಸದಸ್ಯತ್ವ ಸಿಕ್ಕಿದ್ದು ಕಾಕತಾಳೀಯವಲ್ಲ ಎಂಬ ನಂಬಿಕೆಯೂ ಇದೆ. ಒಟ್ಟಾರೆ ಭಾರತದ ಮೇಲೆ ವಿಶ್ವಾಸ ಹೆಚ್ಚಾಗಿದೆ ಎಂದು ಹೇಳಿದರು.

ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾ ಜೊತೆಗೆ ಭಾರತದ ಸಂಬಂಧ ಕುರಿತು ಮಾತನಾಡಿದ ಅವರು, ಜಾಗತಿಕ ರಾಜಕಾರಣದಲ್ಲಿ ದೇಶಗಳು ಒಂದು ವಿಷಯ, ಒಂದು ನೀತಿಗೆ ಬದ್ಧವಾಗಿರುತ್ತವೆ. ನೀತಿಗಳ ಪಾಲನೆ ಕುರಿತಂತೆ ಭಾರತ ಎಲ್ಲ ರಾಷ್ಟ್ರಗಳಿಗಿಂತ ಮುಂದಿದೆ ಎಂದರು.



ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಶುಕ್ರವಾರ ಟೋಕಿಯೊದಲ್ಲಿ ಜಪಾನ್ ಪ್ರಧಾನಿ ಫುಮಿಯೊ ಕಿಷಿಡಾ ಅವರನ್ನು ಭೇಟಿಯಾಗಿ ಚರ್ಚಿಸಿದರು –ಪಿಟಿಐ ಚಿತ್ರ

ಅಕೀ ಅಬೆ ಭೇಟಿ ಮೋದಿಯವರ ಪತ್ರ ಹಸ್ತಾಂತರ: ಸಚಿವ ಎಸ್.ಜೈಶಂಕರ್ ಅವರು ಜಪಾನ್‌ನ ಮಾಜಿ ಪ್ರಧಾನಿ ದಿವಂಗತ ಶಿಂಜೊ ಅಬೆ ಅವರ ಪತ್ನಿ ಅಕೀ ಅಬೆ ಅವರನ್ನು ಭೇಟಿಯಾಗಿದ್ದು, ಪ್ರಧಾನಿಯವರ ಪತ್ರ ಹಸ್ತಾಂತರಿಸಿದರು. ಭಾರತ–ಜಪಾನ್ ಬಾಂಧವ್ಯ ವೃದ್ಧಿಯಲ್ಲಿ ಶಿಂಜೊ ಅವರ ಕೊಡುಗೆ ಸ್ಮರಿಸಿದರು.

ಜಪಾನ್ನ ನಾರಾದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಶಿಂಜೊ ಅಬೆ ಅವರ ಮೇಲೆ ಜುಲೈ 8, 2022ರಂದು ಗುಂಡಿನ ದಾಳಿ ನಡೆದಿದ್ದು, ಅವರು ಮೃತಪಟ್ಟಿದ್ದರು. ಜಪಾನ್‌ನಲ್ಲಿ ಸುದೀರ್ಘ ಅವಧಿ ಪ್ರಧಾನಿಯಾಗಿದ್ದರು.

ಫಾಸ್ಟ್ಯಾಗ್ ಬಳಕೆದಾರರಿಗೆ ಸಮಸ್ಯೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಫಾಸ್ಟ್ಯಾಗ್ ಬಳಸುವ ಶೇ 75ರಷ್ಟು ಬಳಕೆದಾರರು ಹಲವು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂದು ಲೋಕಲ್ ಸರ್ಕಲ್ಸ್ ಸಂಸ್ಥೆಯ ಸಮೀಕ್ಷೆ ತಿಳಿಸಿದೆ.

ಹಲವು ವೇಳೆ ಫಾಸ್ಟ್ಯಾಗ್‌ಗಳು ಸರಿಯಾಗಿ ಸ್ಕ್ಯಾನ್ ಆಗುವುದಿಲ್ಲ ಹಾಗೂ ಬಳಕೆ ಮಾಡದಿದ್ದರೂ ಏಕಾಏಕಿ ಹಣ ಕಡಿತವಾಗುತ್ತದೆ ಎಂದು ಆನ್‌ಲೈನ್‌ನಲ್ಲಿ ನಡೆಸಿದ ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.

ಟೋಲ್‌ಗಳ ಬಳಿ ತಾಂತ್ರಿಕ ಸಮಸ್ಯೆಯಿಂದ ಹಲವು ವೇಳೆ ಎರಡು ಬಾರಿ ಹಣ ಕಡಿತವಾಗಿರುವ ನಿದರ್ಶನಗಳಿವೆ ಎಂದು ಬಳಕೆದಾರರು ತಿಳಿಸಿದ್ದಾರೆ. ಒಟ್ಟು 12,638 ಬಳಕೆದಾರರು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದಾರೆ.

ಈ ಪೈಕಿ ಶೇ 20ರಷ್ಟು ಮಂದಿ ಎರಡು ಬಾರಿ ಹಣ ಪಾವತಿ, ಕಾರ್ಡ್ ರೀಡರ್ ಸಮಸ್ಯೆ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

2023–24ನೇ ಹಣಕಾಸು ವರ್ಷದ ಮೊದಲ 10 ತಿಂಗಳ ಅವಧಿಯಲ್ಲಿ ₹53,289 ಕೋಟಿ ಟೋಲ್ ಸಂಗ್ರಹವಾಗಿದೆ. ಈ ಆರ್ಥಿಕ ವರ್ಷದಲ್ಲಿ ₹62 ಸಾವಿರ ಕೋಟಿ ಸಂಗ್ರಹವಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಸಾರಿಗೆ ಸಚಿವಾಲಯ ತಿಳಿಸಿದೆ.

'ರೋಗಿ ಗುಣಮುಖನಾದರೂ ಕೊರೊನಾ ಸೋಂಕು ಜೀವಂತ'

ನವದೆಹಲಿ (ಪಿಟಿಐ): ಕೋವಿಡ್–19ಗೆ ಒಳಗಾಗುವವರಲ್ಲಿ ಕೊರೊನಾ ವೈರಸ್, ರೋಗಿ ಗುಣಮುಖವಾದ ನಂತರವೂ ಅವರ ರಕ್ತ ಮತ್ತು ಜೀವಕೋಶಗಳಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಜೀವಂತವಾಗಿರುತ್ತದೆ ಎಂದು ಸಂಶೋಧನೆಯೊಂದರಲ್ಲಿ ದೃಢಪಟ್ಟಿದೆ.



ಅಮೆರಿಕದ ಕೊಲೊರಾಡೊನಲ್ಲಿ ಏರ್ಪಡಿಸಿದ್ದ ಸಮಾವೇಶವೊಂದರಲ್ಲಿ ಈ ಸಂಶೋಧನಾ ವರದಿಯನ್ನು ಮಂಡಿಸಲಾಯಿತು. ಈ ಮೂಲಕ ಕೆಲವರಲ್ಲಿ ಕೊರೊನಾ ಲಕ್ಷಣಗಳು ಹಲವು ತಿಂಗಳುಗಳು ಇರಲು ಕಾರಣವೇನು ಎಂಬ ಪ್ರಶ್ನೆಗೆ ಇದು ಉತ್ತರ ಒದಗಿಸಿತು.

ಕೊರೊನಾ ಪ್ರತಿಕಾಯವು ಸೋಂಕು ತಗುಲಿದ ನಂತರ ವ್ಯಕ್ತಿಯ ರಕ್ತದಲ್ಲಿ 14 ತಿಂಗಳವರೆಗೆ ಮತ್ತು ಜೀವಕೋಶಗಳಲ್ಲಿ ಎರಡು ವರ್ಷಗಳ ವರೆಗೆ ಜೀವಂತವಾಗಿರುತ್ತವೆ ಎಂದು ಕ್ಯಾಲಿಫೋರ್ನಿಯಾ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ ವಿಶ್ವವಿದ್ಯಾಲಯಗಳ ಸಂಶೋಧನೆಯಿಂದ ದೃಢಪಟ್ಟಿದೆ.

ಸೋಂಕಿಗೆ ಒಳಗಾದ 171 ಮಂದಿಯ ರಕ್ತದ ಮಾದರಿಗಳನ್ನು ಬಳಸಿ ಈ ಸಂಶೋಧನೆ ನಡೆಸಲಾಗಿದೆ.

ಮಣಿಪುರ: ಸೇನಾ ಅಧಿಕಾರಿ ಅಪಹರಣ

ಇಂಫಾಲ್ (ಪಿಟಿಐ): ಭಾರತೀಯ ಸೇನೆಯ ಕಿರಿಯ ನಿಯೋಜಿತ ಅಧಿಕಾರಿ (ಜೆಸಿಒ)ಯೊಬ್ಬರನ್ನು ಮಣಿಪುರದ ಥೌಬಾಲ್ ಜಿಲ್ಲೆಯ ಅವರ ನಿವಾಸದಿಂದ ಅಪಹರಣ ಮಾಡಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು.

ಜೆಸಿಒ ಕೋನ್ಸಮ್ ಖೇದಾ ಸಿಂಗ್ ಅವರು ರಜೆಯ ಮೇಲೆ ಮನೆಗೆ ತೆರಳಿದ್ದರು. ಈ ವೇಳೆ ಅವರ ಮನೆಗೆ ನುಗ್ಗಿದ ದುಷ್ಕರ್ಮಿಗಳು ಅವರನ್ನು ಅಪಹರಣ ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದು ತಿಳಿದುಬಂದಿಲ್ಲ. ಆದರೆ ಸುಲಿಗೆ ಮಾಡುವ ಉದ್ದೇಶದಿಂದ ಹೀಗೆ ಮಾಡಲಾಗಿದೆ. ಇದಕ್ಕೂ ಮುನ್ನ ಸಹ ಅವರ ಕುಟುಂಬಕ್ಕೆ ಇಂಥ ಬೆದರಿಕೆಗಳು ಬಂದಿದ್ದವು ಎಂಬ ಮಾಹಿತಿ ಇದೆ ಎಂದು ತಿಳಿಸಿದ್ದಾರೆ. ಜೆಸಿಒ ರಕ್ಷಣೆಗಾಗಿ ಭದ್ರತಾ ಪಡೆಯು ಶೋಧ ಕಾರ್ಯವನ್ನು ಆರಂಭಿಸಿದೆ. ರಾಷ್ಟ್ರೀಯ ಹೆದ್ದಾರಿ 102ರಲ್ಲಿ ಎಲ್ಲಾ ವಾಹನಗಳನ್ನು ತಪಾಸಣೆ ನಡೆಸಲಾಗುತ್ತಿದೆ.

ಸೃಜನಶೀಲತೆಯಿಂದ ಛಾಪು ಮೂಡಿಸಿದವರಿಗೆ ‘ನ್ಯಾಷನಲ್ ಕ್ರಿಯೇಟರ್ಸ್’ ಪ್ರಶಸ್ತಿ ಪ್ರದಾನ

‘ಜಗತ್ತಿಗೆ ಭಾರತದ ಸಂಸ್ಕೃತಿ ಪರಿಚಯಿಸಿ’

ನವದೆಹಲಿ(ಪಿಟಿಐ): ಭಾರತದ ಸಂಸ್ಕೃತಿ, ಪರಂಪರೆ ಹಾಗೂ ಸಂಪ್ರದಾಯಗಳ ಕುರಿತು ಸಮಗ್ರ ಮಾಹಿತಿ ಒದಗಿಸುವ ‘ಕಂಟೆಂಟ್’ಗಳನ್ನು ಮಾಡುವ ಮೂಲಕ ‘ಕ್ರಿಯೇಟ್ ಆನ್ ಇಂಡಿಯಾ ಮೂವ್‌ಮೆಂಟ್’ ಆರಂಭಿಸುವಂತೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಸಲಹೆ ನೀಡಿದರು.

ಇಲ್ಲಿನ ಭಾರತ ಮಂಟಪಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇದೇ ಮೊದಲ ಬಾರಿಗೆ ‘ನ್ಯಾಷನಲ್ ಕ್ರಿಯೇಟರ್ಸ್’ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

‘ಭಾರತದ ಭವ್ಯ ಪರಂಪರೆ, ಸಂಸ್ಕೃತಿ-ಸಂಪ್ರದಾಯಗಳನ್ನು ವಿಶ್ವಕ್ಕೆ ಪರಿಚಯಿಸಲು ಈ ಚಳವಳಿಯನ್ನು ಆರಂಭಿಸೋಣ. ಈ ವಿಷಯಗಳ ಕುರಿತ ‘ಕಂಟೆಂಟ್’ನಿಂದ ಜಾಗತಿಕ ಮಟ್ಟದಲ್ಲಿ ನಾವು ಹೆಚ್ಚು ವೀಕ್ಷಕರು/ಕೇಳುಗರನ್ನು ತಲುಪಲು ಸಾಧ್ಯವಾಗಲಿದೆ’ ಎಂದು ಮೋದಿ ಹೇಳಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಶುಭಾಶಯಗಳನ್ನು ಕೋರಿದ ಅವರು, ‘ನಾರಿ ಶಕ್ತಿ’ಯೂ ನಿಮ್ಮ ಸೃಜನಾತ್ಮಕ ವಸ್ತು ವಿಷಯದ ಭಾಗವಾಗಲಿ’ ಎಂದು ಹೇಳಿದರು.

‘ಮುಂದಿನ ಶಿವರಾತ್ರಿ ಇಂಥ ಕಾರ್ಯಕ್ರಮದ ಗ್ಯಾರಂಟಿ’: ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವುದನ್ನು ಸೂಚ್ಯವಾಗಿ ಪ್ರಸ್ತಾಪಿಸಿದ ಮೋದಿ, ‘ಸಾಧ್ಯವಾದರೆ, ಮುಂದಿನ ಶಿವರಾತ್ರಿಯಂದು ನಾನು ಇಂತಹ ಕಾರ್ಯಕ್ರಮ ಆಯೋಜಿಸುತ್ತೇನೆ. ಇದು ನಾನು ನಿಮಗೆ ನೀಡುವ ಗ್ಯಾರಂಟಿ’ ಎಂದು ಹೇಳಿದರು.



ನವದೆಹಲಿಯ ಭಾರತ ಮಂಟಪಮ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಸೃಜನಾತ್ಮಕ ವಸ್ತುವಿಷಯ ನಿರ್ಮಾಣದಲ್ಲಿ ತೊಡಗಿರುವ ಕೀರ್ತಿಕಾ ಗೋವಿಂದಸ್ವಾಮಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ‘ನ್ಯಾಷನಲ್ ಕ್ರಿಯೇಟರ್’ ಪ್ರಶಸ್ತಿ ಪ್ರದಾನ ಮಾಡಿದರು –ಪಿಟಿಐ ಚಿತ್ರ

1.5 ಲಕ್ಷ ನಾಮನಿರ್ದೇಶನಗಳ ಸಲ್ಲಿಕೆ

ಕಥೆ ಹೇಳುವವರು, ಗ್ರೀನ್ ಚಾಂಪಿಯನ್, ಸಾಮಾಜಿಕ ಬದಲಾವಣೆ, ಸಾಂಸ್ಕೃತಿಕ ರಾಯಭಾರಿ, ತಂತ್ರಜ್ಞಾನ, ಪಾರಂಪರಿಕ ವಸ್ತುವಿನ್ಯಾಸ, ಆಹಾರ ಸೇರಿದಂತೆ 20 ವಿಭಾಗಗಳಲ್ಲಿ ‘ನ್ಯಾಷನಲ್ ಕ್ರಿಯೇಟರ್ಸ್’ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದ್ದು, ಇದಕ್ಕಾಗಿ 1.5 ಲಕ್ಷಕ್ಕೂ ಹೆಚ್ಚು ನಾಮನಿರ್ದೇಶನಗಳು ಸಲ್ಲಿಕೆಯಾಗಿದ್ದವು.

ಪಂಕ್ತಿ ಪಾಂಡೆ(ಗ್ರೀನ್ ಚಾಂಪಿಯನ್ ವಿಭಾಗದಲ್ಲಿ ಪ್ರಶಸ್ತಿ), ಕೀರ್ತಿಕಾ ಗೋವಿಂದಸ್ವಾಮಿ(ಕಥೆ ಹೇಳುವವರು), ಮೈಥಿಲಿ ಠಾಕೂರ್(ಗಾಯಕಿ-ವರ್ಷದ ಸಾಂಸ್ಕೃತಿಕ ರಾಯಭಾರಿ ಪ್ರಶಸ್ತಿ), ಗೌರವ್ ಚೌಧರಿ (ತಂತ್ರಜ್ಞಾನ), ಕಾಮಿಯಾ ಜಾನಿ (ಪ್ರವಾಸ ಕುರಿತ ಸೃಜನಾತ್ಮಕ ವಸ್ತುವಿಷಯ) ಪ್ರಶಸ್ತಿಗೆ ಆಯ್ಕೆಯಾಗಿರುವ ಪ್ರಮುಖರು.

ಜನಮಾನಸದಲ್ಲಿ ಮನೆ ಮಾಡಿರುವ ಹಲವು ಕಲ್ಪನೆಗಳನ್ನು ಹೋಗಲಾಡಿಸುವಲ್ಲಿಯೂ ಸೃಜನಶೀಲತೆ ನೆರವಾಗಲಿದೆ

ನರೇಂದ್ರ ಮೋದಿ, ಪ್ರಧಾನಿ

ಆಗ, ಪ್ರೇಕ್ಷಕರು ‘ಅಬ್ ಕಿ ಬಾರ್ 400 ಪಾರ್’(ಈ ಬಾರಿ 400ಕ್ಕೂ ಹೆಚ್ಚು ಸ್ಥಾನ) ಎಂಬ ಘೋಷಣೆ ಕೂಗಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೋದಿ, ‘ಇದು ಮೋದಿ ಗ್ಯಾರಂಟಿಯಲ್ಲ, 140 ಕೋಟಿ ಭಾರತೀಯರ ಗ್ಯಾರಂಟಿ’ ಎಂದು ಹೇಳಿದರು.

ಮುಂಬರುವ ಚುನಾವಣೆಗಳಲ್ಲಿ ಮೊದಲ ಬಾರಿಗೆ ಮತದಾನ ಮಾಡುವವರಲ್ಲಿ ಅವರ ಹಕ್ಕು ಮತ್ತು ಜವಾಬ್ದಾರಿ ಕುರಿತು ಜಾಗೃತಿ ಮೂಡಿಸುವಂತೆ ಸೃಜನಶೀಲ ವಸ್ತುವಿಷಯ ರೂಪಿಸುವವರಿಗೆ ಮನವಿ ಮಾಡಿದರು.

ರಷ್ಯಾ ಸೇನೆಗೆ ಭಾರತೀಯ ಯುವಕರು: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯೋಗದ ಆಮಿಷವೊಡ್ಡಿ ಭಾರತದ ಯುವಕರನ್ನು ರಷ್ಯಾಕ್ಕೆ ಕರೆದೊಯ್ದು ಅಲ್ಲಿನ ಸೇನೆಗೆ ಸೇರ್ಪಡೆಗೊಳಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡಿದೆ.

ಮಾನವ ಕಳ್ಳಸಾಗಣೆ ಜಾಲದಲ್ಲಿ ಭಾಗಿಯಾಗಿರುವ ಆರೋಪದಲ್ಲಿ ರಷ್ಯಾದ ಕ್ರಿಸ್ಟಿನಾ ಮತ್ತು ದೆಹಲಿಯಲ್ಲಿ ನೆಲೆಸಿರುವ ತಮಿಳುನಾಡಿನ ಸಂತೋಷ್ ಹಾಗೂ ರಾಜಸ್ಥಾನದ ಮೊಯಿನುದ್ದೀನ್ ಚಿಪ್ಪಾ ಎಂಬುವವರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವೀಸಾ ಸೇವೆ ಒದಗಿಸುವ ವಿವಿಧ ಸಂಸ್ಥೆಗಳ ನಿರ್ದೇಶಕರಾದ ಸುಯಶ್ ಮುಕುಟ್, ರಾಕೇಶ್ ಪಾಂಡೆ, ಮಂಜೀತ್ ಸಿಂಗ್ ಮತ್ತು ಫೈಸಲ್ ಅಬ್ದುಲ್ ಮುತಾಲಿಬ್ ಖಾನ್ ಎಂಬುವವರ ಹೆಸರುಗಳೂ ಎಫ್‌ಐಆರ್‌ನಲ್ಲಿವೆ ಎಂದು ವಿವರಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಒಟ್ಟು 19 ಮಂದಿಯ ಹೆಸರುಗಳನ್ನು ಉಲ್ಲೇಖಿಸಲಾಗಿದ್ದು, ಇದರಲ್ಲಿ ದೆಹಲಿ, ಮುಂಬೈ, ಠಾಣೆ ಮತ್ತು ಹರಿಯಾಣದಲ್ಲಿ ವೀಸಾ ಸೇವೆ ಒದಗಿಸುವ ಸಂಸ್ಥೆಗಳ ನಿರ್ದೇಶಕರು ಮತ್ತು ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರದ ಏಜೆಂಟರುಗಳ ಹೆಸರುಗಳೂ ಒಳಗೊಂಡಿವೆ ಎಂದಿದ್ದಾರೆ.

ವಿಶ್ವವಿದ್ಯಾಲಯಕ್ಕೆ ಪ್ರವೇಶ ನೀಡುವುದಾಗಿ ಮತ್ತು ಉದ್ಯೋಗದ ಆಮಿಷವೊಡ್ಡಿ ಕರೆದೊಯ್ದಿದ್ದ ಭಾರತದ ಕೆಲವು ಯುವಕರು ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಮೃತಪಟ್ಟ ಬಳಿಕ ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡಿದೆ.

ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ನೀಡುವುದಾಗಿಯೂ ಆಮಿಷವೊಡ್ಡಿ ಈ ಏಜೆಂಟರುಗಳು ವಿದ್ಯಾರ್ಥಿಗಳನ್ನೂ ರಷ್ಯಾಕ್ಕೆ ಕರೆದೊಯ್ದಿದ್ದಾರೆ ಎನ್ನಲಾಗಿದೆ.

‘ರಷ್ಯಾಕ್ಕೆ ತಲುಪಿದ ಬಳಿಕ ಯುವಕರ ಪಾಸ್‌ಪೋರ್ಟ್‌ಗಳನ್ನು ಏಜೆಂಟರುಗಳು ಕಸಿದುಕೊಳ್ಳುತ್ತಿದ್ದರು. ಬಳಿಕ ಅವರಿಗೆ ಯುದ್ಧ ತರಬೇತಿ ನೀಡಿ, ರಷ್ಯಾದ ಸೇನೆಯ ಸಮವಸ್ತ್ರಗಳನ್ನು ನೀಡಲಾಗುತ್ತಿತ್ತು. ಅನಂತರ ಅವರನ್ನು ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಮುಂಚೂಣಿಯಲ್ಲಿ ನಿಯೋಜಿಸಲಾಗುತ್ತಿತ್ತು’ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

‘ಅಪಾಯಕ್ಕೆ ಸಿಲುಕದಿರಿ’

ನವದೆಹಲಿ(ಪಿಟಿಐ): ರಷ್ಯಾ ಸೇನೆಯಲ್ಲಿ ಸಹಾಯಕ ಸಿಬ್ಬಂದಿಯಾಗುವಂತಹ ಉದ್ಯೋಗಕ್ಕೆ ಸೇರಿಕೊಳ್ಳುವ ಮೂಲಕ ಅಪಾಯಕ್ಕೆ ಸಿಲುಕಿಕೊಳ್ಳಬಾರದು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಭಾರತೀಯರಿಗೆ ಶುಕ್ರವಾರ ಹೇಳಿದ್ದಾರೆ. ‘ಸಂಕಷ್ಟಕ್ಕೆ ಸಿಲುಕಿರುವ ಭಾರತೀಯರನ್ನು ಕರೆತರಲು ರಷ್ಯಾದೊಂದಿಗೆ ನಿರಂತರ ಮಾತುಕತೆ ನಡೆಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನುಸುಳುಕೋರನ ಹತ್ಯೆ

ಜೈಪುರ (ಪಿಟಿಐ): ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆಯ ಬಳಿ ಭಾರತದೊಳಕ್ಕೆ ನುಸುಳಲು ಯತ್ನಿಸುತ್ತಿದ್ದ ಶಂಕಿತ ಪಾಕಿಸ್ತಾನ ಮೂಲದ ನುಸುಳುಕೋರನನ್ನು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರು ಹೊಡೆದುರುಳಿಸಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬಿಎಸ್‌ಎಫ್‌ನ ಸುಂದರಪುರ ಪೋಸ್ಟ್ ಬಳಿ ಗುರುವಾರ ರಾತ್ರಿ ಪಾಕಿಸ್ತಾನದ ಕಡೆಯಿಂದ ಬರುತ್ತಿದ್ದ ವ್ಯಕ್ತಿಯು ಗಸ್ತು ತಿರುಗುತ್ತಿದ್ದ ಯೋಧರ ಕಣ್ಣಿಗೆ ಬಿದ್ದಿದ್ದಾನೆ. ಈ ವೇಳೆ ಆ ವ್ಯಕ್ತಿಗೆ ಮುಂದೆ ಬರದೆ, ವಾಪಸ್ ಹೋಗುವಂತೆ ಸೂಚಿಸಿದ್ದಾರೆ. ಆದರೆ, ಯೋಧರ ಮಾತನ್ನು ನಿರ್ಲಕ್ಷಿಸಿ, ಮುನ್ನುಗ್ಗಿ ಬಂದಿದ್ದರಿಂದಾಗಿ ಆತನ ಮೇಲೆ ಗುಂಡಿನ ದಾಳಿ ನಡೆಸಿ, ಹತ್ಯೆ ಮಾಡಲಾಗಿದೆ ಎಂದು ಕೇಸರಿಸಿಂಹಪುರ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.



ಪಥಸಂಚಲನ ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಯಲ್ಲಿ ಶುಕ್ರವಾರ ನಡೆದ, ಅತ್ಯುತ್ತಮ ಸೇವೆಗೆ ನೀಡಲಾಗುವ ರಾಷ್ಟ್ರಪತಿಗಳ ಅತ್ಯುನ್ನತ ಗೌರವ ಪ್ರದಾನ ಸಮಾರಂಭದಲ್ಲಿ ವಾಯುಪಡೆ ಸಿಬ್ಬಂದಿ ಪಥಸಂಚಲನ ನಡೆಸಿದರು –ಪಿಟಿಐ ಚಿತ್ರ

ಕಾಜಿರಂಗಕ್ಕೆ ‘ಮಹಿಳಾ ಕಾವಲು ಪಡೆ’

ಕಾಜಿರಂಗ (ಪಿಟಿಐ): ಕಾಜಿರಂಗ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಳ್ಳಬೇಟೆ ವಿರೋಧಿ ಮಹಿಳಾ ತಂಡದ ಸದಸ್ಯರು ವನ್ಯಜೀವಿಗಳು, ಜೀವವೈವಿಧ್ಯದ ಸಂರಕ್ಷಣೆಯ ನೇತೃತ್ವ ವಹಿಸಿದ್ದಾರೆ. ಹಚ್ಚ ಹಸಿರು ವಸ್ತ್ರ ಧರಿಸಿ, ಹೆಗಲಲ್ಲಿ ಬಂದೂಕು ನೇತುಹಾಕಿಕೊಂಡು ಹಗಲು ರಾತ್ರಿ ಎನ್ನದೆ ಜೀವ ವೈವಿಧ್ಯದ ರಕ್ಷಣೆಗೆ ಪಣ ತೊಟ್ಟಿದ್ದಾರೆ.

‘ಕಿಂಗ್ ಕೋಬ್ರಾ ಕ್ಯಾಂಪ್’ನ ಆರು ಮಂದಿ 2023ರಲ್ಲಿಯೇ ಕಾರ್ಯಾರಂಭ ಮಾಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಸದ್ಯ ಉದ್ಯಾನದಲ್ಲಿ ಫಾರೆಸ್ಟ್ ಗಾರ್ಡ್, ಫಾರೆಸ್ಟರ್‌ಗಳು ಹಾಗೂ ಘೇಂಡಾಮೃಗ ರಕ್ಷಣಾ ಪಡೆಯ ಸಿಬ್ಬಂದಿ ಸೇರಿ ಸೇರಿ 54 ಮಹಿಳೆಯರು ವನ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ‘ಕಾಜಿರಂಗದಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ ಎನ್ನುವುದು ಹೆಮ್ಮೆಯ ವಿಚಾರ’ ಎಂದು ಉದ್ಯಾನವನದ ನಿರ್ದೇಶಕಿ ಸೊನಾಲಿ ಘೋಷ್ ತಿಳಿಸಿದ್ದಾರೆ.

‘ಅಸ್ಸಾಂ ಅರಣ್ಯ ಇಲಾಖೆಯು 2023ರಲ್ಲಿ 300 ಯುವತಿಯರು ಸೇರಿದಂತೆ 2,500 ಸಿಬ್ಬಂದಿಯನ್ನು ನೇಮಕ ಮಾಡಿತ್ತು. ಈ ಮಹಿಳೆಯರು ಅತ್ಯುತ್ಸಾಹದಿಂದ ಕೆಲಸ ಮಾಡುತ್ತಾರೆ. ಪ್ರವಾಸಿಗರು ಮತ್ತು ಸಮುದಾಯದೊಂದಿಗಿನ ಮಾತುಕತೆ ವೇಳೆ ಪ್ರಮುಖ ಪಾತ್ರವಹಿಸಿ, ನಮಗೆ ಬೆಂಬಲವಾಗಿದ್ದಾರೆ. ಅವರು ಪುರುಷ ಸಿಬ್ಬಂದಿಯಂತೆಯೇ ಗಸ್ತು ತಿರುಗುವುದು ಸೇರಿದಂತೆ ಹಲವು ಕಾರ್ಯಗಳಲ್ಲಿ ತೊಡಗಿದ್ದಾರೆ’ ಎಂದು ಹೇಳಿದರು.

ಫಾರೆಸ್ಟ್ ಗಾರ್ಡ್ ಪ್ರಿಯಾಂಕಾ ಭರಾಲಿ, ‘ಅವರ ಕರ್ತವ್ಯ ಸಮಯವು ಬೆಳಿಗ್ಗೆ ಏಳರಿಂದ ಆರಂಭವಾಗುತ್ತದೆ. ಸಂಜೆ 6 ಗಂಟೆ ನಂತರ ಕಾಲ್ನಡಿಗೆ ಅಥವಾ ಆನೆಗಳ ಮೂಲಕ ಗಸ್ತು ತಿರುಗುತ್ತಾರೆ’ ಎಂದು ಹೇಳಿದರು.

‘ಬೆದರಿಕೆ ಇರುವ ಪ್ರದೇಶಗಳಿಗೆ ಭೇಟಿ ನೀಡುತ್ತೇವೆ. ಪ್ರಾಣಿಗಳು ಅಕ್ಕಪಕ್ಕದ ಪ್ರದೇಶಗಳಿಗೆ ಹೋಗದಂತೆ ಎಚ್ಚರವಹಿಸುತ್ತೇವೆ. ಈ ಮೂಲಕ ಮಾನವ-ವನ್ಯಜೀವಿ ಸಂಘರ್ಷ ತಪ್ಪಿಸಲು ಯತ್ನಿಸುತ್ತೇವೆ ಎಂದೂ ಹೇಳಿದರು.

ರೈಲು ಸಂಚಾರ: ಮಹಿಳೆಯರಿಂದಲೇ ನಿರ್ವಹಣೆ

ರಾಂಚಿ (ಜಾರ್ಖಂಡ್, ಪಿಟಿಐ): ರಾಂಚಿ-ಟೋರಿ ಪ್ಯಾಸೆಂಜರ್ ರೈಲು ಸಂಚಾರದ ನಿರ್ವಹಣೆಯನ್ನು ಶುಕ್ರವಾರ 16 ಮಹಿಳೆಯರ ತಂಡ ನಿರ್ವಹಿಸಿತು. ಲೋಕೊ-ಪೈಲಟ್, ಸಹಾಯಕ ಲೋಕೊ-ಪೈಲಟ್, ರೈಲು ವ್ಯವಸ್ಥಾಪಕರು, ಟಿಕೆಟ್ ಪರಿಶೀಲಕರು, ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಸಿಬ್ಬಂದಿ ಎಲ್ಲರೂ ಮಹಿಳೆಯರೇ ಆಗಿದ್ದುದು ಮಹಿಳಾ ದಿನದ ವಿಶೇಷ.

ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿಸಲು ರಾಂಚಿಯ ಆಗ್ನೇಯ ವಿಭಾಗೀಯ ರೈಲ್ವೆ ಈ ರೀತಿ ಸಿಬ್ಬಂದಿಯನ್ನು ನಿಯೋಜಿಸಿತ್ತು.

ಕೋಟಾದಲ್ಲಿ ವಿದ್ಯಾರ್ಥಿ ಆತ್ಮಹತ್ಯೆ

ಕೋಟಾ (ರಾಜಸ್ಥಾನ, ಪಿಟಿಐ): ‘ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲಾಗಲ್ಲ ಎಂಬ ಹೇಳಿಕೆ ಬರೆದಿಟ್ಟಿರುವ 16 ವರ್ಷದ ಜೆಇಇ ಆಕಾಂಕ್ಷಿ ವಿದ್ಯಾರ್ಥಿಯೊಬ್ಬ ಇಲ್ಲಿನ ಹಾಸ್ಟೆಲ್‌ವೊಂದರ ಕೋಣೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ’ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬಿಹಾರದ ಭಾಗಲ್ಪುರ ನಿವಾಸಿ ಅಭಿಷೇಕ್ ಮಂಡಲ್ ಮೃತ ವಿದ್ಯಾರ್ಥಿ. ಶುಕ್ರವಾರ ಬೆಳಿಗ್ಗೆ ಈತನ ಮೃತದೇಹ ಪತ್ತೆಯಾಗಿದೆ. ಗುರುವಾರ ರಾತ್ರಿ ವಿಷ ಸೇವಿಸಿ ಮೃತಪಟ್ಟಿರಬಹುದು ಎಂದು ಡಿಎಸ್‌ಪಿ ಧರ್ಮವೀರ್ ಸಿಂಗ್ ಹೇಳಿದ್ದಾರೆ.

‘ವಾಕ್ ಸ್ವಾತಂತ್ರ್ಯ: ಪೊಲೀಸರಿಗಿಲ್ಲ ಅರಿವು’

ವಿಶೇಷ ಸ್ಥಾನಮಾನ ರದ್ದತಿ ಟೀಕಿಸಿದ್ದ ಪ್ರಾಧ್ಯಾಪಕನ ವಿರುದ್ಧದ ಎಫ್‌ಐಆರ್ ರದ್ದು

ನವದೆಹಲಿ(ಪಿಟಿಐ): ‘ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಪರಿಕಲ್ಪನೆ ಕುರಿತು ಪೊಲೀಸ್ ವ್ಯವಸ್ಥೆಗೆ ಅರಿವು ಮೂಡಿಸುವ ಕಾಲ ಬಂದಿದೆ’ ಎಂದು ಸುಪ್ರೀಂ ಕೋರ್ಟ್‌ಹೇಳಿದೆ.

ಸಂವಿಧಾನದ 370ನೇ ವಿಧಿಯಡಿ ಜಮ್ಮು-ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ ಕ್ರಮವನ್ನು ಟೀಕಿಸಿದ್ದಕ್ಕೆ ಹಾಗೂ ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆ ರಾಷ್ಟ್ರದ ಪ್ರಜೆಗಳಿಗೆ ಶುಭಾಶಯ ಕೋರಿದ್ದಕ್ಕಾಗಿ ಪ್ರಾಧ್ಯಾಪಕರೊಬ್ಬರ ವಿರುದ್ಧ ಪ್ರಕರಣ ದಾಖಲಿಸಲು ಬಾಂಬೆ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿ, ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.



‘ಸಂವಿಧಾನದ 19(1)(ಎ) ವಿಧಿಯು ಪ್ರತಿಯೊಬ್ಬರಿಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಸಂವಿಧಾನದತ್ತವಾದ ಈ ಪ್ರಜಾಸತ್ತಾತ್ಮಕ ಮೌಲ್ಯಗಳ ಕುರಿತು ಪೊಲೀಸರನ್ನು ಸಂವೇದನಾಶೀಲರನ್ನಾಗಿ ಮಾಡಬೇಕಿದೆ’ ಎಂದು ನ್ಯಾಯಪೀಠ ಹೇಳಿದೆ.

ಸಂವಿಧಾನದ 370ನೇ ವಿಧಿಯಡಿ ಜಮ್ಮು-ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ್ದನ್ನು ಟೀಕಿಸಿ ಜಾವೇದ್ ಅಹ್ಮದ್ ಹಾಜಮ್ ಎಂಬ ಪ್ರಾಧ್ಯಾಪಕರು ತಮ್ಮ ವಾಟ್ಸ್‌ಆ್ಯಪ್‌ನಲ್ಲಿ ಪೋಸ್ಟ್ ಮಾಡಿದ್ದರು. ಅಲ್ಲದೇ, ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಅಲ್ಲಿನ ಪ್ರಜೆಗಳಿಗೆ ಅಭಿನಂದಿಸಿದ್ದರು.

‘ಆಗಸ್ಟ್ 5- ಜಮ್ಮು-ಕಾಶ್ಮೀರಕ್ಕೆ ಕರಾಳ ದಿನ’ ಹಾಗೂ ‘14ನೇ ಆಗಸ್ಟ್-ಪಾಕಿಸ್ತಾನ ಸ್ವಾತಂತ್ರ್ಯದಿನದ ಶುಭಾಶಯ’ ಎಂದು ಅವರು ಪೋಸ್ಟ್ ಮಾಡಿದ್ದರು. ಈ ಸಂಬಂಧ, ಕೊಲ್ಹಾಪುರದ ಹಾತ್‌ಕಂಗಲೆ ಪೊಲೀಸ್ ಠಾಣೆಯಲ್ಲಿ ಜಾವೇದ್ ಅಹ್ಮದ್ ವಿರುದ್ಧ, ಐಪಿಸಿ ಸೆಕ್ಷನ್ 153ಎ ಅಡಿ (ಎರಡು ಗುಂಪುಗಳ ನಡುವೆ ದ್ವೇಷ ಸೃಷ್ಟಿಸುವುದು) ಎಫ್‌ಐಆರ್ ದಾಖಲಿಸಲಾಗಿತ್ತು.

ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

‘ಆಗಸ್ಟ್ 14 ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕ ದಿನ. ಆ ದಿನ ಪಾಕಿಸ್ತಾನ ಪ್ರಜೆಗಳಿಗೆ ಶುಭಾಶಯಗಳನ್ನು ತಿಳಿಸುವುದರಲ್ಲಿ ತಪ್ಪೇನಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

‘ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 75 ವರ್ಷಗಳು ಗತಿಸಿವೆ. ಪ್ರಜಾತಾಂತ್ರಿಕ ಮೌಲ್ಯಗಳ ಮಹತ್ವವನ್ನು ದೇಶದ ಜನರು ಅರಿತಿದ್ದಾರೆ. ಅಲ್ಲದೇ, ಕೆಲವು ಪದಗಳು ಸೌಹಾರ್ದವನ್ನು ಕದಡುತ್ತವೆ ಅಥವಾ ದ್ವೇಷ ಭಾವನೆ ಮೂಡಿಸುತ್ತವೆ ಇಲ್ಲವೇ ಎರಡು ಭಿನ್ನ ಧಾರ್ಮಿಕ ಗುಂಪುಗಳ ನಡುವೆ ಹಗೆತನಕ್ಕೆ ಕಾರಣವಾಗುತ್ತವೆ ಎಂಬ ನಿರ್ಣಯಕ್ಕೆ ಬರಲಾಗದು’ ಎಂದು ಹೇಳಿದೆ.

‘ಕೆಲ ವ್ಯಕ್ತಿಗಳು ದ್ವೇಷ ಸೃಷ್ಟಿಸಲು ಯತ್ನಿಸಿರಬಹುದು. ಇದು ಐಪಿಸಿ ಸೆಕ್ಷನ್ 153ಎ ಅನ್ವಯಿಸಲು ಸಕಾರಣವಾಗದು ಎಂದು ಹೇಳಿದ ನ್ಯಾಯಪೀಠ, 2023ರ ಏಪ್ರಿಲ್ 10ರಂದು ಬಾಂಬೆ ಹೈಕೋರ್ಟ್ ಹೊರಡಿಸಿದ ಆದೇಶವನ್ನು ರದ್ದುಗೊಳಿಸಿ, ಎಫ್‌ಐಆರ್ ವಜಾಗೊಳಿಸುತ್ತೇವೆ’ ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

ಮಹಾದೇವ್ ಆ್ಯಪ್: ಮತ್ತೆ ಇಬ್ಬರ ಬಂಧನ

ನವದೆಹಲಿ(ಪಿಟಿಐ): ಮಹಾದೇವ್ ಆ್ಯಪ್ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಮತ್ತೆ ಇಬ್ಬರು ಆರೋಪಿಗಳನ್ನು ಶುಕ್ರವಾರ ಬಂಧಿಸಿದ್ದಾರೆ.

ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 11ಕ್ಕೆ ಏರಿದಂತಾಗಿದೆ.

ಗಿರೀಶ್ ತಲ್ರೇಜಾ ಹಾಗೂ ಸೂರಜ್ ಚೋಖಾನಿ ಬಂಧಿತರು. ಇಬ್ಬರನ್ನೂ ಕ್ರಮವಾಗಿ ಮಾರ್ಚ್ 2 ಹಾಗೂ 3ರಂದು ಇ.ಡಿ ತನ್ನ ವಶಕ್ಕೆ ತೆಗೆದುಕೊಂಡಿತ್ತು.

ಇಬ್ಬರೂ ಆರೋಪಿಗಳನ್ನು ಮಾ. 11ರ ವರೆಗೆ ತನ್ನ ಕಸ್ಟಡಿಗೆ ನೀಡಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ವಿಶೇಷ ನ್ಯಾಯಾಲಯ ಆದೇಶಿಸಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಹಾದೇವ್ ಆನ್‌ಲೈನ್ ಬುಕ್ (ಎಂಒಬಿ) ಆ್ಯಪ್‌ನ ಅಂಗಸಂಸ್ಥೆಯಾದ ‘ಲೋಟಸ್365’ನಲ್ಲಿ ಆರೋಪಿ ಗಿರೀಶ್ ತಲ್ರೇಜಾ ಪಾಲುದಾರಿಕೆ ಹೊಂದಿದ್ದಾರೆ. ‘ಲೋಟಸ್365’ ಮೂಲಕ ಅಕ್ರಮ ವ್ಯವಹಾರ ನಡೆಸಲಾಗುತ್ತಿತ್ತು.

ಈಗಲೂ ಜೈಲಿನಲ್ಲಿರುವಂತೆ ಭಾಸ: ಸಾಯಿಬಾಬಾ

ನವದೆಹಲಿ (ಪಿಟಿಐ): ‘ಏಳು ವರ್ಷ ಜೈಲು ಶಿಕ್ಷೆ ಅನುಭವಿಸಿದ ನಂತರವೂ ಜೈಲಿನಲ್ಲಿರುವಂತೆಯೇ ಭಾಸವಾಗುತ್ತಿದೆ’ ಎಂದು ಮಾವೋವಾದಿಗಳೊಂದಿಗೆ ನಂಟಿತ್ತು ಎಂಬ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್‌ನಿಂದ ಖುಲಾಸೆಗೊಂಡಿರುವ ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಹೇಳಿದರು.

‘ನಾನು ಸ್ವತಂತ್ರ ಎಂದು ಹೇಳಿಕೊಳ್ಳಲು ನನಗೆ ಇನ್ನೂ ಸಾಧ್ಯವಾಗುತ್ತಿಲ್ಲ. ನಾನಿನ್ನೂ ಜೈಲಿನಲ್ಲಿದ್ದೇನೆ ಎಂಬ ಭಾವನೆಯಾಗುತ್ತಿದೆ. ಜೈಲುವಾಸ ನನಗೆ ಅಗ್ನಿಪರೀಕ್ಷೆಯಂತಿತ್ತು’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜೈಲಿನಲ್ಲಿದ್ದಾಗ ಕುಟುಂಬದ ಪರಿಸ್ಥಿತಿ ಹೇಗಿತ್ತು ಎನ್ನುವ ಕುರಿತು



ಜಿ.ಎನ್. ಸಾಯಿಬಾಬಾ

ಮಾತನಾಡುವಾಗ ಭಾವುಕರಾದ ಸಾಯಿಬಾಬಾ, ‘ನನ್ನ ಕುಟುಂಬದವರು ಕಳಂಕ ಎದುರಿಸಿದರು. ಭರವಸೆಯಿಂದಷ್ಟೇ ಬದುಕಿದರು’ ಎಂದು ಕಣ್ಣೀರಾದರು.

‘ನನ್ನನ್ನು ಭಯೋತ್ಪಾದಕ ಎಂದು ಕರೆಯಲಾಯಿತು. ನನ್ನ ಪರ ವಾದಿಸಿದ ವಕೀಲರೊಬ್ಬರು ಜೈಲಿನಲ್ಲಿದ್ದಾರೆ. ವಿಚಾರಣೆ ಸಮಯದಲ್ಲಿ ನನ್ನ ಪರ ವಕೀಲರಿಗೆ ಪೊಲೀಸರು ಬೆದರಿಕೆ ಹಾಕಿದರು’ ಎಂದು ದೂರಿದರು.

‘ಯಾವುದೇ ಶುಲ್ಕ ಪಡೆಯದೇ ನನ್ನ ಪರ ವಾದಿಸಿದ ವಕೀಲರಿಗೆ ಧನ್ಯವಾದ ಹೇಳುವೆ’ ಎಂದು ಹೇಳಿದರು.

ಶಹಜಹಾನ್ ಶೇಖ್ ಮನೆ, ಕಚೇರಿಯಲ್ಲಿ ಸಿಬಿಐ ಶೋಧ

ಕೋಲ್ಕತ್ತ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿ, ಟಿಎಂಸಿಯಿಂದ ಅಮಾನತುಗೊಂಡಿರುವ ಮುಖಂಡ ಶಹಜಹಾನ್ ಶೇಖ್ ಅವರ ಸಂದೇಶ್‌ಖಾಲಿಯಲ್ಲಿರುವ ಮನೆ ಮತ್ತು ಕಚೇರಿಯಲ್ಲಿ ಸಿಬಿಐ ಅಧಿಕಾರಿಗಳು ಶುಕ್ರವಾರ ಶೋಧ ಕಾರ್ಯ ನಡೆಸಿದ್ದಾರೆ.

ದಾಳಿಗೆ ಸಂಬಂಧಿಸಿರುವ ಸಾಕ್ಷ್ಯ ಸಂಗ್ರಹಿಸಲು ಸಿಬಿಐ ತಂಡವು ಸರ್ಬೇರಿಯಾದ ಅಕುಂಚಿಪಾರಾ ಪ್ರದೇಶಕ್ಕೂ ಭೇಟಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದರು. ಶೇಖ್ ಅವರ ಮನೆಯಲ್ಲಿ ಬೀಗ ಹಾಕಿ ಮೊಹರು ಮಾಡಿದ್ದ ಕೋಣೆಗಳನ್ನು ತೆರೆದು ವಿಡಿಯೊ ಚಿತ್ರೀಕರಿಸಲಾಗಿದೆ ಎಂದು ವಿವರಿಸಿದರು.

ಕಾಂಗ್ರೆಸ್ ಮೇಲ್ಮನವಿ ವಜಾ

ನವದೆಹಲಿ (ಪಿಟಿಐ): ತೆರಿಗೆ ಪಾವತಿ ವಿಚಾರದಲ್ಲಿ ಆದಾಯ ತೆರಿಗೆ ಇಲಾಖೆ ಕೈಗೊಂಡಿರುವ ಕ್ರಮಕ್ಕೆ ತಡೆಕೋರಿ ಕಾಂಗ್ರೆಸ್ ಸಲ್ಲಿಸಿದ್ದ ಮೇಲ್ಮನವಿಯನ್ನು ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯು (ಐಟಿಎಟಿ) ಶುಕ್ರವಾರ ತಳ್ಳಿಹಾಕಿದೆ.

ಈ ಕ್ರಮವನ್ನು ‘ಪ್ರಜಾಪ್ರಭುತ್ವದ ಮೇಲಿನ ದಾಳಿ’ ಎಂದು ಪಕ್ಷವು ಟೀಕಿಸಿದ್ದು, ನ್ಯಾಯ ಪಡೆಯಲು ಕಾನೂನಿನಲ್ಲಿ ಲಭ್ಯವಿರುವ ಎಲ್ಲ ಆಯ್ಕೆಗಳನ್ನು ಪರಿಶೀಲಿಸುವುದಾಗಿ ಹೇಳಿದೆ.

ಈ ಹಿಂದಿನ ವರ್ಷಗಳ ತೆರಿಗೆ ಪಾವತಿಯಲ್ಲಿ ವ್ಯತ್ಯಾಸ ಕಂಡುಬಂದ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್‌ಗೆ ₹ 210 ಕೋಟಿ ದಂಡ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿತ್ತು.

‘ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲೇ ಬಿಜೆಪಿ ಸರ್ಕಾರವು ಉದ್ದೇಶಪೂರ್ವಕವಾಗಿ ನಮ್ಮ ವಿರುದ್ಧ ಕ್ರಮಕ್ಕೆ ಮುಂದಾಗಿದೆ. ಆದಾಯ ತೆರಿಗೆ ಇಲಾಖೆ ಕ್ರಮದ ವಿರುದ್ಧ ಶೀಘ್ರದಲ್ಲೇ ಹೈಕೋರ್ಟ್ ಮೊರೆ ಹೋಗುತ್ತೇವೆ’ ಎಂದು ಎಐಸಿಸಿ ಖಜಾಂಚಿ ಅಜಯ್ ಮಾಕೆನ್ ಶುಕ್ರವಾರ ಹೇಳಿದರು.

‘ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯ ಆದೇಶದಿಂದ ನಮಗೆ ನಿರಾಸೆಯಾಗಿದೆ. ಈ ವಿಷಯದಲ್ಲಿ ನ್ಯಾಯಮಂಡಳಿಯು ತನ್ನದೇ ಆದ ಪೂರ್ವನಿದರ್ಶನಗಳನ್ನು ಕೂಡ ಅನುಸರಿಸಿಲ್ಲ. ಚುನಾವಣೆ ದಿನಾಂಕ ಪ್ರಕಟಗೊಳ್ಳಲು ಕೆಲವೇ ದಿನಗಳಿರುವಾಗ ರಾಷ್ಟ್ರೀಯ ಪಕ್ಷವೊಂದರ ಮೇಲೆ ಇಂತಹ ಕ್ರಮ ಕೈಗೊಂಡಿರುವುದು ಸರಿಯಲ್ಲ’ ಎಂದು ಎಐಸಿಸಿ ಕಾನೂನು ವಿಭಾಗದ ಮುಖ್ಯಸ್ಥ ವಿವೇಕ್ ತಂಖಾ ಪ್ರತಿಕ್ರಿಯಿಸಿದ್ದಾರೆ.

ಆದಾಯ ತೆರಿಗೆ ಇಲಾಖೆಯು ವಿವಿಧ ಬ್ಯಾಂಕ್ ಖಾತೆಗಳಿಂದ ₹65 ಕೋಟಿ ಜಮಾ ಮಾಡಿಕೊಂಡಿದೆ ಎಂದು ಪಕ್ಷವು ಕೆಲ ದಿನಗಳ ಹಿಂದೆ ಆರೋಪಿಸಿತ್ತು.

ಜಮ್ಮು ಮೂಲದ ನಾವಿಕ ನಾಪತ್ತೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಭಾರತೀಯ ನೌಕಾಪಡೆಯ ಹಡಗಿನಲ್ಲಿ ನಾವಿಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಜಮ್ಮು-ಕಾಶ್ಮೀರದ 19 ವರ್ಷದ ಯುವಕ 10 ದಿನಗಳ ಹಿಂದೆ ನಾಪತ್ತೆಯಾಗಿದ್ದು, ಈವರೆಗೆ ನೌಕಾಪಡೆ ಸಿಬ್ಬಂದಿಯ ಸುಳಿವು ಸಿಕ್ಕಿಲ್ಲ. ಹೀಗಾಗಿ ತಮ್ಮ ಮಗನನ್ನು ಹುಡಿಕಿಕೊಡಲು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಸ್ಥಿಕೆ ವಹಿಸಬೇಕು ಎಂದು ಕುಟುಂಬಸ್ಥರು ಮನವಿ ಮಾಡಿದ್ದಾರೆ.

ಕೊಚ್ಚಿಯಲ್ಲಿರುವ ಭಾರತೀಯ ನೌಕಾಪಡೆಯ ಹಡಗಿನಲ್ಲಿ ನಿಯೋಜನೆಗೊಂಡಿದ್ದ ಸಾಹಿಲ್ ವರ್ಮಾ ನಾಪತ್ತೆಯಾಗಿರುವ ನಾವಿಕ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಕುರಿತು ಮಾರ್ಚ್ 2ರಂದು ಎಕ್ಸ್ ವೇದಿಕೆಯಲ್ಲಿ ಮಾಹಿತಿ ಹಂಚಿಕೊಂಡಿದ್ದ ಪಶ್ಚಿಮ ನೌಕಾಪಡೆಯ ಕಮಾಂಡ್, ‘ಸಾಹಿಲ್ ವರ್ಮಾ ನಾಪತ್ತೆಯಾಗುವ ಎರಡು ದಿನಗಳ ಮುಂಚೆ ಅಂದರೆ, ಫೆಬ್ರುವರಿ 25ರಂದು ತನ್ನ ಕುಟುಂಬಸ್ಥರ ಜೊತೆ ಫೋನ್‌ನಲ್ಲಿ ಮಾತನಾಡಿದ್ದ. ಆದರೆ, ಫೆಬ್ರುವರಿ 27ರಂದು ಸಾಹಿಲ್ ವರ್ಮಾ ನಾಪತ್ತೆಯಾಗಿದ್ದಾರೆ’ ಎಂದು ಹೇಳಿದ್ದಾರೆ.

ಈ ಘಟನೆ ಬೆನ್ನಲ್ಲೇ, ನೌಕಾಪಡೆಯು ಹಡಗುಗಳು ಮತ್ತು ವಿಮಾನಗಳ ಮೂಲಕ ಸಾಹಿಲ್ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಅದು ಮುಂದುವರಿದಿದೆ.

ಹಡಗಿನಲ್ಲಿ ಅಳವಡಿಸಲಾಗಿರುವ ಯಾವುದೇ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸಾಹಿಲ್ ಹಡಗಿನಿಂದ ಸಮುದ್ರಕ್ಕೆ ಬಿದ್ದಿರುವುದು ದಾಖಲಾಗಿಲ್ಲ ಎಂದು ಸಾಹೀಲ್ ಅವರ ತಂದೆ ಸುಭಾಷ್ ಚಂದರ್ ಅವರು ಹಿರಿಯ ಅಧಿಕಾರಿಗೆ ಹೇಳಿದ್ದಾರೆ ಎಂದು ವರದಿಯಾಗಿದೆ.

ಈ ಕುರಿತು ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಸುಬಾಷ್ ಅವರು, ‘ಹಡಗಿನಲ್ಲಿ ಸಾಹಿಲ್ ಇದ್ದಾನೆಯೇ ಎಂಬುದರ ಖಚಿತತೆಗಾಗಿ ಸಿಬ್ಬಂದಿ ಹಡಗನ್ನು ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಆದರೆ, ಸಾಹಿಲ್ ಅವರು ಮಾತ್ರ ಇರಲಿಲ್ಲ. ಈ ವೇಳೆ ಹಡಗು ಸಮುದ್ರದ ಮಧ್ಯ ಭಾಗದಲ್ಲಿತ್ತು. ಆದಾಗ್ಯೂ, ಸಾಹಿಲ್ ಹಡಗಿನಲ್ಲೂ ಇಲ್ಲ. ಇತ್ತ ಸಮುದ್ರದಲ್ಲೂ ಬಿದ್ದಿಲ್ಲ ಎಂದು ಸಿಬ್ಬಂದಿ ಹೇಳುತ್ತಿದ್ದಾರೆ. ಹಾಗಿದ್ದರೆ, ಆತ ಎಲ್ಲಿಗೆ ಹೋದ’ ಎಂದು ಪ್ರಶ್ನಿಸಿದ್ದಾರೆ.

‘ಈ ಹಿನ್ನೆಲೆಯಲ್ಲಿ ಈ ವಿಚಾರದಲ್ಲಿ ಪ್ರಧಾನಿ ಮೋದಿ ಹಾಗೂ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮಧ್ಯಸ್ಥಿಕೆ ವಹಿಸಬೇಕು. ಆತನ ಸುರಕ್ಷತೆ ವಿಚಾರವು ನಮ್ಮನ್ನು ಪ್ರತಿಕ್ಷಣವೂ ಕಾಡುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಸ್ಟಾರ್ಟ್‌ಅಪ್‌ಗಳೇ ಇಲ್ಲ’

ಗೋದ್ರಾ (ಪಿಟಿಐ): ದೇಶದಲ್ಲಿ ಯಾವುದೇ ಸ್ಟಾರ್ಟ್‌ಅಪ್‌ಗಳಿಲ್ಲ. ಇದ್ದರೂ ಅದು ವಿದೇಶಿ ಸಂಸ್ಥೆಗಳ ನಿಯಂತ್ರಣದಲ್ಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಿಳಿಸಿದರು.



ರಾಹುಲ್ ಗಾಂಧಿ

ಭಾರತ್ ಜೋಡೋ ನ್ಯಾಯ ಯಾತ್ರೆಯ ಭಾಗವಾಗಿ ಗೋದ್ರಾದಲ್ಲಿ ಮಾತನಾಡಿದ ರಾಹುಲ್, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದ ‘ಸ್ಟಾರ್ಟ್‌ಅಪ್ ಇಂಡಿಯ’ ಪರಿಕಲ್ಪನೆಯನ್ನು ಟೀಕಿಸಿದರು.

‘ನಾವು ಸ್ಟಾರ್ಟ್‌ಅಪ್ ವಲಯಕ್ಕೆ ₹5000 ಕೋಟಿ ಅನುದಾನ ನೀಡುತ್ತೇವೆ. ಇದರಿಂದ ಬಡ ರೈತರ ಮಕ್ಕಳು ಮತ್ತು ಕಾರ್ಮಿಕರು ಸ್ವ-ಉದ್ಯಮವನ್ನು ಆರಂಭಿಸಬಹುದು. 30 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಅದನ್ನು ಭರ್ತಿ ಮಾಡಲಾಗುವುದು’ ಎಂದು ಹೇಳಿದರು.

‘ಕೇಂದ್ರ ಸರ್ಕಾರವು ದೊಡ್ಡ ದೊಡ್ಡ ಖಾಸಗಿ ಕಂಪನಿಗಳ ₹16 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಆದರೆ ರೈತರಿಗೆ, ವಿದ್ಯಾರ್ಥಿಗಳಿಗೆ ಮತ್ತು ಕಾರ್ಮಿಕರಿಗೆ ವಿನಾಯಿತಿ ನೀಡುವ ಉದಾರತೆ ತೋರಿಲ್ಲ’ ಎಂದು ಟೀಕಿಸಿದರು.

ಗುಜರಾತ್‌ನಲ್ಲಿ ಎರಡನೇ ದಿನದ ಯಾತ್ರೆ: ಗುಜರಾತ್‌ನಲ್ಲಿ ಎರಡನೇ ದಿನದ ಯಾತ್ರೆಯು ದಾಹೋದ್‌ನಿಂದ ಆರಂಭವಾಗಿ ಗೋದ್ರಾಕ್ಕೆ ತಲುಪಿತು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕಾಂಗ್ರೆಸ್‌ನ ಮಹಿಳಾ ಕಾರ್ಯಕರ್ತರು ತಂದಿದ್ದ ಬೃಹತ್ ಗಾತ್ರದ ಕೇಕ್ ಅನ್ನು ರಾಹುಲ್ ಗಾಂಧಿ ಕತ್ತರಿಸಿದರು.

ಬಾಕ್ಸಿಂಗ್: 16ರ ಸುತ್ತಿಗೆ ನಿಶಾಂತ್

ಬುಸ್ಟೊ ಆರ್ಸಿಝಿಯೊ (ಇಟಲಿ), (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ನಿಶಾಂತ್ ದೇವ್ ಅವರು ಪ್ರಥಮ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಅರ್ಹತಾ ಟೂರ್ನಿಯಲ್ಲಿ ಜಾರ್ಜಿಯಾದ ಮಡಿಯೇವ್ ಎಸ್ಕೆರ್‌ಖಾನ್ ಅವರನ್ನು ಸೋಲಿಸಿ 71 ಕೆ.ಜಿ. ವಿಭಾಗದ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

ಗುರುವಾರ ರಾತ್ರಿ ನಡೆದ ಸೆಣಸಾಟದಲ್ಲಿ ನಿಶಾಂತ್ 5-0 ಒಮ್ಮತದ ತೀರ್ಪು ಪಡೆದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಎಂಟರ ಘಟ್ಟ ತಲುಪಿದ್ದ ಎಸ್ಕೆರ್‌ಖಾನ್, ಭಾರತದ ಬಾಕ್ಸರ್ ದಾಳಿಯ ಮುಂದೆ ಗಲಿಬಿಲಿಯಾದರು. ಎರಡನೇ ಸುತ್ತಿನಲ್ಲಿ ಅವರು ಚೇತರಿಸಿಕೊಳ್ಳಲು ಪ್ರಯತ್ನಿಸಿದರೂ, ನಿಶಾಂತ್ ಎದುರಾಳಿಯ ಪುನರಾಗಮನಕ್ಕೆ ಅವಕಾಶವನ್ನೇ ನೀಡಲಿಲ್ಲ.

ನಿಶಾಂತ್ ಅವರು ಭಾನುವಾರ 16ರ ಸುತ್ತಿನ ಹೋರಾಟ ನಡೆಸಲಿದ್ದಾರೆ.

ಇದೇ ವೇಳೆ ವಿಶ್ವ ಯುವ ಚಾಂಪಿಯನ್ ಅಂಕುಶಿತಾ ಬೋರೊ



ನಿಶಾಂತ್ ದೇವ್

(ಮಹಿಳೆಯರ 66 ಕೆ.ಜಿ) ಮತ್ತು ರಾಷ್ಟ್ರೀಯ ಚಾಂಪಿಯನ್ ಸಂಜೀತ್ (92 ಕೆ.ಜಿ) ಅವರು ಮೊದಲ ಸುತ್ತಿನಲ್ಲೇ ಭಿನ್ನ ರೀತಿಯಲ್ಲಿ ಸೋಲನುಭವಿಸಿದರು. ಅಂಕುಶಿತಾ 2-3 ರಲ್ಲಿ ಫ್ರಾನ್ಸ್‌ನ ಸೊನ್ವಿಕೊ ಎಮಿಲಿ ಅವರಿಗೆ ಮಣಿದರೆ, ಸಂಜೀತ್ ಹೆಚ್ಚು ಹೋರಾಟ ತೋರದೇ ಕಜಕಸ್ತಾನದ ಐಬೆಕ್ ಒರಲ್ಬೆ ಅವರೆದುರು ಪರಾಜಯ ಕಂಡರು. ಒಟ್ಟಾರೆ ಭಾರತದ ಬಾಕ್ಸಿಂಗ್ ಪಟುಗಳ ನಿರಾಶಾದಾಯಕ ಪ್ರದರ್ಶನ ಮುಂದುವರಿದಂತಾಯಿತು.

ಬ್ಯಾಸ್ಕೆಟ್‌ಬಾಲ್: ನೈರುತ್ಯ ರೈಲ್ವೆಗೆ ಮಾತೃ ಕಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರುತಿ ಮತ್ತು ಸತ್ಯ ಅವರ ಅಮೋಘ ಆಟದ ಬಲದಿಂದ ನೈರುತ್ಯ ರೈಲ್ವೆ ತಂಡವು ಶುಕ್ರವಾರ ಮುಕ್ತಾಯವಾದ ಮಾತೃ ಕಪ್-ಏಳನೇ ರಾಜ್ಯಮಟ್ಟದ ಎಸ್.ಎಂ.ಎನ್. ಸ್ಮಾರಕ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಚಾಂಪಿಯನ್‌ಷಿಪ್ ಗೆದ್ದುಕೊಂಡಿತು.

ಶ್ರೀ ಕಂಠೀರವ ಕ್ರೀಡಾಂಗಣದ ಒಳಾಂಗಣ ಕೋರ್ಟ್‌ನಲ್ಲಿ ನಡೆದ ಟೂರ್ನಿಯ ಫೈನಲ್ ಲೀಗ್ ಸುತ್ತಿನಲ್ಲಿ ರೈಲ್ವೆ ತಂಡವು 78-39ರಿಂದ ಮೌಂಟ್ಸ್ ಕ್ಲಬ್ ವಿರುದ್ಧ ಜಯಿಸಿತು. ರೈಲ್ವೆ ತಂಡದ ಶ್ರುತಿ (28) ಮತ್ತು ಸತ್ಯ (17) ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೌಂಟ್ಸ್ ಕ್ಲಬ್ ತಂಡದ ನಿಹಾರಿಕಾ (15) ಮತ್ತು ಜಾಹ್ನವಿ (8) ಉತ್ತಮವಾಗಿ ಆಡಿದರು. ಪಂದ್ಯದ ಅರ್ಧವಿರಾಮದ ವೇಳೆಗೆ ರೈಲ್ವೆ ತಂಡವು 40-27ರ ಮುನ್ನಡೆ ಸಾಧಿಸಿತ್ತು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಮಾತೃ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಗೆದ್ದ ನೈರುತ್ಯ ರೈಲ್ವೆ ತಂಡ (ಎಡದಿಂದ ಬಲಕ್ಕೆ); ನಿಂತವರು: ಶ್ರುತಿ ಅರವಿಂದ್, ಅನುಷಾ, ಸೂರ್ಯದರ್ಶಿನಿ, ಸತ್ಯಾ, ಶೋಭನಾ, ಕುಳಿತವರು: ತಾನ್ಯಾ, ಜ್ಯೋತಿಪ್ರೇಮ್, ಪ್ರೇಮ್ (ಕನ್ನಡ ಸಿನಿಮಾ ನಟ), ಕೆ. ಗೋವಿಂದರಾಜ್ (ಫಿಬಾ ಏಷ್ಯಾ ಅಧ್ಯಕ್ಷ), ಅಮೃತಾ ಪ್ರೇಮ್ (ಚಲನಚಿತ್ರ ನಟಿ), ಝುರಿನಾ ಅಯಣ್ಣ (ಮ್ಯಾನೇಜರ್), ಮಂಡಿಯೂರಿದವರು; ಸತ್ಯಾ, ಮೋಹನಾ ಬಾಲಾ.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ 63-47 ರಿಂದ ಬೆಂಗಳೂರು ವ್ಯಾನ್ ಗಾರ್ಡ್ಸ್ ವಿರುದ್ಧ ಜಯಿಸಿತು.

ಮೌಂಟ್ಸ್ ಕ್ಲಬ್ ತಂಡದ ನಿಲಯಾ ರೆಡ್ಡಿ ಉದಯೋನ್ಮುಖ ಆಟಗಾರ್ತಿ ಮತ್ತು ಬೀಗಲ್ಸ್‌ನ ಚಂದನಾ ಶ್ರೇಷ್ಠ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ಸ್ಕ್ವಾಷ್: ಕ್ವಾರ್ಟರ್ ಫೈನಲ್‌ಗೆ ಊರ್ವಶಿ

ಬ್ರಿಸ್ಟಲ್ (ಪಿಟಿಐ): ಭಾರತದ ಊರ್ವಶಿ ಜೋಶಿ ಅವರು ಇಲ್ಲಿ ನಡೆಯುತ್ತಿರುವ ಬ್ರಿಸ್ಟಲ್ ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಶುಕ್ರವಾರ ಎರಡನೇ ಶ್ರೇಯಾಂಕದ ಸೋಫಿ ಫಡೆಲಿ ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

2023ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಊರ್ವಶಿ ಅವರು ಇಲ್ಲಿ 16ರ ಘಟ್ಟದ ಪಂದ್ಯದಲ್ಲಿ 7-11, 11-6, 9-11, 11-5, 11-7 ರಿಂದ ಆಸ್ಟ್ರೇಲಿಯಾದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು.

ಆರಂಭಿಕ ಸುತ್ತಿನಲ್ಲಿ 11-4, 11-5, 9-11, 11-9ರಿಂದ ಇಂಗ್ಲೆಂಡ್‌ನ ಜಾಸ್ಮಿನ್ ಕಲಾರ್ ಅವರನ್ನು ಸೋಲಿಸಿದ್ದ ಮಹಾರಾಷ್ಟ್ರದ ಊರ್ವಶಿ ಮುಂದಿನ ಸುತ್ತಿನಲ್ಲಿ ಐದನೇ ಶ್ರೇಯಾಂಕದ ಎರಿನ್ ಕ್ಲಾಸೆನ್ (ಆಸ್ಟ್ರೇಲಿಯಾ) ಅವರನ್ನು ಎದುರಿಸುವರು. ಕ್ಲಾಸೆನ್, ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 11-5, 11-5, 14-12 ರಿಂದ ಇಂಗ್ಲೆಂಡ್‌ನ ಒಲಿವಿಯಾ ಬೆಸೆಂಟ್ ವಿರುದ್ಧ ಗೆಲುವು ಸಾಧಿಸಿದರು.

ಧರ್ಮಶಾಲಾದಲ್ಲಿ ಐದನೇ ಟೆಸ್ಟ್: ರೋಹಿತ್– ಗಿಲ್ ಶತಕ • ಮಿಂಚಿದ ಸರ್ಫರಾಜ್, ಪಡಿಕ್ಕಲ್

ಭಾರತದ ತಿರುಗೇಟಿಗೆ ಸುಸ್ತಾದ ಇಂಗ್ಲೆಂಡ್

ಪ್ರಜಾವಾಣಿ ವಾರ್ತೆ

ಧರ್ಮಶಾಲಾ: ಹಿಮಾಲಯದ ಮಡಿಲಿನಲ್ಲಿರುವ ಕ್ರಿಕೆಟ್ ಕ್ರೀಡಾಂಗಣದಲ್ಲಿ ಪ್ರವಾಸಿ ಇಂಗ್ಲೆಂಡ್ ತಂಡದ ಆಟಗಾರರ ದುರ್ಬಲ ಕ್ಷೇತ್ರರಕ್ಷಣೆಯು ಅವರ ನೈತಿಕ ಬಲ ಕುಸಿದಿರುವುದರ ಸಂಕೇತದಂತೆ ಕಂಡಿತು.

ಇಲ್ಲಿ ನಡೆಯುತ್ತಿರುವ ಐದನೇ ಟೆಸ್ಟ್ ಪಂದ್ಯದ ಎರಡನೇ ದಿನ ಬ್ಯಾಟರ್‌ಗಳ ಸ್ನೇಹಿಯಾಗಿರುವ ಪಿಚ್‌ನಲ್ಲಿ ಭಾರತದ ಬ್ಯಾಟರ್‌ಗಳು ಮಿಂಚಿದರು. ಇಂಗ್ಲೆಂಡ್ ತಂಡದ ಮಿಸ್‌ಫೀಲ್ಡಿಂಗ್ ಮತ್ತು ಸಂಯೋಜನೆಯ ಕೊರತೆಗಳು ಎದ್ದುಕಂಡವು. ಆದರೂ ಈ ಲೋಪಗಳ ಪರಿಹಾರವೆಂಬಂತೆ ದಿನದಾಟದ ಕೊನೆಯ ಅವಧಿಯಲ್ಲಿ ಸ್ಪಿನ್ನರ್‌ಗಳಾದ ಶೋಯಬ್ ಬಷೀರ್ (170ಕ್ಕೆ4)ಮತ್ತು ಟಾಮ್ ಹಾರ್ಟ್ಲಿ (126ಕ್ಕೆ2) ಸೇರಿ ಐದು ವಿಕೆಟ್‌ಗಳನ್ನು ಕಿತ್ತರು. ಆದರೆ ಅಷ್ಟೊತ್ತಿಗೆ ಇಂಗ್ಲೆಂಡ್ ತಂಡಕ್ಕೆ ಹಾನಿಯಾಗಿದ್ದಂತೂ ಹೌದು.

ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 218 ರನ್‌ಗಳಿಗೆ ಉತ್ತರವಾಗಿ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ತಂಡವು 8 ವಿಕೆಟ್‌ಗಳಿಗೆ 473 ರನ್ ಗಳಿಸಿದೆ. 255 ರನ್‌ಗಳ ಮುನ್ನಡೆ ಸಾಧಿಸಿದೆ. ನಾಯಕ ರೋಹಿತ್ ಶರ್ಮಾ (103, 162ಎಸೆತ, 4X13, 6X3) ಮತ್ತು ಶುಭಮನ್ ಗಿಲ್ (110, 150 ಎಸೆತ, 4X12, 6X5) ಅವರಿಬ್ಬರೂ ಈ ಸರಣಿಯಲ್ಲಿ ಎರಡನೇ ಶತಕ ದಾಖಲಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 174 ರನ್ (244 ಎಸೆತ) ಸೇರಿಸಿದರು. ಈ ಪಂದ್ಯದಲ್ಲಿ 1 ರಿಂದ 5ನೇ ಕ್ರಮಾಂಕದವರೆಗಿನ ಬ್ಯಾಟರ್‌ಗಳು ತಲಾ 50 ರನ್‌ಗಳಿಗಿಂತ ಹೆಚ್ಚು ಗಳಿಸಿದ್ದು ವಿಶೇಷ.

ಗುರುವಾರ ದಿನದಾಟದ ಅಂತ್ಯಕ್ಕೆ ಭಾರತ ತಂಡವು 1 ವಿಕೆಟ್‌ಗೆ 135 ರನ್ ಗಳಿಸಿತ್ತು. ಶುಕ್ರವಾರ ಬೆಳಿಗ್ಗೆ ಆಟ ಮುಂದುವರಿಸಿದ ಶರ್ಮಾ ಮತ್ತು ಗಿಲ್ ಅವರ ಬ್ಯಾಟಿಂಗ್ ನೋಡುಗರ ಕಣ್ಮನ ತಣಿಸಿದವು. ಇಬ್ಬರ ಸ್ಟ್ರೋಕ್‌ಗಳಲ್ಲಿಯೂ ಸಮತೋಲಿನ ಶಕ್ತಿಪ್ರಯೋಗ, ಗ್ಯಾಪ್‌ಗಳ ಗುರುತಿಸುವಿಕೆಯಲ್ಲಿ ನಿಖರತೆ ಮತ್ತು ಏಕಾಗ್ರತೆಗಳು ಮೇಳೈಸಿದ್ದವು. ಊಟದ ವಿರಾಮಕ್ಕೂ ಮುನ್ನವೇ ಇಬ್ಬರೂ ಶತಕ ಪೂರೈಸಿದರು.

ವಿರಾಮದ ನಂತರದ ಎರಡು ಓವರ್‌ಗಳಲ್ಲಿ ರೋಹಿತ್ ಮತ್ತು ಗಿಲ್ ಔಟಾದರು. ಸ್ಟೋಕ್ಸ್ ಹಾಕಿದ 'ಮ್ಯಾಜಿಕ್ ಎಸೆತ'ಕ್ಕೆ ರೋಹಿತ್ ನಿರ್ಗಮಿಸಿದರೆ, ಗಿಲ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದ ಆ್ಯಂಡರ್ಸನ್ ಟೆಸ್ಟ್ ಕ್ರಿಕೆಟ್‌ನಲ್ಲಿ 699ನೇ ವಿಕೆಟ್ ಗಳಿಸಿದರು.



ಶುಭಮನ್ ಗಿಲ್
ರನ್ 110
ಎಸೆತ 150
ಬೌಂಡರಿ 12
ಸಿಕ್ಸರ್ 5

ರೋಹಿತ್ ಶರ್ಮಾ
ರನ್ 103
ಎಸೆತ 162
ಬೌಂಡರಿ 13
ಸಿಕ್ಸರ್ 3

ಎಎಫ್‌ಪಿ ಚಿತ್ರಗಳು

ಮೊದಲ ಎಸೆತದಲ್ಲಿ ವಿಕೆಟ್!

ಧರ್ಮಶಾಲಾ (ಎಎಫ್‌ಪಿ): ಇಂಗ್ಲೆಂಡ್ ತಂಡದ ನಾಯಕ ಎಂಟು ತಿಂಗಳ ನಂತರ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಬೌಲಿಂಗ್ ಮಾಡಲು ಕಣಕ್ಕಿಳಿದು ಜಾದೂ ಮಾಡಿದರು.

ಧರ್ಮಶಾಲಾದ ಅಂಗಳದಲ್ಲಿ ಶುಕ್ರವಾರ ಅವರು ಹಾಕಿದ ತಮ್ಮ ಮೊದಲ ಎಸೆತದಲ್ಲಿಯೇ ರೋಹಿತ್ ಶರ್ಮಾ ಅವರ ವಿಕೆಟ್ ಉರುಳಿಸಿದರು. ಮೊಣಕಾಲಿನೆತ್ತರಕ್ಕೆ ಪುಟಿದ ಚೆಂಡು ತಿರುವು ಪಡೆದು ಒಳನುಗ್ಗಿ ಸ್ಟಂಪ್ ಎಗರಿಸಿತು. ಶತಕ ಗಳಿಸಿ ಆಡುತ್ತಿದ್ದ ರೋಹಿತ್ ಅವರಿಗೂ ಈ ಎಸೆತ ಅಚ್ಚರಿ ತಂದಿತು. ಟಿ.ವಿ. ಕಾಮೆಂಟೆಟರ್‌ಗಳು ಇದನ್ನು 'ಮ್ಯಾಜಿಕ್ ಬಾಲ್' ಎಂದು ಬಣ್ಣಿಸಿದರು.

ಹೋದ ವರ್ಷದ ಜೂನ್‌ನಲ್ಲಿ ಬೆನ್ ಸ್ಟೋಕ್ಸ್ ಅವರು ಕೊನೆಯ ಬಾರಿಗೆ ಬೌಲಿಂಗ್ ಮಾಡಿದ್ದರು. ಅದರ ನಂತರ ಅವರು ಮಂಡಿನೋವಿನಿಂದ ಬಳಲಿದ್ದರು. ಶಸ್ತ್ರಚಿಕಿತ್ಸೆ ಕೂಡ ಪಡೆದಿದ್ದರು. ಪ್ರಸ್ತುತ ಕ್ರಿಕೆಟ್‌ನಲ್ಲಿ ವಿಶ್ವದ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿರುವ ಸ್ಟೋಕ್ಸ್ ಮತ್ತೆ ಬೌಲಿಂಗ್ ಮರಳಿ ಉತ್ತಮ ಆರಂಭ ಮಾಡಿದ್ದಾರೆ.

ದೇವದತ್ತ– ಸರ್ಫರಾಜ್ ಜೊತೆಯಾಟ: ಪದಾರ್ಪಣೆಯ ಪಂದ್ಯವಾಡುತ್ತಿರುವ ಕನ್ನಡಿಗ ದೇವದತ್ತ ಪಡಿಕ್ಕಲ್ (65; 103ಎ, 4X10, 6X1) ಮತ್ತು ಸರ್ಫರಾಜ್ ಖಾನ್ ಅವರ (56; 60ಎ) ಜೊತೆಯಾಟವೂ ತಂಡದ ಮುನ್ನಡೆಯನ್ನು ಹೆಚ್ಚಿಸಿತು. ಇವರಿಬ್ಬರ ಪ್ರಹಾರದ ಮುಂದೆ ಬೌಲರ್‌ಗಳು ಸುಸ್ತಾದರು.

ಆತ್ಮವಿಶ್ವಾಸದಿಂದ ಆಡುತ್ತಿದ್ದ ಇಬ್ಬರೂ ದೊಡ್ಡ ಮೊತ್ತ ಗಳಿಸುವ ಭರವಸೆ ಮೂಡಿತ್ತು. ಸರ್ಫರಾಜ್ ಅವರ ಅಪ್ಪರ್ ಕಟ್ ಹೊಡೆತವೂ ಆಕರ್ಷಕವಾಗಿತ್ತು. ಆದರೆ ಸ್ಪಿನ್ನರ್‌ಗಳ ಮುಂದೆ ಇಬ್ಬರೂ ವಿಕೆಟ್ ಚೆಲ್ಲಿದರು. ಜಡೇಜ ಮತ್ತು ಧ್ರುವ ಜುರೇಲ್ ತಲಾ 15 ರನ್ ಗಳಿಸಿದರೆ, ಅಶ್ವಿನ್ ಖಾತೆ ತೆರೆಯದೇ ನಿರ್ಗಮಿಸಿದರು.

ಈ ಹಂತದಲ್ಲಿ ಎರಡನೇ ಇನಿಂಗ್ಸ್ ಆರಂಭಿಸುವ ಯೋಚನೆಯಲ್ಲಿದ್ದ ಪ್ರವಾಸಿ ಬಳಗಕ್ಕೆ ಕುಲದೀಪ್ ಯಾದವ್ (ಬ್ಯಾಟಿಂಗ್ 27) ಮತ್ತು ಜಸ್‌ಪ್ರೀತ್ ಬೂಮ್ರಾ (ಬ್ಯಾಟಿಂಗ್ 19) ನಿರಾಸೆ ಮೂಡಿಸಿದರು. ಮುರಿಯದ ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 45 ರನ್ ಸೇರಿಸಿದರು. ಸ್ಪಿನ್ನರ್ ಮತ್ತು ವೇಗಿ ಗಳಿಬ್ಬರನ್ನೂ ದಿಟ್ಟತನದಿಂದ ಎದುರಿಸಿದರು.

ಚೊಚ್ಚಲ ಇನಿಂಗ್ಸ್‌ನಲ್ಲಿ ದೇವದತ್ತ ಹೆಜ್ಜೆಗುರುತು


ಕರ್ನಾಟಕದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ತಮ್ಮ ಚೊಚ್ಚಲ ಟೆಸ್ಟ್ ಇನಿಂಗ್ಸ್‌ನಲ್ಲಿ ಗಮನ ಸೆಳೆದರು.

ಹೋದ ವರ್ಷ ಅನಾರೋಗ್ಯಕ್ಕಾಗಿ ದೀರ್ಘ ಸಮಯ ಕ್ರಿಕೆಟ್‌ನಿಂದ ದೂರವಿದ್ದ ದೇವದತ್ತ ಮತ್ತೆ ಕಣಕ್ಕೆ ಮರಳಿದ್ದರು.

ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಮತ್ತು ಭಾರತ ಎ ತಂಡದಲ್ಲಿ ರನ್‌ಗಳ ಹೊಳೆ ಹರಿಸಿದ್ದರು. ಅದರಿಂದಾಗಿ ಭಾರತ ತಂಡದಲ್ಲಿ ಆಡುವ ಅವಕಾಶ ಪಡೆದರು. ತಮ್ಮ ಆಯ್ಕೆಯನ್ನು ಸಮರ್ಥಿಸಿ ಕೊಳ್ಳುವಂತೆ ಆಡಿದ ಅವರು ಇಂಗ್ಲೆಂಡ್ ಫೀಲ್ಡರ್‌ಗಳನ್ನು ಒತ್ತಡಕ್ಕೆ ತಳ್ಳಿದರು. ಆಕರ್ಷಕ ಡ್ರೈವ್, ಚುರುಕಾದ ಫ್ಲಿಕ್‌ಗಳ ಮೂಲಕ ಮಾರ್ಕ್ ವುಡ್, ಅನುಭವಿ ಜಿಮ್ಮಿ ಆ್ಯಂಡರ್ಸನ್ ಎಸೆತಗಳನ್ನೂ ಬೌಂಡರಿಗೆರೆ ದಾಟಿಸಿದರು.

ಬಷೀರ್ ಬೌಲಿಂಗ್‌ನಲ್ಲಿ ಸಿಕ್ಸರ್ ಗೆತ್ತುವ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಮೊಟ್ಟಮೊದಲ ಅರ್ಧಶತಕದ ಗಡಿ ದಾಟಿದರು.

ಪಡಿಕ್ಕಲ್ ಅವರು ಸರ್ಫರಾಜ್ ಖಾನ್ ಜೊತೆಗೆ 97 ರನ್ ಸೇರಿಸಿದರು. ಅದಕ್ಕಾಗಿ ಇಬ್ಬರು ಸೇರಿ ಒಟ್ಟು172 ಎಸೆತಗಳನ್ನು ಎದುರಿಸಿದರು.



ದೇವದತ್ತ ಪಡಿಕ್ಕಲ್
ರನ್ 65
ಎಸೆತ 103
ಬೌಂಡರಿ 10
ಸಿಕ್ಸರ್ 1

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಇಂಗ್ಲೆಂಡ್ 218 (57.4 ಓವರ್‌ಗಳಲ್ಲಿ)
ಭಾರತ 8ಕ್ಕೆ 473 (120 ಓವರ್‌ಗಳಲ್ಲಿ)
(ಗುರುವಾರ ಭಾರತ 1 ವಿಕೆಟ್‌ಗೆ 135)
ರೋಹಿತ್ ಬಿ ಸ್ಟೋಕ್ಸ್ 103 (162ಎ, 4X13, 6X3)
ಗಿಲ್ ಬಿ ಆ್ಯಂಡರ್ಸನ್ 110 (150ಎ, 4X12, 6X5)
ದೇವದತ್ತ ಬಿ ಬಷೀರ್ 65 (103ಎ, 4X10, 6X1)
ಸರ್ಫರಾಜ್ ಸಿ ರೂಟ್ ಬಿ ಬಷೀರ್ 56 (60ಎ, 4X8, 6X1)
ಜಡೇಜ ಎಲ್‌ಬಿಡಬ್ಲ್ಯು ಬಿ ಹಾರ್ಟ್ಲಿ 15 (50ಎ)
ಜುರೇಲ್ ಸಿ ಡಕೆಟ್ ಬಿ ಬಷೀರ್ 15 (24ಎ, 4X2)
ಅಶ್ವಿನ್ ಬಿ ಹಾರ್ಟ್ಲಿ 0 (5ಎ)
ಕುಲದೀಪ್ ಬ್ಯಾಟಿಂಗ್ 27 (55ಎ, 4X2)
ಬೂಮ್ರಾ ಬ್ಯಾಟಿಂಗ್ 19 (55ಎ, 4X2)
ಇತರೆ: 6 (ಲೆಗ್‌ಬೈ 4, ನೋಬಾಲ್ 2)
ವಿಕೆಟ್ ಪತನ: 2–275 (ರೋಹಿತ್ ಶರ್ಮಾ; 61.1), 3–279 (ಶುಭಮನ್ ಗಿಲ್ 62.2), 4–376 (ಸರ್ಫರಾಜ್ ಖಾನ್; 84.1), 5–403 (ದೇವದತ್ತ ಪಡಿಕ್ಕಲ್; 92.1), 6–427 (ಧ್ರುವ್ ಜುರೇಲ್; 100.4), 7–427 (ರವೀಂದ್ರ ಜಡೇಜ; 101.1), 8–428 (ಆರ್. ಅಶ್ವಿನ್ ; 101.6)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 14–1–59–1, ಮಾರ್ಕ್ ವುಡ್ 15–1–89–0, ಟಾಮ್ ಹಾರ್ಟ್ಲಿ 39–3–126–2, ಶೋಯಬ್ ಬಷೀರ್ 44–5–170–4, ಬೆನ್ ಸ್ಟೋಕ್ಸ್ 5–1–17–1, ಜೋ ರೂಟ್ 3–0–8–0

ವಾರಿಯರ್ಸ್‌ಗೆ ರೋಚಕ ಜಯ; ಎಡವಿದ ಡೆಲ್ಲಿ

ನವದೆಹಲಿ (ಪಿಟಿಐ): ಪಂದ್ಯದ ಕೊನೆಯ ಓವರ್‌ನಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಯು.ಪಿ. ವಾರಿಯರ್ಸ್ ಎದುರು ಜಯಿಸುವ ಅವಕಾಶವನ್ನೂ ಕೈಚೆಲ್ಲಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ವಾರಿಯರ್ಸ್ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 138 ರನ್ ಗಳಿಸಿತ್ತು. ಈ ಸಾಧಾರಣ ಗುರಿಯನ್ನು ಬೆನ್ನಟ್ಟಿದ್ದ ಡೆಲ್ಲಿ ತಂಡಕ್ಕೆ ಕೊನೆಯ ಓವರ್‌ನಲ್ಲಿ ಕೇವಲ 10 ರನ್‌ಗಳ ಅಗತ್ಯವಿತ್ತು. ಆದರೆ, ನಾಟಕೀಯ ತಿರುವುಗಳನ್ನು ಕಂಡ ಈ ಓವರ್‌ನಲ್ಲಿ ಡೆಲ್ಲಿ ಸೋತಿತು.

ವಾರಿಯರ್ಸ್ 1 ರನ್ ಅಂತರದ ರೋಚಕ ಜಯ ಗಳಿಸಿತು. ಬ್ಯಾಟಿಂಗ್‌ನಲ್ಲಿ ಮಿಂಚಿದ್ದ ದೀಪ್ತಿ ಶರ್ಮಾ (59; 48ಎ, 4X6, 6X1) ನಾಲ್ಕು ವಿಕೆಟ್ ಗಳಿಸಿ ಬೌಲಿಂಗ್‌ನಲ್ಲಿಯೂ ಮೆರೆದರು. ಗ್ರೇಸ್ ಹ್ಯಾರಿಸ್ ಇನಿಂಗ್ಸ್‌ನ ಕೊನೆಯ ಓವರ್ ಬೌಲಿಂಗ್ ಮಾಡಿ ಎರಡು ವಿಕೆಟ್ ಗಳಿಸಿದರೆ, ಇದೇ ಓವರ್‌ನಲ್ಲಿ ಜೆಸ್ ಯಾನ್ಸನ್ ಅವರನ್ನು ರನ್‌ಔಟ್ ಮಾಡಿದ ರಾಜೇಶ್ವರಿ ಗಾಯಕವಾಡ್ ಮತ್ತು ವಿಕೆಟ್‌ಕೀಪರ್ ಹೀಲಿ ಅವರು ತಮ್ಮ ತಂಡಕ್ಕೆ ಗೆಲುವಿನ ಅವಕಾಶ ಮಾಡಿಕೊಟ್ಟರು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಮೆಗ್‌ಲ್ಯಾನಿಂಗ್ (60; 46ಎ, 4X12) ಉತ್ತಮ ಆರಂಭ ನೀಡಿದ್ದರು. ಆದರೆ ಉಳಿದ ಬ್ಯಾಟರ್‌ಗಳ ರನ್ ಗಳಿಕೆ ನಿಧಾನಗತಿಯಲ್ಲಿತ್ತು. ಆದರೂ 17 ಓವರ್ ಗಳಲ್ಲಿ ತಂಡವು 4 ವಿಕೆಟ್‌ಗಳಿಗೆ 112 ರನ್ ಗಳಿಸಿತ್ತು. ನಂತರದ 3 ಓವರ್‌ಗಳಲ್ಲಿ 6 ವಿಕೆಟ್‌ಗಳನ್ನು ಕಳೆದುಕೊಂಡ ಡೆಲ್ಲಿ ಸೋಲಿನ ಕಹಿ ಅನುಭವಿಸಿತು.



ವಿಕೆಟ್ ಪಡೆದ ಸಂಭ್ರಮದಲ್ಲಿ ದೀಪ್ತಿ ಶರ್ಮಾ –ಪಿಟಿಐ ಚಿತ್ರ

ಇದರಿಂದಾಗಿ ತಿತಾಸ್ ಸಾಧು (23ಕ್ಕೆ2) ಮತ್ತು ರಾಧಾ ಯಾದವ್ (16ಕ್ಕೆ2) ಅವರು ಬೌಲಿಂಗ್‌ನಲ್ಲಿ ಮಾಡಿದ ಶ್ರಮ ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರು: ಯು.ಪಿ. ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 138 (ಎಲಿಸಾ ಹೀಲಿ 29, ದೀಪ್ತಿ ಶರ್ಮಾ 59, ತಿತಾಸ್ ಸಾಧು 23ಕ್ಕೆ2, ರಾಧಾ ಯಾದವ್ 16ಕ್ಕೆ2) **ಡೆಲ್ಲಿ ಕ್ಯಾಪಿಟಲ್ಸ್:** 19.5 ಓವರ್‌ಗಳಲ್ಲಿ 137 (ಮೆಗ್ ಲ್ಯಾನಿಂಗ್ 60, ಶಫಾಲಿ ವರ್ಮಾ 15, ಅಲೈಸ್ ಕ್ಯಾಪ್ಸಿ 15, ಜೆಮಿಮಾ ರಾಡ್ರಿಗಸ್ 17, ಸೈಮಾ ಠಾಕೂರ್ 30ಕ್ಕೆ2, ದೀಪ್ತಿ ಶರ್ಮಾ 19ಕ್ಕೆ4, ಗ್ರೇಸ್ ಹ್ಯಾರಿಸ್ 8ಕ್ಕೆ2) **ಫಲಿತಾಂಶ:** ಯು.ಪಿ. ವಾರಿಯರ್ಸ್ ತಂಡಕ್ಕೆ 1 ರನ್ ಜಯ. **ಪಂದ್ಯದ ಆಟಗಾರ್ತಿ:** ದೀಪ್ತಿ ಶರ್ಮಾ

ಇಂದಿನ ಪಂದ್ಯ
ಗುಜರಾತ್ ಜೈಂಟ್ಸ್– ಮುಂಬೈ ಇಂಡಿಯನ್ಸ್ (ರಾತ್ರಿ 7.30)

ಚೆಸ್: ಪ್ರಜ್ಞಾನಂದಗೆ ಎರಡನೇ ಸ್ಥಾನ



ಪ್ರಾಗ್ (ಪಿಟಿಐ): ಭಾರತದ ಆರ್.ಪ್ರಜ್ಞಾನಂದ ಗೆಲುವಿಗೆ ತೀವ್ರ ಯತ್ನ ನಡೆಸಿದರೂ, ಅಂತಿಮವಾಗಿ ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು. ಗುರುವಾರ ಮುಕ್ತಾಯಗೊಂಡ ಪ್ರಾಗ್‌ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಇತರ ನಾಲ್ಕು ಪಂದ್ಯಗಳೂ 'ಡ್ರಾ' ಆಗಿದ್ದು, ಪ್ರಜ್ಞಾನಂದ ಈ ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದರು.

ಇನ್ನು ನಾಲ್ಕು ವಾರಗಳಲ್ಲಿ ಟೊರಾಂಟೊದಲ್ಲಿ ನಡೆಯಲಿರುವ ವಿಶ್ವ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಪ್ರಜ್ಞಾನಂದ ಅವರು ಭಾರತದ ಆಟಗಾರರ ಪೈಕಿ ಅತ್ಯಧಿಕ ರೇಟಿಂಗ್ ಹೊಂದಿರುವ ಆಟಗಾರನಾಗಿ ಕಣಕ್ಕೆ ಇಳಿಯಲಿದ್ದಾರೆ. ಡಿ.ಗುಕೇಶ್ ಮತ್ತು ವಿದಿತ್ ಗುಜರಾತಿ ಅವರೂ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದಿದ್ದಾರೆ.

ಉಜ್ಬೇಕಿಸ್ತಾನದ ಆಟಗಾರ ನಾದಿರ್ಬೆಕ್ ಅಬ್ದುಸತ್ತಾರೋವ್ ಒಂದು ಸುತ್ತು ಉಳಿದಿರುವಂತೆ ಚಾಂಪಿಯನ್ ಆಗುವುದನ್ನು ಖಚಿತಪಡಿಸಿದ್ದರು. ಅವರು ಅಂತಿಮವಾಗಿ ಒಟ್ಟು ಆರು ಅಂಕ ಪಡೆದರು. ಅವರು ರುಮೇನಿಯಾದ ರಿಚರ್ಡ್ ರ್‍ಯಾಪೋರ್ಟ್ ಜೊತೆ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ ಐದು ಅಂಕ ಪಡೆದರು. ಇರಾನ್‌ನ ಪರ್ಹಾಮ್ ಮಘಸೂಡ್ಲು, ಝೆಕ್ ರಿಪಬ್ಲಿಕ್‌ನ ಎನ್ಗುಯೆನ್ ಥಾಯ್ ದೈವಾನ್ ಸಹ 5 ಪಾಯಿಂಟ್ಸ್ ಪಡೆದರು. ಗುಕೇಶ್, ರ್‍ಯಾಪೋರ್ಟ್, ಡೇವಿಡ್ ನವಾರಾ (ತಲಾ 4.5) 5ನೇ ಸ್ಥಾನ ಪಡೆದರು. ವಿದಿತ್ ಗುಜರಾತಿ (3) ಕೊನೆಯ ಸ್ಥಾನ ಪಡೆದರು.

ಡಬ್ಲ್ಯುಎಫ್‌ಐ ಬೆಂಬಲಕ್ಕೆ ನಿಂತ ವಿಶ್ವ ಕುಸ್ತಿ ಸಂಸ್ಥೆ

ನವದೆಹಲಿ (ಪಿಟಿಐ): ವಿಶ್ವ ಕುಸ್ತಿ ಸಂಸ್ಥೆಯಾದ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಶುಕ್ರವಾರ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಬೆನ್ನಿಗೆ ನಿಂತಿದ್ದು, ಫೆಡರೇಷನ್ ಮೂಲಕ ಬಂದ ಪ್ರವೇಶಗಳಿಗಷ್ಟೇ ತಾನು ಒಪ್ಪಿಗೆ ನೀಡುವುದಾಗಿ ಹೇಳಿದೆ. ಫೆಡರೇಷನ್ ವಹಿಸುವ ಪಾತ್ರವನ್ನು ಬೇರೆ ಯಾವುದೇ ಸಮಿತಿ ವಹಿಸುವಂತಿಲ್ಲ ಎಂದೂ ಸ್ಪಷ್ಟ ಮಾತುಗಳಲ್ಲಿ ಹೇಳಿದೆ.

ಮುಂಬರುವ ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ಒಲಿಂಪಿಕ್ ಕ್ವಾಲಿಫೈಯರ್ಸ್‌ಗೆ ದೆಹಲಿಯಲ್ಲಿ ಮಾರ್ಚ್ 10 ಮತ್ತು 11ರಂದು ಟ್ರಯಲ್ಸ್ ನಡೆಸುವುದಾಗಿ ಹೊರಡಿಸಿರುವ ತನ್ನ ಸುತ್ತೋಲೆ ಹಿಂದಕ್ಕೆ ಪಡೆಯುವುದಾಗಿ ಡಬ್ಲ್ಯುಎಫ್‌ಐ ಗುರುವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿತ್ತು. ಇದರ ಬೆನ್ನಲ್ಲೇ ಐಒಎ ನೇಮಕ ಮಾಡಿದ ಅಡ್‌ಹಾಕ್ ಸಮಿತಿಗೆ ಟ್ರಯಲ್ಸ್ ನಡೆಸಲು ನ್ಯಾಯಾಲಯ ಹೇಳಿತ್ತು. ಇದಾಗಿ ಒಂದು ದಿನದಲ್ಲೇ ಯುಡಬ್ಲ್ಯುಡಬ್ಲ್ಯು ಹೇಳಿಕೆ ಹೊರಬಿದ್ದಿದೆ.

ಸಚಿವಾಲಯವು ಫೆಡರೇಷನ್ ಅನ್ನು ಅಮಾನತಿನಲ್ಲಿಟ್ಟಿರುವ ಕಾರಣ ಅದು ಟ್ರಯಲ್ಸ್ ನಡೆಸುವಂತಿಲ್ಲ ಎಂದು ದೇಶದ ಪ್ರಮುಖ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್ ಮತ್ತು ಸಾಕ್ಷಿ ಮಲ್ಲಿಕ್ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿಯ ವಿಚಾರಣೆ ವೇಳೆ ಟ್ರಯಲ್ಸ್ ನಡೆಸುವ ವಿಚಾರ ಚರ್ಚೆಗೆ ಬಂದಿತ್ತು.

ಯುಡಬ್ಲ್ಯುಡಬ್ಲ್ಯುನಿಂದ ಮಾನ್ಯತೆ ಪಡೆದ ಡಬ್ಲ್ಯುಎಫ್‌ಐ ಮಾತ್ರ ಅಂತರರಾಷ್ಟ್ರೀಯ ಸ್ಪರ್ಧೆಗಳಿಗೆ ಪ್ರವೇಶಗಳನ್ನು ಕಳುಹಿಸಬಹುದು ಎಂದು ಅದರ ಅಧ್ಯಕ್ಷ ನೆನಾಡ್ ಲಾಲೊವಿಕ್, ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಅವರಿಗೆ ತಿಳಿಸಿದ್ದಾರೆ. ಯುಡಬ್ಲ್ಯುಡಬ್ಲ್ಯು ಇತ್ತೀಚೆಗಷ್ಟೇ ಫೆಡರೇಷನ್‌ನ ಮೇಲಿನ ಅಮಾನತನ್ನು (ಚುನಾವಣೆ ನಡೆಸಿದ ಕಾರಣ) ವಾಪಸು ಪಡೆದಿತ್ತು.

ಇದುವರೆಗೆ ಒಬ್ಬರು ಮಾತ್ರ– ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಅಂತಿಮ್ ಪಂಘಲ್– ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅವಕಾಶ ಪಡೆದಿದ್ದಾರೆ.

ಲಾಂಗ್ ಜಂಪ್: ಪಾವನಾಗೆ ಚಿನ್ನ



ಬೆಂಗಳೂರು: ಕರ್ನಾಟಕದ ಪಾವನಾ ನಾಗರಾಜ್ ಅವರು ಉತ್ತರ ಪ್ರದೇಶದ ಲಖನೌನಲ್ಲಿ ನಡೆಯುತ್ತಿರುವ 22ನೇ ರಾಷ್ಟ್ರೀಯ ಜೂನಿಯರ್ (20 ವರ್ಷದೊಳಗಿನವರ) ಫೆಡರೇಷನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಮೊದಲ ಪ್ರಯತ್ನದಲ್ಲಿ 5.78 ಮೀ. ದೂರ ಜಿಗಿದ ಪಾವನಾ, ನಾಲ್ಕನೇ ಪ್ರಯತ್ನದಲ್ಲಿ 6.01 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದರು. ತಮಿಳುನಾಡಿನ ಪ್ರತೀಕ್ಷಾ ಯಮುನಾ ಎ. (5.77ಮೀ.) ಮತ್ತು ಲಕ್ಷಣ್ಯಾ ಎಸ್. ಎನ್. (5.75 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಕರ್ನಾಟಕದ ಮತ್ತೊಂದು ಸ್ಪರ್ಧಿ ದೀಕ್ಷಾ ಗಣಪತಿ (5.07 ಮೀ) 10ನೇ ಸ್ಥಾನ ಪಡೆದರು.

ಫ್ರೆಂಚ್ ಓಪನ್: ಲಕ್ಷ್ಯ ಸೆಮಿಗೆ

ಪ್ಯಾರಿಸ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಶುಕ್ರವಾರ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿತು.

ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಸೇನ್ ಅವರು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 19-21, 21-15, 21-13 ರಿಂದ ಮಾಜಿ ವಿಶ್ವ ಚಾಂಪಿಯನ್ ಲೋಹ್ ಕೀನ್ (ಸಿಂಗಪುರ) ಅವರನ್ನು ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಕಿದಂಬಿ ಶ್ರೀಕಾಂತ್ (2017ರ ಚಾಂಪಿಯನ್) ಮತ್ತು ಎಚ್.ಎಸ್. ಪ್ರಣಯ್ (2017) ನಂತರ ಫ್ರೆಂಚ್ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ ಮೂರನೇ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ 22 ವರ್ಷದ ಸೇನ್ ಪಾತ್ರವಾದರು.

ವಿಶ್ವದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್– ಚಿರಾಗ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ 21-19, 21-13 ರಿಂದ ಥಾಯ್ಲೆಂಡ್‌ನ ಸುಪಕ್ ಜೊಮ್ಕೊಹ್ ಮತ್ತು ಕಿಟ್ಟಿನುಪಾಂಗ್ ಕೆಡ್ರೆನ್ ವಿರುದ್ಧ ಗೆಲುವು ಸಾಧಿಸಿದರು.



ಭಾರತದ ಲಕ್ಷ್ಯ ಸೇನ್

ಸಿಂಧುಗೆ ನಿರಾಸೆ: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮಹಿಳೆಯರ ಸಿಂಗಲ್ಸ್‌ನಲ್ಲಿ ಸೋಲನುಭವಿಸಿದರೂ, ಚೀನಾ ಎದುರಾಳಿ ಚೆನ್ ಯು ಫೀ ಅವರಿಗೆ ತೀವ್ರ ಪೈಪೋಟಿ ನೀಡಿದರು. ಚೆನ್ ಅಂತಿಮವಾಗಿ ಒಂದು ಗಂಟೆ 32 ನಿಮಿಷಗಳ ಕಾಲ ನಡೆದ ಪಂದ್ಯವನ್ನು 22–24, 21–17, 18–21ರಲ್ಲಿ ಗೆದ್ದುಕೊಂಡರು.

ಡಿವೈಇಎಸ್‌ಗೆ ಜಯ

ಬೆಂಗಳೂರು: ಡಿವೈಇಎಸ್ ಎಫ್‌ಸಿ ತಂಡವು ಶುಕ್ರವಾರ ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಪಂದ್ಯದಲ್ಲಿ 3–1ರಿಂದ ಬೆಂಗಳೂರು ಗನ್ನರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಇತರ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡವು 6–0ಯಿಂದ ಎಡಿಇ ಎಫ್‌ಸಿ ವಿರುದ್ಧ; ರೂಟ್ಸ್ ಎಫ್‌ಎಸ್ ತಂಡವು 1–0 ಯಿಂದ ಇನ್‌ಕಂ ಟ್ಯಾಕ್ಸ್ ಎಫ್‌ಸಿ ವಿರುದ್ಧ ಗೆಲುವು ಪಡೆಯಿತು.

ಸಂಕ್ಷಿಪ್ತ ಸುದ್ದಿ

ಇಂಡಿಯನ್ ವೆಲ್ಸ್: ನಗಾಲ್ ನಿರ್ಗಮನ



ಇಂಡಿಯನ್ ವೆಲ್ಸ್: ಭಾರತದ ಸುಮಿತ್ ನಗಾಲ್ ಅವರು ಇಂಡಿಯನ್ ವೆಲ್ಸ್ ಎಟಿಪಿ ಟೂರ್ನಿಯ ಮೊದಲ ಸುತ್ತಿನಲ್ಲೇ ಕೆನಡದ ಮಿಲೋಸ್ ರಾವೊನಿಕ್ ಅವರಿಗೆ ಗುರುವಾರ ನೇರ ಸೆಟ್‌ಗಳಲ್ಲಿ ಸೋತರು.

ಸ್ಪೇನ್‌ನ ದಿಗ್ಗಜ ರಫೆಲ್ ನಡಾಲ್ ಗಾಯಾಳಾಗಿ ಟೂರ್ನಿಯಿಂದ ಹಿಂದೆಸರಿದ ಕಾರಣ, ಅರ್ಹತಾ ಸುತ್ತಿನ 'ಲಕ್ಕಿ ಲೂಸರ್' ಆಗಿ ನಗಾಲ್ ಪ್ರಧಾನ ಸುತ್ತಿಗೆ ಅವಕಾಶ ಪಡೆದಿದ್ದರು. ಆದರೆ ರಾವೊನಿಕ್ ಮೊದಲ ಸುತ್ತಿನಲ್ಲೇ 6–3, 6–3 ರಿಂದ ನಗಾಲ್ ಅವರನ್ನು ಒಂದು ಗಂಟೆ 28 ನಿಮಿಷಗಳ ಹಣಾಹಣಿಯಲ್ಲಿ ಹಿಮ್ಮೆಟ್ಟಿಸಿದರು. ಎಟಿಪಿ ಕ್ರಮಾಂಕಪಟ್ಟಿಯಲ್ಲಿ ನಗಾಲ್ 101ನೇ ಸ್ಥಾನದಲ್ಲಿದ್ದಾರೆ.

ಚೆನ್ನೈ ಬ್ಲಿಟ್ಜ್‌ಗೆ ಮಣಿದ ಟಾರ್ಪಿಡೋಸ್

ಚೆನ್ನೈ: ಬೆಂಗಳೂರು ಟಾರ್ಪಿಡೋಸ್ ತಂಡವು ಇಲ್ಲಿನ ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರೈಮ್ ವಾಲಿಬಾಲ್ ಲೀಗ್‌ನ ಪಂದ್ಯದಲ್ಲಿ ಚೆನ್ನೈ ಬ್ಲಿಟ್ಜ್ ವಿರುದ್ಧ ಪರಾಭವಗೊಂಡಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಚೆನ್ನೈ ತಂಡವು 16-14, 15-11, 15-13ರಿಂದ ಗೆಲುವು ಸಾಧಿಸಿತು. ಆ ತಂಡದ ರಮೇಶ್ ಕುಮಾರ್ ಮತ್ತು ದಿಲೀಪ್ ಕುಮಾರ್ ಉತ್ತಮ ಪ್ರದರ್ಶನ ನೀಡಿದರು.

ಹೇಜಲ್‌ವುಡ್ ದಾಳಿಗೆ ಕಿವೀಸ್ ಕಂಗಾಲು

ಕ್ರೈಸ್ಟ್‌ಚರ್ಚ್ (ಎಎಫ್‌ಪಿ): ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ (31ಕ್ಕೆ5) ಅವರ ಅಮೋಘ ಬೌಲಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡ, ಶುಕ್ರವಾರ ಇಲ್ಲಿ ಆರಂಭವಾದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ಮೇಲುಗೈ ಸಾಧಿಸಿತು. ಮೊದಲ ದಿನ 14 ವಿಕೆಟ್‌ಗಳು ಉರುಳಿದವು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆತಿಥೇಯ ನ್ಯೂಜಿಲೆಂಡ್ 162 ರನ್‌ಗಳಿಗೆ ಉರುಳಿತು. ಹೇಜಲ್‌ವುಡ್‌ಗೆ ಬೆಂಬಲ ನೀಡಿದ ಮಿಚೆಲ್ ಸ್ಟಾರ್ಕ್ ಮೂರು ವಿಕೆಟ್ ಪಡೆದರು. ದಿನದ ಕೊನೆಗೆ ಆಸ್ಟ್ರೇಲಿಯಾ 4 ವಿಕೆಟ್‌ಗೆ 124 ರನ್ ಗಳಿಸಿದೆ. ಸ್ಟಾರ್ಕ್ ಮೂರು ವಿಕೆಟ್ ಗಳನ್ನು ಪಡೆಯುವ ಮೂಲಕ ಟೆಸ್ಟ್ ವಿಕೆಟ್‌ಗಳ ಸಂಖ್ಯೆಯನ್ನು 357ಕ್ಕೆ ಏರಿಸಿದರು. ಡೆನಿಸ್ ಲಿಲಿ (355) ಅವರನ್ನು ಹಿಂದೆ ಹಾಕಿದರು. ಆಸ್ಟ್ರೇಲಿಯಾ ದ ಅತ್ಯಧಿಕ ವಿಕೆಟ್ ಗಳಿಕೆದಾರರ ಪಟ್ಟಿಯಲ್ಲಿ 4ನೇ ಸ್ಥಾನಕ್ಕೆ ಏರಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 45.2 ಓವರುಗಳಲ್ಲಿ 162 (ಟಾಮ್ ಲೇಥಮ್ 38, ಮ್ಯಾಟ್ ಹೆನ್ರಿ 29, ಮಿಚೆಲ್ ಸ್ಟಾರ್ಕ್ 59ಕ್ಕೆ3, ಜೋಶ್ ಹ್ಯಾಜಲ್‌ವುಡ್ 31ಕ್ಕೆ5); ಆಸ್ಟ್ರೇಲಿಯಾ: 36 ಓವರುಗಳಲ್ಲಿ 4 ವಿಕೆಟ್‌ಗೆ 124 (ಮಾರ್ನಸ್ ಲಾಬುಷೇನ್ ಔಟಾಗದೇ 45, ಕ್ಯಾಮರಾನ್ ಗ್ರೀನ್ 25, ಟ್ರಾವಿಸ್ ಹೆಡ್ 21; ಮ್ಯಾಟ್ ಹೆನ್ರಿ 39ಕ್ಕೆ3

ಪ್ರಜಾವಾಣಿ ಶನಿವಾರ • ಮಾರ್ಚ್ 9, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ANATHI K P GREEN CITY PHASE - 6 By Soundarya City Phase - 2

ಕೈಗೆಟುಕುವ ದರದಲ್ಲಿ ಈ ಕೂಡಲೇ ನೊಂದಣಿ ಮತ್ತು ಮನೆ ನಿರ್ಮಾಣ ಮಾಡಲು ಸಿದ್ಧವಿರುವ ಸೈಟುಗಳು

ಬೆಂಗಳೂರು-ಮೈಸೂರು ಹೈವೆಗೆ ಹತ್ತಿರ

ಕುಂಬಳಗೋಡು ಹತ್ತಿರ ಡಿಸಿ ಕನ್ವರ್ಷನ್ ಸೈಟುಗಳು ಲಭ್ಯ

30 LAKHS onwards T&C apply*







DC Converted E Khata



HIGILIGHTS:

- 5 Min Drive From Metro & RR Medical & Dental College
- 2 Min Drive From Garden Asia Resort BGS International School & VKIT
- 3 Min Drive Form Mysore Road
- 15 Mis Drive Form Kanakapura Main Road & Ravishankar Guruji Ashrama

up to 80% Loan Conditions Apply

SBI | LIC HFL | pnb | TATA CAPITAL | ICICI Bank | CanFinHomes Ltd | AXIS BANK | HDFC HOME LOANS

LUXURY AMENITIES

BMTC BUS AVAILABLE

Gated Community | Overhead Tank | Entrance Arch | Concrete Roads | Avenue Tree Lines | Water Supply | Storm Water Drains | Underground Electricity | Street Lights | Underground Sewage | Paved Walkway | Security Gate

Available Sites Size : 20X30, 20X40, 30X40, 30X50, ODD SITES

FREE Family Site Visit

ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ: **9164-66-55-66**

Scan For Location

ಬ್ರಿಕ್ ಲ್ಯಾಂಡ್ ಸಿಟಿ

Ready for Registration & Construction

Close to BDA

YELAHANKA - RAJANUKUNTE

~~2,000/-~~ **1,899/- sqft**





Highlights

- 3 kms from Presidency University
- Sambram Institute of Technology - 10 km
- Nitte International School - 4 km
- Sai Vidya Institute of Technology -4 km
- ICAR Indian institute of Horticulture research
- Just Cricket Academy - 4 km
- 5 km from State Highway -09
- BMSIT college - 8 km
- Raksha Health care center / Chiguru Hospital
- 2 km from Shivaram Karanth layout BDA
- BMTC service available.

Amenities

Rainwater Harvesting | Electricity | Street Lights | Black top Roads | Water Lines | Box type Drainage | Tree Line Roads | Premium Gated Community

Bank Loan Available

FREE SITE VISIT

76976 99867

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

SALE 30X40 4th BLOCK, 40x60 7th BLOCK, 50x80 '60' FEET ROAD 4th BLOCK. MANOJ 9731410616

Basavanagudi

SALE 40X60 Near Doddaganapathi Temple, Basavanagudi, Dondusa Layout, Mount Joy Road, Sunkenahalli, Bangalore-04. 8197547389/ 9945514587

Hebbal

KANAKANAGAR, NEAR Manyata Tech Park,25X44 NE Corner, 'A'-Katha, Clear Titles, Good Location, Direct Party Only: 9845653440/ 8073953969

Kumaraswamy Layout

BDA N/F 40x60 Site Sale #543 69th Cross 1st Stage Kumarswamy Layout Near Vasavi Hospital & Bus Stand: 9845344754/ 9844009086

KUMARASWAMY LAYOUT prime location 25X30 BDA plot east facing for sale 13000/sft. Bharadwaj estates 8050330184

Kanakapura Road

"SALE 40X60-WEST BDA_katha site @.Shankara Residency Kanakapura Road, 11000/-P.Sft &.20x30 west JP.Nagar 6th-Phase. 9845183995"

Nagarabhavi

MALLATHAHALLI NGEF Layout 30X40 SITE SALE, South Face, BDA Khatha, Opposite BDA Park. RAJU: 9986869996.

30X40 SITE For Sale in MPM Layout Nagarbhavi Near Deepa Complex Ph: 9844776757

Ramanagar

RESIDENTIAL CONVERTED and Approved Site For Sale Near Ramanagar 10000 Sqft Developed Area 1650/-P.Sqft Clear Title. Owner- 9900115519

R T Nagar

ANANDNAGAR 40×60 site for Sale, Clear Titles, Close to INTL Airport Road adjoining UAS campus in quiet and serene neighborhood. 9845190654

Vishweshwariah Layout

***DIRECT OWNER* #1628, North Facing 30x40 BDA Site Sale Vishveswaraiah Layout 2nd Block, ₹.7500/- 9886634578**

VISHWESHWARAIAH LAYOUT 6th Block BDA 40x60 East Facing Near KLE Law College Good Location: 9980860138

30X40 1ST Block Vishveshwaraiah Layout North & 40x60 Site 5th Block & 25x40 Corner 2nd Near East Commercial. 30x40 North 2nd 7000 Sqft: 9964700500

"VISVESWARAIAH 1ST Block 30x40 site 40ft Road,South facing, Good Location, for sale. 9886294610, Brokers Excuse"

30X65 SITE Sale at Sir.M.Vishweshwaraiah layout 3rd block 60' road Semi commercial near Vidyanikethan School :9448955833

Vidyaranyapura

RESIDENTIAL OPEN site 1080 sqft west facing BBMP A-Khata Singapura Paradise Vidyaranyapura Bangalore for sale @ Rs. 7200 per sqft, Negotiable. Brokers excuse. Owner Narendra 9480253992

Bangalore South

WEST FACING 40 by 60 site in RBI Layout, JP Nagar 7th Phase, near Brigade Millenium. Original Allotee and 100% white only. Contact # 8618029677

House

Banashankari

HOUSE SALE (G + 3) 2BHK Per Floor @ Banashankari 5th Stage BDA 30x40 South Plot Beside Poornapragna Layout, Rs 3 Crores RENUKA 9632444445/ 9632356565 Shivakumar 9845875555

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.75 Crores. Party going out of station, Immediate Registration, Contact: 9845765559/ 9845043282

Magadi Road

KAMAKSHIPALYA 15X50 Sft New Building 8 Houses + 1 Shop Getting 50,600/- E/F A Khata Rs.1.2Cr: 9845288310

Mysore

40 X 60 3BHK, Duplex House, 2.60 Crores, Slightly Negotiable, K. C. Layout, Mysuru 9448040401

Nagarabhavi

"BRAND-NEW 4BHK Triplex House GF 1.shop, 2car parking, fully furnished,all amenities,Sale, RHCS Layout Annapoorneshwari-Nagar, N/E.Corner, Both'Side 40'Feet-Road. 9845463951"

Sunkadakatte

30X60 HOUSE for sale at Sanjivini Nagara Hegganahalli cross rental income 25000 Phone: 9845771021, 9448955833

Tumkur Road

RAVI KIRLOSKAR Layout.,Tumkur Road 40x40`West Facing 3`BHK independent House For Sale, adjacent`to Prestige`Jindal and Metro-Station. -9986075122/ 8618922501

Flat

Bannerghatta Road

DUPLEX FLAT FOR SALE 2350 SFT SEMI FURNISHED 7TH FLOOR NORTH FACING BANNERGHATTA ROAD BILEKHALLI, AAHIKA APARTMENT BANGALORE: 8867773333

Whitefield

SPECTRA CYPRESS 4 BHK Apartment for sale 2 carparkings, private garden. Pool, Gym. 'Prime' 9845079698

Mysore

FOR SALE POSH 2 BHK, 1270 SFT FURNISHED APARTMENT WITH ATTACHED GAZEBO, 2 CAR PARKING IN PRIME YADAVGIRI, MYSORE OWNER: 9845578081

Mysore Road

AVAILABLE LEASE 3BHK APARTMENT FLAT MYSORE ROAD OCCUPENCY 31ST MARCH 2024 RUPEES. 25 LAKHS: 9738223432

Commerical

General

HOT COMMERCIAL PROPERTIES FOR SALE
Commercial Site for Sale 65 X 40. North East Corner Near Jnana Bharathi Circle (Nagarabhavi) Outer Ring Road. Rs. 18,000/- Neg. Suitable PG / Bar / Hotel / Hospital / Surrounding by 8 Colleges.
FOR SALE / RENT
I have 10,000 to 3,00,000 Sqft available in Hoskote, Whitefield, Peenya, Electronic City, Jigani, Bellery Road, Jakur, Near KIADB Aerospace Park, Narsapura / Malur. Suitable for Warehouse / Godown / Factory.
CONTACT: MR. SEVENRAJ 98450 20007 98457 17777 sevenraj@gmail.com

Vijayanagar

500 SQFT Commercial office Space For Sale, Opposite to Vijayanagar Metro Station Contact: 9945569909 7676900174

Out-Station

AT YADGIR two commercial sites 12000 and 6500 sft for sale. It is on Kalburgi highway near RTO, within Municipal limits. Contact 9880042441

Farm House/ Land/ Resorts

Kanakapura Road

SALE KANAKAPURA Town near City Bus-Stop 2 Acres,(33 Guntas Conversion +1.25 Acres Farm House) Ravikumar: 9945928994.

Industrial & Factory

Hosur Road

DC CONVERTED Industrial Land 28 Guntas @ Chandapura-Anekal Road for Sale. Brokers Excuse. 9847001593.

Commercial Building

Sarjapur Road

KASAVANAHALLI OFF Sarjapur Road G+4 Commercial Building on 50x50 NE Corner, Rent 2.50 Lacs pm. Price 6.50 Cr Negotiable. Call: RAPHAEL 9343728200

Residential/ Commercial

Singsandra

FOR SALE 55x50 to 2750sqft site @ near Manipal County Signal, Singasandra Metro Station,Hosur rd, Rs.8,500/-persqft. Bangalore-560068. Contact: 9731456798

REAL ESTATE BUYING

Agricultural Land

Outskirts

2 TO 5 acres Agricultural land required, maximum 100 km from Bangalore, with good soil and water. LandCG@gmail.com

PROPERTY CORNER

ಕ್ಲಾಸಿಫೈಡ್ಸ್

RERA No.PRM/KA/RERA/1250/307/PR/240723/006089
Sri Thulasi Ranganatha Gardenia
BMRDA & RERA APPROVED
Residential
Sites



Near ನಿವೇಶನಗಳು
Nelamangala
Close to Thyamagondlu Industrial area
Ready For Registration & Construction
Developed Layout, Bank Loan Available
Call: 8956 412 000

Step Into A Beautiful Lifestyle
NIRMALA CONSTRUCTIONS
By H N Vijaya Raghava Reddy & Co VRR & Co Builders
VRR GREEN CREST Live Beyond Nature
2 & 3 BHK Luxury Flats @ Electronic City Phase - I



RERA No. PRM/KA/1251/308/PR/040823/006114
Project Approved by SBI, Bank of Baroda (Hulimangala Branch) & Other leading Banks
73492 42134 / 99726 23278
sales@vrrbuilders.com www.vrrbuilders.com
40 years of Excellence Since 1984 V. R. R & Co. Builders & Developers. ISO 9001-2015 Certified Company
CREDAI BENGALURU

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED 20X30 or 30x40 Site Anjanapura BDA Layout any Block & any Facing Contact: 9980978986

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073

Vishweshwariah Layout

***BUYING/ SELLING* 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480**

BDA-SITES WANTED Vishweshwaraiah Layout, Banashankari 6th Stage, 30x40, 40x60, 50x80 Immediate Settlement Contact: 98455-55666

Sahakarnagar

LOOKING FOR immediate buying 1200 Sft Plot/Constructed House in Sahakarnagar/NTI Layout. Genuine Sellers/ Owners Contact 9886590185/9448737421

Kanakapura Road

WANTED SITE: 40x60, 30x40 Narayananagar, BCMC Layout, Anjanapura BDA, Banashankari 6th.Stage, Gubblala, Agents Excuse. 6363726250.

FOR SALE
MULTI STORIED COMMERCIAL BUILDING
Situated on **Tumkur Road, BANGALORE**
FETCHING VERY-GOOD RENTAL INCOME
Interested parties may contact owner:
9880737490

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

RCC BUILDING 2000 sq ft. 14feet height for Departmental store, Medical shop, Clinic, 2 wheeler showroom any commercial surrounded by 6000 apartments at Sri Ragavendra layout back side of Sparsh Hospital, off Tumkur Road near Metro Station: 9845026300

BTM LAYOUT, 2nd Stage, Facing100ft Ring Road, 75 meters from Metro Station, Prime location, Ideal for Banking Sector, IT, corporate office etc, fully furnished plug & play Immediately available for RENT. G/F 2200sqft, with ATM, F/F, S/F 3000sft each T/F 1000sft + 1500 covered canopy for cafeteria, Basement for parking. 9880032843, 9886771810

Flats

AVAILABLE FOR rent, Semi furnished 5 BHK flat with private garden of 830 sft in Brigade Vintage, Basavanagudi, expected rent 1,30,000 including maintenance, contact : 9845380312

Godown

GODOWN FOR Rent RCC 1400 Sq.ft near Kanteerava Studio Contact: 9845026300

Industrial And Factory

INDUSTRIAL SHED



4000 sft. Shed, 100 feet Road Sir M. V. Layout, 6th Block, Brokers Excuse. Suitable for Godown, etc. **CALL : +91 9164955229**

JOB OPPORTUNITIES

General

EMPLOYEE NEEDED! Business Development Officer for property developer company No investment, age above 30 years No experienced required. Earning Rs. 50,000/- per month Retired persons are eligible. Contact:- 9845334751.

NEED AUDIO Visual Technician, Photo & Videographer. Qualification- PUC I, PUC II Pass. ITI Electrical Pass or Fail. 8904442902

Teachers/ Professors

SRI AHAM AATHMA VIDYALAYA- [ICSE/ State] Nagasandra post Bangalore-73 requires Teachers for the academic year 2024-25 (1) Computer Science- BCA/MCA/B.Sc, M.Sc B.Ed (2) Teachers for all the subjects. Nursery/ Primary/Middle/High-school. (3)Office Staff/ Receptionist/ Data/DTP Operator with Tally, IT System Admin (4) Lab-Assistant, Librarian, PT Teacher, Academic Co-Ordinator. Offers Attractive Salary. Transportation will be considered Contact 9880200172, 9663778869 sriaavapplic@gmail.com

PUBLIC NOTICE

PUBLIC NOTICE

Our client intends to purchase the schedule PROPERTY MENTIONED BELOW from **Sri. M Meyyappan** son of late M Meyappan **and his children,** residing at 118, Santhome High Road, Chennai-600 028, the Coffee Estate, measuring 92 acres comprised in Sy No. 192, Heggudlu Village, Mudigere Taluk, Chickamangalore District, more fully described in Schedule appended below. Anyone having any claim, objections or any right, title or interest in the said Property may contact the undersigned along with the documents relied upon, within 15 days from the date of this publication, failing which it will be presumed that no one has any claim whatsoever over the same and further that the title of **Sri. M Meyyappan** son of late M Meyappan **and his children** over the Schedule Property is perfect and in alienable disposition:

SCHEDULE

All the piece and parcel of the Coffee Estate measuring 92 Acres comprised in Survey No. 192, measuring 96 Acres 07 Guntas with Karab extent of 4 Acre 7 Guntas, net extent being 92 Acres, situated at Heggudlu Village, Mudigere Taluk, Chickmagalur District, and bounded on the: **EAST:** by Hegggudlu Estate (Sy. No. 193), **WEST:** by Kalmane Estate & Govt. Land (Sy. No. 77), **NORTH:** by Goveas Property (Sy. No. 221), **SOUTH:** by Government land (Sy. No. 166).

Name and Address of Counsel
SAMMITH S., Advocate
M/s SANCTUM LAW, 004 & 005, Raheja Chambers 12, Museum Cross Road, Bengaluru-560 001
E-mail: sammith@sanctumlaw.com

PERSONAL

Change of Name

CHANGE OF NAME

I, **Vivek Revanna Shivaprabhu** S/o R.Shivaprabhu R/o 580, 2nd Main, 2nd Block, Rajajinagar, Bangalore-560010, aged 42 years have changed my name and shall be known as **VIVEK PATREY** for all future purposes vide affidavit dt: 6/3/2024 sworn before notary Konrad Zapolski, Chicago.

CHANGE OF NAME

I **SHREEVAMSHI,** residing at No.764, 8th Cross, 5th Main, M C Layout, Vijayanagar, Bengaluru-560040 have changed my name to **SHREEVAMSHI NAVEEN** Vide affidavite dated:01/02/2024 before notary R. Basavaraja, Bengaluru. Henceforth I shall be called **SHREEVAMSHI NAVEEN** only.

I, NUSRA MARIYAM aged about 25 years W/O Abdul Hannan Asangani, Residing at No. 11/D Block, Banath Street, Rashad Nagar, Arabic College Bangalore-45 have changed my name as NUSRA MARYAM vide Affidavit dated 07/03/2024 before Notary S.I Balaguru, Bangalore



email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331


ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com



Admired by All Owned by You!

Architectural Excellence | Superior Locations
Outstanding Conveniences | Best-in-Class Amenities
Excellent Connectivity | Lifetime Support and Assurance

AS YOUR TRUSTED BUILDER
We Assure You A Living Experience That Surpasses Your Expectations.

ಡಿಎಸ್ ಮ್ಯಾಕ್ಸ್



2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/310/PR/150223/005721 MYSORE ROAD NR. R R DENTAL COLLEGE ₹ 49.63 - 79.66 Lakhs* 8088 445 445	PRM/KA/RERA/1251/308/PR/201201/003733 ELECTRONIC CITY HOSA ROAD JUNCTION ₹ 54.10 L - 1.15 Cr* 9164 045 000	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* 8880 013 310	PRM/KA/RERA/1251/309/PR/181122/002151 YELAHANKA NEAR KOGILU CROSS ₹ 76.98 - 84.72 Lakhs* 8880 758 758
PRM/KA/RERA/1250/304/PR/150224/006622 WHITEFIELD 15 MINS. HOPEFARM METRO ₹ 38.84 - 92.51 Lakhs* 8088 773 773	PRM/KA/RERA/1251/309/PR/060923/006244 TUMKUR ROAD NEAR HIMALAYA FACTORY ₹ 45.81 - 72.67 Lakhs* 8880 465 465	PRM/KA/RERA/1251/310/PR/151223/006489 UTTARAHALLI OPP. NPS SCHOOL ₹ 74.97 L - 1.74 CR.* 8050 161 222	DODDAGUBBI NEAR HENNUR DECATHLON ₹ 53.30 L - 1.03 Cr* 8880 003 003
PRM/KA/RERA/1251/446/PR/110722/005059 BEGUR 10 MINS. TO SILK BOARD ₹ 71.36 L - 1.16 Cr* 8880 472 472	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 49.80 Lakhs* 9164 122 000	PRM/KA/RERA/1251/446/PR/210312/004002 K R PURAM NEAR GARDEN CITY UNIVERSITY ₹ 53.70 - 89.40 Lakhs* 8880 438 000	PRM/KA/RERA/1251/309/PR/220223/005748 THANISANDRA 10 MINS. MANYATA TECH PARK ₹ 57.80 - 86.79 Lakhs* 8880 461 461

*T & C Apply

FACILITY MANAGEMENT SERVICES



For Apartments & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN




Refer Us To Your Friends & Relatives And Get Handsomely Rewarded

2, 3 & 4-BHK Homes | Full / Partial Interiors
Facility Management Services | for Apartment & Commercial Complexes

*T & C Apply

CALL : 9164 043 000

REFER & EARN



Refer Us To A Landowner For JV / Outright Purchase In Any Part Of Bengaluru And Get A 2-BHK ABSOLUTELY FREE*

Residential Land | Commercial Land

*T & C Apply

CALL : 8880 463 463

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331















